ಶುಕ್ರವಾರ, ಏಪ್ರಿಲ್ 7, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 96 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
ಪೊಲೀಸ್, ಸಾಹಸಿಯಾಗಿ ಕಾಣಿಸಿಕೊಂಡಿರುವ ಪ್ರಜ್ವಲ್ ದೇವರಾಜ್ ಸಿನಿಪಯಣ

ಆಳ-ಅಗಲ
ರಾಜಕೀಯ ತೆರೆ ಮೇಲೆ ಚಿತ್ರ ತಾರೆಯರು

‘ಸುದೀಪ್ ಚಿತ್ರಗಳ ಪ್ರದರ್ಶನ ನಿಷೇಧ ಉದ್ದೇಶ ಇಲ್ಲ’ 6

ನವಲಖಾ ಜಾಮೀನು ಅರ್ಜಿ ತಿರಸ್ಕೃತ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,832 ▲	17,599 ▲	₹62,360 (ಬೆಂಗಳೂರು) ▼	₹75,900 (ಬೆಂಗಳೂರು) ▼	82.02 ▼



ಕಾಂಗ್ರೆಸ್‌ನ ಎರಡನೇ ಪಟ್ಟಿ ಬಿಡುಗಡೆ: ಒಟ್ಟು 166 ಕ್ಷೇತ್ರಗಳಿಗೆ ಅಭ್ಯರ್ಥಿ ಹೆಸರು ಪ್ರಕಟ

‘ಕೈ’ತಪ್ಪಿದ ಟಿಕೆಟ್: ಬಂಡಾಯ ಬಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಪಕ್ಷದಿಂದ ಸ್ಪರ್ಧಿಸುವ 42 ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಗುರುವಾರ ಪ್ರಕಟಿಸಿದೆ. ಈ ಮೂಲಕ ಪಕ್ಷವು 166 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದಂತಾಗಿದೆ. ಪಟ್ಟಿ ಪ್ರಕಟವಾದ ಬೆನ್ನಲ್ಲೇ, ‘ಕೈ’ಪಾಳಯದಲ್ಲಿ ಅಸಮಾಧಾನದ ಕಿಡಿ ಹೊತ್ತಿಕೊಂಡಿದೆ.

ಎರಡನೇ ಪಟ್ಟಿಯಲ್ಲಿ ವಲಸಿಗರು, ಮಾಜಿ ಶಾಸಕರು ಹಾಗೂ ಮಾಜಿ ಸಚಿವರಿಗೆ ಮಣೆ ಹಾಕಲಾಗಿದೆ. ಮೇಲುಕೋಟೆ ಕ್ಷೇತ್ರದಲ್ಲಿ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಬೆಂಬಲ ನೀಡಲಾಗುತ್ತದೆ ಎಂದು ಕಾಂಗ್ರೆಸ್ ಪ್ರಕಟಿಸಿದೆ.

ಚಿತ್ರದುರ್ಗ ಕ್ಷೇತ್ರದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ರಘು ಆಚಾರ್ ಹಾಗೂ ಉದ್ಯಮಿ ಕೆ.ಸಿ.ವೀರೇಂದ್ರ (ನಟ ದೊಡ್ಡಣ್ಣ ಅಳಿಯ) ಆಕಾಂಕ್ಷಿಗಳಾಗಿದ್ದರು. ವೀರೇಂದ್ರ ಅವರಿಗೆ ಪಕ್ಷ ಟಿಕೆಟ್ ನೀಡಿದೆ.

6ನೇ ಪುಟ ನೋಡಿ
ಕಾಂಗ್ರೆಸ್ ಪಟ್ಟಿ 6



ಕೆ.ಕೆ.ರಾಧಾಕೃಷ್ಣ ಅವರಿಗೆ ಮಂಡ್ಯ ಕ್ಷೇತ್ರದಿಂದ ಟಿಕೆಟ್ ಸಿಗದ ಕಾರಣ ಬೆಂಬಲಿಗರು ಕಾಂಗ್ರೆಸ್ ಕಚೇರಿ ಮುಂದೆ ಗುರುವಾರ ಪ್ರತಿಭಟನೆ ನಡೆಸಿದರು

ಕಚೇರಿಗೆ ಮುತ್ತಿಗೆ, ಆಕ್ರೋಶ

ಮಂಡ್ಯ, ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಕಾಂಗ್ರೆಸ್ ಪಕ್ಷ 2ನೇ ಪಟ್ಟಿ ಬಿಡುಗಡೆ ಮಾಡಿದ ಬೆನ್ನಲ್ಲೇ ಮಂಡ್ಯ ಮತ್ತು ಕಿತ್ತೂರು ಕ್ಷೇತ್ರದಲ್ಲಿ ಭಿನ್ನಮತ ಕಾಣಿಸಿಕೊಂಡಿದೆ. ಮಂಡ್ಯ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆ.ಕೆ.ರಾಧಾಕೃಷ್ಣ ಕೀಲಾರ ಅವರ ಬೆಂಬಲಿಗರು ಗುರುವಾರ ಮಂಡ್ಯ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿದರು.

6ನೇ ಪುಟ ನೋಡಿ

ಬಂಡಾಯ ತಣಿಸಲು ಬಿಜೆಪಿ ಪೂರ್ವಭಾವಿ ಸಭೆ

ಬೆಂಗಳೂರು: ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ಬಳಿಕ ಬಂಡಾಯ ಎದ್ದು ಪಕ್ಷಾಂತರ ಮಾಡುವುದನ್ನು ತಡೆಯುವುದಕ್ಕಾಗಿ ಬಿಜೆಪಿ ಈಗಲೇ ಕಸರತ್ತು ಆರಂಭಿಸಿದೆ. ಈ ಸಂಬಂಧ ಪಕ್ಷದ ಪ್ರಮುಖ ನಾಯಕರು ಗುರುವಾರ ಸರಣಿ ಸಭೆ ನಡೆಸಿದ್ದಾರೆ.

6

2ನೇ ಪಟ್ಟಿ: ಐವರು ಹಾಲಿಗಳ ಹೆಸರಿಲ್ಲ

‘ಕೈ’ ಪಾಳಯದ ಹಾಲಿ ಶಾಸಕರು ಇರುವ ಐದು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಎರಡನೇ ಪಟ್ಟಿಯಲ್ಲೂ ಕಾಣಿಸಿಕೊಂಡಿಲ್ಲ.

‘ವಯಸ್ಸಿನ ಕಾರಣಕ್ಕೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ನನ್ನ ಬದಲು ಮಗನಿಗೆ ಟಿಕೆಟ್ ಕೊಡಿ’ ಎಂದು ಅಫಜಲಪುರದ ಶಾಸಕ ಎಂ.ವೈ.ಪಾಟೀಲ ಅವರು ಹೈಕಮಾಂಡ್ ಹಾಗೂ ರಾಜ್ಯ ನಾಯಕರಿಗೆ ಮನವಿ ಮಾಡಿದ್ದರು. ಆದರೆ, ಎಂ.ವೈ.ಪಾಟೀಲರನ್ನೇ ಪಕ್ಷ ಹುರಿಯಾಳುವನ್ನಾಗಿ ಮಾಡಿದೆ.

ಪುಲಕೇಶಿನಗರ (ಅಖಂಡ ಶ್ರೀನಿವಾಸಮೂರ್ತಿ), ಶಿಡ್ಲಘಟ್ಟ (ವಿ. ಮುನಿಯಪ್ಪ), ಹರಿಹರ (ಎಂ.ರಾಮಪ್ಪ), ಕುಂದಗೋಳ (ಕುಸುಮಾವತಿ ಶಿವಳ್ಳಿ), ಲಿಂಗಸುಗೂರು (ಡಿ.ಎಸ್.ಹೂಲಗೇರಿ) ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಿಲ್ಲ. ಈ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ವಿ.ಮುನಿಯಪ್ಪ ಈ ಹಿಂದೆ ಪ್ರಕಟಿಸಿದ್ದರು. ಆದರೆ, ದೆಹಲಿಯಲ್ಲಿ ಎರಡು ದಿನಗಳ ಹಿಂದೆ ಕೇಂದ್ರ ಹಾಗೂ ರಾಜ್ಯ ನಾಯಕರನ್ನು ಭೇಟಿ ಮಾಡಿ ಮುನಿಯಪ್ಪ ಸಮಾಲೋಚನೆ ನಡೆಸಿದ್ದರು.

ಈ ಕ್ಷೇತ್ರದಲ್ಲಿ ತಾನು ಸೂಚಿಸಿದವರಿಗೆ ಟಿಕೆಟ್ ನೀಡಬೇಕು ಎಂದು ಕೇಂದ್ರದ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ ಪಟ್ಟು ಹಿಡಿದಿದ್ದಾರೆ. ಈ ಸಂಬಂಧ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತಿತರನ್ನು ಗುರುವಾರ ಭೇಟಿ ಮಾಡಿ ಲಾಬಿ ನಡೆಸಿದ್ದಾರೆ.

43 ಕ್ಷೇತ್ರಗಳಿಗೆ ಕಾದು ನೋಡುವ ತಂತ್ರ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಮತ್ತೆ 15 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಗುರುವಾರ ಅಂತಿಮಗೊಳಿಸಿದೆ. ಉಳಿದ 43 ಕ್ಷೇತ್ರಗಳಿಗೆ ಕಾದು ನೋಡುವ ತಂತ್ರ ಅನುಸರಿಸಲು ಸಮಿತಿ ತೀರ್ಮಾನಿಸಿದೆ.

6



ಭಕ್ತರ ದಂಡು ಹನುಮ ಜಯಂತಿ ಪ್ರಯುಕ್ತ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಗೆ ಗುರುವಾರ ರಾಜ್ಯ ಹಾಗೂ ಹೊರರಾಜ್ಯಗಳ ಭಕ್ತರು ಭೇಟಿ ನೀಡಿ ಆಂಜನೇಯ ಮೂರ್ತಿಯ ದರ್ಶನ ಪಡೆದರು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಮೇ 29ರಿಂದ ಶಾಲೆಗಳು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮೇ 29ರಿಂದ ಆರಂಭವಾಗಲಿವೆ. ಈ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 2023-24ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಮೇ 29ರಿಂದ ಅ.7ರವರೆಗೆ ಮೊದಲ ಅವಧಿಯ ತರಗತಿಗಳು ನಡೆಯಲಿವೆ. ಅ.8 ರಿಂದ 24ರವರೆಗೆ ದಸರಾ ರಜೆ ನೀಡಲಾಗುತ್ತದೆ. ಮತ್ತೆ ಅ.25ರಿಂದ ಏಪ್ರಿಲ್ 10, 2024ರವರೆಗೆ ಎರಡನೇ ಅವಧಿಯ ತರಗತಿಗಳು ನಡೆಯಲಿವೆ. ಮೇ 31, 2023 ರಂದು ರಾಜ್ಯದಾದ್ಯಂತ ಏಕಕಾಲಕ್ಕೆ ಶಾಲಾ ಪ್ರಾರಂಭೋತ್ಸವ ಹಮ್ಮಿಕೊಳ್ಳಬೇಕು. ಜೂನ್ 30ರ ಒಳಗೆ ಪ್ರವೇಶ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಲಾಗಿದೆ.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 244 ದಿನಗಳನ್ನು ಶಾಲಾ ಕರ್ತವ್ಯದ ದಿನಗಳೆಂದು ಪರಿಗಣಿಸಲಾಗಿದೆ. ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗೆ 180 ದಿನಗಳನ್ನು ಮೀಸಲಿಡಲಾಗಿದೆ. ಪರೀಕ್ಷಾ ಕಾರ್ಯಗಳಿಗೆ 26, ಪಠ್ಯೇತರ ಚಟುವಟಿಕೆಗಳಿಗಾಗಿ 24, ಮೌಲ್ಯಮಾಪನ ಪ್ರಕ್ರಿಯೆಗಾಗಿ 10 ದಿನಗಳನ್ನು ನಿಗದಿಪಡಿಸಲಾಗಿದೆ.

ಪ್ರಜಾ ಮತ
ಜನತಂತ್ರದ ಹಬ್ಬ

ನಾರಿ ಸೂತ್ರ, ಪ್ರಚಾರಕ್ಕೆ ಮಾತ್ರ 7

ಮುದ್ದಹನುಮೇಗೌಡರಿಗೆ ಟಿಕೆಟ್ ಕೈ ತಪ್ಪಿದ್ದೇ ಹೆಚ್ಚು! 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹಣ ಪಡೆದು ಮತ ಚಲಾವಣೆ: ರಾಜ್ಯ ಹೈಕೋರ್ಟ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಜನರಿಗೆ ಬುದ್ಧಿ ಬಂದಿಲ್ಲ. ಹಣ ಪಡೆದು ಮತ ಹಾಕುವ ಚಾಳಿ ಮುಂದುವರಿಸಿದ್ದಾರೆ. ಜನ ಎಚ್ಚೆತ್ತುಕೊಳ್ಳದಿದ್ದರೆ ನಾವೇನೂ ಮಾಡುವುದಕ್ಕೆ ಸಾಧ್ಯವಿಲ್ಲ. ಜನ ಸರಿಯಾದರೆ ಎಲ್ಲವೂ ಸರಿಯಾಗಲಿದೆ’ ಎಂದು ಹೈಕೋರ್ಟ್, ಪ್ರಕರಣವೊಂದರ ವಿಚಾರಣೆ ವೇಳೆ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ.

ರಾಜ್ಯದಲ್ಲಿ ಸ್ಮಶಾನ ಭೂಮಿ ಇಲ್ಲದ ಗ್ರಾಮ, ಪಟ್ಟಣಗಳಲ್ಲಿ ಅಗತ್ಯವಾದ



ಸ್ಮಶಾನ ಭೂಮಿ ಗುರುತಿಸಲು ಸರ್ಕಾರಕ್ಕೆ ನೀಡಿದ್ದ ನಿರ್ದೇಶನ ಜಾರಿಯಾಗದ ಕಾರಣ ಬೆಂಗಳೂರಿನ ಮೊಹಮ್ಮದ್ ಇಕ್ಬಾಲ್ ಅವರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠವು ನಡೆಸಿತು.

ಗುರುವಾರ ವಿಚಾರಣೆಯ ವೇಳೆ ನ್ಯಾಯಮೂರ್ತಿ ವೀರಪ್ಪ, ‘ಸ್ಮಶಾನ ಭೂಮಿ ಇಲ್ಲದ ಕಡೆ ಗ್ರಾಮಸ್ಥರು ಮುಂದೆ ಬಂದು ಮನವಿ ಸಲ್ಲಿಸಲು ಕೋರಿ ರಾಜ್ಯದ 31 ಜಿಲ್ಲೆಗಳಲ್ಲಿಯೂ ಸ್ಥಳೀಯ ಮತ್ತು ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಹಾಗಿದ್ದರೂ ಜನರು ಮುಂದೆ ಬಂದಿಲ್ಲ’ ಎಂದು ತೀವ್ರ ಬೇಸರ ಹೊರಹಾಕಿದರು. ‘ಜನ ಸ್ವಾರ್ಥಿಗಳಾಗುತ್ತಿದ್ದಾರೆ. ಹಣ ಪಡೆದು ಮತ ಹಾಕುತ್ತಿರುವಾಗ ನ್ಯಾಯಾಲಯಗಳು ಏನನ್ನೂ ಮಾಡಲಾಗದು’ ಪೀಠವು ಬೇಸರ ವ್ಯಕ್ತಪಡಿಸಿತು.

4B ಪುಟ ನೋಡಿ

ಹಲವೆಡೆ ಮಳೆ: ಸಿಡಿಲಿಗೆ ರೈತ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಕಡೆಗಳಲ್ಲಿ ಗುರುವಾರ ಗುಡುಗು ಸಿಡಿಲು ಸಹಿತ ಭಾರಿ ಮಳೆಯಾಗಿದೆ. ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಬಿಲ್ವಾಡ್ (ಬಿ) ಗ್ರಾಮದಲ್ಲಿ ಗುರುವಾರ ಸಂಜೆ ಸಿಡಿಲು ಬಡಿದು ರೈತ ಬೋಗಪ್ಪ ಮಾಂಗ್ (60) ಎಂಬುವರು ಮೃತಪಟ್ಟಿದ್ದಾರೆ.

ರಾಯಚೂರಿನಲ್ಲಿ ಗುರುವಾರ ದಿಢೀರ್ ಸುರಿದ ಮಳೆಯಿಂದ ಎಪಿಎಂಸಿ ಆವರಣದಲ್ಲಿ ರಾಶಿ ಹಾಕಲಾಗಿದ್ದ ಜೋಳ, ಭತ್ತ ಮತ್ತು ಶೇಂಗಾ ನೀರು ಪಾಲಾದವು. ರಸ್ತೆ ತಗ್ಗುಗಳಲ್ಲಿ ನೀರು ಸಂಗ್ರಹಗೊಂಡು ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಯಿತು. ಭಾರಿ ಗಾಳಿ ಬೀಸಿದ್ದರಿಂದ ಎಲ್‌ಬಿಎಸ್ ನಗರದ ಜೋಪಡಿಯ ತಗುಡುಗಳು ಹಾರಿಹೋದವು.

ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಹೋಬಳಿಯಲ್ಲಿ ಸಂಜೆ ಭಾರಿ ಮಳೆಯಾಗಿದೆ. ಹೊಲ, ರಸ್ತೆ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನಿಂತಿದೆ. ಹರಪನಹಳ್ಳಿ ತಾಲ್ಲೂಕಿನ ಇತರ ಗ್ರಾಮಗಳಲ್ಲೂ ಜೋರು ಮಳೆಯಾಗಿದೆ.

4B ಪುಟ ನೋಡಿ

ಮಣ್ಕುಳಿ: ವೆಚ್ಚ ಭರಿಸಿ ಒಡ್ಡು ನಿರ್ಮಿಸುತ್ತಿರುವ ಯುವಕರು

ಅಂತರ್ಜಲ ಸಂರಕ್ಷಣೆಗೆ ಸ್ವಯಂ ಸೇವೆ

• ಮೋಹನ ನಾಯ್ಕ

ಭಟ್ಕಳ (ಉತ್ತರ ಕನ್ನಡ ಜಿಲ್ಲೆ): ನಾಗಮಾಸ್ತಿ ನದಿಗೆ ಒಡ್ಡು ನಿರ್ಮಿಸಿ ಬೇಸಿಗೆಯಲ್ಲಿ ಅಂತರ್ಜಲ ಮಟ್ಟ ಕುಸಿಯದಂತೆ ಸತತ ಐದು ವರ್ಷಗಳಿಂದ ಗ್ರಾಮದ ಅಂತರ್ಜಲ ಮಟ್ಟ ಕಾಪಾಡಿಕೊಂಡು ಬರುವಲ್ಲಿ ಪಟ್ಟಣಕ್ಕೆ ಹೊಂದಿಕೊಂಡಿರುವ ಮಣ್ಕುಳಿ ಗ್ರಾಮದ ಯುವಕರು ಸಫಲರಾಗಿದ್ದಾರೆ.

ಬೇಸಿಗೆಯಲ್ಲಿ ನದಿಯ ನೀರು ಸಂಪೂರ್ಣ ಬತ್ತಿ ಹೋಗುತ್ತಿತ್ತು. ಪಟ್ಟಣದ ಅಂಚಿನ ಗ್ರಾಮಗಳಲ್ಲಿ ಹಿಂಗಾರು ಕೃಷಿ ಮಾಡುತ್ತಿದ್ದ ರೈತರು ಕೂಡ ಬೇಸಾಯ ಚಟುವಟಿಕೆ ನಿಲ್ಲಿಸಿದ್ದರು. ಅಲ್ಲದೆ ಮಣ್ಕುಳಿ ವ್ಯಾಪ್ತಿಯ ನೂರಾರು ಮನೆಗಳ ಜಲಮೂಲಗಳು ಬತ್ತಿ ಹೋಗಿ ನೀರೇ ಇಲ್ಲದ ಸ್ಥಿತಿ ಎದುರಾಗುತ್ತಿತ್ತು.

ಆದರೆ, ಐದು ವರ್ಷಗಳಿಂದ ಬೇಸಿಗೆಯಲ್ಲೂ ಗ್ರಾಮದಲ್ಲಿ ನೀರಿನ ಮಟ್ಟ ಇಳಿಕೆಯಾಗುವುದನ್ನು ತಡೆಯಲು ಗ್ರಾಮದ ಯುವಕರ ತಂಡ ಶ್ರಮಿಸಿದೆ.



ನದಿಯ ಹೂಳೆತ್ತಿ ಒಡ್ಡು ನಿರ್ಮಿಸುವ ಕಾರ್ಯದಲ್ಲಿ ನಿರತರಾದ ಯುವಕರು

ಒಳ್ಳೆ ಸುದ್ದಿ

ಶ್ರಮದಾನ ನಡೆಸಿ ನದಿಗೆ ಅಡ್ಡಲಾಗಿ ಒಡ್ಡು ನಿರ್ಮಿಸಿ ನೀರು ನಿಲ್ಲಿಸಲಾಗುತ್ತಿದೆ. ಒಡ್ಡು ನಿರ್ಮಿಸುವ ಮುನ್ನ ನದಿಗೆ ಒಡ್ಡು ಕಟ್ಟುವ ಸ್ಥಳದ ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ತುಂಬಿರುವ ಹೂಳು ತೆಗೆಯಲಾಗುತ್ತದೆ.

‘ಗ್ರಾಮದಲ್ಲಿ ಟ್ಯಾಂಕರ್ ನೀರು ಬಳಸಬೇಕಾದ ಸ್ಥಿತಿ ಕೆಲ ವರ್ಷಗಳ ಮೊದಲು ಉಂಟಾಗಿತ್ತು. ಆ ವೇಳೆ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಗ್ರಾಮಸ್ಥರೇ ಸೇರಿ ಯೋಚಿಸಿದ್ದೆವು. ಜಲತಜ್ಞರೊಬ್ಬರ ಸಲಹೆಯಂತೆ ಒಡ್ಡು ಕಟ್ಟುವ ನಿರ್ಧಾರಕ್ಕೆ ಬರಲಾಯಿತು’ ಎಂದು ಗ್ರಾಮಸ್ಥರು ಹೇಳುತ್ತಾರೆ.

‘ಪ್ರತಿ ವರ್ಷ ಸರಾಸರಿ ₹65-70 ಸಾವಿರ ವೆಚ್ಚದಲ್ಲಿ ಹೂಳು ತೆಗೆದು, ಒಡ್ಡು ಕಟ್ಟಲಾಗುತ್ತದೆ. ಪ್ಲಾಸ್ಟಿಕ್ ಚೀಲಗಳಲ್ಲಿ ಮಣ್ಣು ತುಂಬಿಸಿ ನದಿಗೆ ಅಡ್ಡಲಾಗಿ ಒಡ್ಡು ಕಟ್ಟುತ್ತೇವೆ. ಜೆಸಿಬಿ ಬಳಸಿ ಹೂಳು ತೆಗೆಯಲಾಗುತ್ತದೆ. ಇದರಿಂದ ನೀರು ನಿಲ್ಲುವ ಜತೆಗೆ ಸುತ್ತಮುತ್ತಲಿನ ಪ್ರದೇಶದಲ್ಲೂ ಮಳೆಗಾಲದಲ್ಲಿ ಹೇರಳ ಪ್ರಮಾಣದಲ್ಲಿ ನೀರು ಇಂಗುತ್ತಿದೆ. ಐದು ವರ್ಷಗಳಿಂದಲೂ ಇಂತಹ ಕೆಲಸ ನಿರಂತರವಾಗಿ ಮಾಡುತ್ತಿದ್ದೇವೆ’ ಎನ್ನುತ್ತಾರೆ ಗ್ರಾಮಸ್ಥ ಸತೀಶಕುಮಾರ ನಾಯ್ಕ.

‘ಒಡ್ಡು ನಿರ್ಮಿಸುವ ಕೆಲಸ ಆರಂಭಿಸಿದ ಬಳಿಕ ಮಾರ್ಚ್ ನಂತರ ಬರಿದಾಗುತ್ತಿದ್ದ ಜಲಮೂಲಗಳಲ್ಲಿಯೂ ಮೇ ವರೆಗೂ ಸರಾಸರಿ ಮೂರು ಅಡಿಗಳಷ್ಟು ನೀರು ಲಭ್ಯವಾಗುತ್ತಿದೆ’ ಎಂದಿದ್ದಾರೆ.

> **ಕೆಲವು ವರ್ಷಗಳ ಹಿಂದೆ ಮಣ್ಕುಳಿ, ವಿ.ವಿ.ರಸ್ತೆ ವಾರ್ಡ್‌ನಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿತ್ತು. ಆದರೆ ಈಗ ಈ ಬಗ್ಗೆ ಯಾವುದೇ ದೂರು ಬರುತ್ತಿಲ್ಲ**
> **ಎಂ.ಕೆ.ಸುರೇಶ**
> ಮುಖ್ಯಾಧಿಕಾರಿ, ಭಟ್ಕಳ ಪುರಸಭೆ



AARTHI SCANS & LABS

BLOOD TESTS	OUR PRICE	OTHERS
Sugar (F)	₹40	~~₹60~~
HbA1c	₹350	~~₹600~~
Thyroid Tests (T3 T4 TSH)	₹350	~~₹550~~
Lipid Profile Tests	₹450	~~₹600~~
Kidney Function Tests	₹290	~~₹475~~
Liver Function Tests	₹450	~~₹700~~
Complete Blood Count	₹290	~~₹400~~
Vitamin D	₹950	~~₹1450~~
Vitamin B12	₹700	~~₹1200~~

Fully Automated Robotic Lab · Internal & External Quality Control · Report Within 5 Hours



For more details call
70224 70224

ಪೂರ್ಣ ದೇಹ ಆರೋಗ್ಯ ತಪಾಸಣೆ

HEALTH CHECKUP - I

Blood Tests(76)

- Lipid Profile
- Liver Function Tests
- Kidney Function Tests (Urea, Creatinine, Uric Acid)
- Thyroid Tests - T3 T4 TSH
- Diabetic Test - Sugar (F)
- Infection Screen - ESR
- Complete Blood Count
- Complete Urine Analysis
- Free Home Collection

~~₹2700~~ ₹999

HEALTH CHECKUP - II

Radiology Tests(3)

- Ultrasound Scan for Abdomen & Pelvic Organs
- ECG (for heart)
- X-Ray Chest (for lungs)

Lab Tests(82)

- Thyroid Test TSH
- Diabetic tests HbA1c, Sugar (F,PP)
- Lipid Profile
- Kidney Function Tests
- Liver Function Tests
- Infection Screen - ESR
- Complete Blood Count
- Complete Urine Analysis

~~₹4100~~ ₹1599



60% OFF

ಮನೆಯಲ್ಲಿ ರಕ್ತ ಸಂಗ್ರಹ ಲಭ್ಯವಿದೆ

ಕೈಗೆಟುಕುವ ರಕ್ತ ಪರೀಕ್ಷೆ ಮತ್ತು ಸ್ಕ್ಯಾನ್ ಬೆಲೆಗಳು - ವರ್ಷವಿಡೀ

MRI ಸ್ಕ್ಯಾನ್
1.5 Tesla Latest Siemens MRI Scanner
ಮಾರುಕಟ್ಟೆ ದರ: ~~₹7500~~
ದಿನ ₹3500 | ರಾತ್ರಿ ₹2750 (7PM TO 12AM)
MRI Brain/Each Spine

CT ಸ್ಕ್ಯಾನ್
Siemens 32 Slice High Resolution CT Scanner
ಮಾರುಕಟ್ಟೆ ದರ: ~~₹3500~~
ದಿನ ₹1500 | ರಾತ್ರಿ ₹1000 (7PM TO 12AM)
CT Brain/PNS

ರಕ್ತ ಪರೀಕ್ಷೆಗಳು
India's First Fully Automatic Robotic Laboratory
Upto **50%** ವರೆಗೆ ಕಡಿಮೆ

35 ವರ್ಷಗಳ ನಂಬಿಕೆ · ವೈದ್ಯರ ಕುಟುಂಬದವರು ನಡೆಸುತ್ತಾರೆ · 10 ರಾಜ್ಯಗಳು ಮತ್ತು 150+ ಶಾಖೆಗಳು · ಪ್ರಾಮಾಣಿಕ & ಪಾರದರ್ಶಕ ಶುಲ್ಕಗಳು

ನಮ್ಮ ಬೆಂಗಳೂರು ಶಾಖೆಗಳು

***ಜಯನಗರ**
9ನೇ ಮುಖ್ಯ ರಸ್ತೆ,
3ನೇ ಬ್ಲಾಕ್
ಜೋಸ್ ಅಲುಕ್ಕಾಸ್ ಜ್ಯುವೆಲ್ಲರಿ ಹತ್ತಿರ,

***ಇಂದಿರಾನಗರ**
CMH ರಸ್ತೆ, ಮ್ಯಾಕ್ಸ್
ಶೋರೂಮ್ ಪಕ್ಕ,

***ರಾಜಾಜಿನಗರ**
20 ನೇ ಮುಖ್ಯ, 5 ನೇ ಬ್ಲಾಕ್,
ವೆಸ್ಟ್ ಆಫ್ ಕಾರ್ಡ್ ರಸ್ತೆ,
ಫೈರ್ ಸ್ಟೇಷನ್ ಒಪ್ಪೋಸಿಟ್

***ಪದ್ಮನಾಭನಗರ**
ಸುಬ್ರಹ್ಮಣ್ಯ ಪುರ ರಸ್ತೆ,
ಕರ್ನಾಟಕ ಬ್ಯಾಂಕ್ ಎದುರುಗಡೆ
ಇಂಡಿಯನ್ ಆಯಿಲ್
ಪೆಟ್ರೋಲ್ ಬಂಕ್ ಹತ್ತಿರ

***ಕೋರಮಂಗಲ**
ಕೋರಮಂಗಲ
ಬಸ್ ಡಿಪೋ ಹತ್ತಿರ,

For Franchise Enquiry - 99400 80508

70224 70224 · aarthiscan.com · ಹಿರಿಯ ನಾಗರಿಕರ ಕೊಡುಗೆ - 5% ರಿಯಾಯಿತಿ *T&C Apply

BENGALURU CHENNAI HYDERABAD MUMBAI NEW DELHI KOLKATA PUNE GURGAON TRIVANDRUM VIZAG PONDICHERRY




ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ನಗರದ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು (ಎಡಚಿತ್ರ) ದೇವಸ್ಥಾನದ ಹೊರಭಾಗದಲ್ಲಿ ನೆರೆದಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರಗಳು/ ಕಿಶೋರ್ ಕುಮಾರ್ ಬೋಳಾರ್

ಭಕ್ತರ ಹರ್ಷೋದ್ಗಾರ: ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಧಾರ್ಮಿಕ ವಿಧಿ–ವಿಧಾನ

ನಗರದಲ್ಲಿ ಕರಗದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಝಗಮಗಿಸುವ ದೀಪಾಲಂಕಾರ, ದೇವಾಲಯಕ್ಕೆ ವಿಶೇಷ ಅಲಂಕಾರ, ಪಾಂಡವರಿಗೆ ಹೂವಿನ ಹಾರ... ಇದರ ಮಧ್ಯೆ ಸಾವಿರಾರು ವೀರಕುಮಾರರು ಕೈಯಲ್ಲಿ ಕತ್ತಿ, ಗೋವಿಂದ... ಗೋವಿಂದ.. ಎಂಬ ಜಪ....

ತಿಗರಳಪೇಟೆ, ನಗರ್ತರಪೇಟೆ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡಪೇಟೆಯ ಮುಖ್ಯ ರಸ್ತೆ ಹಾಗೂ ಗಲ್ಲಿಗಲ್ಲಿಯೂ ಹಸಿರು ತೋರಣ. ಚೈತ್ರ ಪೌರ್ಣಿಮೆಯ ಬೆಳಕಿನಲ್ಲಿ ಪ್ರತಿ ಮನೆಯ ಮುಂದೆ ನೀರು ಹಾಕಿ, ಸಾರಿಸಿ, ರಂಗೋಲಿ ಹಾಕುವ ಸಡಗರ. ಇದು ಬೆಂಗಳೂರು ಪ್ರಸಿದ್ಧ ಕರಗ ಶಕ್ತ್ಯೋತ್ಸವ ಸಂಭ್ರಮದ ನೋಟ.

ದ್ರೌಪದಿದೇವಿ ಕರಗ ಶಕ್ತ್ಯೋತ್ಸವ ಅಂಗವಾಗಿ ನಗರದ ಪೇಟೆ ಬೀದಿಗಳಲ್ಲಿ ಮಾರ್ಚ್ 29ರಿಂದಲೇ ಸಿದ್ಧತೆ ನಡೆದಿತ್ತು. ಗುರುವಾರ ಪೌರ್ಣಿಮೆಯಂದು ಹೂವಿನ ಕರಗದ ಹಿನ್ನೆಲೆಯಲ್ಲಿ ಬೆಳಿಗ್ಗೆಯಿಂದಲೇ ಈ ಪ್ರದೇಶಗಳಲ್ಲಿ ಸಂಭ್ರಮವಿತ್ತು. ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಹಸಿ ಕರಗದ ಪೂಜೆ ಸೇರಿದಂತೆ ವಿವಿಧ ರೀತಿಯ ಪೂಜೆಗಳು ನಡೆದವು. ಅರ್ಚಕ ಜ್ಞಾನೇಂದ್ರ ವಿಶೇಷ ಪೂಜೆಗಳನ್ನು ಸಲ್ಲಿಸಿದರು.



ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಗುರುವಾರ ಧಾರ್ಮಿಕ ಕಾರ್ಯಕ್ರಮ ನೆರವೇರಿಸಲು ಅರ್ಚಕ ಜ್ಞಾನೇಂದ್ರ ಆಗಮಿಸಿದರು

ಧರ್ಮರಾಯಸ್ವಾಮಿ ದೇವಸ್ಥಾನ ಹೊರಭಾಗದಲ್ಲಿ ಕರ್ಪೂರ ಸೇವೆ ನಡೆಯಿತು. ವರ್ಷಗಳಿಂದ ಹೊತ್ತಿದ್ದ ಹರಕೆ ತೀರಿಸಲು ಸಣ್ಣ ಕರ್ಪೂರಗಳು ಸೇರಿದಂತೆ ಬೃಹತ್ ಗಾತ್ರದ ಕರ್ಪೂರಗಳ ಆರತಿ ಮಾಡಿದರು. ಕರಗದ ಮುಂದೆ ಸಾಗುವ ಎಲ್ಲ ವಯೋಮಾನದ ವೀರಕುಮಾರರು, ಸಂಜೆಯಿಂದಲೇ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಬಂದು ಸೇರಿದ್ದರು. ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ 50ಕ್ಕೂ ಹೆಚ್ಚು ತೇರುಗಳು ಧರ್ಮರಾಯ ಸ್ವಾಮಿ ಮಹಾರಥೋತ್ಸವ ಹಿಂದೆ ಸಾಗಲು ಜೆ.ಸಿ.ರಸ್ತೆ, ಟೌನ್ ಹಾನ್‌ಗಳಲ್ಲಿ ನಿಂತಿದ್ದವು.

ಝಗಮಗಿಸುವ ಬೆಳಕು, ಓಲಗದ ಸದ್ದು ಇಡೀ ಪೇಟೆಯನ್ನೇ ಆವರಿಸಿಕೊಂಡಿತ್ತು. ತಡರಾತ್ರಿ ಮಲ್ಲಿಗೆಯ ಪರಿಮಳ ಹರಡುತ್ತ ಧರ್ಮರಾಯಸ್ವಾಮಿ ದೇವಸ್ಥಾನದಿಂದ ಕರಗದ ಮೆರವಣಿಗೆ ಹೊರಟಿತು. ಕರಗ ಹೊರ ಬಂದ ಕೂಡಲೇ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು.

ಏಳು ಸುತ್ತಿನ ಕೋಟೆಯಂತೆ ಒಂದರೊಳಗೊಂದು ಪೇಟೆಗಳು ಬೆರೆತು ಕಿಷ್ಕಿಂಧೆಯಂತೆ ಇರುವ ಈ ಪ್ರದೇಶದ ಪ್ರತಿ ಗಲ್ಲಿಯಲ್ಲೂ ಜನಸಾಗರ ತುಂಬಿ ತುಳುಕುತ್ತಿತ್ತು. ರಾಜ್ಯ ಹಾಗೂ ಹೊರ ರಾಜ್ಯಗಳಿಂದಲೂ ಬಂದಿದ್ದ ಸಾವಿರಾರು ಭಕ್ತರು ಉತ್ಸವಕ್ಕೆ ಸಾಕ್ಷಿಯಾದರು.

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಭಾಗವಹಿಸಿದ್ದರು.

ತಿಗಳರಪೇಟೆ ಸೇರಿ ಕರಗ ಸಾಗುವ ಮಾರ್ಗದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಕರಗ ತಲುಪುವ ದೇವಸ್ಥಾನಗಳನ್ನು ದೀಪಾಲಂಕಾರಗಳಿಂದ ಆಕರ್ಷಕವಾಗಿ ಸಿಂಗರಿಸಲಾಗಿತ್ತು.

ಪ್ರಸಾದ ವಿನಿಯೋಗ: ಅವೆನ್ಯೂ ರಸ್ತೆ, ಬಿ.ವಿ.ಕೆ. ಅಯ್ಯಂಗಾರ್ ರಸ್ತೆ ಸುತ್ತಮುತ್ತ ಹಾಗೂ ಕರಗ ಸಾಗುವ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿ ಪುಲಾವ್, ಬಿಸಿ ಬೇಳೆ ಬಾತ್ ಸೇರಿ ವಿವಿಧ ರೀತಿಯ ಪ್ರಸಾದ ವಿತರಿಸಲಾಯಿತು. ಕರಗ ನೋಡಲು ಬಂದ ಭಕ್ತರಿಗೆ ಪಾನಕ, ಮಜ್ಜಿಗೆಯನ್ನೂ ನೀಡಲಾಯಿತು.

ಜಾತ್ರೆಯ ಸಂಭ್ರಮ: ನಗರ್ತಪೇಟೆ ಮುಖ್ಯರಸ್ತೆ ಹಾಗೂ ಅಡ್ಡರಸ್ತೆಗಳ ಇಕ್ಕೆಲಗಳಲ್ಲಿ ಆಟಿಕೆ, ಫ್ಯಾನ್ಸಿ ವಸ್ತುಗಳು, ತಿಂಡಿ ತಿನಿಸುಗಳನ್ನು ಬೀದಿಬದಿ ವ್ಯಾಪಾರಿಗಳು ಭರ್ಜರಿ ವ್ಯಾಪಾರ ಮಾಡಿದರು.

ಮಕ್ಕಳ ಬೇಸಿಗೆ ಶಿಬಿರ: ಅನುಮತಿ ಕಡ್ಡಾಯಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಾವುದೇ ಸಂಘ–ಸಂಸ್ಥೆಗಳು, ಸಂಘಟನೆಗಳು ಮಕ್ಕಳ ಬೇಸಿಗೆ ಶಿಬಿರ ಹಮ್ಮಿಕೊಳ್ಳುವ ಮೊದಲು ಲಿಖಿತ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಬೇಕು ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಚೈಲ್ಡ್ ರೈಟ್ ಟ್ರಸ್ಟ್ ಪತ್ರ ಬರೆದಿದೆ.

ಬೇಸಿಗೆ ಶಿಬಿರಗಳು ಮಕ್ಕಳ ವ್ಯಕ್ತಿತ್ವ ರೂಪಿಸಲು, ಜೀವನ ಕೌಶಲ ಕಲಿಸಲು, ಸಮುದಾಯದ ಸಹಭಾಗಿತ್ವದ ಮಹತ್ವ ಸಾರಲು ಉಪಯುಕ್ತವಾಗಿವೆ. ಆದರೆ, ಇದನ್ನೇ ಬಂಡವಾಳ ಮಾಡಿಕೊಂಡ ಕೆಲ ಸಂಘಟಕರು ಶಿಬಿರಗಳ ಹೆಸರಲ್ಲಿ ಭಾರಿ ಹಣವನ್ನು ಪೋಷಕರಿಂದ ಸಂಗ್ರಹಿಸುತ್ತಿರುವ ಆರೋಪಗಳು ಕೇಳಿ ಬಂದಿವೆ ಎಂದು ಟ್ರಸ್ಟ್ ನಿರ್ದೇಶಕ ನರಸಿಂಹ ಜಿ. ರಾವ್ ವಿವರಿಸಿದ್ದಾರೆ.

ಬೇಸಿಗೆ ಶಿಬಿರಗಳು ಮಕ್ಕಳ ಸ್ನೇಹಿಯಾಗಿರಬೇಕು. ಭಾಗವಹಿಸುವ ಮಕ್ಕಳ, ಪೋಷಕರ ಸಂಪೂರ್ಣ ವಿವರ ನೀಡಬೇಕು. ಅಂಗವಿಕಲ ಮಕ್ಕಳಿಗೆ ಅಗತ್ಯ ಸೌಕರ್ಯವಿರಬೇಕು. ಬಾಲಕಿಯರ ಕ್ಷೇಮಕ್ಕೆ ನಿಗಾ ವಹಿಸಬೇಕು. ಮಕ್ಕಳ ಜತೆ ಒಡನಾಡುವ ಹಿರಿಯರ ಹಿನ್ನೆಲೆ ಸಂಗ್ರಹಿಸಬೇಕು. ಶಿಬಿರದಲ್ಲಿ ಭಾಗವಹಿಸುವ ಮಕ್ಕಳ ಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸು ಮೊದಲು ಪೋಷಕರ ಒಪ್ಪಿಗೆ ಪಡೆಯಬೇಕು. ಮಕ್ಕಳಿಗಾಗಿ ದೂರು ಪೆಟ್ಟಿಗೆ, ಸಹಾಯವಾಣಿ ಒದಗಿಸಬೇಕು ಎಂಬ ಅಂಶಗಳನ್ನು ಕಡ್ಡಾಯಗೊಳಿಸಿ, ಸುತ್ತೋಲೆ ಹೊರಡಿಸಬೇಕು ಎಂದು ಕೋರಿದ್ದಾರೆ.

ಪ್ರಜಾವಾಣಿ @75

ಅರೆಕಾಲಿಕ ವರದಿಗಾರರು ಬೇಕಾಗಿದ್ದಾರೆ

ಮಹದೇವಪುರ ಮತ್ತು **ಹೆಸರಘಟ್ಟ**ದಿಂದ 'ಪ್ರಜಾವಾಣಿ'ಗೆ ಸುದ್ದಿ ಸಂಗ್ರಹಿಸಲು ಅರೆಕಾಲಿಕ ವರದಿಗಾರರು ಬೇಕಾಗಿದ್ದಾರೆ.

ಬೇರೆ ಉದ್ಯೋಗದಲ್ಲಿರುವ ಆಸಕ್ತ ಪದವೀಧರ ಅಭ್ಯರ್ಥಿಗಳು ಸ್ವ–ವಿವರಗಳೊಂದಿಗೆ 7 ದಿನಗಳ ಒಳಗೆ ಅರ್ಜಿ ಸಲ್ಲಿಸಬೇಕು. ಅರ್ಜಿ ಕೈಬರಹದಲ್ಲಿ ಇರಲಿ. ಮೊಬೈಲ್ ಸಂಖ್ಯೆ ನಮೂದಿಸಿ. ಕಂಪ್ಯೂಟರ್ ಮತ್ತು ಕ್ಯಾಮೆರಾ ಹೊಂದಿರುವವರಿಗೆ ಆದ್ಯತೆ.

ಲಕೋಟೆಯ ಮೇಲ್ಭಾಗದಲ್ಲಿ '**ಮಹದೇವಪುರ ಮತ್ತು ಹೆಸರಘಟ್ಟ ಅರೆಕಾಲಿಕ ವರದಿಗಾರರ ಹುದ್ದೆಗೆ ಅರ್ಜಿ**' ಎಂದು ನಮೂದಿಸಬೇಕು ಕೆಳಗಿನ ವಿಳಾಸಕ್ಕೆ ತಲುಪಿಸಿ.

ಕಾರ್ಯನಿರ್ವಾಹಕ ಸಂಪಾದಕರು, ಪ್ರಜಾವಾಣಿ, # 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001

ಸರಳವಾಗಿ ಜಯಂತಿ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಜಯಂತಿಗಳನ್ನು ಸರಳವಾಗಿ ಆಚರಿಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿಳಿಸಿದೆ.

ಸಮಾಜ ಸುಧಾರಕರು, ವಚನಕಾರರು, ಧಾರ್ಮಿಕ ಪುರುಷರು, ಪುರಾಣ ಪ್ರಸಿದ್ಧ ವ್ಯಕ್ತಿಗಳು, ಇತಿಹಾಸ ಪ್ರಸಿದ್ಧ ವ್ಯಕ್ತಿಗಳ ತತ್ವಾದರ್ಶ ಹಾಗೂ ಜೀವನಸಾಧನೆಗಳನ್ನು ಮುಂದಿನ ಜನಾಂಗಕ್ಕೆ ಪರಿಚಯಿಸಲು ಕ್ರಮ ವಹಿಸಲಾಗಿದೆ. ಇಲಾಖೆಯಡಿ ಒಟ್ಟು 32 ಮಹಾಪುರುಷರ ಜಯಂತಿಗಳನ್ನು ಆಚರಿಸಲಾಗುತ್ತಿದೆ. ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಆರು ಜಯಂತಿಗಳನ್ನು ಆಚರಿಸಬೇಕಿದೆ. ಮಾರ್ಚ್ 29ರಿಂದ ಮೇ 15ರವರೆಗೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇರಲಿದೆ. ಆದ್ದರಿಂದ ಆರು ಜಯಂತಿಗಳನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಬೇಕು ಎಂದು ಇಲಾಖೆ ನಿರ್ದೇಶಕರು ತಿಳಿಸಿದ್ದಾರೆ.

ಪ್ರತಿ ಜಯಂತಿಗೆ ಜಿಲ್ಲಾ ಮಟ್ಟದಲ್ಲಿ ₹3 ಸಾವಿರ, ತಾಲ್ಲೂಕು ಮಟ್ಟದಲ್ಲಿ ₹ 1,500 ಅನುದಾನವನ್ನು ಇಲಾಖೆ ವತಿಯಿಂದ ನೀಡಲಾಗುತ್ತದೆ ಎಂದು ಹೇಳಿದ್ದಾರೆ.

ಇದೇ 14ರಂದು ಆಚರಿಸಲಾಗುವ ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಇಲಾಖೆ ಕೈಬಿಟ್ಟಿದೆ ಎನ್ನುವುದು ಸತ್ಯಕ್ಕೆ ದೂರವಾಗಿದೆ. ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಬಾಬು ಜಗಜೀವನ ರಾಂ ಅವರ ಜಯಂತಿ ಸಂಸ್ಕೃತಿ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಈ ಎರಡು ಜಯಂತಿಯನ್ನು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಚರಿಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕರ್ಪೂರದ ಶಾಖ: ದ್ವಿಚಕ್ರ ವಾಹನಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಗಳರಪೇಟೆಯ ಧರ್ಮರಾಯ ಸ್ವಾಮಿ ದೇವಾಲಯ ರಸ್ತೆಯಲ್ಲಿ ಗುರುವಾರ ಹಚ್ಚಲಾಗಿದ್ದ ದೊಡ್ಡ ಗಾತ್ರದ ಕರ್ಪೂರಗಳ ಬೆಂಕಿಯ ಶಾಖದಿಂದಾಗಿ ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ.

ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಎನ್.ಆರ್. ವೃತ್ತದಿಂದ ಧರ್ಮರಾಯ ಸ್ವಾಮಿ ದೇವಸ್ಥಾನವರೆಗಿನ ರಸ್ತೆಯಲ್ಲಿ ಪ್ರತಿ ವರ್ಷವೂ ದೊಡ್ಡ ಗಾತ್ರದ ಕರ್ಪೂರ ಇರಿಸಿ ಬೆಂಕಿ ಹಚ್ಚುತ್ತಾರೆ. ಈ ಸಂದರ್ಭದಲ್ಲಿ ರಸ್ತೆಯ ಅಕ್ಕ–ಪಕ್ಕದಲ್ಲಿ ಯಾವುದೇ ವಾಹನ ನಿಲ್ಲಿಸದಂತೆ ದೇವಸ್ಥಾನದವರು ಎಚ್ಚರಿಕೆ ನೀಡುತ್ತಾರೆ.

ಗುರುವಾರ ಹಲವರು ತಮ್ಮ ವಾಹನಗಳನ್ನು ರಸ್ತೆ ಅಕ್ಕ–ಪಕ್ಕದಲ್ಲಿ ನಿಲ್ಲಿಸಿದ್ದರು. ಇದರ ನಡುವೆಯೇ ಆವರಣದಲ್ಲಿ ಸೇರಿದ್ದ ಭಕ್ತರು, ಕರ್ಪೂರಗಳನ್ನು ಸಾಲಾಗಿ ಇರಿಸಿ ಬೆಂಕಿ ಹಚ್ಚಿದ್ದರು.




ಭಕ್ತರು ಹಚ್ಚಿದ್ದ ಕರ್ಪೂರದ ಬೆಂಕಿಯ ಶಾಖದಿಂದ ದ್ವಿಚಕ್ರ ವಾಹನಗಳಿಗೆ ಹಾನಿಯಾಗಿರುವುದು (ಎಡಚಿತ್ರ) ಧರ್ಮರಾಯ ಸ್ವಾಮಿ ದೇವಸ್ಥಾನದ ಎದುರಿನ ರಸ್ತೆಯಲ್ಲಿ ಭಕ್ತರು ಗುರುವಾರ ಕರ್ಪೂರ ಹಚ್ಚಿದರು – ಪ್ರಜಾವಾಣಿ ಚಿತ್ರ

ಕರ್ಪೂರದಿಂದ ಹೊತ್ತಿಕೊಂಡ ಬೆಂಕಿ ಧಗ ಧಗ ಉರಿಯಲಾರಂಭಿಸಿತ್ತು. ಬೆಂಕಿಯ ಕೆನ್ನಾಲಗೆ ಹೆಚ್ಚಿತ್ತು. ಇದರ ಶಾಖ ರಸ್ತೆಯ ಪಕ್ಕದಲ್ಲಿದ್ದ ವಾಹನಗಳಿಗೆ ತಾಗಿತ್ತು. ಇದರಿಂದಾಗಿ ದ್ವಿಚಕ್ರ ವಾಹನಗಳಿಗೆ ಹಾನಿಯಾಗಿದೆ.

'ಬೆಂಕಿಯ ಶಾಖದಿಂದ ವಾಹನಗಳಿಗೆ ಹಾನಿಯಾಗಿದೆ. ಯಾವ ವಾಹನಕ್ಕೂ ಬೆಂಕಿ ಹೊತ್ತಿಕೊಂಡಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿ ವಾಹನಗಳಿಗೆ ನೀರು ಹಾಕಿ, ಹೆಚ್ಚು ಹಾನಿ ಆಗುವುದನ್ನು ತಪ್ಪಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

ಆರ್‌ಸಿಬಿ ಪರ ಕರ್ಪೂರ: 'ಈ ಬಾರಿಯ ಟಾಟಾ ಐಪಿಎಲ್ ಟಿ– 20 ಕ್ರಿಕೆಟ್ ಪಂದ್ಯಾವಳಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಕಪ್ ಗೆಲ್ಲಲಿ' ಎಂದು ಯುವಕರೊಬ್ಬರು ಕರ್ಪೂರ ಹಚ್ಚಿದ್ದು ವಿಶೇಷವಾಗಿತ್ತು.

ನಿಧನ ವಾರ್ತೆ

ನಿವೃತ್ತ ಮುಖ್ಯ ಶಿಕ್ಷಕಿ ಸರಸ್ವತಮ್ಮ



ಬೆಂಗಳೂರು: ನಗರದ ಎಚ್‌ಎಂಟಿ ಕಾಲೊನಿಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯ ಶಿಕ್ಷಕಿ ಕೆ.ಎಸ್. ಸರಸ್ವತಮ್ಮ (70) ಅವರು ಬುಧವಾರ ನಿಧನರಾದರು. ಮಹಾಲಕ್ಷ್ಮಿ ಲೇಔಟ್ ನಿವಾಸಿಯಾಗಿದ್ದ ಅವರಿಗೆ ಪತಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

'ಒಡಿಶಾ ಕಾರ್ಮಿಕರು ನಡೆದು ಸಾಗಿದ ಬಗ್ಗೆ ಮಾಹಿತಿ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲಸ ಮಾಡಿಸಿಕೊಂಡು ಸಂಬಳ ನೀಡದ ಕಾರಣಕ್ಕೆ ವಲಸೆ ಕಾರ್ಮಿಕರು ಒಡಿಶಾ ತನಕ ಕಾಲ್ನಡಿಗೆಯಲ್ಲೇ ಸಾಗಿರುವ ಪ್ರಕರಣದ ಬಗ್ಗೆ ನಮಗೆ ಮಾಹಿತಿ ಇಲ್ಲ' ಎಂದು ಕಾರ್ಮಿಕ ಆಯುಕ್ತ ಅಕ್ರಂ ಪಾಷ ತಿಳಿಸಿದರು.

'ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು, ಕಾರಣ ಏನು ಎಂಬುದು ಗೊತ್ತಿಲ್ಲ. ಒಡಿಶಾ ತನಕ ನಡೆದು ಸಾಗುವ ಬದಲು ಕಾರ್ಮಿಕ ಇಲಾಖೆಗೆ ಮಾಹಿತಿ ನೀಡಿದ್ದರೆ ಯಾವ ಕಂಪನಿ ಎಂಬುದನ್ನು ಗುರುತಿಸಿ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿತ್ತು' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಒಡಿಶಾ ರಾಜ್ಯದ ಕಾರ್ಮಿಕ ಆಯುಕ್ತರೊಂದಿಗೆ ಹಲವು ವಿಷಯಗಳ ಬಗ್ಗೆ ಆಗಾಗ ಸಂಪರ್ಕ ಮಾಡುತ್ತೇವೆ. ಕಾರ್ಮಿಕರು ಅಲ್ಲಿ ದೂರು ನೀಡಿರುವ ಬಗ್ಗೆ ಈವರೆಗೆ ನಮಗೆ ಮಾಹಿತಿ ರವಾನೆಯಾಗಿಲ್ಲ. ಬಂದರೆ ಪರಿಶೀಲಿಸಲಾಗುವುದು' ಎಂದು ಸ್ಪಷ್ಟಪಡಿಸಿದರು.


ಭುವನೇಶ್ವರದಲ್ಲಿ ಒಡಿಶಾ ಕಾರ್ಮಿಕ ಆಯುಕ್ತರಿಗೆ ದೂರು ನೀಡಿರುವ ಆಲ್ ಇಂಡಿಯಾ ಸೆಂಟರ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್(ಎಐಸಿಸಿಟಿಯು), 'ಕಾರ್ಮಿಕರಿಗೆ ಎರಡು ವರ್ಷಗಳಿಂದ ಸಂಬಳ ನೀಡದೆ ದುಡಿಸಿಕೊಳ್ಳಲಾಗಿದೆ' ಎಂದು ದೂರಿದೆ.

'ಪಾಠದ ಭಾಗ ಕೈಬಿಟ್ಟದ್ದಕ್ಕೆ ಆಕ್ಷೇಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯು (ಎನ್‌ಸಿಇಆರ್‌ಟಿ) 12ನೇ ತರಗತಿಯ ಪಠ್ಯದಲ್ಲಿನ ಕೆಲ ಭಾಗಗಳನ್ನು ಕೈಬಿಟ್ಟಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ, 'ರಾಜಕೀಯ ಪ್ರಚೋದನೆಯಿಂದ ಈ ರೀತಿ ಮಾಡಲಾಗಿದೆ' ಎಂದು ಆರೋಪಿಸಿದೆ.

'ಕೈಬಿಟ್ಟಿರುವ ಎಲ್ಲಾ ಪಾಠಗಳನ್ನು ಸೇರ್ಪಡೆಗೊಳಿಸಬೇಕು. ಕೋವಿಡ್ ಲಾಕ್‌ಡೌನ್ ಸಮಯದಲ್ಲಿಯೂ ಕೇಂದ್ರ ಸರ್ಕಾರದ ಒತ್ತಡದಿಂದ ಎನ್‌ಸಿಇಆರ್‌ಟಿ, ಇತಿಹಾಸ, ಪೌರಶಾಸ್ತ್ರ ಮತ್ತು ವಿಜ್ಞಾನದ ಪಠ್ಯದಲ್ಲಿನ ಕೆಲವು ಪಾಠಗಳನ್ನು ತೆಗೆದುಹಾಕಿತ್ತು. ಈಗ ಮತ್ತೊಮ್ಮೆ ಪಠ್ಯಪುಸ್ತಕಗಳ ಪರಿಷ್ಕರಣೆ ಹೆಸರಿನಲ್ಲಿ ಮೊಘಲ್ ಇತಿಹಾಸವನ್ನು ಪಠ್ಯದಿಂದ ತೆಗೆದು ಹಾಕಿದೆ' ಎಂದು ಸಮಿತಿಯ ರಾಜ್ಯಾಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಹೇಳಿದ್ದಾರೆ.





ನಾನು ಸೇಫ್ ಹೀರೋ...

ವಿನಾಯಕ ಕೆ.ಎಸ್.

ಆ್ಯಕ್ಷನ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಅವರ ಸಿನಿಪಯಣದ 34ನೇ ಚಿತ್ರ ತೆರೆ ಕಂಡ ಹೊತ್ತು ಇದು. ಇತ್ತೀಚೆಗಷ್ಟೇ 'ಮಾಫಿಯಾ' ಶೂಟಿಂಗ್ ಮುಗಿಸಿಕೊಂಡಿರುವ ಅವರು ಅಂಥದ್ದೇ ಥ್ರಿಲ್ಲರ್ ಕಥೆ 'ವೀರಂ' ಮೂಲಕ ಇಂದು ಬೆಳ್ಳಿ ತೆರೆಯಲ್ಲಿ ಕಾಣಿಸಿಕೊಂಡಿದ್ದಾರೆ. ಪೊಲೀಸ್, ಸಾಹಸಿಯಾಗಿಯೇ ಪ್ರಜ್ವಲ್ ತಮ್ಮ ಸಿನಿ ಸಾಹಸ ತೆರೆದಿಟ್ಟಿದ್ದಾರೆ.

• 'ವೀರಂ' ವಿಶೇಷತೆ ಏನು?

ಈಗಾಗಲೇ ಚಿತ್ರದ ಟ್ರೇಲರ್ ನೋಡಿರುವವರಿಗೆ ಇದೊಂದು ಹೊಡಿ ಬಡಿ ಸಿನಿಮಾ ಅನಿಸಬಹುದು. ಆದರೆ ಮಾಸ್ ಆಕರ್ಷಣೆಯ ಜತೆಗೆ ತುಂಬ ಭಾವುಕತೆಯಿಂದ ಕೂಡಿರುವ ಕಥೆ ಈ ಚಿತ್ರದ್ದು. ನಾಯಕನ ಅಕ್ಕ-ಭಾವನ ಪಾತ್ರದಲ್ಲಿ ಅಭಿನಯಿಸಿರುವ ಶ್ರುತಿ ಮತ್ತು ಅಚ್ಯುತ್ ಕುಮಾರ್ ಜೋಡಿ ಚಿತ್ರವನ್ನು ಕುಟುಂಬದವರೆಲ್ಲ ಕುಳಿತು ನೋಡುವಂತೆ ಮಾಡುತ್ತದೆ. ಗಟ್ಟಿ ಕಥೆ ಹೊಂದಿದೆ. ಹೀಗಾಗಿ ಈ ಚಿತ್ರ ಜನರನ್ನು ಚಿತ್ರಮಂದಿರದತ್ತ ಆಕರ್ಷಿಸಲಿದೆ ಎಂಬ ವಿಶ್ವಾಸವಿದೆ.

• ಇದು ಯಾವ ವರ್ಗದ ಸಿನಿಮಾ?

ಒಬ್ಬೊಬ್ಬರು ಸಿನಿಮಾ ನೋಡುವ ರೀತಿ ಒಂದೊಂದು ಥರ ಇರುತ್ತದೆ. ಅಂತಿಮವಾಗಿ ಜನ ಮನರಂಜನೆಗಾಗಿ ಸಿನಿಮಾಕ್ಕೆ ಬರುವುದಲ್ಲವೇ? ಅದಕ್ಕೆ ಪೂರಕವಾದ ಎಲ್ಲ ಅಂಶಗಳೂ ಈ ಚಿತ್ರದಲ್ಲಿವೆ. ನಾನು ಕಾಲೇಜು ಹುಡುಗನ ಪಾತ್ರ ಮಾಡಿದ್ದೇನೆ. ಬೆಂಗಳೂರಿನ ಕೃಷಿ ಮಾರುಕಟ್ಟೆ, ಯಶವಂತಪುರ ಆರ್‌ಎಂಸಿ ಯಾರ್ಡ್‌ನಲ್ಲಿ ಬದುಕುವ ಸಮುದಾಯದ ಸಂಸ್ಕೃತಿ, ಘಟನೆಗಳು ಚಿತ್ರದಲ್ಲಿವೆ. ಒಂದು ರೀತಿ ಬೆಂಗಳೂರಿನ ಕಥೆ ಹೇಳುವ ಚಿತ್ರ. ಈ ಪ್ರಯಾಣದಲ್ಲಿ ರಚಿತಾ ರಾಮ್ ಜತೆಯಾಗುತ್ತಾರೆ. ಅವರೊಂದಿಗಿನ ಪ್ರೇಮ ಕಥೆ ಬರುತ್ತದೆ. ಭಾವುಕತೆ, ಹಾಸ್ಯವೂ ಹದ ಮಿಶ್ರಣದಲ್ಲಿರುವ ಚಿತ್ರವಿದು.

• 34 ಚಿತ್ರಗಳವರೆಗಿನ ಸಿನಿಪಯಣ ಹೇಗಿತ್ತು?

ತುಂಬಾ ಮಧುರವಾಗಿದೆ. 18ನೇ ವಯಸ್ಸಿನಲ್ಲಿಯೇ 'ಸಿಕ್ಸರ್' ಹೊಡೆದು, 34 ಸಿನಿಮಾಗಳವರೆಗೆ ಬಂದು ನಿಂತಿರುವುದು ಖುಷಿ ಸಂಗತಿ. ಈ ಪ್ರಯಾಣದಲ್ಲಿ ಹಿಟ್ ಹಾಗೂ ತೋಪಾದ ಸಿನಿಮಾಗಳಿವೆ. ಗೆದ್ದಾಗ ಹೆಚ್ಚು ಅಬ್ಬರಿಸಲಿಲ್ಲ. ಸೋತಾಗ ತುಂಬಾ ಕುಸಿಯಲೂ ಇಲ್ಲ. ಇವೆಲ್ಲ ಸಿನಿಪಯಣದ ಒಂದು ಭಾಗವಷ್ಟೆ. ಆದರೆ ಹಿಟ್ ಸಿನಿಮಾಗಳ ಸಂಖ್ಯೆ ಹೆಚ್ಚಿದೆ ಎಂಬುದು ಒಂದು ರೀತಿ ಹೆಮ್ಮೆ. ಈಗಲೂ ಕೈಯಲ್ಲಿ ಸಾಕಷ್ಟು ಸಿನಿಮಾಗಳಿವೆ. ಪ್ರಜ್ವಲ್ ಅಂದರೆ ಸೇಫ್ ಹೀರೋ, ಹಾಕಿದ ಬಂಡವಾಳ ವಾಪಸ್ ಬರುತ್ತದೆ ಎಂಬ ವಿಶ್ವಾಸ ನಿರ್ಮಾಪಕರಿಗಿದೆ.

• ಸೇಫ್ ಹೀರೋ ಎಂದಿರಲ್ಲ; ಅದು ಹೇಗೆ?

ನನ್ನನ್ನು ನಂಬಿ ಹಾಕಿದ ಹಣ ನಿರ್ಮಾಪಕರಿಗೆ ವಾಪಸ್ ಬರುತ್ತದೆ. ನನ್ನ ಸಿನಿಮಾಗಳ ಹಿಂದಿ ಡಬ್ಬಿಂಗ್, ಟಿವಿ ಹಕ್ಕುಗಳು ಉತ್ತಮ ಮೊತ್ತಕ್ಕೆ ಮಾರಾಟವಾಗುತ್ತಿವೆ. ಇಲ್ಲಿ ಸಿನಿಮಾದ ಬಜೆಟ್ ಕೂಡ ಮುಖ್ಯವಾಗುತ್ತದೆ. ಪ್ರತಿ ಚಿತ್ರಕ್ಕೂ ಒಂದಷ್ಟು ರಿಸ್ಕ್ ಇರುತ್ತದೆ. ಉದಾಹರಣೆಗೆ 'ಜಂಟಲ್‌ಮ್ಯಾನ್' ಚಿತ್ರವನ್ನು ಅಚ್ಚುಕಟ್ಟಾದ ಬಜೆಟ್‌ನಲ್ಲಿ ಮುಗಿಸಿದ್ದೆವು. ಹೀಗಾಗಿ ಕೋವಿಡ್ ವೇಳೆ ಚಿತ್ರ ಬಿಡುಗಡೆಯಾಗಿ, ಚಿತ್ರಮಂದಿರದಲ್ಲಿ ಉತ್ತಮ ಗಳಿಕೆ ಕಾಣದಿದ್ದರೂ ಬಂಡವಾಳಕ್ಕೆ ದೊಡ್ಡ ಹೊಡೆತ ಬೀಳಲಿಲ್ಲ. 'ವೀರಂ' ಕೂಡ ದೊಡ್ಡ ಬಜೆಟ್‌ನ ಸಿನಿಮಾ. ನನ್ನ ಸಿನಿಮಾಗಳಿಗೆ ಒಂದೊಳ್ಳೆ ಪ್ರಾರಂಭ ಸಿಗುತ್ತದೆ. ಮೊದಲ ದಿನವೇ ದೊಡ್ಡ ಸಂಖ್ಯೆಯ ಅಭಿಮಾನಿಗಳು ಚಿತ್ರ ನೋಡಲು ಬರುತ್ತಾರೆ. ಚಿತ್ರ ಬಂಡವಾಳದ ದೃಷ್ಟಿಯಿಂದಲೂ ಸುರಕ್ಷಿತ ಎನಿಸಿದೆ.

• ನಟಿಸಿದ ಸಿನಿಮಾಗಳು ಸೋತಾಗ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ?

ಮೊದಲೆಲ್ಲ ಸಿನಿಮಾ ಸೋತಾಗ ಬಹಳ ಬೇಜಾರಾಗುತ್ತಿತ್ತು. ಆ್ಯಕ್ಷನ್, ಶೂಟಿಂಗ್ ಅಂತ ಬಹಳ ಶ್ರಮ ಹಾಕಿರುತ್ತೇವೆ. ಎಷ್ಟೋ ಕಡೆ ಸಣ್ಣಪುಟ್ಟ ಏಟುಗಳಾಗಿರುತ್ತವೆ. ಚಿತ್ರ ಗೆಲ್ಲದಿದ್ದಾಗ ಇದೆಲ್ಲ ಶ್ರಮ ವ್ಯರ್ಥವಾಗಿ ಹೋಯಿತಲ್ಲ ಎಂದು ಬೇಜಾರಾಗುತ್ತಿತ್ತು. ಆದರೆ ನಮ್ಮ ತಂದೆ ಅವರ ಅನುಭವ ಹೇಳುತ್ತಿದ್ದರು. ಅದನ್ನು ಕೇಳಿ ಸೋಲು ಎದುರಿಸುವುದನ್ನು ಕಲಿಯುತ್ತಾ ಬಂದಿದ್ದೇನೆ. ಪ್ರಾರಂಭದಲ್ಲಿ ಹಿಟ್ ಚಿತ್ರಗಳನ್ನೇ ಕೊಟ್ಟಿದ್ದೆ. ನಂತರ ಸೋಲು ಕಂಡೆ. ಬಹಳ ನೋವಾಯಿತು. ಈಗೆಲ್ಲ ಸೋಲು ಕೂಡ ಬದುಕಿನ ಒಂದು ಭಾಗ ಎಂಬ ಅರಿವಾಗಿದೆ.

• ಭವಿಷ್ಯದ ಯೋಜನೆಗಳ ಬಗ್ಗೆ ವಿವರ?

'ಮಾಫಿಯಾ' ಚಿತ್ರೀಕರಣ ಮುಗಿದಿದೆ. 'ಗಣ' ಬಿಡುಗಡೆಗೆ ಸಿದ್ಧವಾಗುತ್ತಿದೆ. ಮಾಫಿಯಾ ನಿರ್ದೇಶಕ ಲೋಹಿತ್ ಜತೆ ಇನ್ನೊಂದು ಸಿನಿಮಾದ ಶೂಟಿಂಗ್ ಬಹುಪಾಲು ಮುಗಿದಿದೆ. 'ದೇವಕಿ' ಸಿನಿಮಾ ನಿರ್ಮಿಸಿದ್ದ ರವಿಕುಮಾರ್ ಈ ಚಿತ್ರದ ನಿರ್ಮಾಪಕರು. ಇದಾದ ಮೇಲೆ ನಿರ್ದೇಶಕ ಚೇತನ್ ಅವರ ಜತೆಗೆ ಕೆಲಸ ಮಾಡಿದ್ದ ಮಹಾಂತೇಶ್ ಎಂಬ ಹೊಸ ನಿರ್ದೇಶಕರೊಬ್ಬರ ಚಿತ್ರಕ್ಕೆ ಸಹಿ ಹಾಕಿದ್ದೇನೆ. ತೆಲುಗು ಸಿನಿಮಾ ಒಪ್ಪಿಕೊಂಡಿರುವೆ. ಹಿಂದಿ ಚಿತ್ರವೊಂದರ ಮಾತುಕತೆ ನಡೆಯುತ್ತಿದೆ. ಮುಂದಿನ ವರ್ಷದವರೆಗೂ ಬ್ಯುಸಿ ಇದ್ದೇನೆ.

• ಇತ್ತೀಚೆಗೆ ನೀವು ನೋಡಿದ ಮತ್ತು ಇಷ್ಟವಾದ ಸಿನಿಮಾ?

'ಕಾಂತಾರ' ನಾನು ಬಹಳ ಇಷ್ಟಪಟ್ಟ ಸಿನಿಮಾ. ಎರಡು ಸಲ ನೋಡಿದೆ. ಗಟ್ಟಿಯಾದ ವಿಷಯವಿದ್ದರೆ ಜನ ಬಂದೇ ಬರುತ್ತಾರೆ. ನಟರಾಗಲಿ, ಪ್ರೇಕ್ಷಕರಾಗಲಿ ಸಿನಿಮಾ ಚೆನ್ನಾಗಿದ್ದರೆ ಮತ್ತೆ ಮತ್ತೆ ನೋಡುತ್ತೇವೆ. ನಮ್ಮಲ್ಲಿನ ವಿಶೇಷತೆಯನ್ನು ಜಗತ್ತಿನ ಎಲ್ಲರೂ ನೋಡಲು ಇಷ್ಟಪಡುತ್ತಾರೆ. ನಮ್ಮತನಕ್ಕೆ ಎಲ್ಲ ಕಡೆ ಬೇಡಿಕೆ ಇದೆ.

• ಮಾಸ್ ಇಮೇಜ್‌ನಿಂದ ಆಚೆ ಬಂದು ಸಿನಿಮಾ ಮಾಡುತ್ತೀರಾ?

ಖಂಡಿತ ಒಳ್ಳೆ ಕಥೆ ಬಂದರೆ ಮಾಡುತ್ತೇನೆ. ಹಾಡು, ಫೈಟ್ ಇರಬೇಕು ಅಂತಿಲ್ಲ. ಕಥೆ ಚೆನ್ನಾಗಿದ್ದು, ನಂಬಿಕೆ ಬಂದರೆ ಅಂತಹ ಸಿನಿಮಾ ಮಾಡುತ್ತೇನೆ. ಆ ರೀತಿ ಕಥೆಗಾಗಿ ಕಾಯುತ್ತಿದ್ದೇನೆ. ಇಲ್ಲಿವರೆಗೂ ಬೇರೆ ಬೇರೆ ರೀತಿಯ ಕಥೆಗಳನ್ನೇ ಆಯ್ಕೆ ಮಾಡಿಕೊಂಡು ಬಂದಿರುವೆ. 'ಇನ್‌ಸ್ಪೆಕ್ಟರ್ ವಿಕ್ರಂ'ನಲ್ಲಿ ಇನ್‌ಸ್ಪೆಕ್ಟರ್ ಪಾತ್ರ. 'ಅರ್ಜುನ್ ಗೌಡ' ಚಿತ್ರದಲ್ಲಿ ಇನ್ನೊಂದು ಬಗೆಯ ಭಿನ್ನ ಪಾತ್ರ. 'ವೀರಂ' ಪಾತ್ರ ಅದೆಲ್ಲಕ್ಕಿಂತ ಭಿನ್ನ. ಎಲ್ಲ ಚಿತ್ರಗಳಲ್ಲಿಯೂ ಒಂದೇ ರೀತಿಯ ಪಾತ್ರ ಮಾಡಿಕೊಂಡು ಬಂದಿಲ್ಲ.

• ನೀವೇ ಸಿನಿಮಾ ನಿರ್ಮಿಸುವ ಯೋಜನೆ ಇದೆಯಾ?

ತಮ್ಮನಿಗಾಗಿ ಸಿನಿಮಾ ನಿರ್ಮಾಣ ಮಾಡಬೇಕು ಅಂತ ಇತ್ತು. ಆದರೆ ಅವನೂ ಬೇರೆ ಸಿನಿಮಾಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಹೀಗಾಗಿ ಸದ್ಯಕ್ಕೆ ಆ ಯೋಚನೆ ಇಲ್ಲ. ನಿರ್ಮಾಣಕ್ಕೆ ತುಂಬಾ ಸಮಯ ಬೇಕು. ನಾನು ಕೂಡ ಚಿತ್ರೀಕರಣದಲ್ಲಿ ಮಗ್ನನಾಗಿರುವುದರಿಂದ ಅದರತ್ತ ಗಮನಹರಿಸಲು ಸದ್ಯಕ್ಕೆ ಸಾಧ್ಯವಿಲ್ಲ.



ವೀರಂ
ಪ್ರಜ್ವಲ್ ದೇವರಾಜ್
ರಚಿತಾ ರಾಮ್

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು
ಕ್ಯೂ ಆರ್ ಕೋಡ್
ಸ್ಕ್ಯಾನ್ ಮಾಡಿ



ನಮ್ ನಾಣಿ
ಮದುವೆ ಪ್ರಸಂಗ
ಶ್ರೇಯಾ ವಸಂತ್
ಹೇಮಂತ್ ಹೆಗಡೆ

ಬೆಳ್ಳಿತೆರೆಯಲ್ಲಿಂದು ಹೊಸ-ಹಳೆ ಮುಖಗಳು

ಇಂದು ತೆರೆಗೆ

ಬೆಳ್ಳಿ ತೆರೆಗೆ ಕೆಲವು ದಿನಗಳ ನಂತರ ಶುಭಶುಕ್ರವಾರ ಬಂದಿದೆ. ಇಂದು (ಏ. 7) ನಾಲ್ಕು ಚಿತ್ರಗಳು ಬಿಡುಗಡೆಯಾಗಿವೆ. ಆ ಚಿತ್ರಗಳ ಕಿರುನೋಟ ಇಲ್ಲಿದೆ.

ವೀರಂ: ಶಶಿಧರ್ ಸ್ಟುಡಿಯೋಸ್ ಪ್ರೊಡಕ್ಷನ್ ಮೂಲಕ ಕೆ.ಎಂ. ಶಶಿಧರ್ ನಿರ್ಮಿಸಿರುವ ಆ್ಯಕ್ಷನ್, ಥ್ರಿಲ್ಲರ್ ಚಿತ್ರ 'ವೀರಂ' ಇಂದು ರಾಜ್ಯದಾದ್ಯಂತ ತೆರೆಕಾಣುತ್ತಿದೆ. ಚಿತ್ರಕ್ಕೆ ಖದರ್ ಕುಮಾರ್ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಒಂದು ಕುಟುಂಬಕ್ಕೆ ತೊಂದರೆ ಬಂದಾಗ ಎಲ್ಲರೂ ಹೇಗೆ ಜೊತೆಗೆ ನಿಲ್ಲುತ್ತಾರೆ ಎನ್ನುವುದು ಚಿತ್ರದ ಕಥೆ. ಈ ಚಿತ್ರದಲ್ಲಿ ಪ್ರಜ್ವಲ್ ದೇವರಾಜ್, ರಚಿತಾರಾಮ್, ಶ್ರುತಿ, ಶ್ರೀನಗರ ಕಿಟ್ಟಿ ನಟಿಸಿದ್ದಾರೆ. ಚಿತ್ರಕ್ಕೆ ಯು/ಎ ಸರ್ಟಿಫಿಕೇಟ್ ಸಿಕ್ಕಿದ್ದು, ಅನೂಪ್ ಸೀಳಿನ್ ಅವರ ಸಂಗೀತ, ಲವಿತ್ ಅವರ ಕ್ಯಾಮೆರಾವರ್ಕ್ ಇದೆ.

ಪೆಂಟಗನ್: ಐದು ಬೇರೆ ಬೇರೆ ನಮೂನೆಯ ಕಥೆಗಳನ್ನು ಇಟ್ಟುಕೊಂಡು ಮಾಡಿರುವ 'ಆಂಥಾಲಜಿ' ಸಿನಿಮಾ 'ಪೆಂಟಗನ್' ಇಂದು ರಾಜ್ಯದಾದ್ಯಂತ ತೆರೆಕಾಣುತ್ತಿದೆ. ಈ ಚಿತ್ರವನ್ನು ನಿರ್ದೇಶಕ ಹಾಗೂ ನಿರ್ಮಾಪಕ ಗುರು ದೇಶಪಾಂಡೆ ತಮ್ಮ ಜಿ.ಅಕಾಡೆಮಿ ಅಡಿಯಲ್ಲಿ ನಿರ್ಮಿಸಿದ್ದಾರೆ. ಚಿತ್ರದಲ್ಲಿ 5 ಕಥೆಗಳಿದ್ದು, ಆಕಾಶ್ ಶ್ರೀವತ್ಸ, ಚಂದ್ರಮೋಹನ್, ರಾಘು ಶಿವಮೊಗ್ಗ, ಕಿರಣ್ ಕುಮಾರ್ ಹಾಗೂ ಗುರು ದೇಶಪಾಂಡೆ ಆ್ಯಕ್ಷನ್-ಕಟ್ ಹೇಳಿದ್ದಾರೆ. ಮಣಿಕಾಂತ್ ಕದ್ರಿ ಅವರ ಸಂಗೀತ, ಕಿರಣ್ ಹಂಪಾಪುರ, ಅಭಿಲಾಶ್ ಕಲ್ಲತ್ತಿ, ಗುರುಪ್ರಸಾದ್ ಅವರ ಛಾಯಾಗ್ರಹಣ ಇದೆ. ಈ ಚಿತ್ರದಲ್ಲಿ ಪ್ರಕಾಶ್ ಬೆಳವಾಡಿ, ಪ್ರಮೋದ್ ಶೆಟ್ಟಿ, ರವಿಶಂಕರ್, ಕಿಶೋರ್, ಪೃಥ್ವಿ ಅಂಬಾರ್ ಮೊದಲಾದವರು ಅಭಿನಯಿಸಿದ್ದಾರೆ.

ರಾಮಾಚಾರಿ 2.0: ನಟ ಮತ್ತು ನಿರ್ದೇಶಕ ತೇಜ್ ಅಭಿನಯದ 'ರಾಮಾಚಾರಿ 2.0' ಚಿತ್ರ ಇಂದು ತೆರೆ ಕಾಣುತ್ತಿದೆ. 'ಶ್ರೀರಸ್ತು ಶುಭಮಸ್ತು' ಧಾರಾವಾಹಿ ನಟಿ ಚಂದನಾ ಹಾಗೂ 'ನನ್ನರಸಿ ರಾಧೆ' ಧಾರಾವಾಹಿ ನಟಿ ಕೌಸ್ತುಭಮಣಿ ನಾಯಕಿಯರಾಗಿದ್ದಾರೆ. ತೇಜ್ ನಿರ್ದೇಶನ ಮತ್ತು ನಿರ್ಮಾಣದ ಚಿತ್ರವಿದು.

ನಮ್ ನಾಣಿ ಮದುವೆ ಪ್ರಸಂಗ: ಕಿರುತೆರೆ ಮತ್ತು ಹಿರಿತೆರೆ ಜನಪ್ರಿಯ ನಟ, ನಿರ್ದೇಶಕ ಹೇಮಂತ್ ಹೆಗಡೆ ನಿರ್ದೇಶನದ 'ನಮ್ ನಾಣಿ ಮದುವೆ ಪ್ರಸಂಗ' ಇಂದು ತೆರೆ ಕಾಣುತ್ತಿದೆ. ಉತ್ತರಕನ್ನಡದ ರೈತಾಪಿ ಹುಡುಗನೊಬ್ಬನ ಕಷ್ಟ-ಸುಖಗಳ ಕುರಿತು ಮಾತನಾಡುವ ಚಿತ್ರದಲ್ಲಿ ರಾಜೇಶ್ ನಟರಂಗ, ಸುಚೇಂದ್ರ ಪ್ರಸಾದ್, ಕೆ.ಎಂ.ಚೈತನ್ಯ, ಸಾಕ್ಷಿ ಮೇಘನ, ರಕ್ಷಿಕಾ ಮುಂತಾದವರು ನಟಿಸುತ್ತಿದ್ದಾರೆ.

'ಉತ್ತರ ಕನ್ನಡದ ಭಾಷೆ, ಸಂಸ್ಕೃತಿಯನ್ನು ಹೊಂದಿರುವ ಚಿತ್ರವಿದು. ಅಲ್ಲಿನ ಬೇರೆ, ಬೇರೆ ಸಮುದಾಯಗಳ ಜೀವನಶೈಲಿಯನ್ನು ಚಿತ್ರದಲ್ಲಿ ತೋರಿಸಲಾಗಿದೆ. ಕುಟುಂಬ ಸಮೇತ ವೀಕ್ಷಿಸಬಹುದಾದ ಸಂಪೂರ್ಣ ಹಾಸ್ಯಮಯ ಚಿತ್ರವಿದು' ಎಂದು ನಿರ್ದೇಶಕ ಹೇಮಂತ್ ಹೆಗಡೆ ಹೇಳಿದ್ದಾರೆ.

'ಕನ್ನಡದಲ್ಲಿ ಉತ್ತಮ ಕಂಟೆಂಟ್ ಹೊಂದಿರುವ ಚಿತ್ರಗಳು ಬರುವುದಿಲ್ಲ ಎಂಬ ದೂರು ಯಾವಾಗಲೂ ಕೇಳಿಬರುತ್ತದೆ. ಆದರೆ ಆ ದೂರನ್ನು ದೂರ ಮಾಡುವ ಚಿತ್ರ ನಾಣಿ ಮದುವೆ ಪ್ರಸಂಗ. ಚಿತ್ರ ಪ್ರಾರಂಭಿಸಿದಾಗ ಹಳ್ಳಿ ಹುಡುಗರಿಗೆ ಮದುವೆಯಾಗದಿರುವುದು ಉತ್ತರ ಕನ್ನಡದ ಸಮಸ್ಯೆ ಎಂದುಕೊಂಡಿದ್ದೆ. ಆದರೆ ನಂತರ ಇದು ರಾಜ್ಯದ ಎಲ್ಲ ಕಡೆಯ ಸಮಸ್ಯೆ ಎಂಬುದು ತಿಳಿಯಿತು. ಇತ್ತೀಚೆಗೆ ಮಂಡ್ಯದಲ್ಲಿ ನಡೆದ ವಧುವರರ ಸಮಾವೇಶದಲ್ಲಿ ಈ ಸಂಗತಿ ಬೆಳಕಿಗೆ ಬಂದಿದೆ. ಹೀಗಾಗಿ ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯವಾಗುವ ಕಥೆ ಇದಾಗಿದೆ' ಎಂದು ಹೆಗಡೆ ವಿವರಿಸಿದರು.

ಟೀಸರ್‌ನಲ್ಲಿ ಅಭಿರಾಮಚಂದ್ರ

ಅಭಿರಾಮಚಂದ್ರ ಟೀಸರ್‌ನಲ್ಲಿ ಮೂಡಿಬಂದಿದ್ದಾನೆ. ನಾಗೇಂದ್ರ ಗಾಣಿಗ ನಿರ್ದೇಶನದ ಈ ಚಿತ್ರದ ಟೀಸರನ್ನು ನಟ ಶಿವರಾಜ್‌ಕುಮಾರ್ ಇತ್ತೀಚೆಗೆ ಬಿಡುಗಡೆ ಮಾಡಿದರು.

ಶಾಲಾ ದಿನಗಳ ಪ್ರೀತಿ, ತುಂಟಾಟ, ಮುಗ್ಧ ಸ್ನೇಹ, ಸುಂದರ ನೋಟ ಎಲ್ಲವೂ ಅಭಿರಾಮಚಂದ್ರ ಟೀಸರ್‌ನಲ್ಲಿದೆ. ರಥ ಕಿರಣ ಸಿದ್ದು ಮೂಲಿಮನಿ, ನಾಟ್ಯರಂಗ ಚಿತ್ರದ ಮುಖ್ಯ ಭೂಮಿಕೆಯಲ್ಲಿದ್ದಾರೆ. ಶಿವಾನಿ ರೈ ಚಿತ್ರದ ನಾಯಕಿ. ಕುಂದಾಪುರ, ಬೆಂಗಳೂರು, ಮೈಸೂರು ಭಾಗಗಳಲ್ಲಿ ಶೂಟಿಂಗ್ ನಡೆಸಲಾಗಿದೆ. ರವಿ ಬಸ್ರೂರು ಸಂಗೀತ ನಿರ್ದೇಶನ ಸಿನಿಮಾಕ್ಕಿದೆ. ರವಿ ಅವರ ಪುತ್ರ ಪವನ್ ಕೂಡ ಈ ಚಿತ್ರದಲ್ಲಿ ಬಣ್ಣ ಹಚ್ಚಿದ್ದಾರೆ. ವೀಣಾ ಸುಂದರ್, ಸುಂದರ್ ವೀಣಾ, ಎಸ್.ನಾರಾಯಣ್, ಪ್ರಕಾಶ್ ತೂಮಿನಾಡು ಸೇರಿದಂತೆ ಹಲವು ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಎ.ಜಿ.ಎಸ್. ಎಂಟರ್‌ಟೇನ್ಮೆಂಟ್ ಹಾಗೂ ರವಿ ಬಸ್ರೂರು ಮ್ಯೂಸಿಕ್ ಮತ್ತು ಮೂವೀಸ್ ಬ್ಯಾನರ್ ಅಡಿ ಎ.ಜಿ.ಸುರೇಶ್ ಹಾಗೂ ಮಲ್ಲೇಶ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಂದೀಪ್ ವಲ್ಲೂರಿ ಛಾಯಾಗ್ರಹಣ, ಸುರೇಶ್ ಆರ್ಮುಗಂ ಸಂಕಲನ ಈ ಚಿತ್ರಕ್ಕಿದೆ. ಮೇ ತಿಂಗಳಲ್ಲಿ ಈ ಚಿತ್ರ ತೆರೆಗೆ ಬರಲಿದೆ.




ಶಿವರಾಜ್‌ಕುಮಾರ್
ನಾಗೇಂದ್ರ ಗಾಣಿಗ

ಬರಗೂರು ಮೊಮ್ಮಗ 'ಚಿಣ್ಣರ ಚಂದ್ರ'

ಚಿತ್ರ ನಿರ್ದೇಶಕ, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಮೊಮ್ಮಗ ಆಕಾಂಕ್ಷ್ ಬರಗೂರು ಬೆಳ್ಳಿ ತೆರೆಯಲ್ಲಿ ದೀರ್ಘಾವಧಿ ಕಾಣಿಸಿಕೊಳ್ಳಲಿದ್ದಾರೆ. ಆಕಾಂಕ್ಷ್ ಬೆಳ್ಳಿತೆರೆಗೆ ಬಂದಿದ್ದು ಇದೇ ಮೊದಲಲ್ಲ. ಆದರೆ, ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಂಡಿರುವುದು ಮೊದಲ ಬಾರಿ. ಬರಗೂರು ನಿರ್ದೇಶನದ 'ಚಿಣ್ಣರ ಚಂದ್ರ' ಆಕಾಂಕ್ಷ್ ನಟನೆಯ ಚಿತ್ರ.

ಇದು ಬರಗೂರು ಅವರದೇ ರಚನೆಯ 'ಅಡಗೂಲಜ್ಜಿ' ಕಾದಂಬರಿ ಆಧರಿತ ಚಿತ್ರ. ಆಕಾಂಕ್ಷ್ ಜೊತೆ ಬಾಲನಟರಾದ ಈಶಾನ್ ಪಾಟೀಲ್, ನಿಕ್ಷೇಪ್, ಅಭಿನವ್ ನಾಗ್ ನಟಿಸಿದ್ದಾರೆ. ಸುಂದರರಾಜ್, ರೇಖಾ ಕೂಡ ತಾರಾಬಳಗದಲ್ಲಿದ್ದಾರೆ. ಆಕಾಂಕ್ಷ್ ಈ ಹಿಂದೆ 'ಬಯಲಾಟದ ಭೀಮಣ್ಣ', 'ತಾಯಿ ಕಸ್ತೂರ್ ಗಾಂಧಿ' ಚಿತ್ರಗಳಲ್ಲಿ ನಟಿಸಿದ್ದ.

ಈ ಚಿತ್ರವು ಮಕ್ಕಳಿಗೆ ಅಗತ್ಯವಾದ ಶಿಕ್ಷಣ, ಕ್ರೀಡೆ ಮುಂತಾದ ಆಶಯಗಳ ಜತೆಗೆ ಸಮಾನತೆ ಮತ್ತು ಸೌಹಾರ್ದ ಸಂದೇಶ ನೀಡುತ್ತದೆ. 'ಅಡಗೂಲಜ್ಜಿ' ಮೂಲಕ ಮಕ್ಕಳಿಗೆ ಜನಪದ ಕಥೆಗಳ ಪರಿಚಯ ಮಾಡಿಕೊಡಲಾಗಿದೆ ಎಂದಿದ್ದಾರೆ ಬರಗೂರು. ಜಿಗಣಿ ರಾಜಶೇಖರ್ ಚಿತ್ರದ ನಿರ್ಮಾಪಕರು. ನಾಗರಾಜ್ ಆದವಾನಿ ಛಾಯಾಗ್ರಹಣ, ಶಮಿತಾ ಮಲ್ನಾಡ್ ಸಂಗೀತ ಚಿತ್ರಕ್ಕಿದೆ.



ಈಶಾನ್ ಪಾಟೀಲ್, ಆಕಾಂಕ್ಷ್ ಬರಗೂರು, ಅಭಿನವ್ ನಾಗ್

ಸಿನಿ ಸಂಕ್ಷಿಪ್ತ

ಶುಭಾ ಪೂಂಜಾ ಈಗ ದೇವಿ



ಜೋತ್ಸ್ನಾ ಬಿ.ರಾವ್, ಶುಭಾ ಪೂಂಜಾ, ಸಂಧ್ಯಾ

ಮಹಿಳೆಯರ ಸಾಹಸದ ಚಿತ್ರವೊಂದು ತೆರೆಗೆ ಬರಲು ಸಿದ್ಧವಾಗಿದೆ. ಆ ಚಿತ್ರದ ಹೆಸರು 'ತ್ರಿದೇವಿ'.

ಶುಭಾ ಪೂಂಜಾ ಮುಖ್ಯಭೂಮಿಕೆಯಲ್ಲಿ ಅಭಿನಯಿಸಿರುವ ಈ ಚಿತ್ರವನ್ನು ಅಶ್ವಿನ್ ಎ. ಮ್ಯಾಥ್ಯೂ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಮೂಲತಃ ಬೆಂಗಳೂರಿನವರೇ ಆದ ಅಶ್ವಿನ್ ಮಲಯಾಳಂ ಚಿತ್ರರಂಗದಲ್ಲಿ ಸಾಕಷ್ಟು ಹೆಸರು ಮಾಡಿದ್ದಾರೆ. ಗೀತೆಗಳಿಗೆ ಕಾರ್ತಿಕ್ ಸಾಹಿತ್ಯ ಬರೆದಿದ್ದು, ಮಾಧುರಿ ಶೇಷಾದ್ರಿ ಹಾಡಿದ್ದಾರೆ. ಚಿತ್ರಕ್ಕೆ ಫಿಡಲ್ ಅಶೋಕ ಹಾಗೂ ಡಾಸ್ಮೋಡ್ ಐ. ಲುಲಿಬಿ ಅವರು ಸಂಗೀತ ಸಂಯೋಜಿಸಿದ್ದಾರೆ.

ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ. ನಟಿ ಶುಭಾ ಪೂಂಜಾ ಮಾತನಾಡಿ, 'ಇದು ನನ್ನ ಕನಸಿನ ಕೂಸು. ಈವರೆಗೆ ಬರೀ ಅಳುಮುಂಜಿ ಹಾಗೂ ಒಂದೇ ರೀತಿಯ ಪಾತ್ರಗಳನ್ನು ಮಾಡಿ ಬೇಸರವಾಗಿತ್ತು. ಏನಾದರೂ ಹೊಸ ಪಾತ್ರ ಮಾಡಬೇಕು ಎಂಬ ತುಡಿತ ಕಾಡುತ್ತಿತ್ತು. ಗೆಳೆಯ ಅಶ್ವಿನ್ ಮ್ಯಾಥ್ಯೂಗೆ ನನಗಾಗಿ ವಿಭಿನ್ನ ಕಥೆ ಬರೆಯಲು ಹೇಳಿದ್ದೆ. ಒಂದಷ್ಟು ದಿನಗಳ ನಂತರ ಈ ಕಥೆ ಮಾಡಿದರು. ಹುಡುಗಿಯರೆಂದರೆ ಅಮಾಯಕರಲ್ಲ, ಅವರು ಸಾಹಸದಲ್ಲಿ ಹಿಂದೆ ಬಿದ್ದಿಲ್ಲ ಎಂದು ತೋರಿಸುವ ಆ್ಯಕ್ಷನ್ ಚಿತ್ರವಿದು. ಈ ತಂಡದಲ್ಲಿ ನಾನು ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡಿದ್ದು, ಸಿನಿಮಾ ನಿರ್ಮಾಣ ಕೂಡ ಕಲಿತೆ' ಎಂದು ಹೇಳಿದರು.

ಮತ್ತೊಬ್ಬ ನಾಯಕಿ ಸಂಧ್ಯಾ ಲಕ್ಷ್ಮೀನಾರಾಯಣ ಅವರಿಗೆ ಈ ಚಿತ್ರದಲ್ಲಿ ಆ್ಯಕ್ಷನ್ ಇರುವುದರಿಂದ ಕಥೆ ಇಷ್ಟವಾಯಿತಂತೆ. ತ್ರಿದೇವಿಯರು ಹೇಗಿದ್ದಾರೆ ಎಂಬುದನ್ನು ತೆರೆಯ ಮೇಲೇ ನೋಡಬೇಕು.

ತಮಿಳಿನಲ್ಲಿ ಭರತ್ ಬೋಪಣ್ಣ

ಇಂಡಿಯನ್, ದರ್ಬಾರ್ ಸೇರಿದಂತೆ ಹಲವು ಬ್ಲಾಕ್ ಬಸ್ಟರ್ ಹಿಟ್ ಚಿತ್ರಗಳನ್ನು ನಿರ್ಮಿಸಿರುವ ದಕ್ಷಿಣ ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಲೈಕಾ ಇದೀಗ 'ಮಿಷನ್: ಚಾಪ್ಟರ್ 1' ಸಿನಿಮಾವನ್ನು ವಿಶ್ವದಾದ್ಯಂತ ಬಿಡುಗಡೆ ಮಾಡಲಿದೆ.

ತಮಿಳು ನಾಯಕ ಅರುಣ್ ವಿಜಯ್ ನಟನೆಯ ಚಿತ್ರಕ್ಕೆ ನಿರ್ದೇಶಕ ತಲೈವಿ ವಿಜಯ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕನ್ನಡದ ಕಿರುತೆರೆ ನಟ ಭರತ್ ಬೋಪಣ್ಣ ಈ ಚಿತ್ರದ ಖಳನಾಯಕರಲ್ಲೊಬ್ಬರಾಗಿದ್ದಾರೆ.

'ವಿಜಯ್ ಅವರ ಹಿಂದಿನ ಚಿತ್ರಕ್ಕೆ ಆಡಿಷನ್ ನೀಡಿದ್ದೆ. ಆದರೆ ಆಯ್ಕೆಯಾಗಿರಲಿಲ್ಲ. ಈ ಚಿತ್ರದಲ್ಲಿ ಪ್ರಮುಖ ಪಾತ್ರ ನೀಡಿದ್ದಾರೆ. 'ಅಚ್ಚಂ ಎನ್ಬದು ಇಲ್ಲಯೇ' ಎಂದು ಮೊದಲು ಚಿತ್ರಕ್ಕೆ ಶೀರ್ಷಿಕೆ ಇಡಲಾಗಿತ್ತು. 'ಭಯ ಎನ್ನುವುದೇ ಇಲ್ಲ' ಎಂದು ಇದರರ್ಥ. ಅರುಣ್ ವಿಜಯ್, ಆ್ಯಮಿ ಜಾಕ್ಸನ್ ಮುಖ್ಯಭೂಮಿಕೆಯಲ್ಲಿರುವ ಈ ಚಿತ್ರದಲ್ಲಿ ಮಲಯಾಳಂ ನಟಿ ನಿಮಿಷಾ ಸಜಯನ್ ಕೂಡ ನಟಿಸಿದ್ದಾರೆ' ಎಂದು ಭರತ್ ಹೇಳಿದ್ದಾರೆ.

ಎಪ್ಪತ್ತು ದಿನಗಳಲ್ಲಿ ಚೆನ್ನೈ ಹಾಗೂ ಲಂಡನ್‌ನಲ್ಲಿ ಚಿತ್ರೀಕರಣ ನಡೆಸಲಾಗಿದೆ. ಆ್ಯಮಿ ಜಾಕ್ಸನ್ ಸಣ್ಣದೊಂದು ಅಂತರದ ಬಳಿಕ ಈ ಸಿನಿಮಾ ಮೂಲಕ ಮತ್ತೆ ಚಿತ್ರರಂಗಕ್ಕೆ ಬಂದಿದ್ದಾರೆ. ಜಿ.ವಿ. ಪ್ರಕಾಶ್ ಕುಮಾರ್ ಸಂಗೀತ, ಸಂದೀಪ್ ಕೆ. ವಿಜಯ್ ಛಾಯಾಗ್ರಹಣ ಸಿನಿಮಾಕ್ಕಿದೆ.



ಭರತ್ ಬೋಪಣ್ಣ

ಮುಖ್ಯಮಂತ್ರಿ ಬೊಮ್ಮಾಯಿ ಅವರಿಂದ ಕಾಂಗ್ರೆಸ್‌ಗೆ ಸವಾಲು

‘ತಾಕತ್ತಿದ್ದರೆ ಮೀಸಲಾತಿ ವಿರೋಧಿಸಿ’

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬುದ್ಧನ ಕಲಾಕೃತಿ ನೀಡಿ ಸನ್ಮಾನಿಸಲಾಯಿತು. ಸಚಿವ ಗೋವಿಂದ ಕಾರಜೋಳ, ಶಾಸಕ ಬಸವರಾಜ ದಢೇಸೂಗುರು, ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇದ್ದಾರೆ – ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ: ‘ಕಾಂಗ್ರೆಸ್‌ನವರು ತಾಕತ್ತಿದ್ದರೆ, ಪರಿಶಿಷ್ಟರ ಮೀಸಲಾತಿ ಹೆಚ್ಚಳ ಮತ್ತು ಒಳ ಮೀಸಲಾತಿಯನ್ನು ವಿರೋಧಿಸಲಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸವಾಲು ಹಾಕಿದರು.

ಮೀಸಲಾತಿ ಹೆಚ್ಚಳ ಹಾಗೂ ಒಳ ಮೀಸಲಾತಿ ಜಾರಿ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿಗಳ ಒಕ್ಕೂಟವು ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಮೀಸಲಾತಿ ವಿಷಯಕ್ಕೆ ನೀವೇನಾದರೂ ಕೈ ಹಾಕಿದರೆ ಕ್ರಾಂತಿಯಾಗಲಿದೆ’ ಎಂದು ಎಚ್ಚರಿಕೆ ನೀಡಿದ ಅವರು, ‘ನಾವು ಅಧಿಕಾರಕ್ಕೆ ಬಂದ ಮೇಲೆ ಮೀಸಲಾತಿ ತೆಗೆಯುತ್ತೇವೆ ಎನ್ನುವ ಕಾಂಗ್ರೆಸ್‌ನವರು, ಪರಿಶಿಷ್ಟರನ್ನು ಎದುರು ಹಾಕಿಕೊಂಡು ಮತ್ತೆ ಅಧಿಕಾರಕ್ಕೇರಲು ಸಾಧ್ಯವೇ? ಅವರೇ ಅಲ್ಲ, ಯಾರೂ ಬರಲಾಗದು’ ಎಂದಾಗ, ಸಭಿಕರು ಕೂಗು ಹಾಕಿದರು.

‘ಒಳ ಮೀಸಲಾತಿ ಜಾರಿಗೆ ರಾಜ್ಯದಲ್ಲಿ ನಾವು ತೋರಿರುವ ಬದ್ಧತೆಯನ್ನು, ಕೇಂದ್ರ ಸರ್ಕಾರವೂ ತೋರುತ್ತದೆ. ರಾಜ್ಯದಲ್ಲೀಗ ಅದರ ಬೀಜ ಬಿತ್ತಿದ್ದೇವೆ. ಮತಕ್ಕಾಗಿ ಪರಿಶಿಷ್ಟರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದ ಕಾಂಗ್ರೆಸ್, ಈಗಲೂ ಆ ಸಮುದಾಯವನ್ನು ಒಡೆದು, ಸಂಘರ್ಷ ಹುಟ್ಟು ಹಾಕಲು ಯತ್ನಿಸುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕೇಳಿದ್ದು ಕೊಟ್ಟವರ ಬೆಂಬಲಿಸಿ’: ‘ನೀವು ಕೇಳಿದ್ದನ್ನು ಕೊಟ್ಟವರಿಗೆ ನೀವು ಬೆಂಬಲಿಸಿ. ಇದು ನಿಮ್ಮ ಭವಿಷ್ಯ ಹಾಗೂ ಮಕ್ಕಳ ಭವಿಷ್ಯದ ಪ್ರಶ್ನೆ’ ಎಂದಾಗ ಸಭಿಕರು ಬಿಜೆಪಿ.. ಬಿಜೆಪಿ.. ಎಂದು ಕೂಗಿ ಬೆಂಬಲ ಸೂಚಿಸಿದರು.

‘2016ರಲ್ಲಿ ಇದೇ ಜಾಗದಲ್ಲಿ ನಡೆದಿದ್ದ ಒಳ ಮೀಸಲಾತಿ ಹಕ್ಕೊತ್ತಾಯದ ಸಮಾವೇಶದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೀಸಲಾತಿ ಕುರಿತು ನಿಲುವು ಸ್ಪಷ್ಟಪಡಿಸದೆ ತೆರಳಿದ್ದರು. ನಾನು ಮುಖ್ಯಮಂತ್ರಿಯಾದ ಬಳಿಕ ನಿಮ್ಮ ಬೇಡಿಕೆಗೆ ಸ್ಪಂದಿಸಿದ್ದೇನೆ. ಅದೇ ಜಾಗದಲ್ಲಿ ಸರ್ಕಾರದ ಪರವಾಗಿ ಸನ್ಮಾನ ಸ್ವೀಕರಿಸಿದ್ದೇನೆ’ ಎಂದರು.

‘7ಡಿ’ ರದ್ದು ಭರವಸೆ: ‘ಅನುಸೂಚಿತ ಜಾತಿಗಳ ಉಪ ಯೋಜನೆ (ಎಸ್‌ಸಿಪಿ) ಮತ್ತು ಬುಡಕಟ್ಟು ಉಪ ಯೋಜನೆ (ಟಿಎಸ್‌ಪಿ)– ಕಾಯ್ದೆಯನ್ನು ಜಾರಿಗೆ ತಂದ ಸಿದ್ದರಾಮಯ್ಯ, ಪರಿಶಿಷ್ಟರ ಹಣವನ್ನು ಬೇರೆ ಉದ್ದೇಶಕ್ಕೆ ಬಳಸಲು ಅವಕಾಶ ನೀಡುವ 7(ಡಿ) ನಿಯಮವನ್ನು ಸೇರಿಸಿದ್ದರು. ಆ ನಿಯಮವನ್ನು ರದ್ದುಗೊಳಿಸುವೆ’ ಎಂದು ಭರವಸೆ ನೀಡಿದರು.

ಬೊಮ್ಮಾಯಿ ಭಾಷಣ ಮಾಡುವಾಗ ‘ಟೈಗರ್’, ‘ಹೌದೊ ಹುಲಿಯಾ’ ಎಂದು ಸಭಿಕರು ಕೇಕೆ ಹಾಕಿದರು.

ಕಲಾಕೃತಿ, ಪುತ್ಥಳಿ ಕೊಟ್ಟು ಸನ್ಮಾನ: ಹಲಗೆ ಬಾರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬುದ್ಧನ ಕಲಾಕೃತಿ ಮತ್ತು ಅಂಬೇಡ್ಕರ್ ಪುತ್ಥಳಿ ನೀಡಿ ಮುಖ್ಯಮಂತ್ರಿಯನ್ನು ಸನ್ಮಾನಿಸಲಾಯಿತು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು ಸಹ ಸನ್ಮಾನಿಸಲಾಯಿತು.

ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ವಾಹನಗಳಲ್ಲಿ ಪರಿಶಿಷ್ಟ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ನೀಲಿ ಬಾವುಟಗಳು ರಾರಾಜಿಸಿದವು.

ಆದಿ ಬಣಜಿಗರಿಂದ ಸನ್ಮಾನ: ಸಮಾರಂಭಕ್ಕೂ ಮುಂಚೆ ಮುಖ್ಯಮಂತ್ರಿ ಅವರು, ಆದಿ ಬಣಜಿಗ ಸಮುದಾಯವನ್ನು ‘ಪ್ರವರ್ಗ 2ಡಿ’ಗೆ ಸೇರಿಸಿದ ಹಿನ್ನೆಲೆಯಲ್ಲಿ, ಅಖಿಲ ಕರ್ನಾಟಕ ವೀರಶೈವ- ಲಿಂಗಾಯತ ಆದಿ ಬಣಜಿಗರ ಸಂಘ ಉಣಕಲ್‌ನಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದರು.

ಭೋವಿ, ಬಂಜಾರರ ಮೀಸಲಾತಿ ತೆಗೆದಿದ್ದಾರೆ ಎಂದು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಮೀಸಲಾತಿ ಹೆಚ್ಚಳ ವಿಷಯ ನೀವು ಎಲ್ಲರಿಗೂ ತಿಳಿಸಬೇಕು

ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಕಾಂಗ್ರೆಸ್‌ನವರು ಜಗಜೀವನ ರಾಮ್ ಅವರಿಗೆ ಪ್ರಧಾನಿ ಹುದ್ದೆ ತಪ್ಪಿಸಿದರು. ರಾಜ್ಯದಲ್ಲಿ ಮಲ್ಲಿಕಾರ್ಜುನ ಖರ್ಗೆ, ಜಿ. ಪರಮೇಶ್ವರ್ ಅವರಿಗೂ ಉನ್ನತ ಹುದ್ದೆ ಸಿಗದಂತೆ ಮಾಡಿದರು

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

‘ಸುಳ್ಳುಗಳಿಗೆ ಬಲಿಯಾಗಬೇಡಿ’

‘ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳವರು ಸುಳ್ಳು ಮಾತುಗಳಿಗೆ ಬಲಿಯಾಗಬಾರದು. ನಿಮ್ಮನ್ನು ಪರಿಶಿಷ್ಟರ ಪಟ್ಟಿಯಿಂದ ತೆಗೆಯದಂತೆ, ಮೀಸಲಾತಿಗೆ ಧಕ್ಕೆಯಾಗದಂತೆ ರಕ್ಷಣೆ ಒದಗಿಸಿದ್ದೇನೆ. ಎಲ್ಲರಿಗೂ ನ್ಯಾಯ ಕೊಟ್ಟಿದ್ದೇನೆ. ತಾಂಡಾ ಅಭಿವೃದ್ಧಿ ನಿಗಮ ಮಾಡಿ ₹100 ಕೋಟಿ ಕೊಟ್ಟಿದ್ದೇವೆ. ಲಂಬಾಣಿ ಮತ್ತು ಕುರುಬ ತಾಂಡಾಗಳ ಒಂದೂವರೆ ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ಕೊಟ್ಟಿದ್ದೇವೆ’ ಎಂದು ಬೊಮ್ಮಾಯಿ ಹೇಳಿದರು.

‘ಕೇಳಿದ್ದು ಕೊಟ್ಟವರ ಋಣ ತೀರಿಸೋಣ’

ಸಮಾರಂಭದಲ್ಲಿ ಮಾತನಾಡಿದ ಪರಿಶಿಷ್ಟ ಸಮುದಾಯದ ಕೇಂದ್ರ ಸಚಿವ ಎ. ನಾರಾಯಣ ಸ್ವಾಮಿ, ಸಚಿವ ಗೋವಿಂದ ಕಾರಜೋಳ, ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಚಲವಾದಿ ನಾರಾಯಣ ಸ್ವಾಮಿ, ‘ಬಿಜೆಪಿ ನಾವು ಕೇಳಿದ್ದನ್ನು ಕೊಟ್ಟಿದೆ. ಚುನಾವಣೆಯಲ್ಲಿ ನಾವೆಲ್ಲರು ಆ ಪಕ್ಷವನ್ನು ಬೆಂಬಲಿಸಿ ಋಣ ತೀರಿಸೋಣ’ ಎಂದು ಕರೆ ನೀಡಿದರು.

ರಾಜ್ಯದಲ್ಲಿ ‘ಅಮುಲ್’ ವಹಿವಾಟು

ಜಾಲತಾಣಗಳಲ್ಲಿ ಕನ್ನಡಿಗರ ತೀವ್ರ ಆಕ್ಷೇಪ, ‘ಗೋ ಬ್ಯಾಕ್..’ ಅಭಿಯಾನದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿಯೂ ಆನ್‌ಲೈನ್ ಮೂಲಕ ಹಾಲು ಮತ್ತು ಮೊಸರು ಮಾರಾಟ ಆರಂಭಿಸಲು ‘ಅಮುಲ್’ ಸಂಸ್ಥೆ ಮುಂದಾಗಿರುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಟ್ವಿಟರ್‌ನಲ್ಲಿ ಅಮುಲ್ ಪ್ರಕಟಿಸಿರುವ ಮಾಹಿತಿಯನ್ನು ಫೇಸ್‌ಬುಕ್ ಮತ್ತು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಕನ್ನಡಿಗರು, ಈ ನಡೆಗೆ ಆಕ್ಷೇಪ ಹೊರಹಾಕುತ್ತಿದ್ದಾರೆ. ‘ಗೋ ಬ್ಯಾಕ್ ಅಮುಲ್’ ಅಭಿಯಾನ ಆರಂಭಿಸುವ ಎಚ್ಚರಿಕೆ ನೀಡಿದ್ದಾರೆ.

‘ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ಉತ್ಪನ್ನಗಳನ್ನು ಎಲ್ಲಿ ಬೇಕಾದರೂ ಮಾರಲು ಅವಕಾಶವಿದ್ದರೂ ಅಲಿಖಿತ ಒಪ್ಪಂದದಂತೆ ಸಹಕಾರ ನೀಡಲಾಗುತ್ತಿತ್ತು. ಹಾಲಿನ ಕೊರತೆ ಇರುವ ರಾಜ್ಯಗಳಲ್ಲಿ ಅಮುಲ್ ಮತ್ತು ನಂದಿನಿ ಬ್ರ್ಯಾಂಡ್ ತನ್ನದೇ ಮಾರುಕಟ್ಟೆ ಹೊಂದಿದ್ದು, ವಹಿವಾಟು ನಡೆಸುತ್ತಿವೆ. ಪರಸ್ಪರ ಚರ್ಚೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬಹುದು’ ಎಂದು ಹಿಂದೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಎ.ಎಸ್.ಪ್ರೇಮನಾಥ್ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಹೈನೋದ್ಯಮದ ದೈತ್ಯ ಸಂಸ್ಥೆ ಅಮುಲ್, ಈ ಹಿಂದೆ ಕರ್ನಾಟಕದಲ್ಲಿ ಹಾಲು ಮಾರಾಟದ ವಿಸ್ತರಿಸಲು ಉತ್ಸುಕತೆ ತೋರಿತ್ತು. ನಾವು ಸ್ನೇಹದಿಂದಲೇ ತಡೆಯೊಡ್ಡಿದ್ದೆವು. ಈಗ ಸ್ವಯಂ ನಿಯಂತ್ರಣದ ರೇಖೆ ದಾಟಿ ಹಾಲಿನ ಮಾರುಕಟ್ಟೆಗೆ ದಾಳಿಗೆ ಮುಂದಾಗಿದೆ. ಇದರಲ್ಲಿ ರಾಜಕೀಯ ಅಂಶ ಕಾಣುತ್ತಿಲ್ಲ, ವಿಲೀನದ ವಿಷಯವೂ ಅಲ್ಲ’ ಎಂದು ಹೇಳಿದರು.

‘ಗುಜರಾತಿನಿಂದ ದೂರದ ಕರ್ನಾಟಕಕ್ಕೆ ತಾಜಾ ಹಾಲು ಬರಬೇಕಿಲ್ಲ, ಅದು ಸಾಧ್ಯವು ಇಲ್ಲ. ಗುಣಮಟ್ಟದ ‘ನಂದಿನಿ’ ಹಾಲು ದೊರೆತರೂ, ರಾಜ್ಯದಲ್ಲಿ ನೆಲೆಸಿರುವ ಹೊರ ರಾಜ್ಯದವರಿಗೆ ಅಮುಲ್ ಬ್ರ್ಯಾಂಡ್ ಮೋಹವಾಗಿ ಸೆಳೆಯುವ ಸಾಧ್ಯತೆಗಳಿವೆ. ಇದರಿಂದ ಕೆಎಂಎಫ್ ಸಂಸ್ಥೆಗೆ ಮತ್ತು ರೈತರ ಹಿತಕ್ಕೆ ಧಕ್ಕೆಯಾಗುವುದು ನಿಶ್ಚಿತ’ ಎಂದರು.

‘ಅಮುಲ್‘ ಉತ್ಪನ್ನಗಳ ನೇರ ಮಾರಾಟವನ್ನು ಕೆಎಂಎಫ್ ಆಡಳಿತ ಗಟ್ಟಿಯಾಗಿ ವಿರೋಧಿಸಬೇಕು. ಅಗತ್ಯ ಎನಿಸಿದರೆ ರಾಜ್ಯ ಸರ್ಕಾರ ಗುಜರಾತ್ ಸರ್ಕಾರದ ಮೇಲೆ ಒತ್ತಡ ಹಾಕುವ ಪ್ರಯತ್ನ ಮಾಡಬೇಕು’ ಎಂದರು.

‘ನಂದಿ’ಯನ್ನು ಯಾರೂ ಮಣಿಸಲು ಸಾಧ್ಯವಿಲ್ಲ’

‘ನಂದಿನಿ ಬ್ರ್ಯಾಂಡ್‌ನಲ್ಲಿ ಈಶ್ವರನ ವಾಹನ ‘ನಂದಿ’ ಇದೆ. ಯಾವುದೇ ಬ್ರ್ಯಾಂಡ್ ಸ್ಪರ್ಧೆಗೆ ಬಂದರೂ ನಂದಿ ಮಣಿಸಲಾಗದು’ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಹೇಳಿದರು.

‘ಗುಣಮಟ್ಟ, ದರದ ವಿಷಯ ಮತ್ತು ಸ್ಥಳೀಯ ಉತ್ಪನ್ನ ಆಗಿರುವುದರಿಂದ ನಂದಿನಿ ಮನೆ ಮಾತಾಗಿದೆ. ಇದಕ್ಕೆ ಯಾರಿಂದಲೂ ಸ್ಪರ್ಧೆ ಸಾಧ್ಯವಿಲ್ಲ’ ಎಂದು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಗುಜರಾತ್ ರಾಜ್ಯಕ್ಕೆ ನಾವು ನಂದಿನಿ ಹಾಲು, ಉತ್ಪನ್ನಗಳನ್ನು ಪೂರೈಸುತ್ತಿಲ್ಲ; ಅವರು ಕರ್ನಾಟಕಕ್ಕೆ ಅಮುಲ್ ಹಾಲು ಪೂರೈಕೆ ಮಾಡುತ್ತಿರಲಿಲ್ಲ. ಇದು ಅಲಿಖಿತ ನಿಯಮ. ಈಗ ಅನಾರೋಗ್ಯಕರ ಸ್ಪರ್ಧೆಗೆ ಅಮುಲ್ ಮುಂದಾಗಿದೆ’ ಎಂದು ಹೇಳಿದರು.

‘ಸಹಕಾರ ತತ್ವ ಇರಲಿ. ಅನಾರೋಗ್ಯಕರ ಸ್ಪರ್ಧೆ ಬೇಡ ಎಂದು ಅಮುಲ್ ಆಡಳಿತ ಮಂಡಳಿ ಮತ್ತು ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಗೆ (ಎನ್‌ಡಿಡಿಬಿ) ಪತ್ರ ಬರೆದು ಮನವಿ ಮಾಡಲಾಗುವುದು. ಇದಕ್ಕೆ ಸ್ಪಂದನೆ ದೊರೆಯುವ ವಿಶ್ವಾಸವಿದೆ’ ಎಂದರು.

‘ನಂದಿನಿ’ ಹಾಲನ್ನೇ ಬಳಸಿ: ಜಿ.ಸಿ.ಚಂದ್ರಶೇಖರ್

‘ನಂದಿನಿ’ ಹಾಲನ್ನಷ್ಟೇ ಬಳಸುವ ಮೂಲಕ ಕನ್ನಡಿಗರಾದ ನಾವೇ ಕೆಎಂಎಫ್ ಕಾಪಾಡಿಕೊಳ್ಳಬೇಕು ಎಂದು ರಾಜ್ಯಸಭೆ ಸದಸ್ಯ ಜಿ.ಸಿ.ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮಾಧ್ಯಮ ಪ್ರಕಟಣೆ ನೀಡಿರುವ ಅವರು, ‘ನಂದಿನಿ ಉತ್ಪನ್ನಗಳನ್ನೇ ಬಳಸುವ ಮೂಲಕ ‘ಅಮುಲ್’ ಬಂದ ದಾರಿಗೆ ಸುಂಕವಿಲ್ಲದಂತೆ ಹಿಂದಿರುಗುವ ಹಾಗೆ ಮಾಡಬೇಕು. ರೈತರು ಮತ್ತು ಗ್ರಾಹಕರ ಹಿತ ದೃಷ್ಟಿಯಿಂದ ಸಂಬಂಧಪಟ್ಟವರು ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಸನ್ಮಾನದಲ್ಲಿ ಬ್ಯುಸಿಯಾಗಿದ್ದ ‘ದಿ ಎಲಿಫೆಂಟ್ ವಿಸ್ಪರರ್ಸ್’ ಜೋಡಿ ಮರಳಿ ಆನೆ ಶಿಬಿರಕ್ಕೆ

ಬೊಮ್ಮ–ಬೆಳ್ಳಿಗೆ ಪ್ರಧಾನಿ ಭೇಟಿಯ ಕಾತರ

● ಮಲ್ಲೇಶ ಎಂ.

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಪ್ರಸಕ್ತ ಸಾಲಿನ ಆಸ್ಕರ್ ಪ್ರಶಸ್ತಿ ವಿಜೇತ ‘ದಿ ಎಲಿಫೆಂಟ್ ವಿಸ್ಪರರ್ಸ್’ ಸಾಕ್ಷ್ಯಚಿತ್ರದ ಭಾಗವಾಗಿರುವ, ನೆರೆಯ ತಮಿಳುನಾಡಿನ ಮಧುಮಲೆ ಹುಲಿ ಸಂರಕ್ಷಿತ ಪ್ರದೇಶದ ಕಾವಾಡಿ ದಂಪತಿ ಬೊಮ್ಮ ಮತ್ತು ಬೆಳ್ಳಿ ಮತ್ತೆ ಖುಷಿಯಲ್ಲಿದ್ದಾರೆ.

ತಮ್ಮನ್ನು ಭೇಟಿಯಾಗಲು ಏ.9ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮಧುಮಲೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಬರುತ್ತಿರುವುದು ಅವರ ಖುಷಿಗೆ ಕಾರಣ.

ಮಾರ್ಚ್ 2ನೇ ವಾರದಲ್ಲಿ ಆಸ್ಕರ್ ಪ್ರಶಸ್ತಿ ಘೋಷಣೆಯಾದ ಬಳಿಕ ಜಗತ್ತಿನಾದ್ಯಂತ ಸುದ್ದಿಯಾದ ಈ ದಂಪತಿ ಸರ್ಕಾರ, ಸಂಘ ಸಂಸ್ಥೆಗಳ ಸನ್ಮಾನ ಕಾರ್ಯಕ್ರಮಗಳಲ್ಲಿ ಬ್ಯುಸಿಯಾಗಿದ್ದರು. ಪ್ರಧಾನಿ ಭೇಟಿ ಖಚಿತವಾಗುತ್ತಿದ್ದಂತೆಯೇ ಮತ್ತೆ ಮಧುಮಲೆಯ ತೆಪ್ಪಕಾಡು ಆನೆ ಶಿಬಿರಕ್ಕೆ ಬಂದಿದ್ದಾರೆ.

ಕಾಡು ಕುರುಬ ಸಮುದಾಯಕ್ಕೆ ಸೇರಿರುವ ಈ ದಂಪತಿ ಕನ್ನಡವನ್ನೇ ಮಾತನಾಡುತ್ತಾರೆ. ಆನೆಗಳೊಂದಿಗೆ ಮಾತನಾಡುವಾಗಲೂ ಕನ್ನಡ ಬಳಸುತ್ತಾರೆ.

ತಾಯಿಯಿಂದ ಬೇರ್ಪಟ್ಟ ಕಾಡಾನೆಗಳ ಮರಿಗಳನ್ನು ಈ ದಂಪತಿ ಮನೆ ಮಕ್ಕಳಂತೆ ಸಲಹುದನ್ನು ಸಾಕ್ಷ್ಯಚಿತ್ರದಲ್ಲಿ ನೋಡಿದ ಮಂದಿ ಈಗ ಬೊಮ್ಮ-ಬೆಳ್ಳಿ ಅವರ ಭೇಟಿಗೆ ಹಾತೊರೆಯುತ್ತಿದ್ದಾರೆ. ಅವರೊಂದಿಗೆ ಫೋಟೊ ತೆಗೆಸಿಕೊಳ್ಳುತ್ತಿದ್ದಾರೆ.

ಈಚೆಗೆ ಚೆನ್ನೈನಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರನ್ನು ಭೇಟಿಯಾಗಿ ಸನ್ಮಾನ ಸ್ವೀಕರಿಸಿ ಬಂದಿರುವ ಬೊಮ್ಮ ದಂಪತಿ, ಈಗ ಪ್ರಧಾನಿ ಮೋದಿಯವರ ಭೇಟಿ ನಿರೀಕ್ಷೆಯಲ್ಲಿದ್ದಾರೆ. ಪ್ರಧಾನಿಯವರ ಭೇಟಿಗೆ ಸಿದ್ಧರಾಗಿ ಎಂದು ಅರಣ್ಯ ಇಲಾಖೆಯವರು ದಂಪತಿಗೆ ತಿಳಿಸಿದ್ದಾರೆ.

‘ಪ್ರಜಾವಾಣಿ’ಯೊಂದಿಗೆ ಗುರುವಾರ ದೂರವಾಣಿಯಲ್ಲಿ ಮಾತನಾಡಿದ ಬೊಮ್ಮ ಖುಷಿ ಹಂಚಿಕೊಂಡರು.

45 ವರ್ಷಗಳ ಕಾಯಕ: ‘ನನ್ನ ಅಜ್ಜ, ಅಪ್ಪನ ಕಾಲದಿಂದಲೂ ಆನೆ ಸಾಕುತ್ತಾ ಬಂದಿದ್ದೇವೆ. 1984ರಲ್ಲಿ ತಂದೆಯ ನಿಧನದ ನಂತರ ಇಲಾಖೆಯಲ್ಲಿ ಕೆಲಸ ಸಿಕ್ಕಿತ್ತು. 45 ವರ್ಷಗಳ ಅವಧಿಯಲ್ಲಿ ಅನೇಕ ಆನೆಗಳನ್ನು ಸಾಕಿದ್ದೇನೆ. ಮಧುಮಲೆ, ಇಂದ್ರ, ಜಾನ್, ಸುಮಂಗಲ, ರಘು (ಸಾಕ್ಷ್ಯ ಚಿತ್ರದಲ್ಲಿರುವ ಆನೆ) ಸಾಕಿ ಇಲಾಖೆಗೆ ಒಪ್ಪಿಸಿದ್ದೇನೆ’ ಎಂದು ಬೊಮ್ಮ ವಿವರಿಸಿದರು.

‘ನಾವು ಬೆಳೆಸುವ ಪ್ರಾಣಿಗಳ ಮೇಲೆ ಅತೀವ ಪ್ರೀತಿ ಇರುತ್ತದೆ. ದೊಡ್ಡದಾದ ಮೇಲೆ ಅವುಗಳನ್ನು ಬೇರೆಡೆಗೆ ಕಳುಹಿಸುವಾಗ ಕರುಳು ಕಿತ್ತು ಬರುತ್ತದೆ’ ಎಂದು ಸಾಕಿದ ಆನೆಗಳಿಂದ ದೂರವಾಗುವಾಗಿನ ನೋವನ್ನು ತೋಡಿಕೊಂಡರು.



ಮಧುಮಲೆ ಹುಲಿ ಸಂರಕ್ಷಿತ ಪ್ರದೇಶದ ಕಾವಾಡಿ ದಂಪತಿ ಬೆಳ್ಳಿ ಮತ್ತು ಬೊಮ್ಮ –ಪಿಟಿಐ ಚಿತ್ರ

ಪ್ರಧಾನಿ ಅವರನ್ನು ಟಿವಿಯಲ್ಲಿ ನೋಡುತ್ತಿದ್ದೆವು. ಅವರು ನಮ್ಮನ್ನು ಭೇಟಿ ಮಾಡುತ್ತಾರೆ ಎಂದರೆ ನಂಬಲಾಗುತ್ತಿಲ್ಲ, ಖುಷಿಯಾಗುತ್ತಿದೆ. ಇಲಾಖೆಗೆ ಇನ್ನೂ ಸೇವೆ ಮಾಡುವ ಮನಸ್ಸಿದೆ

ಬೊಮ್ಮ, ಕಾವಾಡಿ

‘ಗಿರಿಜನರಿಂದ ಕರಾಳ ದಿನಾಚರಣೆ’

ಹುಣಸೂರು (ಮೈಸೂರು ಜಿಲ್ಲೆ): ‘ಬಂಡೀಪುರ ಹುಲಿ ರಕ್ಷಿತಾರಣ್ಯ ಯೋಜನೆಯ ಸುವರ್ಣ ಮಹೋತ್ಸವವನ್ನು ಸರ್ಕಾರವು ಸಂಭ್ರಮದಿಂದ ಆಚರಿಸುತ್ತಿದೆ. ಆದರೆ, ಗಿರಿಜನರ ಹಕ್ಕು ಕಸಿದುಕೊಂಡು 50 ವರ್ಷಗಳಾಗಿವೆ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೆನಪಿಸಲು ಬಯಸುತ್ತೇವೆ’ ಎಂದು ಜಿಲ್ಲಾ ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಪಿ.ಕೆ.ರಾಮು ಹೇಳಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ‘ಹುಲಿ ಯೋಜನೆಗೆ, ಗಿರಿಜನರನ್ನು ಒಕ್ಕಲೆಬ್ಬಿಸಿ ಅರಣ್ಯದಿಂದ ಹೊರ ಹಾಕಲಾಯಿತು. ಈವರೆಗೂ ಪುನರ್ವಸತಿ ಕಲ್ಪಿಸಿಲ್ಲ. ಇದನ್ನು ಖಂಡಿಸಿ ಏ.9ರಂದು ಅತಂತ್ರ ಸ್ಥಿತಿಯಲ್ಲೇ ಜೀವ ಕಳೆದುಕೊಂಡ ನಮ್ಮ ಹಿರಿಯರಿಗೆ ಶ್ರದ್ಧಾಂಜಲಿ ಸಲ್ಲಿಸಲಿದ್ದೇವೆ ಹಾಗೂ ಕರಾಳ ದಿನವನ್ನಾಗಿ ಆಚರಿಸಲಿದ್ದೇವೆ’ ಎಂದು ತಿಳಿಸಿದ್ದಾರೆ.

ಎನ್‌ಸಿಎಫ್ ಪರಿಷ್ಕರಣೆ: ವರ್ಷಕ್ಕೆ ಎರಡು ಬಾರಿ ಪರೀಕ್ಷೆಗೆ ಪ್ರಸ್ತಾವ

10,12ರ ಫಲಿತಾಂಶಕ್ಕೆ ಹಿಂದಿನ ತರಗತಿಗಳ ಅಂಕ ಪರಿಗಣನೆ

ನವದೆಹಲಿ (ಪಿಟಿಐ): 10 ಹಾಗೂ 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಗಮನಾರ್ಹ ಸುಧಾರಣೆ ತರಲು ಶಿಕ್ಷಣ ಸಚಿವಾಲಯ ಮುಂದಾಗಿದೆ. ಈ ಸಂಬಂಧ ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (ಎನ್‌ಸಿಎಫ್) ಕರಡನ್ನು ಸಿದ್ಧಪಡಿಸುತ್ತಿದೆ.

ಈ ಹಿಂದೆ ಇದ್ದಂತೆ, 12ನೇ ತರಗತಿಯ ಬೋರ್ಡ್ ಪರೀಕ್ಷೆಯನ್ನು ವರ್ಷಕ್ಕೆ ಎರಡು ಬಾರಿಯಂತೆ ನಡೆಸಬೇಕು. 10 ಹಾಗೂ 12ನೇ ತರಗತಿಯ ಅಂತಿಮ ಫಲಿತಾಂಶವನ್ನು ಪ್ರಕಟಿಸುವಾಗ ಹಿಂದಿನ ತರಗತಿಗಳಲ್ಲಿ ಪಡೆದ ಅಂಕಗಳನ್ನು ಪರಿಗಣಿಸಬೇಕು ಎಂಬ ಪ್ರಸ್ತಾವ ಎನ್‌ಸಿಎಫ್ ಕರಡಿನಲ್ಲಿದೆ.

ಅಲ್ಲದೇ, 11 ಮತ್ತು 12ನೇ ತರಗತಿಯ ವಿಷಯಗಳನ್ನು ವಿಜ್ಞಾನ, ಕಲಾ ಅಥವಾ ಮಾನವಿಕ ವಿಷಯ ಹಾಗೂ ವಾಣಿಜ್ಯ ಎಂಬುದಾಗಿ ವರ್ಗೀಕರಿಸುವುದನ್ನು ನಿಲ್ಲಿಸಬೇಕು ಎಂಬ ಪ್ರಸ್ತಾವವನ್ನು ಸಹ ಒಳಗೊಂಡಿದೆ.

‘ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಕರಡು ಅಂತಿಮ ಹಂತದಲ್ಲಿದೆ. ಶೀಘ್ರವೇ ಇದನ್ನು ಸಾರ್ವಜನಿಕರ ಮುಂದಿಟ್ಟು, ಪ್ರತಿಕ್ರಿಯೆ ಪಡೆಯಲಾಗುವುದು. 2024ರ ಶೈಕ್ಷಣಿಕ ವರ್ಷದಲ್ಲಿ ನೂತನ ಪರೀಕ್ಷಾ ವ್ಯವಸ್ಥೆಯನ್ನು ಜಾರಿಗೊಳಿಸಲಾಗುವುದು’ ಎಂದು ಶಿಕ್ಷಣ ಸಚಿವಾಲಯ ಅಧಿಕಾರಿಗಳು ಹೇಳಿದ್ದಾರೆ.

‘ವಿದ್ಯಾರ್ಥಿಗಳು 10ನೇ ತರಗತಿ ಪೂರ್ಣಗೊಳಿಸುವ ಮುನ್ನ ಎಂಟು ಬೋರ್ಡ್ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು. ಪ್ರತಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣನೆಗೆ ತೆಗೆದುಕೊಂಡು, ಅಂತಿಮ ಫಲಿತಾಂಶವನ್ನು ಪ್ರಕಟಿಸಲಾಗುತ್ತದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿಗಳು 12ನೇ ತರಗತಿಯನ್ನು ಪೂರ್ಣಗೊಳಿಸಲು, ಆಯ್ಕೆ ಆಧಾರಿತ 16 ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿರಬೇಕು ಎಂದು ಎನ್‌ಸಿಎಫ್ ಕರಡಿನಲ್ಲಿ ವಿವರಿಸಲಾಗಿದೆ.

ಇಸ್ರೊ ಮಾಜಿ ಅಧ್ಯಕ್ಷ ಕೆ.ಕಸ್ತೂರಿ ರಂಗನ್ ನೇತೃತ್ವದ ಸಮಿತಿಯು ಈ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಕರಡನ್ನು ಸಿದ್ಧಪಡಿಸಿದೆ. 2005ರಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಪರಿಷ್ಕರಿಸಲಾಗಿತ್ತು.

2009ರಲ್ಲಿ 10ನೇ ತರಗತಿಗೆ ‘ಮುಂದುವರಿದ ಮತ್ತು ಸಮಗ್ರ ಮೌಲ್ಯಮಾಪನ’ (ಸಿಸಿಇ) ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಈ ವ್ಯವಸ್ಥೆಯನ್ನು 2017ರಲ್ಲಿ ಹಿಂತೆಗೆದುಕೊಳ್ಳಲಾಗಿತ್ತಲ್ಲದೇ, ವರ್ಷದ ಕೊನೆಯಲ್ಲಿ ಪರೀಕ್ಷೆ ನಡೆಸುವ ಹಳೆಯ ಪದ್ಧತಿಯನ್ನೇ ಅಳವಡಿಸಿಕೊಳ್ಳಲಾಯಿತು. ಆದರೆ, ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಮಾತ್ರ, 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ಎರಡು ಬಾರಿ ನಡೆಸಲಾಗಿತ್ತು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಳೆಯ ಪದ್ಧತಿಯಂತೆ, ಒಂದೇ ಪರೀಕ್ಷೆಯನ್ನು ನಡೆಸಲಾಗಿದೆ.

ವಿಂಗಡಣೆ: ಎನ್‌ಇಪಿ ಪ್ರಕಾರ, ಸೆಕಂಡರಿ ವಿಭಾಗವು ನಾಲ್ಕು ವರ್ಷದ್ದಾಗಿರುತ್ತದೆ. 9ರಿಂದ 12ನೇ ತರಗತಿವರೆಗಿನ ಈ ಹಂತವು ಬಹುಶಿಸ್ತೀಯ ಅಧ್ಯಯನವನ್ನು ಒಳಗೊಂಡಿದ್ದು, ವಿಷಯಗಳ ಆಯ್ಕೆಗೆ ಸಂಬಂಧಿಸಿ ಹೆಚ್ಚು ಅನುಕೂಲ ಹೊಂದಿರುತ್ತದೆ.

ಸೆಕಂಡರಿ ಹಂತವನ್ನು, 9–10 ಹಾಗೂ 11–12ನೇ ತರಗತಿ ಎಂಬುದಾಗಿ ಎರಡು ಭಾಗಗಳಾಗಿ ವಿಂಗಡಿಸಲಾಗುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಎಂಟು ‘ಪಠ್ಯಕ್ರಮ ವಿಭಾಗ’ಗಳಡಿ ಲಭ್ಯವಿರುವ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

ಮಾನವಿಕ ವಿಷಯಗಳು, ಗಣಿತ ಮತ್ತು ಕಂಪ್ಯೂಟಿಂಗ್, ವೃತ್ತಿ ಶಿಕ್ಷಣ, ದೈಹಿಕ ಶಿಕ್ಷಣ, ಕಲಾ ಶಿಕ್ಷಣ, ಸಮಾಜವಿಜ್ಞಾನ, ವಿಜ್ಞಾನ ಹಾಗೂ ಅಂತರಶಿಸ್ತೀಯ ವಿಷಯಗಳು ಎಂಬ ‘ಪಠ್ಯಕ್ರಮ ವಿಭಾಗ’ಗಳಿರುತ್ತವೆ. ಈ ವಿಭಾಗಗಳಡಿ, ಇತಿಹಾಸ, ಭೌತವಿಜ್ಞಾನ, ಭಾಷಾವಿಜ್ಞಾನ ಸೇರಿದಂತೆ ವಿವಿಧ ವಿಷಯಗಳನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು.

ಗಣಿತದ ಬಗೆಗಿನ ಭಯ ಹೋಗಲಾಡಿಸಲು ಒತ್ತು

ಗಣಿತ ಕಲಿಕೆ ಕುರಿತಂತೆ ವಿದ್ಯಾರ್ಥಿಗಳಲ್ಲಿ ಮನೆ ಮಾಡಿರುವ ಭಯವನ್ನು ನಿರ್ಮೂಲನೆ ಮಾಡಬೇಕು. ಅದರಲ್ಲೂ, ಬಾಲಕಿಯರು ಗಣಿತದಲ್ಲಿ ಉತ್ತಮ ಸಾಧನೆ ಮಾಡಲಾರರು ಹಾಗೂ ಬಲಾಢ್ಯ ಜಾತಿಗಳಿಗೆ ಸೇರಿದವರು ಗಣಿತ ಕಲಿಕೆಯಲ್ಲಿ ಮುಂದು ಎಂಬ ನಂಬಿಕೆಗಳನ್ನು ಹೋಗಲಾಡಿಸಬೇಕು ಎಂಬುದಕ್ಕೆ ಎನ್‌ಸಿಎಫ್‌ನ ಕರಡಿನಲ್ಲಿ ಒತ್ತು ನೀಡಲಾಗಿದೆ.

ಗಣಿತ ಕುರಿತು ವಿದ್ಯಾರ್ಥಿಗಳಲ್ಲಿ ಭಯ ಮನೆ ಮಾಡಿರುವುದಕ್ಕೆ ಪ್ರಮುಖವಾಗಿ ಎರಡು ಕಾರಣಗಳನ್ನು ಎನ್‌ಇಪಿಯಲ್ಲಿ ಗುರುತಿಸಲಾಗಿದೆ. ಗಣಿತ ವಿಷಯದ ಸ್ವರೂಪ ಮತ್ತು ಬೋಧನೆ ಒಂದು ಕಾರಣವಾದರೆ, ಗಣಿತ ಕಲಿಕೆ ಕುರಿತ ಸಮಾಜ ಹೊಂದಿರುವ ದೃಷ್ಟಿಕೋನ ಎರಡನೇ ಕಾರಣ ಎಂದು ವಿವರಿಸಲಾಗಿದೆ.

ಗಣಿತವನ್ನು ಪ್ರತ್ಯೇಕವಾಗಿ ಬೋಧಿಸುವುದಕ್ಕಿಂತ, ಕಲೆ, ಕ್ರೀಡೆ ಹಾಗೂ ಭಾಷೆಗಳೊಂದಿಗೆ ಸೇರಿಸಿ ಕಲಿಸಬೇಕು. ಕಲಿಕಾ ಪ್ರಕ್ರಿಯೆಯನ್ನು ಹೆಚ್ಚು ಸೃಜನಶೀಲ ಹಾಗೂ ಕಲಾತ್ಮಕವಾಗಿರುವಂತೆ ಮಾಡಬೇಕು ಎಂದೂ ವಿವರಿಸಲಾಗಿದೆ.

‘ರಂಗೋಲಿ, ಅರಿಗಾಮಿ, ನೇಯ್ಗೆ, ಎಂಬ್ರಾಯ್ಡರಿ, ಸ್ಮಾರಕಗಳಲ್ಲಿನ ಆಕೃತಿಗಳ ಮೂಲಕ ರೇಖಾಗಣಿತದ ಕಲಿಕೆ ಸೇರಿದಂತೆ ಗಣಿತದ ವಿವಿಧ ಪರಿಕಲ್ಪನೆಗಳನ್ನು ಕಲಿಸಿಕೊಡಬೇಕು ಎಂದು ಸಮಿತಿಯು ಸಲಹೆ ನೀಡಿದೆ.

‘ಆಕ್ಸ್‌ಫಾಮ್ ಇಂಡಿಯಾ’ ವಿರುದ್ಧ ತನಿಖೆಗೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘಿಸಿದ ಆರೋಪ ಎದುರಿಸುತ್ತಿರುವ ಸರ್ಕಾರೇತರ ಸಂಸ್ಥೆ ‘ಆಕ್ಸ್‌ಫಾಮ್ ಇಂಡಿಯಾ’ ವಿರುದ್ಧ ಸಿಬಿಐ ತನಿಖೆಗೆ ಕೇಂದ್ರ ಗೃಹ ಸಚಿವಾಲಯ ಗುರುವಾರ ಶಿಫಾರಸು ಮಾಡಿದೆ.

ವಿದೇಶಗಳಿಂದ ದೇಣಿಗೆ ಸ್ವೀಕರಿಸುವುದಕ್ಕೆ ಸಂಬಂಧಿಸಿ, ‘ಆಕ್ಸ್‌ಫಾಮ್ ಇಂಡಿಯಾ’ದ ಪರವಾನಗಿಯನ್ನು ನವೀಕರಣ ಮಾಡಿರಲಿಲ್ಲ. ಇದಾದ 14 ತಿಂಗಳ ನಂತರ, ಸಂಸ್ಥೆಯ ವಿರುದ್ಧ ಸಚಿವಾಲಯ ಈ ಕ್ರಮಕ್ಕೆ ಮುಂದಾಗಿದೆ.

ವಿದೇಶಗಳಿಂದ ಸ್ವೀಕರಿಸುತ್ತಿದ್ದ ಹಣವನ್ನು ಸಂಸ್ಥೆಯು ವಿವಿಧ ಸಂಘಟನೆಗಳಿಗೆ ವರ್ಗಾಯಿಸುವುದನ್ನು ಮುಂದುವರಿಸಿದ್ದು ಸಚಿವಾಲಯದ ಗಮನಕ್ಕೆ ಬಂದಿತ್ತು ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಲಾಭ ತಂದುಕೊಡುವಂತಹ ಮಾರ್ಗಗಳನ್ನು ಬಳಸಿ, ಕೆಲ ಸಂಸ್ಥೆಗಳಿಗೆ ‘ಆಕ್ಸ್‌ಫಾಮ್ ಇಂಡಿಯಾ’ ಹಣ ವರ್ಗಾವಣೆ ಮಾಡುತ್ತಿತ್ತು. ಇಂಥ ವಹಿವಾಟಿನ ಮೂಲಕ ಎಫ್‌ಸಿಆರ್‌ಎ ನಿಯಮಗಳಿಂದ ತಪ್ಪಿಸಿಕೊಳ್ಳಲು ಸಂಚು ರೂಪಿಸಿದ್ದು ಆದಾಯ ತೆರಿಗೆ ಇಲಾಖೆ ನಡೆಸಿದ ತನಿಖೆಯಿಂದ ತಿಳಿದು ಬಂದಿತ್ತು ಎಂದೂ ಅಧಿಕಾರಿಗಳು ಹೇಳಿದ್ದಾರೆ.

ಕಾಂಗ್ರೆಸ್ ನಾಯಕ ಎ.ಕೆ. ಆ್ಯಂಟನಿ ಪುತ್ರ

ಅನಿಲ್ ಬಿಜೆಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ಎ.ಕೆ. ಆ್ಯಂಟನಿ ಅವರ ಪುತ್ರ ಅನಿಲ್ ಕೆ.ಆ್ಯಂಟನಿ ಅವರು, ಕೇಂದ್ರ ಸಚಿವರಾದ ಪೀಯೂಷ್ ಗೋಯಲ್ ಮತ್ತು ವಿ. ಮುರಳೀಧರನ್ ಅವರ ಸಮ್ಮುಖದಲ್ಲಿ ಗುರುವಾರ ಇಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

‘ಕಾಂಗ್ರೆಸ್ ನಾಯಕತ್ವವು ದೇಶಕ್ಕಾಗಿ ದುಡಿಯುವ ಬದಲು ಒಂದು ಕುಟುಂಬಕ್ಕಾಗಿ ದುಡಿಯುತ್ತಿದೆ’ ಎಂದು ಕಾಂಗ್ರೆಸ್ ಡಿಜಿಟಲ್ ಮಾಧ್ಯಮ ಘಟಕದ ಮುಖ್ಯಸ್ಥರೂ ಆಗಿದ್ದ ಅನಿಲ್ ಅವರು ಆರೋಪಿಸಿದರು.

ಬಿಜೆಪಿಗೆ ಸೇರ್ಪಡೆಗೊಳ್ಳುವ ಮೊದಲು ಈ ವಿಚಾರವನ್ನು ತಂದೆಯವರೊಂದಿಗೆ ಚರ್ಚಿಸಿದ್ದೀರಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಇದು ವ್ಯಕ್ತಿತ್ವದ ಬಗೆಗಿನದ್ದಲ್ಲ. ಅಭಿಪ್ರಾಯ ಮತ್ತು ಆಲೋಚನೆಗಳ ನಡುವಿನ ಭಿನ್ನಾಭಿಪ್ರಾಯ. ಸರಿಯಾದ ಹೆಜ್ಜೆ ಇಟ್ಟಿದ್ದೇನೆ ಎಂದು ನಾನು ದೃಢವಾಗಿ ನಂಬಿದ್ದೇನೆ. ತಂದೆಯ ಬಗೆಗಿನ ಗೌರವ ಹಾಗೆಯೇ ಇರುತ್ತದೆ’ ಎಂದು ಹೇಳಿದರು.

ಅನಿಲ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿದ ಗೋಯಲ್, ‘ಅನಿಲ್ ಅವರು ಬಹಳ ತಳಹದಿಯ ರಾಜಕಾರಣಿ’ ಎಂದು ಬಣ್ಣಿಸಿದರು.

ಸುಸ್ಥಿರ ಬೆಳವಣಿಗೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗಿರುವ ದೃಷ್ಟಿಕೋನವನ್ನು ಗೋಯಲ್ ಅವರು ಅನಿಲ್ ಅವರಿಗೆ ಮನದಟ್ಟು ಮಾಡಿಕೊಟ್ಟರು.

ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಬಿಬಿಸಿ ಪ್ರಸಾರ ಮಾಡಿದ್ದ ಸಾಕ್ಷ್ಯಚಿತ್ರದ ಬಗೆಗಿನ ಕಾಂಗ್ರೆಸ್ ನಿಲುವನ್ನು ಟೀಕಿಸಿದ್ದ ಅನಿಲ್ ಅವರು, ಬಳಿಕ ಪಕ್ಷವನ್ನು ತೊರೆದಿದ್ದರು.



ಅನಿಲ್ ಕೆ.ಆ್ಯಂಟನಿ ಅವರು ಕೇಂದ್ರ ಸಚಿವರುಗಳಾದ ವಿ. ಮುರಳೀಧರನ್ ಮತ್ತು ಪೀಯೂಷ್ ಗೋಯಲ್ ಅವರ ಸಮ್ಮುಖದಲ್ಲಿ ನವದೆಹಲಿಯಲ್ಲಿ ಗುರುವಾರ ಬಿಜೆಪಿಗೆ ಸೇರ್ಪಡೆಗೊಂಡರು –ಪಿಟಿಐ ಚಿತ್ರ

‘ಮಗನ ನಿರ್ಧಾರ ನೋವು ತಂದಿದೆ’

(ತಿರುವನಂತಪುರ ವರದಿ): ಬಿಜೆಪಿಗೆ ಸೇರಿದ ಮಗನ ನಿರ್ಧಾರವು ಅತೀವ ನೋವು ತಂದಿದೆ ಎಂದು ಎ.ಕೆ.ಆ್ಯಂಟನಿ ಅವರು ಹೇಳಿದ್ದಾರೆ.

ಕೆಪಿಸಿಸಿ ಪ್ರಧಾನ ಕಚೇರಿಯಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಮಗ ತಪ್ಪು ನಿರ್ಧಾರ ತೆಗೆದುಕೊಂಡಿದ್ದಾನೆ. ನಾನು ಕೊನೆಯ ಉಸಿರಿನವರೆಗೂ ಕಾಂಗ್ರೆಸ್ಸಿಗನಾಗಿಯೇ ಇರುತ್ತೇನೆ’ ಎಂದು ಭಾವುಕರಾಗಿ ನುಡಿದರು. ‘ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಧ್ವನಿಯೆತ್ತುವುದನ್ನು ಮುಂದುವರಿಸುತ್ತೇನೆ’ ಎಂದೂ ಅವರು ಹೇಳಿದರು.

ನೆಹರೂ–ಗಾಂಧಿ ಕುಟುಂಬದ ವಿರುದ್ಧ ಅನಿಲ್ ಅವರು ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಿದ ಆ್ಯಂಟನಿ ಅವರು,‘ನನ್ನ ನಿಷ್ಠೆ ಯಾವಾಗಲೂ ನೆಹರೂ ಕುಟುಂಬದೊಂದಿಗೆ ಇರುತ್ತದೆ’ ಎಂದರು.

ಹಣ ಪಡೆದು ಮತ ಚಲಾವಣೆ: ಹೈಕೋರ್ಟ್ ಬೇಸರ

ಒಂದನೇ ಪುಟದಿಂದ

ಅರ್ಜಿದಾರರನ್ನು ಉದ್ದೇಶಿಸಿ, ‘ರಾಜ್ಯದಲ್ಲಿ ಎಷ್ಟು ಗ್ರಾಮಗಳಿವೆ ಎಂಬುದರ ಕುರಿತು ಏನಾದರೂ ಮಾಹಿತಿ ಇದೆಯೇ’ ಎಂದು ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿದ ಮೊಹಮ್ಮದ್ ಇಕ್ಬಾಲ್ ‘ಇಲ್ಲ’ ಎಂದರು.

ಇದಕ್ಕೆ ಇನ್ನಷ್ಟು ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘2018ರಿಂದ ಅರ್ಜಿ ವಿಚಾರಣೆ ನಡೆಯುತ್ತಿದೆ. ಪ್ರತಿ 15 ದಿನಗಳಿಗೊಮ್ಮೆ ಎಷ್ಟು ಗ್ರಾಮಗಳಿಗೆ ಸ್ಮಶಾನ ಭೂಮಿ ಒದಗಿಸಲಾಗಿದೆ ಎಂಬ ಅಂಶವನ್ನು ಪಡೆದು ವಿಚಾರಣೆ ನಡೆಸುತ್ತಿದೆ. ಆದರೂ, ರಾಜ್ಯದಲ್ಲಿ ಎಷ್ಟು ಗ್ರಾಮಗಳಿವೆ ಎಂಬುದು ಅರ್ಜಿದಾರರಿಗೆ ಗೊತ್ತಿಲ್ಲ ಎಂದರೆ ಹೇಗೆ, ಈ ಅರ್ಜಿ ಸಾರ್ವಜನಿಕ ಹಿತಾಸಕ್ತಿಯದ್ದೋ ಅಥವಾ ಖಾಸಗಿ ಹಿತಾಸಕ್ತಿಯದ್ದೋ’ ಎಂದು ತರಾಟೆಗೆ ತೆಗೆದುಕೊಂಡಿತು.

ಸರ್ಕಾರದ ಪರ ಹಾಜರಿದ್ದ ವಕೀಲರು, ಯಾವ ಗ್ರಾಮಗಳಲ್ಲಿ ಸ್ಮಶಾನ ಭೂಮಿ ಇಲ್ಲ ಎಂಬ ಮಾಹಿತಿ ಪಡೆಯಲು ಪತ್ರಿಕಾ ಪ್ರಕಟಣೆ ಹೊರಡಿಸಲು ಹಿಂದೆ ನ್ಯಾಯಪೀಠ ನೀಡಿದ್ದ ಸೂಚನೆಯ ಅನುಪಾಲನಾ ವರದಿಯನ್ನು ಪೀಠಕ್ಕೆ ಸಲ್ಲಿಸಿದರು.

31 ಜಿಲ್ಲೆಗಳಲ್ಲಿ ರಾಜ್ಯಮಟ್ಟದ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸಲಾಗಿದೆ. ಆದರೆ, ಈತನಕ ಯಾವುದೇ ಹಳ್ಳಿಯಿಂದಲೂ ಮನವಿ ಬಂದಿಲ್ಲ. ಮನವಿ ಬಂದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿತು.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
ಇಂದು
ಪ್ರಜಾವಾಣಿ ಫೇಸ್‌ಬುಕ್ ಪುಟದಲ್ಲಿ ನೇರಪ್ರಸಾರ
ವಿಶ್ವ ಆರೋಗ್ಯ ದಿನಾಚರಣೆ
LIVE
ವೈದ್ಯರೊಂದಿಗೆ ಮಾತುಕತೆ



ಕೋವಿಡ್ ಹೆಚ್ಚಳ, ಬಿರು ಬಿಸಿಲು, ಕೆಲವೆಡೆ ಮಳೆ
- ಈ ಸಂದರ್ಭದಲ್ಲಿ ಆರೋಗ್ಯದ ರಕ್ಷಣೆ ಬಗೆಗೆ ಓದುಗರ ಸಂದೇಹಗಳಿಗೆ ಉತ್ತರಿಸಲಿದ್ದಾರೆ
ಡಾ.ಸುದರ್ಶನ್ ಕೆ.ಎಸ್.
ಶ್ವಾಸಕೋಶ ತಜ್ಞರು, ಫೋರ್ಟಿಸ್ ಆಸ್ಪತ್ರೆ
ಸಂಜೆ 4 ರಿಂದ
Prajavani.net
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ರಾಜ್ಯದ ಹಲವೆಡೆ ಇಂದು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಜಿಲ್ಲೆಗಳ ಒಂದೆರಡು ಕಡೆ ಆಲಿಕಲ್ಲು ಮಳೆ ಆಗಬಹುದು ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಗದಗ, ಬೆಳಗಾವಿ, ಕೊಪ್ಪಳ, ಹಾವೇರಿ, ಧಾರವಾಡ, ಕಲಬುರಗಿ, ವಿಜಯಪುರ, ಯಾದಗಿರಿ, ಬಾಗಲಕೋಟೆ, ರಾಯಚೂರು ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಹಾಸನ, ಕೊಡಗು, ಬಳ್ಳಾರಿ, ತುಮಕೂರು, ಚಾಮರಾಜನಗರ, ಮೈಸೂರು, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಕನ್ನಡ ಜಿಲ್ಲೆಯ ಒಂದೆರಡು ಕಡೆ ಮಳೆಯಾಗಲಿದೆ. ಇಲ್ಲಿ ಶನಿವಾರವು ಮಳೆಯಾಗುವ ಸಾಧ್ಯತೆಯಿದೆ. ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ಉತ್ತರ ಒಳನಾಡಿನ ವಿಜಯಪುರ, ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಯ ಒಂದೆರಡು ಕಡೆ ಆಲಿಕಲ್ಲು ಮಳೆಯಾಗಲಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ಗುಡುಗು ಸಹಿತ ಮಳೆಯಾಗಬಹುದು. ಉಷ್ಣಾಂಶ ಗರಿಷ್ಠ 34 ಡಿಗ್ರಿ ಸೆಲ್ಸಿಯಸ್ ಮತ್ತು ಕನಿಷ್ಠ 22 ಡಿಗ್ರಿ ಸೆಲ್ಸಿಯಸ್ ಇರಲಿದೆ.

ರಾಜ್ಯದಲ್ಲಿ ಗುರುವಾರ ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (40.7 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ. ಒಳನಾಡಿನ ಒಂದೆರಡು ಕಡೆ ಮಳೆಯಾಗಿದೆ ಎಂದು ಇಲಾಖೆಯು ಮಾಹಿತಿ ನೀಡಿದೆ.

ಹಲವೆಡೆ ಮಳೆ: ಸಿಡಿಲಿಗೆ ರೈತ ಸಾವು

ಒಂದನೇ ಪುಟದಿಂದ


ಡಗ್ಗಿ ಬಸಾಪುರ ಗ್ರಾಮದಲ್ಲಿ ಭಾರಿ ಮಳೆಯಿಂದಾಗಿ ಬಸವೇಶ್ವರ ರಥೋತ್ಸವಕ್ಕೆ ಅಡಚಣೆ ಉಂಟಾಯಿತು. ತೇರು ಎಳೆಯಲು ಸಹಸ್ರಾರು ಸಂಖ್ಯೆಯಲ್ಲಿ ಬಂದಿದ್ದ ಭಕ್ತರು ಮನೆ, ಮರಗಳ ಅಡಿ ಆಶ್ರಯ ಪಡೆದರು.

ವಿಜಯಪುರ ವರದಿ: ವಿಜಯಪುರ ನಗರ, ತಿಕೋಟಾ, ಇಂಡಿ, ದೇವರಹಿಪ್ಪರಗಿ ಸೇರಿದಂತೆ ಜಿಲ್ಲೆಯ ಹಲವಡೆ ಸಂಜೆ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಗಾಳಿ, ಮಳೆಗೆ ಮರಗಳ ಕೊಂಬೆಗಳು ಮುರಿದು ಬಿದ್ದಿವೆ. ಕೆಲ ತಾಸು ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು.

ಹಾಸನ ವರದಿ: ನಗರದಲ್ಲಿ ಗುಡುಗು-ಸಿಡಿಲಿನೊಂದಿಗೆ ಅರ್ಧ ತಾಸು ಧಾರಾಕಾರ ಮಳೆ ಸುರಿಯಿತು. ವರ್ಷದ ಮೊದಲ ಮಳೆಯು ತಂಪೆರೆಯಿತು. ಆಲೂರು ತಾಲ್ಲೂಕಿನಲ್ಲೂ ಕೆಲಕಾಲ ಮಳೆಯಾಗಿದೆ. ಕೊಣನೂರಿನಲ್ಲಿ ಮಧ್ಯಾಹ್ನ ಮಳೆಯಿಂದಾಗಿ ವಾರದ ಸಂತೆಗೆ ಕೆಲಕಾಲ ಅಡಚಣೆ ಉಂಟಾಗಿತ್ತು.

ಕೊಡಗು ಜಿಲ್ಲೆಯ ನಾಪೋಕ್ಲು ವ್ಯಾಪ್ತಿಯ ಪಾಲೂರು, ಕೊಟ್ಟಮುಡಿ ಭಾಗದಲ್ಲೂ ಸಾಧಾರಣ ಮಳೆಯಾಗಿದೆ. ತುಮಕೂರು ಜಿಲ್ಲೆಯ ಕುಣಿಗಲ್ ಪಟ್ಟಣದಲ್ಲಿ ಒಂದು ತಾಸಿಗೂ ಹೆಚ್ಚು ಗುಡುಗು ಸಹಿತ ಮಳೆ ಬಿತ್ತು. ಪಟ್ಟಣವಷ್ಟೇ ಅಲ್ಲದೆ ತಾಲ್ಲೂಕಿನ ಇತರೆಡೆಯೂ ಉತ್ತಮ ಮಳೆಯಾಗಿದೆ.

ಕ್ರಿಸ್ತನ ಮರಣದ ದಿನ 'ಶುಭ ಶುಕ್ರವಾರ'!



● ಅಜಯ್ ರಾಜ್

ಇಂದು ಗುಡ್ ಫ್ರೈಡೇ

'ಶುಭ ಶುಕ್ರವಾರ' ಅಥವಾ 'ಗುಡ್ ಫ್ರೈಡೇ' ಎಂಬುದು ಯೇಸುಕ್ರಿಸ್ತ ಶಿಲುಬೆಯ ಮೇಲೆ ಮರಣ ಹೊಂದಿದ ದಿನ. ಇದು ಸಾಮಾನ್ಯವಾಗಿ ಕ್ರೈಸ್ತರಿಗೆ ಸೂತಕದ ದಿನವಾಗಬೇಕಿತ್ತು; ಆದರೆ 'ಶುಭ'ವಾಗಿರುವುದು ಏಕೆ?

ಕ್ರಿಸ್ತ ಜೀವಿಸಿದ್ದು ಇಸ್ರೇಲ್ ರೋಮ್ ಸಾಮ್ರಾಜ್ಯದ ವಸಹಾತುವಾಗಿದ್ದ ಕಾಲಘಟ್ಟದಲ್ಲಿ. ಜನರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಶೋಷಿಸುತ್ತಿದ್ದ ರೋಮ್ ಚಕ್ರಾಧಿಪತ್ಯ ಒಂದೆಡೆಯಾದರೆ, ತಮ್ಮದೇ ಜನರನ್ನು ಕಠಿಣ ಧಾರ್ಮಿಕ ಕಾನೂನು ಆಚರಣೆಗಳ ಮೂಲಕ ಹಿಂಸಿಸುತ್ತಿದ್ದ ಯೆಹೂದ್ಯ ಧಾರ್ಮಿಕ ವರ್ಗ ಮತ್ತೊಂದೆಡೆ. ಇವರಿಬ್ಬರ ನಡುವೆ ಸಾಮಾನ್ಯ ಜನ ನಲುಗಿ, ಕನಲಿ ಹೋಗಿದ್ದರು. ತಮ್ಮನ್ನು ಈ ಎಲ್ಲಾ ಸಂಕೋಲೆಗಳಿಂದ ಬಿಡಿಸುವ 'ಮೆಸ್ಸಾಯ' (ಉದ್ಧಾರಕ)ನ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದರು. ಆಗ ಬಂದ ಯೇಸು ಕ್ರಿಸ್ತರು ಯೆಹೂದ್ಯ ಧಾರ್ಮಿಕ ನೇತಾರರ ಧಾರ್ಮಿಕ ಡಂಭಾಚಾರ, ಜನರನ್ನು ಮಾನಸಿಕವಾಗಿ ಹಿಂಸಿಸುವ ಕಟು ಆಚರಣೆಗಳನ್ನು ಖಂಡಿಸಿದರು; ದೇವರು ಮನುಷ್ಯರ ಹೃದಯದಲ್ಲಿದ್ದಾನೆ, ನಿಮ್ಮಂತೆಯೇ ಪರರನ್ನು ಪ್ರೀತಿಸಿದರೆ ಅದು ದೇವರನ್ನೇ ಪ್ರೀತಿಸಿದಂತೆ – ಎಂಬ ಮಾನವತೆಯ ಸಂದೇಶವನ್ನು ಸಾರಿದರು. ಯೆಹೂದ್ಯ ಸಮಾಜವು ಪಾಪಿಗಳು ಎಂದು ಕರೆದು ಊರ ಹೊರಗೆ ಹಾಕಿದ್ದ ದೀನರ ಒಡನಾಡಿಯಾದ ಕ್ರಿಸ್ತ, ಅವರ ಜೊತೆ ಊಟ ಮಾಡಿದರು, ಅವರ ಮನೆಗಳಲ್ಲಿ ತಂಗಿದರು, ಅವರ ನೋವು ನಲಿವುಗಳಿಗೆ ಸ್ಪಂದಿಸಿ, ಅವರನ್ನು ತನ್ನ ಸ್ನೇಹಿತರು, ಸಹೋದರರೆಂದು ಕರೆದರು. ಕ್ರಿಸ್ತನ ಈ ಕ್ರಿಯೆಗಳು ಸಾವಿರಾರು ಜನರ ಬದುಕಿನಲ್ಲಿ ಸಮಾಧಾನ, ಸಾಂತ್ವನದ ನಿಟ್ಟುಸಿರಿಗೆ ಕಾರಣವಾಯಿತು.

ಕ್ರಿಸ್ತನ ಈ ಸಾಮಾಜಿಕ ಕ್ರಾಂತಿಗೆ ಹೆದರಿದ ಅಲ್ಲಿಯ ಧಾರ್ಮಿಕ ನಾಯಕರು, ಆತನ ಕೊಲೆಗೆ ಸಂಚು ರೂಪಿಸಿತು. ಈ ಸಂಚಿನ ಭಾಗವಾಗಿ, ಯೇಸುವಿನ ಹನ್ನೆರೆಡು ಶಿಷ್ಯರಲ್ಲಿ ಒಬ್ಬನಾಗಿದ್ದ ಜೂದಾಸನು ಮೂವತ್ತು ಬೆಳ್ಳಿ ನಾಣ್ಯಗಳಿಗೆ ಯೇಸುವಿಗೆ ದ್ರೋಹ ಬಗೆದು, ಯೇಸುವನ್ನು ಯೆಹೂದ್ಯರಿಗೆ ಹಿಡಿದು ಕೊಟ್ಟನು. ನಂತರ ಅವರು ಯೇಸುವನ್ನು ಶಿಲುಬೆಗೇರಿಸಿದರು.

ಶುಭ ಶುಕ್ರವಾರ ಪ್ರಮುಖವಾಗಿ ಪ್ರೀತಿ, ತ್ಯಾಗ ಮತ್ತು ಕ್ಷಮೆ ಎಂಬ ಮೂರು ಸಂದೇಶಗಳನ್ನು ಸಾರುತ್ತದೆ. ಕ್ರಿಸ್ತ ತನ್ನ ಜನರನ್ನು ಅಪರಿಮಿತವಾಗಿ ಪ್ರೀತಿಸಿದ್ದು ಮಾತ್ರವಲ್ಲದೆ, ಅವರ ಕಷ್ಟಗಳಿಗೆ, ನೋವುಗಳಿಗೆ ಸ್ಪಂದಿಸಿದ. ತನ್ನ ಜನರ ರೋಗ-ರುಜಿನಗಳನ್ನು ವಾಸಿ ಮಾಡಿ, ಅವರಲ್ಲಿ ಬದುಕುವ ಸ್ಫೂರ್ತಿಯನ್ನು ತುಂಬಿದ. ದೇವರನ್ನು ಹಾಗೂ ಪರರನ್ನು ಪ್ರೀತಿಸುವಂತೆ ಪ್ರೇರೇಪಿಸಿದ. ಇದಕ್ಕೆ ಪ್ರತಿಯಾಗಿ ಆತನಿಗೆ ದ್ರೋಹ ಬಗೆದಾಗಲೂ ಆತ ಹತಾಶನಾಗಿ, ಹಲುಬಲಿಲ್ಲ.

ಶುಕ್ರವಾರ ನಡು ಮಧ್ಯಾಹ್ನ ಕ್ರಿಸ್ತನನ್ನು ಶಿಲುಬೆಗೇರಿಸಿದಾಗ ಅಲ್ಲಿನ ಜನರು ಹಾಗೂ ಸೈನಿಕರು ಕ್ರಿಸ್ತನನ್ನು ಪರಿಹಾಸ್ಯ ಮಾಡುತ್ತಿದ್ದರು. ಆಗಲೂ ಕ್ರಿಸ್ತ 'ತಂದೆಯೇ, ಇವರನ್ನು ಕ್ಷಮಿಸು, ಇವರೇನು ಮಾಡುತ್ತಿರುವರೆಂದು ಅರಿಯರು,' ಎಂದು ಅವರನ್ನು ಕ್ಷಮಿಸಿದ. ಇದಲ್ಲದೆ, ಹಿಂದಿನ ರಾತ್ರಿ ತನ್ನನ್ನು ಅಲ್ಲಗಳೆದಿದ್ದ ತಮ್ಮ ಆಪ್ತಶಿಷ್ಯ ಸಿಮೋನ್ ಪೇತ್ರನನ್ನು ಸಹ ಕ್ಷಮಿಸುವ ಮೂಲಕ, ಕ್ಷಮೆ ಎಂಬ ದೈವಮೌಲ್ಯದ ಪ್ರಾಮುಖ್ಯವನ್ನು ತಿಳಿಸಿದ. 'ಗೆಳೆಯರಿಗಾಗಿ ತನ್ನ ಪ್ರಾಣವನ್ನೇ ಧಾರೆಯೆರೆಯುವ ಪ್ರೀತಿಗಿಂತ ಮಿಗಿಲಾದ ಪ್ರೀತಿ ಯಾರಲ್ಲೂ ಇಲ್ಲ' ಎಂದಿದ್ದ ಯೇಸು ಕ್ರಿಸ್ತ, ತನ್ನ ಸ್ನೇಹಿತರಿಗಾಗಿ ಹಾಗೂ ತನ್ನ ಜನರ ಉದ್ಧಾರಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ. ಒಬ್ಬ ಮನುಷ್ಯ ತನ್ನ ಪ್ರಾಣಕ್ಕಿಂತ ಮಿಗಿಲಾಗಿ ಯಾವ ತ್ಯಾಗವನ್ನು ಮಾಡಲು ಸಾಧ್ಯ?

ಹೀಗೆ ಕ್ರಿಸ್ತ ಸಾರಿದ ಪ್ರೀತಿ, ಕ್ಷಮೆ ಮತ್ತು ತ್ಯಾಗಗಳು ಶುಭ ಶುಕ್ರವಾರದಂದು ಆತನ ಮರಣದಲ್ಲಿ ಅವುಗಳ ಪ್ರಸ್ತುತತೆಯನ್ನು ನೆನಪಿಸುವ ಕಾರಣ ಆತನ ಮರಣ ಕ್ರೈಸ್ತರಿಗೆ ಶುಭವಾಗಿದೆ. ❖

ಜಾಲತಾಣದಲ್ಲಿ ಹರಿದಾಡಿದ ಮಹಿಳೆ ಜೊತೆಗಿನ ಶಾಸಕ ಮಠಂದೂರು ಚಿತ್ರ

ಪ್ರಜಾವಾಣಿವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಕ್ಷೇತ್ರದ ಬಿಜೆಪಿ ಶಾಸಕ ಸಂಜೀವ ಮಠಂದೂರು ಅವರು ಮಹಿಳೆಯೊಬ್ಬರ ಜೊತೆ ಆಪ್ತ ಭಂಗಿಯಲ್ಲಿರುವ ಚಿತ್ರಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

ಈ ಬಾರಿಯ ವಿಧಾನ ಸಭಾ ಚುನಾವಣೆಯಲ್ಲೂ ಸಂಜೀವ ಮಠಂದೂರು ಅವರು ಪುತ್ತೂರು ಕ್ಷೇತ್ರದಲ್ಲಿ ಬಿಜೆಪಿಯ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ. ಅವರಿಗೆ ಟಿಕೆಟ್ ನೀಡಬಾರದು ಎಂದು ಬಿಜೆಪಿಯ ಒಂದು ಗುಂಪು ವರಿಷ್ಠರ ಮೇಲೆ ಒತ್ತಡ ಹೇರುತ್ತಿದೆ. ಪಕ್ಷದ ವರಿಷ್ಠರು ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸುತ್ತಿರುವ ಸಂದರ್ಭದಲ್ಲೇ, ಈ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡಲಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಂಜೀವ ಮಠಂದೂರು, 'ಈಗಾಗಲೇ ಬೆಂಗಳೂರಿನ ಹಲಸೂರು ಗೇಟ್‌ನ ಸೈಬರ್ ಕ್ರೈಂ ವಿಭಾಗಕ್ಕೆ ದೂರು ನೀಡಿದ್ದೇನೆ. ಈ ರೀತಿ ತಿರುಚಿದ ಚಿತ್ರಗಳನ್ನು ಮಾಧ್ಯಮಗಳಲ್ಲಿ ಹರಿಯಬಿಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತರುವ ಪ್ರಯತ್ನದಲ್ಲಿದ್ದೇನೆ' ಎಂದು ಅವರು ತಿಳಿಸಿದರು.

ಮಹಿಳೆಯಿಂದ ದೂರು(ಉಪ್ಪಿನಂಗಡಿ) ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಚಿತ್ರದಲ್ಲಿ ಸಂಜೀವ ಮಠಂದೂರು ಜೊತೆ ಇರುವ ಮಹಿಳೆಯು ಉಪ್ಪಿನಂಗಡಿ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ.



ಪಂಪಾ ವಿರೂಪಾಕ್ಷೇಶ್ವರ ಹಾಗೂ ಚಂದ್ರಮೌಳೇಶ್ವರ ಸ್ವಾಮಿ ರಥೋತ್ಸವು ಹೊಸಪೇಟೆ ತಾಲ್ಲೂಕಿನ ಹಂಪಿ ರಥಬೀದಿಯಲ್ಲಿ ಗುರುವಾರ ಸಂಜೆ ಸಡಗರ, ಸಂಭ್ರಮದಿಂದ ಜರುಗಿತು ಪ್ರಜಾವಾಣಿ ಚಿತ್ರ: ರಾಚಯ್ಯ ಎಸ್. ಸ್ಥಾವರಿಮಠ

ರಥದ ಮೇಲಿಂದ ಬಿದ್ದು ವ್ಯಕ್ತಿ ಸಾವು

ಸಿಂದಗಿ(ವಿಜಯಪುರ): ಗುರುವಾರ ಸಂಜೆ ನಡೆಯಬೇಕಿದ್ದ 'ಈ ಭಾಗದ ಎರಡನೇ ಶ್ರೀಶೈಲ' ಎಂದೇ ಖ್ಯಾತಿ ಪಡೆದ ತಾಲ್ಲೂಕಿನ ಗೋಲಗೇರಿ ಗೊಲ್ಲಾಳೇಶ್ವರ ರಥೋತ್ಸವ ಅರ್ಧಕ್ಕೆ ನಿಂತಿತು.

ರಥದ ಮೇಲೆ ಕಳಸ, ಕೊಡೆ ಕಟ್ಟುವ ವ್ಯಕ್ತಿಯಲ್ಲಿದ್ದ ಹಗ್ಗ ಕೈ ಜಾರಿ, ಆತ ಕೆಳಗೆ ಬಿದ್ದು ಸ್ಥಳದಲ್ಲಿಯೇ ಮೃತಪಟ್ಟ ಕಾರಣಕ್ಕೆ ರಥೋತ್ಸವ ನಡೆಯಲಿಲ್ಲ. ಸಾಹೇಬ ಪಟೇಲ ಖಾಜಾಪಟೇಲ ಕಾಚಾಪುರ(50) ಮೃತ ವ್ಯಕ್ತಿ.

ಇಸ್ಲಾಂ ಧರ್ಮಕ್ಕೆ ಸೇರಿದರೂ ಗೊಲ್ಲಾಳೇಶ್ವರರ ಪರಮ ಭಕ್ತನಾಗಿದ್ದ ಸಾಹೇಬ ಪಟೇಲ್ ಬಹಳ ವರ್ಷಗಳಿಂದ ರಥದ ಕಳಸ, ಕೊಡೆ ಕಟ್ಟುವ ಕೆಲಸ ಮಾಡುತ್ತಿದ್ದರು. ಅವರು ಕಳಸ, ಕೊಡೆ ಕಟ್ಟಿ, ಕೈಸನ್ನೆ ಮಾಡಿದ ಮೇಲೆಯೇ ರಥ ಎಳೆಯುವ ಪರಂಪರೆ ಮುಂದುವರೆದುಕೊಂಡು ಬಂದಿತ್ತು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ

ಆಯುಕ್ತಾಲಯ, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ,
"ಕೌಶಲ್ಯ ಭವನ" ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 029

ಸಂಖ್ಯೆ: ಕೈತಉ/ತ/ಸಂ–3/ವಿವ–19/2022–23 ದಿನಾಂಕ:05.04.2023

ಪ್ರಕಟಣೆ

ಕರ್ನಾಟಕ ರಾಜ್ಯದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಕೇಂದ್ರ ವೃತ್ತಿ ಶಿಕ್ಷಣ ಪರಿಷತ್ತಿನಡಿಯಲ್ಲಿ 2023ನೇ ಸಾಲಿನಲ್ಲಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಹೆಚ್ಚುವರಿ ವೃತ್ತಿ ಘಟಕಗಳನ್ನು ಪ್ರಾರಂಭಿಸಲು ಎನ್.ಸಿ.ವಿ.ಟಿ ಸಂಯೋಜನೆ ಪಡೆಯಲು ಮತ್ತು ಸ್ಥಳಾಂತರಗೊಂಡ ಸಂಸ್ಥೆಗಳು ಮರು ಸಂಯೋಜನೆಗಾಗಿ ಸಂಯೋಜನೆ ಪಡೆಯಲು ಡಿ.ಜಿ.ಟಿ ನವದೆಹಲಿರವರ NIMI portal ನಲ್ಲಿ ಅರ್ಜಿ ಸಲ್ಲಿಸಲು **ದಿನಾಂಕ: 27.03.2023 ರಿಂದ 25.04.2023ರ ವರೆಗೆ** ಕಾಲಾವಕಾಶ ನೀಡಿರುತ್ತಾರೆ. ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಿಮದ ನಿರಾಪೇಕ್ಷಣಾ ಪತ್ರ (No objection certificate) ಪಡೆದು ಅರ್ಜಿಯನ್ನು ಸಲ್ಲಿಸಹುದಾಗಿದೆ. ನಿರಾಪೇಕ್ಷಣಾ ಪತ್ರಕ್ಕಾಗಿ **ದಿನಾಂಕ: 15.04.2023** ರೊಳಗಾಗಿ ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ಬೆಂಗಳೂರು–29 ಇವರಿಗೆ ಅರ್ಜಿ ಸಲ್ಲಿಸಿದಲ್ಲಿ ಡಿ.ಜಿ.ಟಿ. ನಿಯಮಾನುಸಾರ ಪರಿಶೀಲಿಸಿ ಅರ್ಹರಿದ್ದಲ್ಲಿ ಪತ್ರ ವಿತರಿಸಲಾಗುವುದು.

ಸಹಿ/–
ಆಯುಕ್ತರು

ವಾಸಾಸಂಇ/ವಾಪ್ರ/ಜಿಎ/002/2023–24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಎಸ್/03/01/3079 ದಿನಾಂಕ: 29–03–2023

ಸಾರ್ವಜನಿಕ ವಿಚಾರಣೆ ಬಗ್ಗೆ ಪ್ರಕಟಣೆ

ವಿಷಯ: ಆರ್ಥಿಕ ವರ್ಷ 24 ರ ಸಾಲಿಗೆ ಸೌರ ವಿದ್ಯುತ್ ಘಟಕಗಳ ಯೋಜನೆಗಳ (ಮೇಲ್ಛಾವಣಿ ಸೌರ ಘಟಕಗಳ ಯೋಜನೆಗಳೂ ಸೇರಿದಂತೆ) ಸಂಬಂಧ ದರ ನಿಗದಿಪಡಿಸಲು ಸಾರ್ವಜನಿಕ ವಿಚಾರಣೆ – ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಒಂದು ಚರ್ಚಾಪತ್ರವನ್ನು ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು **ಗುರುವಾರ ದಿನಾಂಕ: 13–04–2023ರಂದು ಬೆಳಿಗ್ಗೆ 11.00 ಗಂಟೆಗೆ, ಆಯೋಗದ ಕೋರ್ಟ್ ಹಾಲ್‌ನ ಒಂದನೆಯ ಮಹಡಿ, ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ.

ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ / ಅಭಿಪ್ರಾಯ / ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು.

ವಾಸಾಸಂಇ/ವಾ.ಪ್ರ/003/2023–24

GOVERNMENT OF INDIA
PRINCIPAL CHIEF COMMISSIONER OF INCOME TAX KARNATAKA & GOA REGION, BENGALURU
Central Revenue Building, No.1, Queen's Road, Bengaluru-01

F.No.3/SPP/CIT(J)/BLR/2023-24 Date: 06.04.2023

NOTICE FOR EMPANELMENT OF SPECIAL PUBLIC PROSECUTORS

1. The Pr. Chief Commissioner of Income Tax, Karnataka & Goa, **proposes to engage the services of 16 (Sixteen) Special Public Prosecutors to represent the Department before the "Economic Offence Court"/ "Courts of Session and its Subordinate Courts in the state of Karnataka & in the state of Goa.**
2. The terms of engagement are governed by the Instruction No.6/2016 dated 07/09/2016 of the Central Board of Direct Taxes (CBDT). The Advocates willing to be empanelled should send their application in the Prescribed Proforma "P-1". The above instruction, proforma and a checklist for submitting the application can be downloaded from www.incometaxbengaluru.org or can be collected from the address given below. The eligibility conditions is as per para 2.1 of the said instruction, which is *"The advocates who are eligible to appear before the Court and having minimum experience of 7 years as a practicing Advocate in criminal matters. Adequate experience of handling trials relating to Direct Taxes is desirable"* may apply to be empanelled as Special Public Prosecutors
3. The applicants are requested to follow the checklist before submission of their application. If any of the documents required to be filed is not enclosed with the application, such application will be treated as defective and liable to be rejected.
4. The present requirement is as under:

Stations where Session Courts are located	No. of SPPs required
Bengaluru & Tumkur	6
Belgaum	1
Bellary & Chitradurga	1
Dharwad, Hubli, Gadag & Karwar	3
Mangalore & Udupi	2
Mysore & Mandya	1
Panaji & Margao	2
Total	**16**

5. It is preferable if the applicants are stationed at the specified stations mentioned above for the sake of better representation of the case and coordination.
6. The number of Special Public Prosecutors proposed to be engaged can be increased depending upon further requirement.
7. The applicants should furnish their email-ID, Phone/Mobile numbers for contact and further communication.
8. **The applicants may contact the following Officers for any clarification in this matter.**

Sri. Medehal Sreeram Income Tax Officer (Judl.) -1 Room No.115, 1st Floor, C.R. Building, Bengaluru. Phone No. 080-22869280 Mobile no. 8762301196	**Smt. Bharathi Ramakrishnan** Income Tax Officer (HQ) (Judl.) Room No.120, 1st Floor, C. R. Building, Bengaluru. Phone No. 080-22868904 Mobile No. 8762300347

9. **The application in duplicate in a sealed envelope should reach the following address on or before 08/05/2023 by 6.00 pm. The application should be in hard copy only. The application filed through any other mode like email, fax etc will not be considered as valid application.**

Commissioner of Income Tax(Judicial),
Central Revenue Building, 1st Floor, Queens Road, Bengaluru-560001,
Karnataka **Email:bangalore.cit.judicial@incometax.gov.in**



ಮತ್ತೊಂದು ಎಫ್‌ಐಆರ್: ಸಚಿವ ಮುನಿರತ್ನಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಮುದ್ವೇಷದ ಭಾಷಣ ಹಾಗೂ ಕೋಮು ಗಲಭೆಗೆ ಪ್ರಚೋದನೆ ನೀಡಿದ ಆರೋಪದಡಿ ಸಚಿವ ಮುನಿರತ್ನ ಅವರ ವಿರುದ್ಧ ಜಾಲಹಳ್ಳಿ ಠಾಣೆಯಲ್ಲಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

'ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯೊಬ್ಬರು ನೀಡಿರುವ ದೂರು ಆಧರಿಸಿ ಸಚಿವ ಮುನಿರತ್ನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಪ್ರಕರಣದ ವಿಚಾರಣೆಗಾಗಿ ಶುಕ್ರವಾರ ಬೆಳಿಗ್ಗೆ ಠಾಣೆಗೆ ಹಾಜರಾಗುವಂತೆ ಮುನಿರತ್ನಗೆ ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಮಿಳು ಭಾಷಿಕರು ಮತ್ತು ಕನ್ನಡಿಗರ ಮಧ್ಯೆ ಸಂಘರ್ಷಕ್ಕೆ ಎಡೆ ಮಾಡುವಂಥ ಪ್ರಚೋದನಾಕಾರಿ ಭಾಷಣ ಮಾಡಿರುವ ಮುನಿರತ್ನ, ಅಲ್ಪಸಂಖ್ಯಾತ ಕ್ರೈಸ್ತ ಸಮುದಾಯದವರನ್ನು ಹೊಡೆದು ಓಡಿಸಿ ಎಂಬುದಾಗಿ ಮಾತನಾಡಿದ್ದಾರೆ. ಕೋಮುದ್ವೇಷದ ಹೇಳಿಕೆನೀಡಿ ಸಮುದಾಯದ ಗೌರವ ಹಾಗೂ ಹಕ್ಕುಗಳಿಗೆ ಚ್ಯುತಿ ತಂದಿದ್ದಾರೆ' ಎಂಬುದಾಗಿ ದೂರು ದಾರರು ಆರೋಪಿಸಿದ್ದಾರೆ. ಮುನಿರತ್ನ ಅವರ ಭಾಷಣದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದನ್ನೂ ಪುರಾವೆಯಾಗಿ ಪರಿಗಣಿಸಲಾಗಿದೆ. ಮುನಿರತ್ನ ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಮೂಲಗಳು ಹೇಳಿವೆ.

ಇದೇ ಆರೋಪಕ್ಕೆ ಸಂಬಂಧಪಟ್ಟಂತೆ ಚುನಾವಣಾಧಿಕಾರಿ ನೀಡಿದ್ದ ದೂರಿನ ಅನ್ವಯ ಮುನಿರತ್ನ ವಿರುದ್ಧ ಮೊದಲ ಎಫ್‌ಐಆರ್ ದಾಖಲಾಗಿತ್ತು.

ಜಮೀರ್ ವಿರುದ್ಧ ಎಫ್‌ಐಆರ್ ತಡೆ ನೀಡಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಚಾಮರಾಜಪೇಟೆ ಕ್ಷೇತ್ರದ ಶಾಸಕ ಬಿ.ಝಡ್ ಜಮೀರ್ ಅಹ್ಮದ್ ಖಾನ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದಾಖಲಿಸಿರುವ ಎಫ್‌ಐಆರ್‌ಗೆ ತಡೆ ನೀಡಲು ಹೈಕೋರ್ಟ್ ನಿರಾಕರಿಸಿದೆ.

'ನನ್ನ ವಿರುದ್ಧ ಎಸಿಬಿ ದಾಖಲಿಸಿರುವ ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಕೋರಿ ಜಮೀರ್ ಅಹ್ಮದ್ ಖಾನ್ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಜಾಗೊಳಿಸಿದೆ. ವಿಸ್ತೃತ ಆದೇಶ ಇನ್ನಷ್ಟೇ ಲಭ್ಯವಾಗಬೇಕಿದೆ.

ಪ್ರಕರಣವೇನು?: ಆದಾಯ ಮೀರಿದ ಆಸ್ತಿಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಜಮೀರ್ ಅಹ್ಮದ್ ಖಾನ್ ಮನೆ ಮೇಲೆ ದಾಳಿ ನಡೆಸಿದ್ದ ಎಸಿಬಿ, 2022ರ ಮೇ ತಿಂಗಳಲ್ಲಿ ಎಫ್‌ಐಆರ್ ದಾಖಲಿಸಿತ್ತು. 'ಶಾಸಕರು ಆದಾಯ ಮೀರಿ ₹ 87 ಕೋಟಿ ಹೆಚ್ಚುವರಿ ಆಸ್ತಿ ಗಳಿಸಿರುವ ಅಂಶ ದಾಳಿ ವೇಳೆ ಪತ್ತೆಯಾಗಿದೆ' ಎಂದು ತಿಳಿಸಿತ್ತು.

ವಿಚಾರಣೆ ವೇಳೆ ಜಮೀರ್ ಪರ ವಕೀಲರು, 'ಎಫ್‌ಐಆರ್ ದಾಖಲಿಸುವ ಮುನ್ನ ತನಿಖಾ ಸಂಸ್ಥೆ ಪ್ರಾಥಮಿಕ ವಿಚಾರಣೆ ನಡೆಸುವುದು ಕಡ್ಡಾಯ. ಆದರೆ, ಈ ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಎಸಿಬಿ ನೇರವಾಗಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದೆ. ಅರ್ಜಿದಾರರು ಆದಾಯ ಮೀರಿ ಅಕ್ರಮವಾಗಿ ಆಸ್ತಿ ಸಂಪಾದನೆ ಮಾಡಿದ್ದಾರೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯವು (ಇ.ಡಿ) ವರದಿ ಸಲ್ಲಿಸಿತ್ತು. ಆ ವರದಿ ಆಧರಿಸಿ ಎಸಿಬಿ ಎಫ್‌ಐಆರ್ ದಾಖಲಿಸಿದೆ. ಇದು ಕಾನೂನುಬಾಹಿರ ಕ್ರಮ. ಆದ್ದರಿಂದ, ಎಫ್‌ಐಆರ್‌ಗೆ ತಡೆ ನೀಡಬೇಕು' ಎಂದು ಕೋರಿದ್ದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಲೋಕಾಯುಕ್ತ ಪರ ವಕೀಲರು, 'ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸುವ ಮುನ್ನ ಪ್ರಾಥಮಿಕ ವಿಚಾರಣೆ ನಡೆಸುವ ಅಗತ್ಯವೇನೂ ಇಲ್ಲ. ಹಾಗಾಗಿ, ಎಸಿಬಿಯು ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಕ್ರಮ ಕಾನೂನು ಬದ್ಧವಾಗಿದ್ದು, ತಡೆ ನೀಡಬಾರದು' ಎಂದು ಕೋರಿದ್ದರು.

ಡಿಕೆಶಿ ಅಕ್ರಮ ಆಸ್ತಿ ಆರೋಪ: ಸಿಬಿಐ ತನಿಖೆ ತಡೆ ವಿಸ್ತರಣೆ

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಲಾಗಿರುವ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ಇದೇ 13ರವರೆಗೆ ವಿಸ್ತರಿಸಿದೆ.

ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಚಾರಣೆ ನಡೆಸುವ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕ ಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. 'ಸಿಬಿಐ ದಾಖಲಿಸಿರುವ ಈ ಎಫ್‌ಐಆರ್ ಕಾನೂನುಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಸಿಬಿಐ ತನಿಖೆಗೆ ಹೈಕೋರ್ಟ್ 2023ರ ಫೆಬ್ರುವರಿ 10ರಂದು ಮಧ್ಯಂತರ ತಡೆ ನೀಡಿತ್ತು.

ಬಂಡಿಗೆ ಜಾಮೀನು

ಹೈದರಾಬಾದ್: 10ನೇ ತರಗತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿತರಾಗಿದ್ದ ತೆಲಂಗಾಣ ಬಿಜೆಪಿ ಘಟಕದ ಅಧ್ಯಕ್ಷ ಬಂಡಿ ಸಂಜಯ್ ಕುಮಾರ್ ಅವರಿಗೆ ಗುರುವಾರ ಜಾಮೀನು ದೊರೆತಿದೆ.



ನಗರದಲ್ಲಿ ಗುರುವಾರ ಬೆಂಗಳೂರು ವಕೀಲರ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ವಿವೇಕ್ ಸುಬ್ಬಾರೆಡ್ಡಿ, ಪ್ರಸನ್ನ ಬಿ.ವರಾಳೆ, ಪ್ರಭುಲಿಂಗ ನಾವದಗಿ, ಟಿ.ಜಿ. ರವಿ ಇದ್ದಾರೆ –ಪ್ರಜಾವಾಣಿ ಚಿತ್ರ

'ವಿಚಾರಣಾ ನ್ಯಾಯಾಲಯದ ಅನುಭವ ಬದುಕಿಗೆ ತಿರುವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್, ಸುಪ್ರೀಂಕೋರ್ಟ್‌ಗಳಲ್ಲಿ ವಕೀಲ ವೃತ್ತಿ ಆರಂಭಿಸುವ ಮೊದಲು ವಿಚಾರಣಾ ನ್ಯಾಯಾಲಯಗಳಲ್ಲಿ ಕನಿಷ್ಠ ಎರಡು ವರ್ಷ ಅನುಭವ ಪಡೆಯಬೇಕು' ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಸಲಹೆ ನೀಡಿದರು.

ಬೆಂಗಳೂರು ವಕೀಲರ ಸಂಘ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

'ಎಲ್ಲೇ ಹೋದರೂ ಜನ್ಮಭೂಮಿಯ ನಂಟು ಬಿಡುವುದಿಲ್ಲ. ಬೆಂಗಳೂರು ವಕೀಲರ ಸಂಘ ಆಗ್ನೇಯ ಏಷ್ಯಾದಲ್ಲೇ ಅತಿದೊಡ್ಡ ವಕೀಲರ ಸಂಘ ಎಂಬ ಹೆಗ್ಗಳಿಕೆ ಪಡೆದಿದೆ. ಅಂತಹ ಸಂಘ ತಮ್ಮ ವೃತ್ತಿ ಜೀವನಕ್ಕೆ ಜನ್ಮ ನೀಡಿದೆ ಎನ್ನುವುದನ್ನು ಸದಾ ಸ್ಮರಿಸುವೆ. ಹೈಕೋರ್ಟ್‌ನಲ್ಲಿ ವಕೀಲಿಕೆ ಆರಂಭಿಸಲು ಬಂದಾಗ ಹಿರಿಯ ವಕೀಲರ ಸಲಹೆಯಂತೆ ವಿಚಾರಣಾ ನ್ಯಾಯಾಲಯಕ್ಕೆ ತೆರಳಿದೆ. ಅದು ವೃತ್ತಿಜೀವನಕ್ಕೆ ದೊಡ್ಡ ತಿರುವು ನೀಡಿತು' ಎಂದು ಗತ ಘಟನೆಗಳನ್ನು ಮೆಲುಕು ಹಾಕಿದರು.

'ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ, ವೃತ್ತಿಬದ್ಧತೆ, ಪರಿಶ್ರಮ, ಹಿರಿಯರಿಗೆ ನೀಡುವ ಗೌರವ ಪ್ರಮುಖ ಪಾತ್ರ ವಹಿಸುತ್ತವೆ. ಎಂತಹ ಕಠಿಣ ಪರಿಸ್ಥಿತಿ ಎದುರಾದರೂ ಮಾನವೀಯ ಮೌಲ್ಯಗಳನ್ನು ಬಿಡಬಾರದು. ನಡೆದು ಬಂದ ಹಾದಿ, ನೆರವಾದವರನ್ನು ಮರೆಯಬಾರದು' ಎಂದರು.

ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ, 'ಅರವಿಂದ್ ಕುಮಾರ್ ಅವರು ನ್ಯಾಯಾಂಗದ ಆಸ್ತಿ, ಎಂತಹ ಸಮಯದಲ್ಲೂ ನ್ಯಾಯಪರತೆ ಬಿಟ್ಟು ನಡೆದಿಲ್ಲ. ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ, ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಅವರ ಕಾರ್ಯ ವೈಖರಿಯೇ ಸಾಕ್ಷಿ' ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ, ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ ಮತ್ತು ಇತರರು ಉಪಸ್ಥಿತರಿದ್ದರು.

ಬೆಟ್ಟಿಂಗ್ ಜಾಹೀರಾತು: ಮಾಧ್ಯಮ ಸಂಸ್ಥೆಗಳಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಟ್ಟಿಂಗ್ ವೆಬ್‌ಸೈಟ್‌ಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ಪ್ರಕಟಿಸದಂತೆ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಗುರುವಾರ ಮಾಧ್ಯಮ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿದೆ.

ಕೆಲ ದಿನಗಳ ಹಿಂದೆ ಮುಖ್ಯವಾಹಿನಿಗೆ ಸೇರಿದ ಇಂಗ್ಲಿಷ್ ಮತ್ತು ಹಿಂದಿ ದಿನಪತ್ರಿಕೆಗಳು ಈ ಬಗೆಯ ಜಾಹೀರಾತು ಪ್ರಕಟಿಸಿದ್ದವು.

ಇದನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವಾಲಯವು ಅಧಿಕೃತ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದೆ.

'ಬೆಟ್ಟಿಂಗ್ ವೆಬ್‌ಸೈಟ್‌ಗಳಿಗೆ ಸಂಬಂಧಿಸಿದ ಜಾಹೀರಾತು ಹಾಗೂ ಅವುಗಳ ಕುರಿತಾದ ಪ್ರಚಾರದ ವಸ್ತುಗಳನ್ನು ಪ್ರಕಟಿಸದಂತೆ ದಿನಪತ್ರಿಕೆ, ಸುದ್ದಿ ವಾಹಿನಿ, ಆನ್‌ಲೈನ್ ಸುದ್ದಿ ಮಾಧ್ಯಮಗಳಿಗೆ ಸೂಚಿಸಲಾಗಿದೆ. ಇದನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕು' ಎಂದು ತಿಳಿಸಿದೆ.

ತನ್ನ ವೆಬ್‌ಸೈಟ್‌ನಲ್ಲೇ ಕ್ರೀಡಾ ಲೀಗ್‌ವೊಂದನ್ನು ವೀಕ್ಷಿಸುವಂತೆ ಬೆಟ್ಟಿಂಗ್ ವೇದಿಕೆಯೊಂದು ಜಾಹೀರಾತಿನ ಮೂಲಕ ಪ್ರೇಕ್ಷಕರನ್ನು ಪ್ರೋತ್ಸಾಹಿಸಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಸಚಿವಾಲಯವು ಇದು 1957ರ ಹಕ್ಕುಸ್ವಾಮ್ಯ ಕಾಯ್ದೆಯ ಉಲ್ಲಂಘನೆಯಾಗಲಿದೆ ಎಂದೂ ಹೇಳಿದೆ.

'ಬೆಟ್ಟಿಂಗ್ ಹಾಗೂ ಜೂಜಾಟ ಕಾನೂನುಬಾಹಿರ ಚಟುವಟಿಕೆಗಳಾಗಿದ್ದು, ಇವುಗಳ ಕುರಿತು ಯಾವುದಾದರೂ ಮಾಧ್ಯಮಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಜಾಹೀರಾತು ಪ್ರಕಟಿಸುವುದು ವಿವಿಧ ಕಾಯ್ದೆಗಳ ಉಲ್ಲಂಘನೆಯಾಗಲಿದೆ' ಎಂದೂ ತಿಳಿಸಿದೆ.

ಮೆಟ್ರೊ ಫೀಡರ್ ಸೇವೆಗೆ 16 ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ–ಕೆ.ಆರ್.ಪುರ ಮೆಟ್ರೊ ರೈಲುನಿಲ್ದಾಣಗಳ ನಡುವೆ ಎಂಟು ಸಾಮಾನ್ಯ ಬಸ್ ಮತ್ತು ಎಂಟು ಹವಾ ನಿಯಂತ್ರಿತ ವಜ್ರ ಬಸ್‌ಗಳ ಸೇವೆಯನ್ನು ಬಿಎಂಟಿಸಿ ಆರಂಭಿಸಿದೆ.

ಸಾಮಾನ್ಯ ಬಸ್‌ಗಳು ಪ್ರತಿ 5 ನಿಮಿಷಕ್ಕೊಂದು ತೆರಳುತ್ತಿದ್ದು, ದಿನಕ್ಕೆ 262 ಟ್ರಿಪ್‌ಗಳನ್ನು ನಿರ್ವಹಿಸುತ್ತಿವೆ. ₹10 ಪ್ರಯಾಣ ದರವನ್ನು ನಿಗದಿ ಮಾಡಲಾಗಿದೆ ಎಂದು ಬಿಎಂಟಿಸಿ ವಿವರಿಸಿದೆ.

ಎಂಟು ವಜ್ರ ಬಸ್‌ಗಳು 10ರಿಂದ 15 ನಿಮಿಷಕ್ಕೊಂದರಂತೆ ತೆರಳುತ್ತಿದ್ದು, ದಿನಕ್ಕೆ 134 ಸುತ್ತುವಳಿಗಳನ್ನು ನಿರ್ವಹಿಸುತ್ತಿವೆ. ₹20 ಪ್ರಯಾಣ ದರ ನಿಗದಿ ಮಾಡಲಾಗಿದೆ ಎಂದೂ ತಿಳಿಸಿದೆ.

CONNECT ಕ್ಲಾಸಿಫೈಡ್ಸ್

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು ಶ್ರೀ ಗುರುರಾಜ ಜಿ.ಕೆ.ಡಿ. ಗುರುದಾಸನ್
Mob.: 98441 06430 / 81579 14600

INDIAN RAILWAYS - SOUTH STAR RAIL
07 MAY | 15 DAYS 3AC RS.47700
9015 500 200 RAILTOURISM.COM

First Time in BINNY MILL GROUND Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
Binny Mill Ground, Near ETA Mall, Tank Bund Road, Bengaluru -23
AQUA TUNNEL SHOW
Complete Family Shopping & Amusement Exhibition
VISIT TODAY | Daily : 4pm - 9pm | Call : 8904727123

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

STAR INFRATECH
A Leading Construction company in Karnataka looking for talent acquisition for the following positions
Project Manager: BE(Civil)- Above 15 Years Experience(Buildings)
Deputy Project Manager: BE(Civil)– Above 10 Yrs Exp. (Buildings)
Assistant Project Manager: BE(Civil)– Above 8 Yrs Exp.(Buildings)
Quantity Surveyor: BE (Civil)– Above 5 Yrs Exp.
Quality Control: BE (Civil)– Above 5 Yrs Exp.
Sr.Engineers: BE (Civil)– Above 6 Yrs Exp.
Engineer: BE (Civil)– Above 3 Yrs Exp.
Sr.Executive (Accounts): Above 5 Yrs Exp.
Surveyors: Above 5 Yrs Exp. (Buildings)
Accounts Executives: Above 2 Yrs Exp.
HR/Admin Executives: Above 3 Yrs Exp.
Data Entry Operator, Draftsman with excellent skill in preparing govt. letters in Kannada & English
Accounts & Civil Engineers (Freshers) can also apply. Experience in handling major projects are highly preferable. Location all over Karnataka.
Walk In Interview:
Date: 10.04.2023 (Timings 11 Am To 4 PM)
#177, 6th Main, KEB Layout, Sanjay Nagar, Bangalore-560094.
Ph:+91 8023412304/ 05, Email: hr.starinfratech09@gmail.com

Teachers/ Professors

CAMLIN ENGLISH SCHOOL 6th 'C' Main 4th Cross Hampinagara Vijayanagar 2nd Stage Bangalore-104 REQUIRES TEACHERS for the Year 2023-24 B.Sc.,B.Ed. (Maths Science) B.A.,B.Ed. (English Kannada Hindi, Social) TCH/D.Ed., NTT, Computers, Drawing SECURITYGUARD, ATTENDER/OFFICE BOY AYA, DRIVER. Contact immediately/ Apply: 080-23301363

TRAINED AND Experienced Post-graduate Teachers PRIMARY:Maths,Hindi, HIGH SCHOOL: Maths,Science, English,HM, Accountant,Coding and CS.Jnanabharathi. 9035033560, 8867569333

VISHWABHARATHI PUBLIC HIGH SCHOOL No. 142, 1st A Main Road, Shakthi Garden Moodalpalya, Nagarbhavi 1st Stage, Bangalore-560072. REQUIRED TEACHERS for Kannada, Social Science, Mathematics Physical Education, BA, BSc, B.Ed for Primary and high school. Contact immediately: 7406535818/ 9739395399.

Wanted

WANTED AGENTS Recruitment Executive For Anekal Bommanahalli Area, Salary Monthly-15000/- Interested Candidate Call Me: 9900265653

WANTED HELPERS
With or without ITI
Male / Female
Pack N Fab industries
Manufacturing of Carton Boxes & Printing
WALK IN INTERVIEW on 7th to 10th April 2023 at 11-00 am to 5-00 pm
Factory situated in Magadi Main Road (Near Embassy School) Chikkagolarahatti Bangalore - 560091
Contact : Mr. PANDURANGARAO 9341242380
Upendra - 9535870335
Krishna - 9845023666

Receptionist/ Secretary

HAEID @ Rajajinagar Requires career oriented Experienced Front Office Executive with exposure to Accounts, Computers, Construction,Secretarial & Travel task for Immediate Placement.Contact +91 98800 07134. Handsome Renumeration.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

REAL ESTATE SELLING

Flat

Kengeri

20X30 W/F Society site in Srigandakaval 3 bhk semi furnished flat-in BDA Indraprasta kengeri 9916693999

House

Banashankari

FOR SALE 30X56 East 2BHK X 2House, A-Khatha, Near BhuvaneshwariNagar, BSK 3 Stage. 7483881567

Industrial & Factory

Nelamangala

SALE, NELAMANGALA, 30000 sqft Land (28 Guntas), 300 meters from Bengaluru-Mangaluru Highway, before Toll-plaza. 9035767333, 9242251819

Residential/ Commercial

Sadashiva Nagar

PRIME LOCATION OPPOSITE PARK VACANT PLOT 60X45 ACROSS SADASHIVANAGAR SWIMMING POOL SOUTH FACING CONTACT OWNER 9844018823

REAL ESTATE BUYING

Industrial & Factory

Out-Station

WANTED WAREHOUSE OR GODOWN FOR RENT 15,000 to 20,000 Sqft. at BELLARY and DAVANAGERE. 9611135365.

Sites

Anjanapura

WANTED BDA-SITES @ Banashankari VI Stage Anjanapura Vishveshwaraiah Layout`20X30 30X40 40X60`50X80 Clear`Titles Immediat Settlement`Call Owners only 9945610779

RENTAL PROPERTIES

Accommodation Available

House

3BHK INDEPENDENT Floor, Rent/ Lease, 36000, Vaastu, Vidhya Vardhaka School, Orion Mall, RAJAJINAGAR 1st 'N' Block: 9353053355

Service Apartments

FULLY furnished Apartment, 3BHK with maid's room and toilet for Rent on Miller's Road, Benson Town, Rs.1.2L per month. 9980015439

PERSONAL

Change of Name

I, LAKSHMI BETANABELLI, R/a. No. G202, G- Block, 2nd Floor, Rohan Upavan Kyalasanahalli, Bangalore-560077, have changed my name to LAKSHMI KUMARI RAWATH, vide affidavit dated 05.04.2023 before notary Srinatha D.R. Bangalore.

I, SANGITA Spouse of #14671125P, HAV Vinod Kumar Gupta, R/a. #93/11, Army Quarters, Old Airport Road, Agram Post, Bangalore-07, changed my name from SANGITA to SANGITA GUPTA affidavit 06.04.2023 notary A.R. Muneer Ahmed Bangalore.

I GOVINDAIAH R/a. #216, Magadi main road, Machohalli colony, Bengaluru Rural- 560091 Changed my Name to GOVINDAPPA Vide Affidavit Dated 06/04/2023 before Notary Devaraja. E Bangalore

I MAHESHA. M R/a, Machohalli colony, Bapagrama post, Machohalli, Bengaluru Rural- 560091 Changed my Name to MAHESH. M Vide Affidavit Dated 06/04/2023 before Notary Devaraja. E Bangalore

I, K Leelamani W/o Padmanabhan Kartha T P R/o 751, 7th B Main , HRBR layout, 1st Block, Kalyan Nagar B'lore- 560043 have changed my name to Leelamani K for all purposes

DH ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA & PRAJAVANI ALL KARNATAKA
@ 800/-* Per Sqcm Single Column
@ 900/-* Per Sqcm Multi Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ.
ಹೆಚ್–ಜಿಎಸ್–ಯುಬಿಎಲ್–08–2022–23
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಅಮೃತ್ ಭಾರತ್ ನಿಲ್ದಾಣ ಯೋಜನೆ (ಹಂತ–1) ಅಡಿಯಲ್ಲಿ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಗದಗ, ಕೊಪ್ಪಳ, ಮುನಿರಾಬಾದ್, ಹೊಸಪೇಟೆ ಮತ್ತು ಬಳ್ಳಾರಿ ರೈಲ್ವೆ ನಿಲ್ದಾಣಗಳ (5 ಸಂಖ್ಯೆಗಳು) ಆಧುನೀಕರಣ (ಸಮಗ್ರ ಕಾಮಗಾರಿ).	ರೂ. 43,27,21,595/–
2	ಹುಬ್ಬಳ್ಳಿ ವಿಭಾಗ : ಅಮೃತ್ ಭಾರತ್ ನಿಲ್ದಾಣ ಯೋಜನೆ (ಹಂತ–1) ಅಡಿಯಲ್ಲಿ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಂತೆ ಧಾರವಾಡ, ವಿಜಯಪುರ, ಆಲಮಟ್ಟಿ, ಬಾಗಲಕೋಟೆ ಮತ್ತು ಬಾದಾಮಿ ರೈಲ್ವೆ ನಿಲ್ದಾಣಗಳ (5 ಸಂಖ್ಯೆಗಳು) ಆಧುನೀಕರಣ (ಸಮಗ್ರ ಕಾಮಗಾರಿ).	ರೂ. 25,92,48,477/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25–04–2023 ರಂದು 11:00 ಗಂಟೆಯವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಯೋಜನಾ ವ್ಯವಸ್ಥಾಪಕರು / ಗತಿ ಶಕ್ತಿ ಹುಬ್ಬಳ್ಳಿ
ಪಿಯುಬಿ/10/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

PUBLIC NOTICE
It is hereby notified that, my clients have agreed to purchase the Schedule property from its owners (i) Sri.K.V.Srinivasa, (ii) Sri.K.V.Narayanasa, (iii) Sri.K.V.Maruthi, (iv) Sri.K.V.Ravi Kumar and (v) Sri.K.V.Srihari, all are sons of late K.G.Venkusa.
If any person/s have any manner of right, title, interest or claim or charge or lien over the Schedule property or otherwise have any lawful objection/s for sale of the Schedule property by the aforesaid owners, they are hereby called upon to file their objections in writing, along with the photocopies of documents on which they rely, with the undersigned, within 14 days from the date of publication of this notice. Objection/s received thereafter will not be binding on my clients.
SCHEDULE
All that piece and parcel of the residential property bearing Municipal No.96 (old No.95 & 96), PID No.46-4-96, measuring East to West 60ft and North to South 108ft, situated at 2nd Main Road, Chamarajpet, Bangalore and bounded on:
East by : Property belongs to K.G.Rajaram
West by : Property belongs to K.G.Lakshman
North by : 2nd Main Road
South by : Conservancy
Sd/- Goutam Chand S.F Advocate
Goutam Associates
No.60, 2nd Floor, Kanakapura Road, Basavanagudi, Bangalore – 560 004

PUBLIC NOTICE
TO WHOMSOEVER IT MAY CONCERN
My client has negotiated to purchase Schedule A and B Property and he has been duly informed and represented that the Schedule A and B Property is having clear and marketable title.
Any persons claiming to have any right or claims or objection, may lodge their objections or claim along with supporting documents with the undersigned within 07 days from the date of publication of this notice.
If no such objection or claims is received within the prescribed time, my client will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.
SCHEDULE-A PROPERTY
All that piece and parcel of immovable residential property bearing No.175, having PID No.100-767-175 Rajamahal Vilas II Stage, Bangalore-560094 consisting of land measuring East to West : 16.8 Meters and North to South 18.30 Meters, totally measuring about 307.44 Sq.Meters along with a residential building constructed thereon measuring about 1962 sq. ft, and bounded on the
East by : Property bearing Site. No.176
West by : Property bearing Site. No.174
North by : Property bearing Site. No.161 and
South by : 11th Cross Road
SCHEDULE -B PROPERTY
All that piece and parcel of immovable property bearing No.176 and South East Portion of Site No.160 having PID No.100-767-176, Rajamahal Vilas II Stage Bangalore-560094 measuring (1) Item No.1 East to West 25.00 + 20.30/2 Mtrs =22.65 Meters, North to South 18.40 Meters totally ad measuring about 416..76 Meters (2) Item No.2: East to West 3.50+4.75/2 = 4.125 Meters, North to South : 5.85 Meters totally ad measuring about 24.13 Sq.Meters and Item No.1 and 2 totally measuring 440.89 Sq. Meters along with a residential building constructed thereon consisting of Ground Floor measuring 2,150 square feet and First Floor Measuring 1,064 Square feet, totally measuring 3214 sq ft, katha of the aforesaid properties has been amalgmated Vide Order No.100/KTR/620/05-06 and MR.No.111/05-06 Dated 23-05-2005 as per BBMP Records No.176, RMV II Stage HIG House, Ward No.18 Ward Name : Radhakrishna Temple PID No.100-767-176 and bounded as follows:
East by : 1st Main Road
West by : Site No.175 and Remaining Portion of Site No.160
North by : Site No.160
South by : 11th Cross Road
B.T.HARISH, Advocate
Ground Floor, No.230, 39th 'C' Cross, 9th Main, 5th Block, Jayanagar, Bangalore-560041, 98459-22769
Date: 06-04-2023

ಸಾರ್ವಜನಿಕ ಪ್ರಕಟಣೆ
ಮೆ.ಜಗನ್ಮಯಿ ರೀಜೆನ್ಸಿ ಪಾರ್ಕ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಕರ್ನಾಟಕದ ರಾಜ್ಯ ಪರಿಸರ ಪ್ರಭಾವದ ಮೌಲ್ಯಮಾಪನ ಪ್ರಾಧಿಕಾರವು (ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ ಸ್ಥಾಪಿಸಲ್ಪಟ್ಟಿದೆ) ಪ್ಲಾಟ್ ನಂ.327, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೊಮ್ಮಸಂದ್ರ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಇಲ್ಲಿ ಉದ್ದೇಶಿತ ಕಚೇರಿ ಕಟ್ಟಡದ ನಿರ್ಮಾಣಕ್ಕಾಗಿ ಪರಿಸರ ಅನುಮತಿಯನ್ನು ನೀಡಿದೆ. ಫೈಲ್ ನಂ. ಎಸ್‌ಇಐಎಎ 47 ಸಿಐಎನ್ 2020 ದಿನಾಂಕ: 01.08.2022 ಮತ್ತು ತಿದ್ದುಪಡಿ ಪ್ರಕಟಿತ ದಿನಾಂಕ 29.03.2023 ಹಾಗೂ ಅನುಮತಿ ಪತ್ರದ ಪ್ರತಿಯನ್ನು ಪರಿವೇಶ್ ಪೋರ್ಟಲ್– ಎಸ್‌ಇಐಎಎ ಕರ್ನಾಟಕ ವೆಬ್‌ಸೈಟ್ http://environmentclearance.nic.in ನಲ್ಲಿ ಕಾಣಬಹುದಾಗಿದೆ.

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. ಬಿಇ–29–2022–23–ಓಟ–36, 39, 40
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಓಟ	ಕೆಲಸದ ಹೆಸರು	ಅಂದಾಜು ಮೌಲ್ಯ
36	ಕೃಷ್ಣರಾಜಪುರಂ ಶೆಡ್ – ಇ–70 ವಾಲ್ವ್‌ಗಳ ಪರೀಕ್ಷೆಗಾಗಿ ಟೆಸ್ಟ್ ರಿಗ್‌ಗಾಗಿ ವಿದ್ಯುತ್ ವ್ಯವಸ್ಥೆಗಳು, ಡಬ್ಲ್ಯುಎಪಿ–7/ಡಬ್ಲ್ಯುಎಜಿ–9 ವಿದ್ಯುತ್ ಲೋಕೋಮೋಟಿವ್‌ಗಳ ಬ್ರೇಕ್ ವ್ಯವಸ್ಥೆ ಮತ್ತು ಕಾಮಗಾರಿಗಳೊಂದಿಗೆ ವ್ಹೀಲ್ ಲೇತ್ ಅಂಡರ್ ಫ್ಲೋರ್ (ಬ್ರಾಡ್ ಗೇಜ್).	ರೂ. 16,12,085/–
39	ವೈಟ್‌ಫೀಲ್ಡ್, ಬಂಗಾರಪೇಟೆ, ಮಾಲೂರು, ಮಂಡ್ಯ, ಚನ್ನಪಟ್ಟಣ, ಕೆಂಗೇರಿ, ದೊಡ್ಡಬಳ್ಳಾಪುರ, ತುಮಕೂರು, ಚನ್ನಸಂದ್ರ, ರಾಮನಗರಂ, ಮಲ್ಲೇಶ್ವರಂ ನಿಲ್ದಾಣಗಳಲ್ಲಿ ನಿಲ್ದಾಣ ಕಟ್ಟಡ, ಸರ್ಕ್ಯುಲೇಟಿಂಗ್ ಪ್ರದೇಶ, ಮುಂಭಾಗ, ನಿರೀಕ್ಷಣಾ ಕೊಠಡಿ, ಇತ್ಯಾದಿಗಳ ಉದ್ದೇಶಿತ ಸುಧಾರಣೆಗಳು ಮತ್ತು ಉನ್ನತೀಕರಣಕ್ಕಾಗಿ ವಿದ್ಯುತ್ ವ್ಯವಸ್ಥೆಗಳು.	ರೂ. 52,67,576/–
40	ಎಡಿಇಎನ್ ಧರ್ಮಪುರಿ ಸೆಕ್ಷನ್, ಎಡಿಇಎನ್ ಯಶವಂತಪುರ ಸೆಕ್ಷನ್, ಹಿಂದೂಪುರ, ಯಲಹಂಕ, ಪೆನುಕೊಂಡ ನಿಲ್ದಾಣಗಳು ಮತ್ತು ಎಡಿಇಎನ್ ಬಂಗಾರಪೇಟೆ ಸೆಕ್ಷನ್‌ಗಳಲ್ಲಿ ಟ್ರ್ಯಾಕ್‌ಮೆನ್ ರೆಸ್ಟ್ ರೂಮ್‌ಗಳ ಉದ್ದೇಶಿತ ನಿರ್ಮಾಣಕ್ಕಾಗಿ ವಿದ್ಯುತ್ ವ್ಯವಸ್ಥೆಗಳು.	ರೂ. 33,92,872/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : ಓಟ ಸಂ. 36 ಮತ್ತು 40 ಗಳಿಗೆ 21–04–2023 ಮತ್ತು ಓಟ ಸಂ.39ಗೆ 28–04–2023 ರಂದು 11:00 ಗಂಟೆಗಳವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಬೆಂಗಳೂರು
ಪಿಯುಬಿ/07/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023–24
S.W.Railways SWRRLY SWRRLY

PUBLIC NOTICE
TO WHOMSOEVER IT MAY CONCERN
My client is negotiating to purchase the Schedule Property from Sri. M. MANJUNATHA @ M. MANJUNATHA REDDY, aged about 55 years, Son of Late G.Muniswamy Reddy, residing at No.471, Doddakannelli Village, Carmelaram Post, Varthur Hobli, Bangalore-560035, who has represented that she is having clear and marketable title over the Schedule Property.
Any persons claiming to have any right or claims or objection, may lodge their objections or claim along with supporting documents with the undersigned within 10 days from the date of publication of this notice.
If no such objection or claims is received within the prescribed time, my clients will proceed to complete the transaction. If any objection and claim is lodged beyond the prescribed period it shall not be reckoned and it shall be deemed that all objections and claims by whomsoever are waived.
SCHEDULE PROPERTY
All that piece and parcel of Immovable Property bearing Sy.No.104/1A, measuring 12.45 Guntas, (Out of 1 Acre 24.12 Guntas) situated at Dodda Kannelli Village, Varthur Hobli, Bangalore East Taluk, and bounded on the:-
East by : 20 Feet Wide Road,
West by : Private Property
North by: Property bearing Sy.No.97
South by : Remaining portion of Sy.No.104/1A and Site No.82/5
B. SRINIVAS, Advocate
"SUNDERA RAMA" No.230, 39th 'C' Cross, 9th Main, 5th Block, Jayanagar, Bangalore-560041, 9900148162
srinivasadvocate@gmail.com
Bangalore Date: 05-04-2023

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಫೋನ್: (ಕಚೇರಿ) +91–80–25711304, 25711164, 080–25702569
ಫ್ಯಾಕ್ಸ್: +91–80–25711420 ವೆಬ್‌ಸೈಟ್: www.nianp.res.in
ಜಾಹೀರಾತು ಸಂ. 11/ಎನ್‌ಐಎಎನ್‌ಪಿ/ಸಿಡಿಎನ್/ಏಪ್ರಿಲ್/2023
ಒಂದು ವರ್ಷದ ಅವಧಿಗಾಗಿ ಮಾಸಿಕ ರೂ.35,000/– ಸಂಭಾವನೆ ಆಧಾರದಲ್ಲಿ ಯಂಗ್ ಪ್ರೊಫೆಷನಲ್–2 ನಿಯೋಜನೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರವಾದ ಜಾಹೀರಾತು ನೋಡಲು, ದಯವಿಟ್ಟು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು 18.04.2023 ರಂದು ಬೆಳಗ್ಗೆ 10.00 ಗಂಟೆಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು.
ಡಿಜಿಟಲ್ ಸಹಿದಾರರು/– ಎಸ್. ಶಶಿಕಲಾ ಆಡಳಿತಾಧಿಕಾರಿ
ದಿನಾಂಕ: 05–04–2023

ಮಹದೇವಪುರ



ಐಟಿ–ಬಿಟಿಗಳ ತಾಣವಾಗಿದ್ದರೂ, ಗ್ರಾಮಗಳನ್ನು ಹೆಚ್ಚಾಗಿ ಹೊಂದಿರುವ ಮಹದೇವಪುರ ವಿಧಾನಸಭೆ ಕ್ಷೇತ್ರದಲ್ಲಿ ರಸ್ತೆ, ನೀರು ಸೇರಿದಂತೆ ಮೂಲಸೌಕರ್ಯಗಳ ಕೊರತೆ ಇದೆ. ಒಂದೆಡೆ 'ಹೈಟೆಕ್' ಮತ್ತೊಂದೆಡೆ ಸಮಸ್ಯೆಗಳ ಆಗರದಿಂದ ಜರ್ಜರಿತವಾಗಿದೆ.

ಯೋಗ್ಯ ರೀತಿ ಅಭಿವೃದ್ಧಿ ಬೇಕು



ಬೆಂಗಳೂರು ನಗರದ ಹೊರವಲಯದಲ್ಲಿರುವ ಮಹದೇವಪುರ ಕ್ಷೇತ್ರ ಐಟಿ-ಬಿಟಿ ಕಂಪನಿಗಳಿಗೆ ಪ್ರಸಿದ್ಧಿ. ರಾಜ್ಯದಲ್ಲಿ ಅತಿ ಹೆಚ್ಚು ತೆರಿಗೆಯನ್ನು ಸರ್ಕಾರದ ಬೊಕ್ಕಸಕ್ಕೆ ಸೇರಿಸುವ ಹಿರಿಮೆ ಈ ಕ್ಷೇತ್ರದ್ದು. ಆದರೆ ವೇಗವಾಗಿ ಬೆಳೆಯುತ್ತಿರುವ ನಗರೀಕರಣದಿಂದಾಗಿ ಮೂಲಸೌಕರ್ಯಗಳ ಕೊರತೆ ಇದೆ. ಸುಸಜ್ಜಿತವಾದ ಉದ್ಯಾನಗಳಿಲ್ಲ, ಆಟದ ಮೈದಾನಗಳಿಲ್ಲ, ಒಳಾಂಗಣ ಕ್ರೀಡಾಂಗಣಗಳಿಲ್ಲ ಮತ್ತು ಸಾರ್ವಜನಿಕ ಗ್ರಂಥಾಲಯಗಳಿದ್ದರೂ ಕಣ್ಣಿಗೆ ಕಾಣುತ್ತಿಲ್ಲ. ಸರ್ಕಾರಿ ಖಾಲಿ ಜಾಗಗಳನ್ನು ಶಾಸಕರು ಗುರುತಿಸಿ ಅವುಗಳನ್ನು ಯೋಗ್ಯರೀತಿಯಲ್ಲಿ ಅಭಿವೃದ್ಧಿಪಡಿಸಬೇಕು. ಈ ನಿಟ್ಟಿನಲ್ಲಿ ನವ ಶಾಸಕರು ದಿಟ್ಟ ಹೆಜ್ಜೆ ಇಡಬೇಕು.

ಸತೀಶ ವಿ., ಕಾಡುಗೋಡಿ, ವೈಟ್ ಫೀಲ್ಡ್

ಮೂಲಸೌಕರ್ಯ ಹೆಚ್ಚಲಿ



ಮಹದೇವಪುರ ಕ್ಷೇತ್ರ ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಿದ್ದು, ಅವುಗಳ ಅಭಿವೃದ್ಧಿಗೆ ಯೋಜನೆ ಸಿದ್ಧಪಡಿಸಬೇಕು. ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಗೋಮಾಳ ಜಮೀನುಗಳನ್ನು ಕಾಪಾಡಿಕೊಂಡು, ಪ್ರಾಥಮಿಕ ಆರೋಗ್ಯ ಕೇಂದ್ರ, ಬೆಂಗಳೂರು ಒನ್ ಕೇಂದ್ರ, ಸರ್ಕಾರಿ ಶಾಲೆ, ನಾಡ ಕಚೇರಿ ನಿರ್ಮಾಣ ಮಾಡಲು ಅನುವು ಮಾಡಬೇಕು. ವೃದ್ಧಾಪ್ಯ ವೇತನ, ಅಂಗವಿಕಲ, ವಿಧವೆಯರ ವೇತನ ಶಿಬಿರದಲ್ಲಿಯೇ ಸಿಗುವಂತೆ ಗಮನ ಹರಿಸಬೇಕು. ಗ್ರಾಮಗಳಲ್ಲಿನ ಮುಖ್ಯರಸ್ತೆ ಮತ್ತು ಉಪ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಸಂಚಾರಕ್ಕೆ ಮುಕ್ತ ಮಾಡಬೇಕು. ಜನವಸತಿ ಪ್ರದೇಶದಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು.

ಮಂಜುನಾಥ್, ಪಟ್ಟಂದೂರು ಅಗ್ರಹಾರ


ಪಾರದರ್ಶಕವಾಗಿರಲಿ



ನಮ್ಮದು ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ಪ್ರಜಾಪ್ರಭುತ್ವ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ನಡೆಸಿಕೊಳ್ಳಬೇಕು. ಶಾಸಕರು ಮುಖ್ಯವಾಗಿ ಮೂಲಸೌಕರ್ಯಗಳ ಕಡೆ ಒತ್ತು ಕೊಡಬೇಕು. ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಕೆರೆಗಳು, ರಾಜಕಾಲುವೆಗಳಿವೆ. ಇದನ್ನು ಉಳಿಸಿ ಬೆಳೆಸುವಲ್ಲಿ ಒತ್ತು ಕೊಡಬೇಕು. ಇದರಿಂದ ಹಿಂದಿನ ಬಾರಿ ಬಂದಂತಹ ಪ್ರವಾಹಗಳನ್ನು ತಡೆಯಬಹುದು. ಜನಸ್ನೇಹಿ ಶಾಸಕರ ಭವನ ಇರಬೇಕು. ಇದರಲ್ಲಿ ಪ್ರತಿಯೊಬ್ಬ ನಾಗರಿಕರಿಗೂ ತಮ್ಮ ಅಭಿಪ್ರಾಯ ತಿಳಿಸಲು ಮುಕ್ತ ಅವಕಾಶ ಕಲ್ಪಿಸಬೇಕು ಹಾಗೂ ಕೆಲಸಗಳು ಪಾರದರ್ಶಕವಾಗಿರಬೇಕು.

ಮಧು, ಬೆಳತ್ತೂರು

ಜಯನಗರ



ಪ್ರತಿಷ್ಠಿತ ಬಡಾವಣೆಗಳ ತಾಣವಾಗಿರುವ ಜಯನಗರ ವಿಧಾನಸಭೆ ಕ್ಷೇತ್ರ ಹಲವು ಮೊದಲುಗಳಿಗೆ ಪ್ರಸಿದ್ಧ. ಇಂತಹ ಕ್ಷೇತ್ರದಲ್ಲೂ ಮೂಲಸೌಕರ್ಯದ ಕೊರತೆಯೂ ಇದೆ. ಹಸಿರನ್ನು ಕಡಿತಗೊಳಿಸುವ ಕೆಲಸವೂ ಆಗುತ್ತಿದೆ. ಇದಕ್ಕೆಲ್ಲ ಪರಿಹಾರ ನೀಡಬೇಕೆಂಬುದು ನಾಗರಿಕರ ನಿರೀಕ್ಷೆ.

ಕಾಂಕ್ರೀಟೀಕರಣದ ಆತಂಕ



ಜಯನಗರದ ವಿಶಾಲವಾದ ಫುಟ್‌ಪಾತ್‌ಗಳಿಗೆ ಸೌಂದರ್ಯೀಕರಣದ ನೆಪದಲ್ಲಿ ಕಂಕಟ ಬಂದೊದಗಿದೆ. ಸುಲಭವಾಗಿ ಜನರು ಓಡಾಟುತ್ತಿದ್ದಂತ ಸ್ಥಳದಲ್ಲಿ ಅಡೆತಡೆಗಳು ನಿರ್ಮಾಣವಾಗುತ್ತಿದೆ. ಇದರಿಂದ ಮರಗಳಿಗೆ ಹಾನಿಯಾಗುತ್ತಿದ್ದು, ಹಸಿರು ಕಡಿಮೆಯಾಗುವ ಆತಂಕ ಮೂಡಿದೆ. ಮೀಡಿಯನ್‌ಗಳ ನಿರ್ಮಾಣವಾಗುತ್ತಿದ್ದು, ಹಸಿರು ಪ್ರದೇಶಗಳೆಲ್ಲ ಕಾಂಕ್ರೀಟ್‌ಮಯವಾಗುತ್ತಿವೆ. ಇದಕ್ಕೆಲ್ಲ ಶಾಶ್ವತ ಪರಿಹಾರ ನೀಡಬೇಕಿದ್ದು, ಪ್ರಸಿದ್ಧ ಜಯನಗರ ಹಸಿರನ್ನೇ ಉಳಿಸಿಕೊಳ್ಳುವ ಬದ್ಧತೆಯುಳ್ಳ ಜನಪ್ರತಿನಿಧಿಯನ್ನೇ ಬಯಸುತ್ತಿದೆ.

ವಿಜಯ್ ನಿಶಾಂತ್, ಜಯನಗರ

ಒತ್ತುವರಿ ತೆರವಿನ ಶಕ್ತಿ ಬೇಕು

ಪ್ರತಿಷ್ಠಿತ ಜಯನಗರದಲ್ಲಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಬರವಿಲ್ಲ. ವಿಶಾಲವಾದ ರಸ್ತೆಗಳಿಂದ ಕೂಡಿರುವ ಕ್ಷೇತ್ರ ಕೆಲವು ಹಳೆಯ ಪ್ರದೇಶಗಳನ್ನೂ ಒಳಗೊಂಡಿದೆ. ಇದೆಲ್ಲದರ ಮಧ್ಯೆ ಬಡಾವಣೆಗಳ ನಿರ್ಮಾಣದ ವೇಳೆ ರಾಜಕಾಲುವೆಗಳನ್ನು ಮುಚ್ಚಲಾಗಿದೆ. ಹಲವು ಭಾಗದಲ್ಲಿ ಮಾರ್ಗ ಬದಲಿಸಲಾಗಿದೆ. ಕಣ್ಣಿಗೆ ಕಾಣುವಂತಹ ಒತ್ತುವರಿಯಾಗಿದ್ದರೂ ಅಲ್ಲಿ ಸಮಸ್ಯೆ ಆಗುವುದಿಲ್ಲ ಎಂದು ಅಧಿಕಾರಿಗಳು, ಜನಪ್ರತಿನಿಧಿಗಳು ಸುಮ್ಮನಿರುತ್ತಾರೆ. ಕಾನೂನು ಎಲ್ಲರಿಗೂ ಒಂದೇ ಎಂಬ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕಾದ ದಿಟ್ಟ ಶಕ್ತಿ ಹೊಂದಿರುವ ಜನನಾಯಕ ಈ ಕ್ಷೇತ್ರಕ್ಕೆ ಬೇಕಿದೆ.

ಸಂತೋಷ್ ಆನಂದ್, ಜಯನಗರ

ವಾಹನ ನಿಲುಗಡೆ ವ್ಯವಸ್ಥೆ ಬೇಕು

ಪ್ರತಿಷ್ಠಿತ ಜಯನಗರದಲ್ಲಿ ಹಲವು ರೀತಿಯ ಅಭಿವೃದ್ಧಿ ಕಾರ್ಯಗಳು ಆಗಿದ್ದರೂ, ವಾಹನ ನಿಲುಗಡೆ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಶಾಪಿಂಗ್ ಕಾಂಪ್ಲೆಕ್ಸ್‌ಗೆ ನಗರದಾದ್ಯಂತ ಪ್ರಖ್ಯಾತವಾಗಿರುವ ಜಯನಗರದಲ್ಲಿ ಖರೀದಿಗಾಗಿ ಬರುವ ಜನರು ಅತಿಹೆಚ್ಚು.

ವಾರಾಂತ್ಯದಲ್ಲಂತೂ ಜನಜಂಗುಳಿ. ಆದರೆ, ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಇಲ್ಲ. ಜನರಿಗೆ ವಾಹನಗಳನ್ನು ನಿಲ್ಲಿಸುವುದೇ ದೊಡ್ಡ ಸಾಹಸವಾಗಿದೆ. ದೀರ್ಘಕಾಲದ ಸಮಸ್ಯೆಗೆ ಶಾಶ್ವತವಾಗಿ ಪರಿಹಾರ ನೀಡುವ ಯೋಜನೆಗಳನ್ನು ಮುಂದಿನ ಶಾಸಕರು ರೂಪಿಸಬೇಕಿದೆ.

ಅನಂತಮೂರ್ತಿ, ಜಯನಗರ

ಚಿಕ್ಕಪೇಟೆ



ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿದ್ದರೂ ಹಳೆಯ ಪ್ರದೇಶಗಳಲ್ಲಿರುವ ದೀರ್ಘಕಾಲದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಇನ್ನೂ ಸಾಧ್ಯವಾಗಿಲ್ಲ ಎಂಬುದು ನಾಗರಿಕರ ಅಳಲು.

ಸುರಕ್ಷತೆಯ ಖಾತರಿ ಬೇಕು



ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಕೆಲವು ರಸ್ತೆಗಳಿಗೆ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿಲ್ಲ. ಇದನ್ನು ಸರಿಪಡಿಸಬೇಕು. ಎಲ್ಲ ರಸ್ತೆಗಳಲ್ಲೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ಜನರಿಗೆ ಸುರಕ್ಷತೆ ಖಾತರಿ ನೀಡಬೇಕು. ಸಮಾರಂಭಗಳನ್ನು ಆಯೋಜಿಸಲು ಮಧ್ಯಮ ವರ್ಗದವರಿಗಾಗಿ ಕ್ಷೇತ್ರದಲ್ಲೊಂದು ಸಮುದಾಯ ಭವನ ನಿರ್ಮಿಸಬೇಕು. ಸರ್ಕಾರಿ ಆಸ್ಪತ್ರೆಗಳಿದ್ದರೂ ಅಲ್ಲಿ ಸೌಕರ್ಯಗಳಿಲ್ಲ. ಎಲ್ಲ ರೀತಿಯ ಚಿಕಿತ್ಸೆಗಳಿದ್ದು, ಔಷಧೋಪಚಾರ ಸೇರಿದಂತೆ ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು. ಜ್ಞಾನವೃದ್ಧಿಗಾಗಿ ಗ್ರಂಥಾಲಯಗಳನ್ನು ಸ್ಥಾಪಿಸಬೇಕು.

ರಾಮಲಿಂಗ,, ವಿವಿ ಪುರ

ಸುಗಮ ಸಂಚಾರವಿರಲಿ



ಚಿಕ್ಕಪೇಟೆಯಲ್ಲಿ ಈ ಹಿಂದೆ ಜನಸಂಖ್ಯೆಗೆ ಅನುಗುಣವಾಗಿ ಸಣ್ಣ ಒಳಚರಂಡಿ ಪೈಪ್‌ಗಳನ್ನು ಅಳವಡಿಸಲಾಗಿತ್ತು. ಆದರೆ, ಈಗ ಜನಸಂಖ್ಯೆ ಹೆಚ್ಚಾಗಿದೆ. ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ಜನರ ಪ್ರಮಾಣ ಕೂಡ ಹೆಚ್ಚಿದೆ. ಹೀಗಾಗಿ ದೊಡ್ಡ ಗಾತ್ರದ ಪೈಪ್ ಗಳನ್ನು ಕಡ್ಡಾಯವಾಗಿ ಅಳವಡಿಸಬೇಕು. ಗಾಂಧಿ ಬಜಾರ್ ಮುಖ್ಯರಸ್ತೆಯಲ್ಲಿ ವಾಹನಗಳಿಗೆ ಸರಿಯಾದ ಪಾರ್ಕಿಂಗ್ ಸೌಲಭ್ಯ ಇಲ್ಲದ ಕಾರಣ ಸದಾ ಟ್ರಾಫಿಕ್ ಹೆಚ್ಚು ಇರುತ್ತದೆ. ನಗರದ ಪ್ರಮುಖ ತಾಣಗಳಲ್ಲಿ ಒಂದಾಗಿರುವ ಈ ರಸ್ತೆಯಲ್ಲಿ ಸಕಲ ಸೌಲಭ್ಯಗಳೊಂದಿಗೆ, ಸುಗಮ ಸಂಚಾರದ ವ್ಯವಸ್ಥೆಯನ್ನೂ ಕಲ್ಪಿಸಬೇಕು.

ಅಜಿತ್, ವಿ.ವಿ ಪುರ

ಪಾದಚಾರಿಗಳ ಸಂಕಷ್ಟ ನೀಗಲಿ

ಡಯಗನಲ್ ರಸ್ತೆಯಿಂದ ಮಿನರ್ವ ಸರ್ಕಲ್‌ವರೆಗೂ ಪಾದಚಾರಿಗಳಿಗೆ ಓಡಾಡಲು ರಸ್ತೆ ಇಲ್ಲ. ಇರುವ ಚಿಕ್ಕ ಫುಟ್‌ಪಾತ್‌ನಲ್ಲಿ ಸಂಪೂರ್ಣವಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ. ದೀರ್ಘಕಾಲದ ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ಬೇಕಿದೆ. ಕಲಾಸಿಪಾಳ್ಯ ಬಸ್ ನಿಲ್ದಾಣದಿಂದ ಸಜ್ಜನ್ ರಾವ್ ಸರ್ಕಲ್‌ವರೆಗೂ ಹೆಚ್ಚೆಚ್ಚು ಹಸುಗಳು ರಸ್ತೆಗೆ ಬರುವ ಕಾರಣ ವಾಹನ ಸವಾರರಿಗೆ ಸಂಕಷ್ಟವಾಗಿದ್ದು, ಅಪಘಾತಗಳು ಹೆಚ್ಚು ಸಂಭವಿಸುತ್ತಿವೆ. ಎಲ್ಲರಿಗೂ ಗೊತ್ತಿರುವ ಈ ಸಮಸ್ಯೆಗೂ ಶಾಶ್ವತ ಪರಿಹಾರ ನೀಡಬೇಕಿದೆ. ಸರ ಕಳ್ಳತನ ಹೆಚ್ಚಾಗುತ್ತಿದ್ದು, ಮಹಿಳಾ ಪೊಲೀಸ್ ಸಿಬ್ಬಂದಿಯನ್ನು ಉದ್ಯಾನಗಳಲ್ಲಿ ನೇಮಿಸಬೇಕು.

ರಾಮೋಜಿ, ಸಜ್ಜನ್ ರಾವ್ ವೃತ್ತ

ಸರ್ಕಾರಗಳು ಬದಲಾದರೂ ಬಗೆಹರಿಯದ ಸಮಸ್ಯೆ: ಹೆಚ್ಚುತ್ತಿರುವ ವಾಹನಗಳ ನೋಂದಣಿ; ತಗ್ಗುತ್ತಿರುವ ಸೌಕರ್ಯ

'ಸುಗಮ'ವಲ್ಲದ ಸಂಚಾರ: ಬೇಕಿದೆ ಶಾಶ್ವತ ಪರಿಹಾರ

● ಸಂತೋಷ ಜಿಗಳಿಕೊಪ್ಪ



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯ ಯಲಹಂಕ ಬಳಿ ದಟ್ಟಣೆಯಲ್ಲಿ ಸಾಲುಗಟ್ಟಿ ನಿಂತಿರುವ ವಾಹನಗಳು – ಪ್ರಜಾವಾಣಿ ಚಿತ್ರ

ಬೆಂಗಳೂರು: ಅತೀ ವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಎನ್ನುವುದು ಶಾಶ್ವತ ಸಮಸ್ಯೆಯಾಗಿಯೇ ಉಳಿದಿದೆ. ಸರ್ಕಾರಗಳು ಬದಲಾದಂತೆ ಸುಗಮ ಸಂಚಾರಕ್ಕೆ ರೂಪಿಸುವ ಕೋಟ್ಯಂತರ ರೂಪಾಯಿ ಮೊತ್ತದ ಬೃಹತ್ ಯೋಜನೆಗಳು ಸಹ ಕೇವಲ ತಾತ್ಕಾಲಿಕ ಎನ್ನುವಂತಾಗಿವೆ.

ಎಲ್ಲ ರಾಜಕೀಯ ಪಕ್ಷಗಳು ಚುನಾವಣೆ ಸಂದರ್ಭದಲ್ಲಿ ಸಂಚಾರ ದಟ್ಟಣೆ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸುತ್ತವೆ. ಅಧಿಕಾರ ಅಲಂಕರಿಸಿದಾಗ ಮಾತ್ರ ಜನಪ್ರತಿನಿಧಿಗಳ ಧೋರಣೆಯೇ ಬದಲಾಗುತ್ತದೆ. ಹೀಗಾಗಿ, ಶಾಶ್ವತ ಪರಿಹಾರ ಯಾವಾಗ ಎನ್ನುವುದು ಯಕ್ಷಪ್ರಶ್ನೆಯಾಗಿಯೇ ಉಳಿದಿದೆ.

ರಾಜಧಾನಿ ಕಂಡದ್ದು

ಒಂದು ಕೋಟಿಗೂ ಹೆಚ್ಚು ವಾಹನಗಳಿರುವ ನಗರದಲ್ಲಿ, ದಿನದಿಂದ ದಿನಕ್ಕೆ ಹೊಸ ವಾಹನಗಳ ನೋಂದಣಿ ಸಂಖ್ಯೆಯೂ ಹೆಚ್ಚುತ್ತಲೇ ಇದೆ. ಬೆಳಿಗ್ಗೆ ಮತ್ತು ಸಂಜೆ ವಿಪರೀತ ದಟ್ಟಣೆಯಲ್ಲಿ ವಾಹನಗಳು ಸಿಲುಕಿ ಆಮೆ ನಡಿಗೆಯಂತೆ ಸಂಚರಿಸುವುದು ಸಹ ಸಾಮಾನ್ಯ.

ಮನೆಯಿಂದ ಕಚೇರಿಗೆ ತೆರಳುವ ಜನ, ನಿತ್ಯವೂ ದಟ್ಟಣೆಯಲ್ಲಿ ಸಿಲುಕಿ ಪಡಿಪಾಟಲು ಅನುಭವಿಸುತ್ತಿದ್ದಾರೆ. ಹೆಬ್ಬಾಳ ಮೇಲ್ಸೇತುವೆ, ಸಿಲ್ಕ್‌ಬೋರ್ಡ್ ಜಂಕ್ಷನ್, ಗೊರಗುಂಟೆಪಾಳ್ಯ, ಕಾಡುಬಿಸನಹಳ್ಳಿ, ಕೆ.ಆರ್. ಪುರ, ಸಾರಕ್ಕಿ (ಕನಕಪುರ ರಸ್ತೆ), ಕುಮಾರಸ್ವಾಮಿ ಲೇಔಟ್ ಜಂಕ್ಷನ್, ಸರ್ಜಾಪುರ, ಮಾರತ್ತಹಳ್ಳಿ, ಬೆಳ್ಳಂದೂರು ಭಾಗದಲ್ಲಿ ದಟ್ಟಣೆ ವಿಪರೀತವಾಗಿದೆ. ಈ ಭಾಗದ ಕಂಪನಿಗಳಲ್ಲಿ ಕೆಲಸ ಮಾಡುವ ಜನ ಹಾಗೂ ಸ್ಥಳೀಯ ನಿವಾಸಿಗಳು, ಆಗಾಗ ತಮ್ಮ ಆಕ್ರೋಶ ಹೊರಹಾಕುತ್ತಲೇ ಇರುತ್ತಾರೆ. ಪ್ರತಿಭಟನೆ ಹಾಗೂ ಇತರೆ ವಿಶೇಷ ಕಾರ್ಯಕ್ರಮಗಳ ಸಂದರ್ಭದಲ್ಲೂ ನಗರದ ಹಲವು ರಸ್ತೆಗಳಲ್ಲಿ ದಟ್ಟಣೆ ಹೆಚ್ಚಿರುತ್ತದೆ.

'ಬೆಂಗಳೂರನ್ನು ದಟ್ಟಣೆಮುಕ್ತ ನಗರ, ಸಿಗ್ನಲ್ ಮುಕ್ತ ಮಾಡುತ್ತೇವೆ' ಎಂದು ಹೇಳುವ ಜನಪ್ರತಿನಿಧಿಗಳು, ಸಣ್ಣದೊಂದು ರಸ್ತೆಯಲ್ಲಿ ದಟ್ಟಣೆ ಕಡಿಮೆ ಮಾಡಲು ಪ್ರಯತ್ನಿಸುವುದಿಲ್ಲ' ಎಂಬುದು ಜನರ ಆಕ್ರೋಶದ ಮಾತು.

'ಆಡಳಿತದ ಚುಕ್ಕಾಣಿ ಹಿಡಿಯುವ ಪಕ್ಷಗಳ ಜನಪ್ರತಿನಿಧಿಗಳು, ಸಿಗ್ನಲ್ ಮುಕ್ತ ರಸ್ತೆಯಲ್ಲಿ ಸುತ್ತಾಡುತ್ತಾರೆ. ಹೀಗಾಗಿ ಅವರಿಗೆ ದಟ್ಟಣೆ ಬಿಸಿ ತಟ್ಟುವುದಿಲ್ಲ. ಇದೇ ಕಾರಣಕ್ಕೆ, ದಟ್ಟಣೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಜನಪ್ರತಿನಿಧಿಗಳು ಆಸಕ್ತಿ ತೋರುತ್ತಿಲ್ಲ' ಎಂದು ಸಾರ್ವಜನಿಕರು ದೂರುತ್ತಾರೆ

'ನಗರದ ಬೆಳವಣಿಗೆ ಜತೆ, ದಟ್ಟಣೆಯೂ ವಿಪರೀತವಾಗಿ ಹೆಚ್ಚುತ್ತಿದೆ. ವಿಸ್ತರಣೆ ಮಾಡಿದ ರಸ್ತೆಗಳು ಪುನಃ ಕಿರಿದಾಗುತ್ತಿವೆ. ಮೇಲ್ಸೇತುವೆಗಳೂ ವಾಹನಗಳ ಓಡಾಟಕ್ಕೆ ಸಾಕಾಗುತ್ತಿಲ್ಲ. ಪರಿಸ್ಥಿತಿ ಹೀಗೆ ಮುಂದುವರಿದರೆ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದು ತುಂಬಾ ಕಠಿಣವಾಗಲಿದೆ' ಎಂದು ಕಂಪನಿಯೊಂದರ ಉದ್ಯೋಗಿಯಾದ ಮಾರತ್ತಹಳ್ಳಿಯ ನಿವಾಸಿ ಆರ್. ಮಂಜುನಾಥ್ ಹೇಳುತ್ತಾರೆ.

ಔಷಧಿ ತಯಾರಿಕೆ ಕಂಪನಿಯ ಉದ್ಯೋಗಿ ಬಿ. ಸುನೀಲ್, 'ಕೆ.ಆರ್. ಪುರ ಹೊರವಲಯದಲ್ಲಿರುವ ಕಚೇರಿಯಲ್ಲಿ ನಿತ್ಯ 8 ಗಂಟೆ ಕೆಲಸ ಮಾಡುತ್ತೇನೆ. ಕಚೇರಿಗೆ ಹೋಗಲು ಹಾಗೂ ಇಂದಿರಾನಗರದಲ್ಲಿರುವ ಮನೆಗೆ ವಾಪಸು ಬರಲು ನಿತ್ಯವೂ ಮೂರು ಗಂಟೆ ಬೇಕು' ಎಂದರು.

ಎಚ್‌ಎಸ್‌ಆರ್ ಲೇಔಟ್ ನಿವಾಸಿ ರಾಘವೇಂದ್ರ, 'ಸಿಲ್ಕ್‌ಬೋರ್ಡ್ ಜಂಕ್ಷನ್ ದಾಟುವುದೇ ದೊಡ್ಡ ಸವಾಲು. ಗಂಟೆಗಟ್ಟಲೇ ಕಾರಲ್ಲಿ ಕಾಯುತ್ತ ಕುಳಿತಿದ್ದ ದಿನಗಳು ಇವೆ. ಯಾವ ಸರ್ಕಾರಗಳು ಬಂದರೂ ಇಲ್ಲಿಯ ದಟ್ಟಣೆ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುತ್ತಿಲ್ಲ' ಎಂದು ದೂರಿದರು.

'ವೈಜ್ಞಾನಿಕ ಸಮೀಕ್ಷೆ ಸೂಕ್ತ'

'ದಟ್ಟಣೆ ಉಂಟಾಗುವ ರಸ್ತೆಗಳ ಬಗ್ಗೆ ವೈಜ್ಞಾನಿಕ ಸಮೀಕ್ಷೆ ನಡೆಸಬೇಕು. ಯಾವ ರೀತಿಯಲ್ಲಿ ದಟ್ಟಣೆ ನಿಯಂತ್ರಿಸಬಹುದು ಎಂಬುದನ್ನು ತಿಳಿದುಕೊಂಡು ಶಾಶ್ವತ ಪರಿಹಾರ ಯೋಜನೆಗಳನ್ನು ರೂಪಿಸಬೇಕು' ಎಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

'ರಾಜಧಾನಿಯಾಗಿರುವ ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಿದೆ. ಹೀಗಾಗಿ, ವಾಹನಗಳ ಸಂಖ್ಯೆಯೂ ಅಧಿಕ. ವಾಹನಗಳ ಸಂಖ್ಯೆಗೆ ತಕ್ಕಂತೆ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು. ಕಿರಿದಾದ ರಸ್ತೆಗಳ ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು' ಎಂದಿದ್ದಾರೆ.

ತಾತ್ಕಾಲಿಕ ಪರಿಹಾರದಿಂದ ನೆಮ್ಮದಿ: ಹೆಬ್ಬಾಳ ಜಂಕ್ಷನ್ ಹಾಗೂ ಸಿಲ್ಕ್‌ಬೋರ್ಡ್ ಜಂಕ್ಷನ್ ಸೇರಿ ಕೆಲ ಪ್ರಮುಖ ರಸ್ತೆಗಳಲ್ಲಿ ತಾತ್ಕಾಲಿಕ ಪರಿಹಾರ ಕಂಡುಕೊಳ್ಳಲಾಗಿದೆ. ಇದರಿಂದಾಗಿ ದಟ್ಟಣೆ ಸ್ವಲ್ಪ ಕಡಿಮೆಯಾಗಿ, ಜನರಿಗೆ ನೆಮ್ಮದಿ ತಂದಿದೆ. ಆದರೆ, ಶಾಶ್ವತ ಪರಿಹಾರ ಸಿಕ್ಕರೆ ಮಾತ್ರ ಹೆಚ್ಚು ನೆಮ್ಮದಿಯೆಂಬುದು ಜನರ ಅಭಿಪ್ರಾಯ.

ನಗರದಲ್ಲಿ ಬೆಳಿಗ್ಗೆ 8 ಗಂಟೆಯಿಂದ 11 ಗಂಟೆವರೆಗೆ ಹಾಗೂ ಸಂಜೆ 4 ಗಂಟೆಯಿಂದ 8 ಗಂಟೆವರೆಗೆ ಭಾರಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಇದರಿಂದಾಗಿ ಬೆಳಿಗ್ಗೆ ಹಾಗೂ ಸಂಜೆ ಅವಧಿಯಲ್ಲಿ ದಟ್ಟಣೆ ಸ್ವಲ್ಪ ಇಳಿಮುಖವಾಗಿದೆ. ಭಾರಿ ವಾಹನಗಳನ್ನು ತಡೆದಿದ್ದರಿಂದ, ಲಾರಿ ಮಾಲೀಕರು ಹಾಗೂ ಕಾರ್ಮಿಕರು ನಷ್ಟ ಅನುಭವಿಸುತ್ತಿರುವ ಆರೋಪವೂ ಇದೆ.

'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವಾಗ ಹೆಬ್ಬಾಳ ಮೇಲ್ಸೇತುವೆ ದಾಟಲು 20ರಿಂದ 30 ನಿಮಿಷ ಬೇಕಿತ್ತು. ಇದೀಗ 10ರಿಂದ 15 ನಿಮಿಷ ಬೇಕಾಗುತ್ತಿದೆ. ದಟ್ಟಣೆ ರಹಿತವಾಗಿ ಸಂಚರಿಸುವ ದಿನಕ್ಕಾಗಿ ಕಾಯುತ್ತಿದ್ದೇವೆ' ಎಂದು ಖಾಸಗಿ ಕಂಪನಿ ಉದ್ಯೋಗಿ ರಾಮಕೃಷ್ಣ ಅವರು ತಿಳಿಸಿದರು.

ಮಾದರಿ ಕ್ಷೇತ್ರ

ಮುಂದಿನ ಶಾಸಕರಿಂದ ಜನರ ನಿರೀಕ್ಷೆಗಳೇನು?

ವಿಧಾನಸಭೆ ಚುನಾವಣೆಗೆ ಮತದಾನದ ದಿನ ಹತ್ತಿರವಾಗುತ್ತಿದೆ. ಮುಂದೆ ಆಯ್ಕೆಯಾಗುವ ಶಾಸಕರಿಂದ ಮತದಾರರು ಏನನ್ನು ನಿರೀಕ್ಷಿಸಲಿದ್ದಾರೆ ಎಂಬುದನ್ನು 'ಪ್ರಜಾವಾಣಿ' ಪ್ರಕಟಿಸಲಿದೆ. ನಿಮ್ಮ ಕ್ಷೇತ್ರ ಮಾದರಿಯಾಗಬೇಕಾದರೆ ಏನಾಗಬೇಕು? 50 ಪದದಲ್ಲಿ ಬರೆದು ಏ.8ರ ಮಧ್ಯಾಹ್ನ 2ರೊಳಗೆ ಕಳುಹಿಸಿ.

ಕ್ಷೇತ್ರಗಳು: ● ಯಶವಂತಪುರ ● ಪುಲಕೇಶಿನಗರ ● ಬಿಟಿಎಂ ಲೇಔಟ್



96060 38256

ಸೆಲೆಬ್ರಿಟಿ ಮಾತು



'ಸೂಕ್ತ ಪ್ರತಿನಿಧಿ ಆಯ್ಕೆ ಮಾಡಿ'

ಡಾ. ಸುದರ್ಶನ್ ಬಲ್ಲಾಳ್
ಮಣಿಪಾಲ್ ಆಸ್ಪತ್ರೆಗಳ ಅಧ್ಯಕ್ಷರು

ಪ್ರಜಾಪ್ರಭುತ್ವದಲ್ಲಿ ಮತದಾನವು ನಾಗರಿಕರ ಮೂಲಭೂತ ಹಕ್ಕು ಮಾತ್ರವಲ್ಲದೇ, ಮೂಲಭೂತ ಕರ್ತವ್ಯವೂ ಆಗಿದೆ. ಈ ಹಕ್ಕನ್ನು ಚಲಾಯಿಸುವವರ ಪ್ರಮಾಣ ನಗರ ಪ್ರದೇಶದಲ್ಲಿ ಕಡಿಮೆ ಇರುವುದು ವಿಪರ್ಯಾಸ. ಸಂವಿಧಾನ ನೀಡಿದ ಹಕ್ಕುಗಳ ಬಗ್ಗೆ ನಮಗಿರುವ ನಿರ್ಲಕ್ಷ್ಯವನ್ನು ಇದು ತೋರಿಸುತ್ತದೆ. ಆಡಳಿತ ನಡೆಸಲು ಸರಿಯಾದ ಪ್ರತಿನಿಧಿಯನ್ನು ಆರಿಸಲು ನಾವು ಮತದಾನದ ಮೂಲಕ ಮೂಲಭೂತ ಹಕ್ಕನ್ನು ಚಲಾಯಿಸಬೇಕು. ಮೂಲಭೂತ ಕರ್ತವ್ಯ ನಿರ್ವಹಿಸದಿದ್ದರೆ ಸರ್ಕಾರವನ್ನು ಟೀಕಿಸುವ ಹಕ್ಕು ಇರುವುದಿಲ್ಲ.

ಪ್ರಚಾರಕ್ಕೆ ಅನುಮತಿ ನಿರಾಕರಣೆ: ಆರೋಪ

ಬೆಂಗಳೂರು: 'ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿಗೆ ಅನೇಕ ಕಡೆ ಪ್ರಚಾರಕ್ಕೆ ಅನುಮತಿ ನಿರಾಕರಿಸಲಾಗುತ್ತಿದ್ದು, ಈ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು' ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಆಗ್ರಹಿಸಿದೆ. ಅಲ್ಲದೆ, ಮುಖ್ಯ ಚುನಾವಣಾ ಆಯುಕ್ತರಿಗೆ ಇ–ಮೇಲ್ ಮೂಲಕ ಮನವಿ ಸಲ್ಲಿಸಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಆರ್‌ಎಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದೀಪಕ್ ಸಿ.ಎನ್., 'ಚುನಾವಣಾಧಿಕಾರಿಗಳ ಈ ರೀತಿಯ ವರ್ತನೆಯಿಂದಾಗಿ, ಚುನಾವಣಾ ಆಯೋಗ ತಾರತಮ್ಯ ಮಾಡುತ್ತಿದೆ ಎಂಬ ಅನುಮಾನ ಮೂಡುತ್ತಿದೆ. ನಾವು ಹಲವು ಬಾರಿ ಮನವಿ ಮಾಡಿದರೂ ಈ ತಾರತಮ್ಯವನ್ನು ಸರಿಪಡಿಸಿಲ್ಲ' ಎಂದಿದ್ದಾರೆ.

'ಎಲ್ಲ ಪಕ್ಷಗಳ ಅಭ್ಯರ್ಥಿಗಳು ಪ್ರಚಾರ ಕಾರ್ಯದಲ್ಲಿ ನಿರತರಾಗಿದ್ದಾರೆ. ಕೆಆರ್‌ಎಸ್ ಪಕ್ಷ ಇಲ್ಲಿಯವರೆಗೆ 119 ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿದೆ. ಚುನಾವಣೆ ನ್ಯಾಯ ಸಮ್ಮತವಾಗಿ ನಡೆಯಬೇಕು ಎನ್ನುವುದು ನಮ್ಮ ಸ್ಪಷ್ಟ ನಿಲುವು. ಹೀಗಾಗಿ, ಕಾನೂನು ಪರಿಧಿಯೊಳಗೆ ಪ್ರಚಾರ ಕಾರ್ಯದಲ್ಲಿ ತೊಡಗಲು ಪಕ್ಷ ಮುಂದಾಗಿದೆ. ಆದರೆ, ಕೇವಲ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪದಾಧಿಕಾರಿಗಳಿಗೆ ಮಾತ್ರ ಅನುಮತಿ ನೀಡಲಾಗುತ್ತದೆ' ಎಂದು ದೂರಿದ್ದಾರೆ.

'ನಿರ್ಬಂಧ ವಿಧಿಸಿ': ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವ ಸಿನಿಮಾ, ಕಿರುತೆರೆ ಕಲಾವಿದರು ನಟಿಸಿರುವ, ಪಾಲ್ಗೊಳ್ಳುವ ಕಾರ್ಯಕ್ರಮಗಳ ಪ್ರಸಾರಕ್ಕೆ ನಿರ್ಬಂಧ ಹೇರಬೇಕು ಎಂದು ಕೋರಿ ಕೆಆರ್‌ಎಸ್‌ಪಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ.

ಚುನಾವಣಾ ಪ್ರಚಾರಕ್ಕಾಗಿ ಕೆಲವು ಪಕ್ಷಗಳು ಹಾಗೂ ಅಭ್ಯರ್ಥಿಗಳು ಸಿನಿಮಾ ನಟರನ್ನು ಕರೆಸಿಕೊಳ್ಳುತ್ತಿದ್ದಾರೆ. ಯಾವುದೇ ಪಕ್ಷದ ಸದಸ್ಯರಲ್ಲದ ಕಲಾವಿದರು ಹಣ ಪಡೆದು ಪ್ರಚಾರ ನಡೆಸುತ್ತಾರೆ. ಅಂತಹ ಕಲಾವಿದರು ಪಾಲ್ಗೊಂಡ ಕಾರ್ಯಕ್ರಮಗಳಿಗೆ ಕಡಿವಾಣ ಹಾಕಬೇಕು ಎಂದು ಪಕ್ಷದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಒತ್ತಾಯಿಸಿದ್ದಾರೆ.

7 ಕ್ಷೇತ್ರಗಳಿಗೆ 'ಕೈ' ಟಿಕೆಟ್ ಘೋಷಣೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಹಂತಗಳಲ್ಲಿ ರಾಜ್ಯದ 166 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿರುವ ಕಾಂಗ್ರೆಸ್, ನಗರ ವ್ಯಾಪ್ತಿಯ ಒಟ್ಟು 28 ವಿಧಾನಸಭಾ ಕ್ಷೇತ್ರಗಳ ಪೈಕಿ, ಈವರೆಗೆ 21 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಘೋಷಿಸಿದೆ.

ಚಿಕ್ಕಪೇಟೆ, ಕೆ.ಆರ್.ಪುರ, ಬೊಮ್ಮನಹಳ್ಳಿ, ದಾಸರಹಳ್ಳಿ, ಸಿ.ವಿ. ರಾಮನ್‌ನಗರ, ಪುಲಕೇಶಿನಗರ, ಬೆಂಗಳೂರು ದಕ್ಷಿಣ ಈ ಏಳು ಕ್ಷೇತ್ರಗಳಿಗೆ ಟಿಕೆಟ್ ಘೋಷಣೆ ಬಾಕಿ ಇದೆ.

ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಪತನವಾಗಿ ಬಿಜೆಪಿ ಸರ್ಕಾರ ರಚನೆಗೆ ಕಾರಣರಾದ ಸಚಿವರ ಪೈಕಿ, ಬೆಂಗಳೂರಿನ ಶಾಸಕರಾದ ಕೆ. ಗೋಪಾಲಯ್ಯ, ಎಸ್.ಟಿ. ಸೋಮಶೇಖರ್ ಮತ್ತು ಬೈರತಿ ಬಸವರಾಜು ಕಾಂಗ್ರೆಸ್ ಸೇರಲಿದ್ದಾರೆ ಎಂಬ ಸುದ್ದಿ ಹಬ್ಬಿತ್ತು. ಆದರೆ, ಗೋಪಾಲಯ್ಯ ಪ್ರತಿನಿಧಿಸುವ ಮಹಾಲಕ್ಷ್ಮೀ ಲೇಔಟ್ ಮತ್ತು ಎಸ್.ಟಿ. ಸೋಮಶೇಖರ್ ಪ್ರತಿನಿಧಿಸುವ ಯಶವಂತಪುರ ಕ್ಷೇತ್ರಕ್ಕೆ ತನ್ನ ಎರಡನೇ ಪಟ್ಟಿಯಲ್ಲಿ ಅಭ್ಯರ್ಥಿ ಹೆಸರನ್ನು ಕಾಂಗ್ರೆಸ್ ಘೋಷಿಸಿದೆ. ಆ ಮೂಲಕ, ಈ ಊಹಾಪೋಹಕ್ಕೆ ತೆರೆಬಿದ್ದಿದೆ.

ಎರಡನೇ ಪಟ್ಟಿಯಲ್ಲಿ ಯಲಹಂಕ (ಕೇಶವ ರಾಜಣ್ಣ ಬಿ.), ಯಶವಂತಪುರ (ಎಸ್. ಬಾಲರಾಜ್ ಗೌಡ), ಮಹಾಲಕ್ಷ್ಮೀ ಲೇಔಟ್ (ಕೇಶವಮೂರ್ತಿ), ಪದ್ಮನಾಭನಗರ (ವಿ. ರಘುನಾಥ ನಾಯ್ಡು) ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಘೋಷಿಸಲಾಗಿದೆ. ಯಶವಂತಪುರ ಕ್ಷೇತ್ರದಿಂದ ನಟಿ ಭಾವನಾ ಅವರೂ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ನೀಡುವಂತೆ ಅವರು ಕೆಪಿಸಿಸಿಗೆ ಅರ್ಜಿ ಕೂಡಾ ಸಲ್ಲಿಸಿದ್ದರು.

ಮಾರ್ಚ್ 29ರಂದು ಪ್ರಕಟಿಸಿದ್ದ 124 ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಬ್ಯಾಟರಾಯನಪುರ (ಕೃಷ್ಣ ಬೈರೇಗೌಡ), ರಾಜರಾಜೇಶ್ವರಿ ನಗರ (ಕುಸುಮಾ ಹನುಮಂತರಾಯಪ್ಪ), ಮಲ್ಲೇಶ್ವರ (ಅನೂಪ್ ಅಯ್ಯಂಗಾರ್), ಹೆಬ್ಬಾಳ (ಬೈರತಿ ಸುರೇಶ್), ಸರ್ವಜ್ಞನಗರ (ಕೆ.ಜೆ. ಜಾರ್ಜ್), ಶಿವಾಜಿನಗರ (ರಿಜ್ವಾನ್ ಅರ್ಷದ್), ಶಾಂತಿನಗರ (ಎನ್.ಎ. ಹ್ಯಾರಿಸ್), ಗಾಂಧಿ ನಗರ (ದಿನೇಶ್ ಗುಂಡೂರಾವ್), ರಾಜಾಜಿನಗರ (ಪುಟ್ಟಣ್ಣ), ಗೋವಿಂದರಾಜನಗರ (ಪ್ರಿಯಕೃಷ್ಣ), ವಿಜಯನಗರ (ಎಂ. ಕೃಷ್ಣಪ್ಪ), ಚಾಮರಾಜಪೇಟೆ (ಜಮೀರ್ ಅಹ್ಮದ್ ಖಾನ್), ಬಸವನಗುಡಿ (ಯು.ಬಿ. ವೆಂಕಟೇಶ್), ಬಿಟಿಎಂ ಲೇಔಟ್ (ರಾಮಲಿಂಗಾ ರೆಡ್ಡಿ), ಜಯನಗರ (ಸೌಮ್ಯಾ ರೆಡ್ಡಿ), ಮಹದೇವಪುರ (ಎಚ್. ನಾಗೇಶ್), ಆನೇಕಲ್ (ಬಿ. ಶಿವಣ್ಣ) ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಲಾಗಿತ್ತು.

ತೀವ್ರ ಪೈಪೋಟಿ: ಪುಲಕೇಶಿನಗರ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಬೆಂಬಲಿಗರಾದ ಹಾಲಿ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮತ್ತು ಡಿ.ಕೆ. ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡಿರುವ ಬಿಬಿಎಂಪಿ ಮಾಜಿ ಮೇಯರ್ ಸಂಪತ್ ರಾಜ್ ನಡುವೆ ಟಿಕೆಟ್‌ಗಾಗಿ ಪೈಪೋಟಿಯಿದೆ. ಅಖಂಡ ಶ್ರೀನಿವಾಸ ಮೂರ್ತಿ ಅವರಿಗೆ ಟಿಕೆಟ್ ನೀಡುವ ವಿಷಯದಲ್ಲಿ ನಾಯಕರ ನಡುವೆ ಸಹಮತ ವ್ಯಕ್ತವಾಗಿಲ್ಲ. ಹೀಗಾಗಿ ಈ ಕ್ಷೇತ್ರದ ಟಿಕೆಟ್ ಘೋಷಣೆ ವಿಳಂಬವಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಚಿಕ್ಕಪೇಟೆಯಲ್ಲಿ ಮಾಜಿ ಶಾಸಕ ಆರ್.ವಿ. ದೇವರಾಜ್‌ಗೆ ಟಿಕೆಟ್ ಸಿಗಲಿದೆ ಎಂಬ ನಿರೀಕ್ಷೆ ಇದೆ. ಆದರೆ, ಅವರ ಪುತ್ರ ಬಿಬಿಎಂಪಿ ಮಾಜಿ ಸದಸ್ಯ ಯುವರಾಜ್ ಕೂಡಾ ಪ್ರಬಲ ಆಕಾಂಕ್ಷಿ. ಪರಿಷತ್ ಸದಸ್ಯ ಪಿ.ಆರ್. ರಮೇಶ್, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಕೂಡಾ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದಾರೆ. ಕೆ.ಆರ್. ಪುರ ಕ್ಷೇತ್ರದಲ್ಲಿ ಬಿಜೆಪಿಯಿಂದ ಸಚಿವ ಬೈರತಿ ಬಸವರಾಜ್ ಮತ್ತೆ ಕಣಕ್ಕಿಳಿಯುವುದು ಬಹುತೇಕ ಖಚಿತ. ಅವರಿಗೆ ಪೈಪೋಟಿ ನೀಡಬಲ್ಲ ಅಭ್ಯರ್ಥಿಯ ಹುಡುಕಾಟದಲ್ಲಿ ಕಾಂಗ್ರೆಸ್ ಇದೆ. ಮಾಜಿ ಶಾಸಕ ಬಿಜೆಪಿಯ ನಂದೀಶ್ ರೆಡ್ಡಿ ಕಾಂಗ್ರೆಸ್ ಅಭ್ಯರ್ಥಿ ಆಗಲಿದ್ದಾರೆ ಎಂಬ ಸುದ್ದಿ ಹರಿದಾಡುತ್ತಿದೆ. ಉಪ ಚುನಾವಣೆಯಲ್ಲಿ ಬೈರತಿಗೆ ಕ್ಷೇತ್ರ ಬಿಟ್ಟುಕೊಟ್ಟ ನಂದೀಶ್ ರೆಡ್ಡಿ ಪಕ್ಷದಲ್ಲಿ ಮೂಲೆಗುಂಪಾಗುತ್ತಿದ್ದು, ಅವರ ಬೆಂಬಲಿಗರು ಕಾಂಗ್ರೆಸ್ ಸೇರುವಂತೆ ಸಲಹೆ ನೀಡಿದ್ದಾರೆ ಎಂಬ ಮಾಹಿತಿ ಇದೆ. ಹೀಗಾಗಿ, ಅಭ್ಯರ್ಥಿ ಘೋಷಣೆ ವಿಳಂಬವಾಗಿದೆ ಎನ್ನಲಾಗಿದೆ.

ಶಿಕ್ಷಕರ ವರ್ಗಾವಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೂ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರ ವರ್ಗಾವಣೆ ಮುಂದೂಡುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಕೇಂದ್ರ ಚುನಾವಣಾ ಆಯೋಗ ಸೂಚಿಸಿದೆ. ಆಯೋಗದ ಸೂಚನೆಯಿಂದಾಗಿ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮತ್ತೆ ನನೆಗುದಿಗೆ ಬಿದ್ದಿದೆ.

ಶಿಕ್ಷಕರ ವರ್ಗಾವಣೆ ನಿಯಮಗಳಿಗೆ ತಿದ್ದುಪಡಿ ತಂದ ನಂತರ ಕಳೆದ ಡಿಸೆಂಬರ್‌ನಲ್ಲಿ ವರ್ಗಾವಣೆ ಪ್ರಕ್ರಿಯೆ ಆರಂಭಿಸಲು ಇಲಾಖೆ ಸುತ್ತೋಲೆ ಹೊರಡಿಸಿತ್ತು. ಹೆಚ್ಚುವರಿ ಶಿಕ್ಷಕರ ನಿಯೋಜನೆ ಸೇರಿದಂತೆ ವಿವಿಧ ಕಾರಣಗಳಿಂದ ವರ್ಗಾವಣೆ ಪ್ರಕ್ರಿಯೆಗೆ ವಿಘ್ನವಾಗಿತ್ತು. ಮುಖ್ಯಮಂತ್ರಿ ಸೂಚನೆಯ ನಂತರ ಕೆಲ ದಿನಗಳ ಹಿಂದಷ್ಟೇ ವರ್ಗಾವಣೆ ಪ್ರಕ್ರಿಯೆ ಆರಂಭಿಸಲು ಒಪ್ಪಿಗೆ ನೀಡಿದ್ದ ಶಿಕ್ಷಣ ಇಲಾಖೆ, ಪ್ರಕ್ರಿಯೆ ಆರಂಭಿಸಲು ಅನುಮತಿ ಕೋರಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿತ್ತು.

'ಕೌನ್ಸೆಲಿಂಗ್ ಮೂಲಕ ಸ್ಥಳ ಆಯ್ಕೆಗೆ ಅವಕಾಶ ನೀಡಿದರೂ, ಹೊಸ ಶೈಕ್ಷಣಿಕ ವರ್ಷದ ಆರಂಭದ ಜೂ. 1ರ ನಂತರವೇ ಹೊಸ ಸ್ಥಳಗಳಿಗೆ ತೆರಳುವ ಷರತ್ತಿಗೆ ಒಳಪಟ್ಟು ವರ್ಗಾವಣೆ ಪ್ರಕ್ರಿಯೆ ಪೂರ್ಣಗೊಳಿಸಲು ಅನುಮತಿ ನೀಡಬೇಕು' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಪತ್ರದಲ್ಲಿ ಕೋರಿದ್ದರು.

ಶಾಸಕಿ ಕಾರಲ್ಲಿ 23 ಸೀರೆ, 16 ಮೊಬೈಲ್

ಬೆಂಗಳೂರು: ಮತದಾರರಿಗೆ ನೀಡಲೆಂದು ಅಕ್ರಮವಾಗಿ ಸೀರೆ– ಬ್ಲೌಸ್ ಪೀಸ್ ಹಾಗೂ ಮೊಬೈಲ್‌ಗಳನ್ನು ಸಾಗಿಸುತ್ತಿದ್ದ ಆರೋಪದಡಿ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕಿ ಸೌಮ್ಯಾ ರೆಡ್ಡಿ ಅವರ ಕಾರನ್ನು ತಿಲಕ್‌ನಗರ ಠಾಣೆ ಪೊಲೀಸರು ಗುರುವಾರ ಜಪ್ತಿ ಮಾಡಿದ್ದಾರೆ.

'ಸೌಮ್ಯಾ ರೆಡ್ಡಿ ಅವರಿಗೆ ಸೇರಿದ್ದ ಕಾರನ್ನು ತಡೆದಿದ್ದ ಚೆಕ್‌ಪೋಸ್ಟ್ ಸಿಬ್ಬಂದಿ ಪರಿಶೀಲನೆ ನಡೆಸಿದ್ದರು. 23 ಸೀರೆ–ಬ್ಲೌಸ್ ಪೀಸ್‌ಗಳು, 14 ಮೊಬೈಲ್ ಹಾಗೂ 16 ಶಾಲುಗಳು ಪತ್ತೆಯಾಗಿದ್ದವು. ಅವುಗಳನ್ನು ಮತದಾರರಿಗೆ ನೀಡಲು ತೆಗೆದುಕೊಂಡು ಹೊರಟಿದ್ದು ತಿಳಿಯಿತು. ಅವುಗಳ ಸಮೇತ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಾರಿನಲ್ಲಿ ಸೌಮ್ಯಾ ರೆಡ್ಡಿ ಅವರು ಇರಲಿಲ್ಲ. ಚಾಲಕ ಹಾಗೂ ಬೆಂಬಲಿಗರು ಮಾತ್ರ ಇದ್ದರು. ಮತದಾರರಿಗೆ ಆಮಿಷವೊಡ್ಡಲು ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನೋಟಿಸ್ ನೀಡಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿವೆ.

ಮಲ್ಲೇಶ್ವರ: ಕಾಂಗ್ರೆಸ್‌ನ 150 ಕಾರ್ಯಕರ್ತರು ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಲ್ಲೇಶ್ವರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಬ್ಲಾಕ್ ಅಧ್ಯಕ್ಷರು, 7 ವಾರ್ಡ್‌ಗಳ ಪೈಕಿ 5 ವಾರ್ಡ್‌ಗಳ ಅಧ್ಯಕ್ಷರು, ವಿವಿಧ ಪದಾಧಿಕಾರಿಗಳು ಹಾಗೂ ಬೂತ್ ಮಟ್ಟದ ಸದಸ್ಯರು ಗುರುವಾರ ಬಿಜೆಪಿ ಸೇರಿದರು.

ಅರಮನೆ ನಗರ ಬ್ಲಾಕ್ ಅಧ್ಯಕ್ಷ ವಿಶ್ವನಾಥ್ ಎಂ, ಕಾಡುಮಲ್ಲೇಶ್ವರ ವಾರ್ಡ್ ಅಧ್ಯಕ್ಷ ಸೂರಜ್ ನಾಯ್ಡು, ರಾಜಮಹಲ್ ಗುಟ್ಟಹಳ್ಳಿ ವಾರ್ಡ್ ಅಧ್ಯಕ್ಷ ವಿಜಯಕುಮಾರ್, ಅರಮನೆ ವಾರ್ಡ್ ನಗರ ಅಧ್ಯಕ್ಷ ರವಿಚಂದ್ರ, ಮಲ್ಲೇಶ್ವರ ವಾರ್ಡ್ ಅಧ್ಯಕ್ಷ ಮುನಿರಾಜು, ಬೆಂಗಳೂರು ಉತ್ತರ ಜಿಲ್ಲೆ ಪ್ರಧಾನ ಕಾರ್ಯದರ್ಶಿ ಪ್ರಭಾಕರ್, ಡಾ.ರಾಜೇಶ್ ಸೇರಿ 150 ಕ್ಕೂ ಹೆಚ್ಚು ಪ್ರಮುಖರು ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ಅಲ್ಲದೆ, ಶ್ರೀ ಗುರು ಮಹಾಜ್ಞಾನಿ ಮಾಚಿದೇವ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಅಧ್ಯಕ್ಷ ಎಂ ಪಿ ಮಂಜುನಾಥ್, ಒಕ್ಕಲಿಗ ಸಮಾಜದ ಮುಖಂಡ ಟೊಯೋಟೊ ಕಿರ್ಲೋಸ್ಕರ್ ನಿವೃತ್ತ ವ್ಯವಸ್ಥಾಪಕ ಡಿ. ಸಿ. ನಾರಾಯಣಸ್ವಾಮಿ, ಒಕ್ಕಲಿಗ ಸಮಾಜದ ಮುಖಂಡ ನಾಗರಾಜಣ್ಣ, ಬಲಜಿಗ ಸಮಾಜದ ಮುಖಂಡ ವಿ ಮಂಜುನಾಥ್ ಬಿಜೆಪಿ ಸೇರಿದ ಇತರ ಪ್ರಮುಖರು.

ಅಭ್ಯರ್ಥಿಗಳ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪಕ್ಷಗಳು ಮುದ್ರಣ ಮಾಧ್ಯಮಗಳ ಇ–ಪೇಪರ್, ಸಾಮಾಜಿಕ ಜಾಲತಾಣ ಮತ್ತು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸುವ ಜಾಹೀರಾತುಗಳಿಗೆ ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿಯ (ಎಂಸಿಎಂಸಿ) ಪೂರ್ವಾನುಮತಿ ಪಡೆದುಕೊಳ್ಳುವುದು ಕಡ್ಡಾಯ' ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಮೀನಾ ಹೇಳಿದರು.

ರಾಜ್ಯ ಮುಖ್ಯ ಚುನಾವಣಾ ಆಯೋಗದ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಗುರುವಾರ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಯಾವುದೇ ರಾಜಕೀಯ ಪಕ್ಷಗಳು ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ನೀಡುವ ಜಾಹೀರಾತುಗಳಿಗೆ ಎಂಸಿಎಂಸಿಯಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕು' ಎಂದರು.

'ಡಿಜಿಟಲ್ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಾದ ಟ್ವಿಟರ್, ಫೇಸ್‌ಬುಕ್, ಯೂಟ್ಯೂಬ್, ಕೂ, ಸ್ನ್ಯಾಪ್‌ಚಾಟ್, ಶೇರ್ ಚಾಟ್, ಇನ್‌ಸ್ಟಾಗ್ರಾಮ್‌ಗಳಲ್ಲಿ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ನೀಡುವ ಪ್ರಾಯೋಜಿತ ಜಾಹೀರಾತುಗಳಿಗೂ ಪೂರ್ವಾನುಮತಿ ಪಡೆದುಕೊಳ್ಳಬೇಕು. ಗೂಗಲ್‌ಗೆ ನೀಡುವ ಪ್ರತಿಯೊಂದು ಜಾಹೀರಾತಿಗೂ ಅನುಮತಿ ಪಡೆದುಕೊಳ್ಳಬೇಕು' ಎಂದು ಮಾಧ್ಯಮ ವಿಭಾಗದ ವಿಶೇಷ ಅಧಿಕಾರಿ ಎ.ವಿ. ಸೂರ್ಯಸೇನ್ ಹೇಳಿದರು.

'ತಾರಾ ಪ್ರಚಾರಕರ ಚಿತ್ರಗಳಿಗೆ ನಿರ್ಬಂಧವಿಲ್ಲ'

'ತಾರಾ ಪ್ರಚಾರಕರು ಅಭಿನಯಿಸುವ ವಾಣಿಜ್ಯ ಉದ್ದೇಶದ ಚಲನಚಿತ್ರಗಳ ಪ್ರದರ್ಶನಕ್ಕೆ ಯಾವುದೇ ನಿರ್ಬಂಧವಿಲ್ಲ' ಎಂದು ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ಆರ್. ವೆಂಕಟೇಶ್ ಕುಮಾರ್ ಸ್ಪಷ್ಟಪಡಿಸಿದರು. 'ಆದರೆ, ರಾಜಕೀಯ ಪ್ರೇರಿತ ವಿಷಯಗಳಿರುವ ಚಲನಚಿತ್ರಗಳ ಪ್ರದರ್ಶನಕ್ಕೆ ಅವಕಾಶವಿಲ್ಲ' ಎಂದು ತಿಳಿಸಿದರು.

ಎಎಪಿಗೆ ರಾಷ್ಟ್ರೀಯ ಪಕ್ಷದ ಮಾನ್ಯತೆ: 13ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಪಕ್ಷದ ಮಾನ್ಯತೆ ಕೋರಿ ಆಮ್ ಆದ್ಮಿ ಪಕ್ಷ (ಎಎಪಿ) ಸಲ್ಲಿಸಿರುವ ಮನವಿಗೆ ಸಂಬಂಧಿಸಿ ಏ. 13ರ ಒಳಗೆ ನಿರ್ಧಾರ ಕೈಗೊಳ್ಳಿ' ಎಂದು ಹೈಕೋರ್ಟ್, ಕೇಂದ್ರ ಚುನಾವಣಾ ಆಯೋಗಕ್ಕೆ (ಇಸಿಐ) ನಿರ್ದೇಶಿಸಿದೆ.

'ಎಎಪಿ ಮೂರುವರೆ ತಿಂಗಳ ಹಿಂದೆ ಸಲ್ಲಿಸಿರುವ ಮನವಿಗೆ ಸಂಬಂಧಿಸಿ ಕೇಂದ್ರ ಚುನಾವಣಾ ಆಯೋಗವು ಯಾವುದೇ ನಿರ್ಧಾರ ಕೈಗೊಂಡಿಲ್ಲ' ಎಂದು ಆಕ್ಷೇಪಿಸಿ ಎಎಪಿ ಕಾರ್ಯದರ್ಶಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ನಿರ್ದೇಶಿಸಿತು.

₹ 80 ಕೋಟಿ ಮೌಲ್ಯದ ನಗದು, ಸಾಮಗ್ರಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಇದುವರೆಗೂ ₹ 77.93 ಕೋಟಿ ಮೌಲ್ಯದ ನಗದು, ಮದ್ಯ, ಮತದಾರರಿಗೆ ಆಮಿಷ ಒಡ್ಡಲು ಬಳಸುವ ವಸ್ತುಗಳು, ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಕುರಿತು ಪ್ರಕಟಣೆ ನೀಡಿರುವ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಕಚೇರಿ, ನೀತಿ ಸಂಹಿತೆ ಜಾರಿಯಾದ ದಿನದಿಂದ ಇಲ್ಲಿಯವರೆಗೂ ₹ 27.38 ಕೋಟಿ ನಗದು ವಶಪಡಿಸಿಕೊಳ್ಳಲಾಗಿದೆ. ₹ 26.38 ಕೋಟಿ ಮೌಲ್ಯದ 4.25 ಲಕ್ಷ ಲೀಟರ್ ಮದ್ಯ, ₹ 9.87 ಕೋಟಿ ಮೌಲ್ಯದ 25.24 ಕೆ.ಜಿ. ಚಿನ್ನ, ₹ 92.90 ಲಕ್ಷ ಮೌಲ್ಯದ 134.42 ಕೆ.ಜಿ. ಬೆಳ್ಳಿ, ₹ 87.89 ಲಕ್ಷ ಮೌಲ್ಯದ 131.12 ಕೆ.ಜಿ. ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ. ಮತದಾರರಿಗೆ ಆಮಿಷ ಒಡ್ಡಲು ಬಳಸುವುದಕ್ಕಾಗಿ ಸಂಗ್ರಹಿಸಿದ್ದ ಹಾಗೂ ಸಾಗಿಸುತ್ತಿದ್ದ ₹12.48 ಕೋಟಿ ಮೌಲ್ಯದ ವಿವಿಧ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುನಾವಣಾ ಅಕ್ರಮದ ಆರೋಪದಡಿ ಒಟ್ಟು 627 ಎಫ್‌ಐಆರ್‌ಗಳನ್ನು ದಾಖಲು ಮಾಡಲಾಗಿದೆ.



ಬಂಡೀಪುರಕ್ಕೆ ಮೋದಿ: ಹೆದ್ದಾರಿಯಲ್ಲಿ ಸಂಚಾರ ನಿರ್ಬಂಧ

ಚಾಮರಾಜನಗರ: 'ಇದೇ 9ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡುತ್ತಿರುವುದರಿಂದ ಭದ್ರತಾ ಕ್ರಮವಾಗಿ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ಗುಂಡ್ಲುಪೇಟೆಯಿಂದ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 181 ಮತ್ತು 766ರಲ್ಲಿ (ಊಟಿ ರಸ್ತೆ) ಭಾರಿ ವಾಹನಗಳ ಸಂಚಾರವನ್ನು ಶುಕ್ರವಾರ (ಏ.7) ಸಂಜೆ 4ರಿಂದ 9ರ ಮಧ್ಯಾಹ್ನ 12ರವರೆಗೆ ಹಾಗೂ ಸರ್ಕಾರಿ ಬಸ್ ಮತ್ತು ವಾಹನಗಳನ್ನು ಬಿಟ್ಟು ಉಳಿದೆಲ್ಲ ವಾಹನಗಳ ಸಂಚಾರವನ್ನು ಶನಿವಾರ (ಏ.8) ಸಂಜೆ 4ರಿಂದ 9ರ ಮಧ್ಯಾಹ್ನ 12ರವರೆಗೆ ನಿರ್ಬಂಧಿಸಲಾಗಿದೆ.

ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಗುರುವಾರ ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ಪ್ರಧಾನಿ ಭೇಟಿ ಕಾರಣಕ್ಕೆ ರಸ್ತೆ ನಿರ್ವಹಣೆ, ಇತರ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಸಲುವಾಗಿ ಮತ್ತು ರಕ್ಷಣಾ ಹಿತದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳದ ಬಗ್ಗೆ ಆರೋಗ್ಯ ಇಲಾಖೆ ಕಳವಳ

ಕೋವಿಡ್ ಮಾರ್ಗಸೂಚಿ ಕಡೆಗಣಿಸಿ ಪ್ರಚಾರ

• ವರುಣ ಹೆಗಡೆ

ಬೆಂಗಳೂರು: ವಿಧಾನಸಭೆ ಚುನಾವಣೆ ಪ್ರಯುಕ್ತ ಬಿರುಸಿನ ಪ್ರಚಾರ ಕೈಗೊಂಡಿರುವ ರಾಜಕೀಯ ಪಕ್ಷಗಳು, ನಗರದ ವಿವಿಧೆಡೆ ಸಾವಿರಾರು ಸಂಖ್ಯೆಯಲ್ಲಿ ಜನರನ್ನು ಒಂದೆಡೆ ಸೇರಿಸಿ ಸಭೆ, ಸಮಾರಂಭ, ರ‍್ಯಾಲಿಗಳನ್ನು ನಡೆಸುತ್ತಿವೆ. ಇದರಿಂದಾಗಿ ಮೇ ಅಂತ್ಯದವರೆಗೂ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಇರುವ ಬಗ್ಗೆ ಆರೋಗ್ಯ ಇಲಾಖೆ ಲೆಕ್ಕಾಚಾರ ಹಾಕಿದೆ.

ಎರಡು ವಾರಗಳಿಂದ ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಪಡೆದಿದೆ. ಮಾರ್ಚ್ ತಿಂಗಳ ಮೊದಲ ವಾರ 50ರ ಆಸುಪಾಸಿನಲ್ಲಿದ್ದ ಕೋವಿಡ್ ಹೊಸ ಪ್ರಕರಣ, ಈಗ 200ರ ಗಡಿ ಸಮೀಪಿಸಿದೆ. ಚುನಾವಣೆ ಘೋಷಣೆಯಾದ ಬೆನ್ನಲ್ಲೇ ಚುನಾವಣಾ ಆಯೋಗವು ಕೋವಿಡ್ ಹರಡುವಿಕೆ ತಡೆಗೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಿ, ಸೋಂಕು ಹರಡದಂತೆ ಎಚ್ಚರವಹಿಸಲು ಸೂಚಿಸಿತ್ತು. ಆದರೆ, ದಿನ ಕಳೆದಂತೆ ರಾಜಕೀಯ ರ‍್ಯಾಲಿ, ಗುಂಪು ಪ್ರಚಾರ, ಸಮಾವೇಶ ಸೇರಿ ಚುನಾವಣಾ ಪ್ರಚಾರ ಕಾರ್ಯಕ್ರಮಗಳು ನಗರದ ಎಲ್ಲೆಡೆ ನಡೆಯುತ್ತಿದ್ದು, ಸಾವಿರಾರು ಜನರು ಗುಂಪಾಗಿ ಒಂದೆಡೆ ಸೇರುತ್ತಿದ್ದಾರೆ.

ಹೊರಾಂಗಣ ಸಮಾವೇಶ ಸೇರಿ ಚುನಾವಣಾ ಪ್ರಚಾರದಲ್ಲಿ ರಾಜಕೀಯ ಪಕ್ಷಗಳು ಕೋವಿಡ್ ನಿಯಮವನ್ನು ಗಾಳಿಗೆ ತೂರಿ, ಸೋಂಕು ಹರಡುವಿಕೆಗೆ ಕಾರಣವಾದರೆ ನಿಗದಿತ ಪಕ್ಷವನ್ನೇ ಹೊಣೆಯಾಗಿಸಲಾಗುತ್ತದೆ ಎಂದು ಚುನಾವಣಾ ಆಯೋಗ ಎಚ್ಚರಿಕೆ ನೀಡಿದೆ. ಅದೇ ರೀತಿ, ಕೊರೊನಾ ಸೋಂಕಿತರಿಗೆ ಮತದಾನಕ್ಕೆ ಪ್ರತ್ಯೇಕ ವ್ಯವಸ್ಥೆ ಸೇರಿ ವಿವಿಧ ಸೂಚನೆಗಳನ್ನು ನೀಡಲಾಗಿದೆ. ಕೋವಿಡ್ ಪ್ರಕರಣಗಳ ಹೆಚ್ಚಳದಿಂದ ಆರೋಗ್ಯ ಇಲಾಖೆಯೂ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಸೂಚಿಸಿದೆ.

'ದೇಶದ ವಿವಿಧೆಡೆ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯೂ ಏರಿಕೆಯಾಗುತ್ತಿದೆ. ಕೋವಿಡ್ ಮೊದಲ ಮೂರು ಅಲೆಗಳಲ್ಲಿ ಮಾಡಿದ ತಪ್ಪುಗಳಿಂದ ಪಾಠ ಕಲಿಯಬೇಕು. ರಾಜಕೀಯ ಪಕ್ಷಗಳು ಜನರನ್ನು ಒಂದೆಡೆ ಸೇರಿಸಿ, ಕೋವಿಡ್ ಹರಡುವಿಕೆಗೆ ಕಾರಣವಾಗಬಾರದು' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರೊಬ್ಬರು ತಿಳಿಸಿದರು.

ನಗರದಲ್ಲಿ 2020ರ ಮಾರ್ಚ್ 8ರಂದು ಪ್ರಥಮ ಕೋವಿಡ್ ಪ್ರಕರಣ ವರದಿಯಾಗಿತ್ತು. 2021ರ ಮಾರ್ಚ್ ಮೂರನೇ ವಾರದ ಬಳಿಕ ಕಾಣಿಸಿಕೊಂಡ 2ನೇ ಅಲೆಯಲ್ಲಿ ರೂಪಾಂತರಿ ವೈರಾಣು ವೇಗವಾಗಿ ವ್ಯಾಪಿಸಿಕೊಂಡು, ಜನರನ್ನು ಸಂಕಷ್ಟಕ್ಕೆ ದೂಡಿತ್ತು. 2021 ಜೂನ್ ಅಂತ್ಯಕ್ಕೆ ಎರಡನೇ ಅಲೆ ನಿಯಂತ್ರಣಕ್ಕೆ ಬಂದಿತ್ತು. 2022ರ ಜನವರಿಯಲ್ಲಿ ಓಮೈಕ್ರಾನ್ ತಳಿ ಪ್ರಕರಣಗಳ ಪತ್ತೆಯಿಂದಾಗಿ, ಮೂರನೇ ಅಲೆ ಕಾಣಿಸಿಕೊಂಡು, ಸೋಂಕು ವೇಗವಾಗಿ ಎಲ್ಲೆಡೆ ಹರಡಿತ್ತು.

'ಈಗ ಎಕ್ಸ್‌ಬಿಬಿ ತಳಿ ಕಾಣಿಸಿಕೊಂಡಿದ್ದು, ಸೋಂಕು ಎಲ್ಲೆಡೆ ವ್ಯಾಪಿಸಿಕೊಳ್ಳುವ ಸಾಧ್ಯತೆಯಿದೆ. ಮೇ ಅಂತ್ಯದವರೆಗೂ ಪ್ರಕರಣ ಏರುಗತಿ ಪಡೆಯಬಹುದು. ಆದ್ದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು' ಎಂದು ಆರೋಗ್ಯ ಇಲಾಖೆಯ ಆಯುಕ್ತ ಡಿ. ರಂದೀಪ್ ತಿಳಿಸಿದರು.

ಸಾವಿರಕ್ಕೂ ಅಧಿಕ ಪ್ರಕರಣ

ನಗರದಲ್ಲಿ ಫೆಬ್ರುವರಿ ಕೊನೆಯ ವಾರದಲ್ಲಿ 241 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದವು. ಆ ವೇಳೆ ನಗರದಲ್ಲಿ 180 ಸಕ್ರಿಯ ಪ್ರಕರಣಗಳಿದ್ದವು. 14 ಮಂದಿ ಮಾತ್ರ ಆಸ್ಪತ್ರೆ ದಾಖಲಾತಿಗೆ ಒಳಗಾಗಿದ್ದರು. ಈಗ ಒಂದು ವಾರದಲ್ಲಿ 1,046 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಸಕ್ರಿಯ ಪ್ರಕರಣ ಸಾವಿರದ ಗಡಿ ಸಮೀಪಿಸಿದೆ. 58 ಮಂದಿ ಆಸ್ಪತ್ರೆ ದಾಖಲಾತಿಗೆ ಒಳಗಾಗಿದ್ದು, 9 ಮಂದಿ ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೋವಿಡ್ ಏರಿಕೆ ಕಾರಣ ಪರೀಕ್ಷೆಗಳನ್ನೂ ಹೆಚ್ಚಿಸಲಾಗಿದೆ. ವಾರದಿಂದೀಚೆಗೆ 5 ಸಾವಿರದ ಆಸುಪಾಸಿನಲ್ಲಿ ನಡೆಯುತ್ತಿದ್ದ ಪರೀಕ್ಷೆಗಳ ಸಂಖ್ಯೆ, ಈಗ 20 ಸಾವಿರಕ್ಕೆ ತಲುಪಿದೆ.



ಚುನಾವಣೆ ರ‍್ಯಾಲಿ, ಸಮಾವೇಶಗಳಲ್ಲಿ ಜನರು ಒಂದೆಡೆ ಸೇರುತ್ತಿದ್ದಾರೆ. ಐಪಿಎಲ್ ಪಂದ್ಯಾವಳಿ, ವಿವಿಧ ಸಮಾರಂಭಗಳೂ ಪ್ರಕರಣ ಹೆಚ್ಚಳಕ್ಕೆ ಕಾರಣವಾಗುತ್ತವೆ.
ಡಿ. ರಂದೀಪ್, ಆರೋಗ್ಯ ಇಲಾಖೆ ಆಯುಕ್ತ



ಕೆಮ್ಮು, ಜ್ವರ ಸೇರಿ ವಿವಿಧ ಸಮಸ್ಯೆ ಇರುವವರು ಮುಖಗವಸು ಧರಿಸಬೇಕು. ಕೋವಿಡ್ ಹೆಚ್ಚಳದ ಬಗ್ಗೆ ಈ ವೇಳೆ ಗಮನಹರಿಸಬೇಕು.
ಡಾ. ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

ಸುದ್ದಿ 2 ನಿಮಿಷ

'ಆಮಿಷ, ಅಕ್ರಮದ ವಿರುದ್ಧ ಜಾಗೃತಿ ಮೂಡಿಸಬೇಕು'

ಬೆಂಗಳೂರು: 'ಚುನಾವಣೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಜೊತೆಗೆ, ವಿರೋಧ ಪಕ್ಷಗಳ ಆಮಿಷ ಮತ್ತು ಅಕ್ರಮಗಳ ಬಗ್ಗೆಯೂ ಜಾಗೃತಿ ಮೂಡಿಸಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ವಕೀಲರು, ಕಾನೂನು ಪ್ರತಿನಿಧಿಗಳು ಮತ್ತು ಚುನಾವಣಾ ಏಜೆಂಟರಿಗೆ ಗುರುವಾರ ನಡೆದ ತರಬೇತಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಚುನಾವಣಾ ಪ್ರಕ್ರಿಯೆ ಹಾಗೂ ಮತದಾನದ ವಿಷಯದಲ್ಲಿ ಜನರಿಗೆ ಜಾಗೃತಿ ಮೂಡಿಸುವುದು ಎಲ್ಲರ ಕರ್ತವ್ಯವಾಗಿದೆ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್ ಪರವಾದ ಅಲೆಯಿದೆ. ಅದಕ್ಕೆ ಪೂರಕ ಎಂಬಂತೆ ಅತೀ ಹೆಚ್ಚು ಜನರು ಕಾಂಗ್ರೆಸ್ ಬಗ್ಗೆ ವಿಶ್ವಾಸ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ, ವಿರೋಧ ಪಕ್ಷಗಳು ವಂಚನೆಯ ಮೂಲಕ ಅಕ್ರಮ ನಡೆಸಲು ಮುಂದಾಗಬಹುದು. ಈ ಬಗ್ಗೆ ಜಾಗೃತರಾಗಿರಬೇಕು' ಎಂದು ಅವರು ಸಲಹೆ ನೀಡಿದರು.

ರಾಮಯ್ಯ ವಿವಿ: ಪದವಿ ಪ್ರದಾನ



ಬೆಂಗಳೂರು: ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯವು ಇತ್ತೀಚೆಗೆ ಆಯೋಜಿಸಿದ್ದ 39ನೇ ವಾರ್ಷಿಕ ವೈದ್ಯಕೀಯ ಪದವಿ ಪ್ರದಾನ ಸಮಾರಂಭದಲ್ಲಿ 335 ವಿದ್ಯಾರ್ಥಿಗಳಿಗೆ ವೈದ್ಯಕೀಯ ಪದವಿಯನ್ನು ಪ್ರದಾನ ಮಾಡಲಾಯಿತು.

ಕಾಲೇಜಿನ ವಿವಿಧ ಶೈಕ್ಷಣಿಕ ವಿಭಾಗಗಳಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದ 31 ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ವಿತರಿಸಲಾಯಿತು.

ಈ ಸಮಾರಂಭವನ್ನು ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಆರ್. ಜಯರಾಂ ಉದ್ಘಾಟಿಸಿದರು. ಐ.ಸಿ.ಎಂ.ಆರ್‌ನ ನಿವೃತ್ತ ನಿರ್ದೇಶಕ ಡಾ. ಬಲರಾಮ್ ಭಾರ್ಗವ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ, ಗೋಕುಲ ಶಿಕ್ಷಣ ಪ್ರತಿಷ್ಠಾನದ ನಿರ್ದೇಶಕ ಎಂ.ಆರ್. ಸಂಪಗಿರಾಮಯ್ಯ, ಮುಖ್ಯಕಾರ್ಯನಿರ್ವಾಹಕ ಎಂ.ಆರ್. ಶ್ರೀನಿವಾಸಮೂರ್ತಿ, ರಾಮಯ್ಯ ಅನ್ವಯಿಕ ವಿಶ್ವವಿದ್ಯಾಲಯದ ಉಪಕುಲಪತಿ ಕೆ.ಕೆ. ರೈನಾ ಇದ್ದರು.

'ಮಾಡಾಳ್ ವಿರುದ್ಧ ದೂರು ಕೊಟ್ಟಿದ್ದಕ್ಕೆ ಜೀವ ಬೆದರಿಕೆ'

ಬೆಂಗಳೂರು: 'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಅಕ್ರಮಗಳ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದಕ್ಕಾಗಿ ನನಗೆ ಜೀವ ಬೆದರಿಕೆಯಿದೆ' ಎಂದು ಜಿ.ಆರ್. ಶಿವಶಂಕರ್ ಅವರು ಮಾಗಡಿ ರಸ್ತೆ ಠಾಣೆಗೆ ದೂರು ನೀಡಿದ್ದಾರೆ.



ಕೆ.ಮಾಡಾಳ್ ವಿರೂಪಾಕ್ಷಪ್ಪ

'ಬಸವೇಶ್ವರನಗರ ನಿವಾಸಿ ಶಿವಶಂಕರ್ ಅವರು ಏಪ್ರಿಲ್ 5ರಂದು ದೂರು ನೀಡಿದ್ದಾರೆ. ದೂರಿನ ಸಂಗತಿಗಳನ್ನು ಪರಿಶೀಲಿಸಿದಾಗ, ನೇರ ಪುರಾವೆಗಳು ಲಭ್ಯವಾಗಿಲ್ಲ. ಹೀಗಾಗಿ, ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ಮಾತ್ರ ದಾಖಲಿಸಿಕೊಳ್ಳಲಾಗಿದೆ. ನ್ಯಾಯಾಲಯದ ನಿರ್ದೇಶನದನ್ವಯ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

ದೂರಿನ ವಿವರ: 'ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ. ಮಹೇಶ್, ಪ್ರಧಾನ ವ್ಯವಸ್ಥಾಪಕ ಉಮಾಶಂಕರ್ ಅಪಾಲೆ ಹಾಗೂ ಇತರರ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ್ದೆ' ಎಂದು ಶಿವಶಂಕರ್ ದೂರಿನಲ್ಲಿ ತಿಳಿಸಿದ್ದಾರೆ.

'ದೂರು ನೀಡಿದರೆಂಬ ಕಾರಣಕ್ಕೆ, ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಕೆಲವರು, ನನ್ನ ಹಾಗೂ ನನ್ನ ಮಗನನ್ನು ಹಿಂಬಾಲಿಸುತ್ತಿರುವುದು ಕಂಡುಬಂದಿದೆ. ನನಗೆ ಹಾಗೂ ನನ್ನ ಕುಟುಂಬಕ್ಕೆ ಜೀವ ಬೆದರಿಕೆ ಇದ್ದು, ಸೂಕ್ತ ರಕ್ಷಣೆ ನೀಡಿ. ಯಾವುದೇ ಅನಾಹುತವಾದರೂ ಅದಕ್ಕೆ ಮಾಡಾಳ್ ವಿರೂಪಾಕ್ಷಪ್ಪ, ಮಹೇಶ್, ಉಮಾಶಂಕರ್ ಹಾಗೂ ಇತರರು ಕಾರಣ' ಎಂದೂ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಭಾರತದ ಪೌರತ್ವ: ಹೈಕೋರ್ಟ್ ನಕಾರ

ಭಾರತೀಯ ತಾಯಿ–ಪಾಕಿಸ್ಥಾನಿ ತಂದೆ: ಇಬ್ಬರು ಮಕ್ಕಳ ಕಾನೂನು ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನದ ತಂದೆ ಮತ್ತು ಭಾರತದ ತಾಯಿಗೆ ದುಬೈನಲ್ಲಿ ಜನಿಸಿರುವ ಇಬ್ಬರು ಮಕ್ಕಳಿಗೆ ಭಾರತದ ಪೌರತ್ವ ನೀಡಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂಬ ಮನವಿಯನ್ನು ಪುರಸ್ಕರಿಸಲು ಹೈಕೋರ್ಟ್ ನಿರಾಕರಿಸಿದೆ.

'ನಮಗೆ ಭಾರತದ ಪೌರತ್ವ ನೀಡುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಬೆಂಗಳೂರಿನಲ್ಲಿ ನೆಲೆಸಿರುವ 17 ವರ್ಷದ ಬಾಲಕಿ ಮತ್ತು 14 ವರ್ಷದ ಬಾಲಕ ತಮ್ಮ ತಾಯಿಯ ಮೂಲಕ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿ ಆದೇಶಿಸಿದೆ.

'ಪೌರತ್ವ ತ್ಯಜಿಸಲು 21 ವರ್ಷ ವಯಸ್ಸಾಗಬೇಕು ಎಂಬುದಾಗಿ ಪಾಕಿಸ್ತಾನದ ನಿಯಮವಿದ್ದು, ಅರ್ಜಿದಾರರು ಭಾರತದ ಕಾನೂನಿಗೆ ಹೊಂದಿಕೊಳ್ಳಲು ಸಾಧ್ಯವಿಲ್ಲ. ಪಾಕಿಸ್ತಾನದ ಪೌರತ್ವವನ್ನು ತ್ಯಜಿಸಿದ ಬಳಿಕವೇ ಅರ್ಜಿದಾರರು ಭಾರತದ ಪೌರತ್ವ ಕೋರಿ ಅರ್ಜಿ ಸಲ್ಲಿಸಬಹುದು' ಎಂದು ನ್ಯಾಯಪೀಠ ತಿಳಿಸಿದೆ.



ಪ್ರಕರಣವೇನು?: ಭಾರತದ ಅಮೀನಾ ಎಂಬುವರು ದುಬೈನಲ್ಲಿರುವ ಪಾಕಿಸ್ಥಾನದ ಪ್ರಜೆ ಅಸ್ಸಾದ್ ಮಲ್ಲಿಕ್ ಎಂಬುವರನ್ನು 2002ರಲ್ಲಿ ಷರಿಯಾ ಕಾನೂನಿನ ಪ್ರಕಾರ ವಿವಾಹವಾಗಿದ್ದರು. ದಂಪತಿಗೆ ದುಬೈನಲ್ಲಿ 2004ರಲ್ಲಿ ಮೊದಲ ಮಗು ಮತ್ತು 2008ರಲ್ಲಿ ಎರಡನೇ ಮಗು ಜನಿಸಿತ್ತು. ನಂತರದಲ್ಲಿ ಈ ದಂಪತಿ ದುಬೈ ನ್ಯಾಯಾಲಯದಲ್ಲಿ ಪರಸ್ಪರ ಒಪ್ಪಿಗೆಯ ಮೇರೆಗೆ ವಿಚ್ಛೇದನ ಪಡೆದಿದ್ದರು. ಮಕ್ಕಳ ಮೇಲಿನ ಹಕ್ಕನ್ನು ತಾಯಿಗೆ (ಅಮೀನಾ) ಬಿಟ್ಟುಕೊಡಲಾಗಿತ್ತು. ಮಕ್ಕಳು ದುಬೈನಲ್ಲಿ ಉದ್ಯೋಗದಲ್ಲಿದ್ದ ತಾಯಿಯೊಂದಿಗೇ ನೆಲೆಸಿದ್ದರು.

'ದುಬೈನಲ್ಲಿ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ' ಎಂಬ ಕಾರಣಕ್ಕೆ ಅಮೀನಾ ಮಕ್ಕಳೊಂದಿಗೆ ಬೆಂಗಳೂರಿನಲ್ಲಿದ್ದ ತಮ್ಮ ಪೋಷಕರ ಮನೆಗೆ ಹಿಂದಿರುಗಲು 2021ರಲ್ಲಿ ಮುಂದಾಗಿದ್ದರು. ಮಕ್ಕಳು ಪಾಕಿಸ್ಥಾನಿ ಪಾಸ್‌ಪೋರ್ಟ್ ಹೊಂದಿರುವ ಕಾರಣ ಭಾರತಕ್ಕೆ ಕರೆತರಲು ಅನುಮತಿ ಕೋರಿ ದುಬೈನಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ಮನವಿ ಸಲ್ಲಿಸಿದ್ದರು.

'ಇದನ್ನು ಪರಿಗಣಿಸಿದ್ದ ಭಾರತದ ರಾಯಭಾರ ಕಚೇರಿ, 'ಪಾಕಿಸ್ತಾನದ ಪಾಸ್‌ಪೋರ್ಟ್ ಹಿಂದಿರುಗಿಸಿದ ಬಳಿಕ ಅವರ ಪೌರತ್ವದ ಕುರಿತು ಮುಂದಿನ ನಿರ್ಧಾರ ತೆಗೆದುಕೊಳ್ಳಬೇಕು' ಎಂಬ ಷರತ್ತು ವಿಧಿಸಿ ಮಾನವೀಯತೆಯ ಆಧಾರದಡಿ ಭಾರತಕ್ಕೆ ತೆರಳಲು 2021ರ ಮೇ 31ರಂದು ತಾತ್ಕಾಲಿಕ ಪಾಸ್‌ಪೋರ್ಟ್ ನೀಡಿದ್ದರು.

ದುಬೈನಲ್ಲಿರುವ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಪಾಕಿಸ್ತಾನದ ರಾಯಭಾರ ಕಚೇರಿಯು, 'ಅಪ್ರಾಪ್ತರಿಗೆ ಭಾರತದ ಪೌರತ್ವ ನೀಡುವುದಕ್ಕೆ ನಮಗೆ ಅಡ್ಡಿಯಿಲ್ಲ. ಆದರೆ, ಪಾಕಿಸ್ತಾನದ ಪೌರತ್ವ ಕಾಯ್ದೆ ಪ್ರಕಾರ ಪಾಕಿಸ್ತಾನದ ಪೌರತ್ವ ತ್ಯಜಿಸಬೇಕಾದರೆ 21 ವರ್ಷವಾಗಿರುವುದು ಕಡ್ಡಾಯ. ಅದರಂತೆ ಮಕ್ಕಳಿಗೆ 21 ವರ್ಷವಾಗುವತನಕ ಪೌರತ್ವ ತ್ಯಜಿಸಲು ಅರ್ಜಿ ಸಲ್ಲಿಸಲು ಅವಕಾಶವಿಲ್ಲ' ಎಂದು ಸ್ಪಷ್ಟಪಡಿಸಿದ್ದರು.

ಮತ್ತೊಂದೆಡೆ ಮಕ್ಕಳೊಂದಿಗೆ ಭಾರತಕ್ಕೆ ಬಂದಿದ್ದ ಅಮೀನಾ, 'ನನ್ನ ಇಬ್ಬರೂ ಮಕ್ಕಳಿಗೆ ಭಾರತದ ಪೌರತ್ವ ನೀಡಬೇಕು' ಎಂದು ಕೋರಿ ಕೇಂದ್ರ ಗೃಹ ಸಚಿವಾಲಯಕ್ಕೆ 2022ರ ಮೇ 5ರಂದು ಪತ್ರ ಬರೆದು ಮನವಿ ಮಾಡಿದ್ದರು. ಇದಕ್ಕೆ ಕೇಂದ್ರ ಗೃಹ ಸಚಿವಾಲಯದಿಂದ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ಜುಲೈನಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣಾ ಹಂತದಲ್ಲಿರುವಾಗಲೇ ಕೇಂದ್ರ ಗೃಹ ಸಚಿವಾಲಯ 2022ರ ಸೆಪ್ಟೆಂಬರ್‌ನಲ್ಲಿ ಅಮೀನಾ ಮನವಿಯನ್ನು ತಿರಸ್ಕರಿಸಿತ್ತು.

ಸಿಎನ್‌ಜಿ, ಪಿಎನ್‌ಜಿ ದರ ತುಸು ಇಳಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೃಹಬಳಕೆಯ ಪಿಎನ್‌ಜಿ ಮತ್ತು ವಾಹನಗಳಿಗೆ ಬಳಸುವ ಸಿಎನ್‌ಜಿ ತೈಲದ ದರವು ಶೇ 10ರವರೆಗೂ ಕಡಿಮೆಯಾಗಲಿದೆ.

ಈ ಇಂಧನಗಳ ದರ ನಿಗದಿ ಸೂತ್ರ ಬದಲಾವಣೆಗೆ ಹಾಗೂ ದರ ನಿಗದಿಗೆ ಮಿತಿ ನಿಗದಿಪಡಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ. ಇದರ ಪರಿಣಾಮವಾಗಿ ದರ ಇಳಿಕೆಯಾಗಲಿದೆ.

ಹೊಸ ಸೂತ್ರದಂತೆ ಈ ಇಂಧನಗಳ ದರವನ್ನು ಈಗಿನಂತೆ ದ್ವೈವಾರ್ಷಿಕದ ಬದಲಿಗೆ ಪ್ರತಿ ತಿಂಗಳು ಪರಿಷ್ಕರಣೆ ಮಾಡಲಾಗುತ್ತದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಸುದ್ದಿಗಾರರಿಗೆ ತಿಳಿಸಿದರು.



ರಥೋತ್ಸವ...

ನೆಲಮಂಗಲ ಪಟ್ಟಣದ ಕವಾಡಿಮಠ ರುದ್ರೇಶ್ವರಸ್ವಾಮಿಯ ರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ವಿಜೃಂಭಣೆಯಿಂದ ನಡೆಯಿತು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ನೆಲಮಂಗಲ: ಪಟ್ಟಣದ ಹರ್ಷ ಆಸ್ಪತ್ರೆ ವತಿಯಿಂದ ಆಸ್ಪತ್ರೆಯ ಆವರಣದಲ್ಲಿ ಶುಕ್ರವಾರ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಎಸ್.ಶಿವಕುಮಾರ್ ತಿಳಿಸಿದ್ದಾರೆ.

ಹೃದಯ ತಜ್ಞ, ಮೂಳೆ ಮತ್ತು ಕೀಲು, ಮಕ್ಕಳ ರೋಗ, ದಂತ, ಮಾನಸಿಕ ರೋಗ ತಜ್ಞರು ಶಿಬಿರದಲ್ಲಿ ತಪಾಸಣೆ ಮಾಡಲಿದ್ದಾರೆ ಹಾಗೂ ವಿವಿಧ ಪರೀಕ್ಷೆಗಳನ್ನು ಉಚಿತವಾಗಿ ಮಾಡಲಾಗುವುದು. ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಿ ಎಂದು ಅವರು ತಿಳಿಸಿದ್ದಾರೆ.

ಐಒಸಿ ಪ್ರಾದೇಶಿಕ ವ್ಯವಸ್ಥಾಪಕಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನ (ಐಒಸಿ) ಪ್ರಾದೇಶಿಕ ವ್ಯವಸ್ಥಾಪಕಿ ಅಪರ್ಣಾ ಕುಮಾರಿ (41) ಅವರು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಎಸ್.ಜೆ. ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೆಹಲಿಯ ಅಪರ್ಣಾ ಕುಮಾರಿ, ಇತ್ತೀಚೆಗಷ್ಟೇ ವರ್ಗಾವಣೆಯಾಗಿ ಬೆಂಗಳೂರಿನ ಕಚೇರಿಗೆ ಬಂದಿದ್ದರು. ಪತಿ ಹಾಗೂ ಮಕ್ಕಳಿಬ್ಬರು ದೆಹಲಿಯಲ್ಲೇ ನೆಲೆಸಿದ್ದರು. ಆತ್ಮಹತ್ಯೆ ಸಂಬಂಧ ಪತಿಗೆ ಮಾಹಿತಿ ನೀಡಿದ್ದು, ಅವರು ಬೆಂಗಳೂರಿಗೆ ಬಂದ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ಪೊಲೀಸರು ಹೇಳಿದರು.

'ಬಿಬಿಎಂಪಿ ಕೇಂದ್ರ ಕಚೇರಿ ಸಮೀಪದ ಯೂನಿಟಿ ಕಟ್ಟಡದಲ್ಲಿ ಐಒಸಿ ಕಚೇರಿಯಿದೆ. ಗುರುವಾರ ಸಂಜೆ 6 ಗಂಟೆಯಾದರೂ ಅಪರ್ಣಾ ಕುಮಾರಿ ಕಚೇರಿಯಲ್ಲಿದ್ದರು. ನಾಲ್ಕನೇ ಮಹಡಿಯ ಕಚೇರಿಯ ಕಿಟಕಿ ಬಾಗಿಲು ತೆರೆದು ಹೊರಗೆ ಜಿಗಿಯಲು ಮುಂದಾಗಿದ್ದರು. ಅದನ್ನು ಗಮನಿಸಿದ್ದ ಭದ್ರತಾ ಸಿಬ್ಬಂದಿ ರಕ್ಷಣೆಗೆ ಹೊರಟಿದ್ದರು. ಸಿಬ್ಬಂದಿಯನ್ನು ಕಂಡಿದ್ದ ಅಪರ್ಣಾ ಕುಮಾರಿ ಅವರು, ಕಟ್ಟಡದಿಂದ ಏಕಾಏಕಿ ಜಿಗಿದಿದ್ದರು' ಎಂದು ಪೊಲೀಸರು ತಿಳಿಸಿದರು.

'ತೀವ್ರ ಗಾಯಗೊಂಡ ಅಪರ್ಣಾ ಅವರು ಮೃತಪಟ್ಟಿದ್ದಾರೆ. ಕಚೇರಿಯಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ. ಆತ್ಮಹತ್ಯೆಗೆ ಕಾರಣ ವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಮಾಹಿತಿ ನೀಡಿದರು.

ಅಪರಾಧ ಸುದ್ದಿ

ನಕಲಿ ಆದೇಶ ಸೃಷ್ಟಿ

ಬೆಂಗಳೂರು: ವಾಣಿಜ್ಯ ಮತ್ತು ಕೈಗಾರಿಕೋದ್ಯಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಪಂಕಜ್ ಕುಮಾರ್ ಪಾಂಡೆ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ ಪತ್ರ ಸೃಷ್ಟಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪಂಕಜ್‌ಕುಮಾರ್ ಪಾಂಡೆ ಅವರು ನಕಲಿ ಆದೇಶ ಪತ್ರದ ಸಂಬಂಧ ಇತ್ತೀಚೆಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಶಿವಶರಣ ಎಂಬುವವರನ್ನು ಗ್ರೂಪ್–ಡಿ ಹುದ್ದೆಗೆ ನೇಮಕವಾಗಿರುವ ರೀತಿಯಲ್ಲಿ ನಕಲಿ ನೇಮಕಾತಿ ಆದೇಶ ಪತ್ರ ಸೃಷ್ಟಿಸಲಾಗಿತ್ತು. ಅದರಲ್ಲಿ ಪಂಕಜ್‌ಕುಮಾರ್ ಹೆಸರಿನ ನಕಲಿ ಸಹಿ ಇತ್ತು.'

'ಕೆಲಸಕ್ಕೆ ಹಾಜರಾಗಲೆಂದು ನಕಲಿ ನೇಮಕಾತಿ ಪತ್ರದ ಸಮೇತ ಏಪ್ರಿಲ್ 1ರಂದು ಶಿವಶರಣ ಕಚೇರಿಗೆ ಬಂದಿದ್ದ. ನೇಮಕಾತಿ ಪತ್ರ ಪರಿಶೀಲನೆ ನಡೆಸಿದಾಗ, ಅದು ನಕಲಿ ಎಂಬುದು ಗೊತ್ತಾಗಿತ್ತು. ಈ ಸಂಗತಿಯನ್ನು ಶಿವಶರಣ ಅವರಿಗೆ ತಿಳಿಸಿ ವಾಪಸ್ ಕಳುಹಿಸಲಾಗಿದೆ. ಯಾರೋ ಹಣ ಪಡೆದು ನೇಮಕಾತಿ ಆದೇಶ ಪ್ರತಿ ನೀಡಿರುವ ಸಾಧ್ಯತೆ ಇದೆ' ಎಂದು ಪೊಲೀಸರು ತಿಳಿಸಿದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು


ಬೆಂಗಳೂರು: ನಗರದ ಚಿಕ್ಕಜಾಲ ಹಾಗೂ ಹೆಣ್ಣೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

ಮಾರನಾಯಕನಹಳ್ಳಿ ನಿವಾಸಿ ರಾಜು (40) ಹಾಗೂ ನಾಗಾವರದ ಶಶಿಧರ್ (24) ಮೃತರು.

'ಲಾರಿ ಚಾಲಕ ರಾಜು, ಗುರುವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಬೈಕ್‌ನಲ್ಲಿ ಸಾದಹಳ್ಳಿ ಗೇಟ್ ಬಳಿ ಹೊರಟಿದ್ದರು. ಅದೇ ರಸ್ತೆಯಲ್ಲಿ ತೆರಳುತ್ತಿದ್ದ ಬಿಎಂಟಿಸಿ ಬಸ್, ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ರಸ್ತೆಗೆ ಬಿದ್ದು ತೀವ್ರ ಗಾಯಗೊಂಡಿದ್ದ ರಾಜು ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ಹೇಳಿದರು.

ಸಾಫ್ಟ್‌ವೇರ್ ಎಂಜಿನಿಯರ್ ಸಾವು: 'ಮೃತ ಶಶಿಧರ್, ಸಾಫ್ಟ್‌ವೇರ್ ಎಂಜಿನಿಯರ್. ಬುಧವಾರ ರಾತ್ರಿ 11 ಗಂಟೆ ಸುಮಾರಿಗೆ ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ಹೊರಟಿದ್ದಾಗ ಅಪಘಾತ ಸಂಭವಿಸಿದೆ' ಎಂದು ಹೆಣ್ಣೂರು ಸಂಚಾರ ಪೊಲೀಸರು ಹೇಳಿದರು.


ನಗರದಲ್ಲಿ ಇಂದು



ವಾರ್ಷಿಕ ಬೈಠಕ್ ಉದ್ಘಾಟನೆ: ಅತಿಥಿಗಳು: ಕಸ್ತೂರಿರಂಗನ್, ಕೃಷ್ಣಗೋಪಾಲ್, ಅರುಣ್ ಯೋಗಿರಾಜ್, ಅಧ್ಯಕ್ಷತೆ: ದುಸಿ ರಾಮಕೃಷ್ಣ ರಾವ್, ಆಯೋಜನೆ ಮತ್ತು ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಬೆಳಿಗ್ಗೆ 9

ಕಸ್ತೂರಿರಂಗನ್

'ಮಂಜುನಾಥ' ಸಂಗೀತ ಕಛೇರಿ, 'ಲಲಿತ ಕಲಾ ಪೋಷಕ ಮಣಿ' ಪ್ರಶಸ್ತಿ ಪ್ರದಾನ: ಗಾಯನ: ಅದಿತಿ ಬಿ. ಪ್ರಹ್ಲಾದ್, ಶ್ರೇಯಾ ಕೊಳತ್ತಾಯ, ಪಿಟೀಲು: ಕಾರ್ತಿಕೇಯ ಆರ್., ಮೃದಂಗ: ಕೌಶಿಕ್ ಶ್ರೀಧರ್, ಪ್ರಶಸ್ತಿ ಪುರಸ್ಕೃತರು: ಜಿ.ವಿ. ಕೃಷ್ಣಪ್ರಸಾದ್, ಪ್ರಶಸ್ತಿ ಪ್ರದಾನ: ಆನೂರು ಅನಂತಕೃಷ್ಣ ಶರ್ಮ, ಅಧ್ಯಕ್ಷತೆ: ಆರ್.ಕೆ. ಪದ್ಮನಾಭ, ಆಯೋಜನೆ: ಮಣಿ ಕೃಷ್ಣಸ್ವಾಮಿ ಅಕಾಡೆಮಿ, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 9.45ರಿಂದ



ಆನೂರು ಅನಂತಕೃಷ್ಣ ಶರ್ಮ

'ಸುಸ್ವರ' ಸುಧಾ: ಗಾಯನ: ಎಂ. ವೆಂಕಟೇಶ ಕುಮಾರ್, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಕೇಶವ ಜೋಶಿ, ತಾಳ: ವೆಂಕಟೇಶ ಪುರೋಹಿತ, ಆಯೋಜನೆ: ಅನಾಮಿಕ, ವಿವೇಕ ಸಭಾಂಗಣ, ಯುವಪಥ, ವಿಜಯನಗರ ಮೆಟ್ರೊ ನಿಲ್ದಾಣ, ಬೆಳಿಗ್ಗೆ 9.45

ಮೈಲುಗಲ್ಲು ಆಚರಣೆ: ಅತಿಥಿಗಳು: ನಿರ್ಮಲಾ ಸೀತಾರಾಮನ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಸೌಮ್ಯಾ ರೆಡ್ಡಿ, ಎಂ.ಪಿ. ಶ್ಯಾಮ್, ಆಯೋಜನೆ: ಆರ್.ವಿ. ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಸ್ಥಳ: ಎನ್.ಎಂ.ಕೆ. ಆರ್.ವಿ. ಕಾಲೇಜ್ ಆಫ್ ವುಮೆನ್, ಜಯನಗರ, ಬೆಳಿಗ್ಗೆ 11

'ಪುಟ್ಟಣ್ಣ ಕಣಗಾಲ್, ಡಾ. ವಿಷ್ಣುವರ್ಧನ್' ನೆನಪಿನಲ್ಲಿ ಗೀತ ಗಾಯನ: ಅತಿಥಿಗಳು: ಸಿ. ಸೋಮಶೇಖರ್, ಡಿ. ಉದಯಶಂಕರ್, ಗಾಯನ: ಶ್ರೀನಾಥ್ ಭಾರದ್ವಾಜ್, ಶ್ರೀನಿವಾಸಮೂರ್ತಿ ಎಚ್.ಎಸ್., ಎಚ್.ಜಿ. ರಘು, ಜ್ಯೋತಿ ರವಿಪ್ರಕಾಶ್, ಅಂಜಲಿ ಹಳಿಯಾಳ, ವಿಜಯಾನಂದ ನಾಯಕ್, ಲಕ್ಷ್ಮೀ ಶ್ರೇಯಾಂಸಿ, ಸುಧಾ ಮಂಜುನಾಥ್, ಆಯೋಜನೆ: ಶೃತಿ ಲಯ ಸಂಗೀತ ಕಲ್ಚರಲ್ ಅಕಾಡೆಮಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

ಡಾ.ರಾಜ್‌ಕುಮಾರ್ ಅಭಿಮಾನಿ ಪುರಸ್ಕಾರ: ಉದ್ಘಾಟನೆ: ಎಸ್.ಎ. ಚಿನ್ನೇಗೌಡ್ರು, ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಪುರಸ್ಕಾರ ಪ್ರದಾನ: ಓಂಸಾಯಿ ಪ್ರಕಾಶ್, ಪುರಸ್ಕೃತರು: ಅ.ಕೃ. ಸೋಮಶೇಖರ್, ಶಂಕರ್ ಹೂಗಾರ, ಜಿ. ನಾಗರಾಜು, ಅತಿಥಿಗಳು: ಎ.ವಿ. ರವಿ, ಮೋಹನ್ ರಾವ್, ಬಿ.ಸಿ. ಗಣೇಶ್, ಆಯೋಜನೆ: ಸಂಸ್ಕೃತಿ ಸೌರಭ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಭಜನೆ, ಪ್ರವಚನ, ಹರಿನಾಮ ಸಂಕೀರ್ತನೆ: ಭಜನೆ: ಗುರುರಾಜ ಭಜನಾ ಮಂಡಳಿ, ಪ್ರವಚನ: ಕಲ್ಲಾಪುರ ಪವಮಾನಾಚಾರ್, ಆಯೋಜನೆ ಮತ್ತು ಸ್ಥಳ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಸೀತಾಪತಿ ಅಗ್ರಹಾರ, ಸಂಜೆ 6ರಿಂದ

ಪ್ರವಚನ ವಾಹಿನಿ: 'ಪೂಜಾ ಮಹತ್ವ' ಕುರಿತು ಪ್ರವಚನ: ಜಿ.ಎನ್. ಸಂಗೀತ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ವಿರೋಧಾಭಾಸ' ನೃತ್ಯ ಪ್ರಸ್ತುತಿ: ಪರಿಕಲ್ಪನೆ, ನೃತ್ಯ ಸಂಯೋಜನೆ ಮತ್ತು ಪ್ರದರ್ಶನ: ನವ್ಯಾ ನಟರಾಜನ್, ಸಂಗೀತ: ಎಂ.ಎಸ್. ಸುಖಿ, ಸಂಸ್ಕೃತ ಸಾಹಿತ್ಯ: ಅರ್ಜುನ್ ಭಾರದ್ವಾಜ್, ತಮಿಳು ಸಾಹಿತ್ಯ: ಎಸ್. ರಘುರಾಮನ್, ಬೆಳಕಿನ ವಿನ್ಯಾಸ: ಸೂರ್ಯರಾವ್, ವೇಷಭೂಷಣ: ಕೃತಿ ಉತ್ತಪ್ಪ, ಫ್ಲೈಯರ್ ವಿನ್ಯಾಸ: ರಾಜೀವ್ ಮಣಿಕೋತ್, ಛಾಯಾಗ್ರಹಣ: ಜಯಸಿಂಹ ರೆಡ್ಡಿ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಸಂಜೆ 7



ನವ್ಯಾ ನಟರಾಜನ್

ಮುತ್ಯಾಲಮ್ಮ ದೇವಿಯ ರಥೋತ್ಸವ: ಪಲ್ಲಕ್ಕಿ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ರಾಮೋತ್ಸವ ವಿಶೇಷ

ಶ್ರೀರಾಮೋತ್ಸವ: ರಾಮ ಸಾಮ್ರಾಜ್ಯ ಪಟ್ಟಾಭಿಷೇಕ, ಹರಿಕಥೆ: ಅನಘಾ ಮತ್ತು ತಂಡ, ಭರತನಾಟ್ಯ ಪ್ರದರ್ಶನ: ಪದ್ಮಿನಿ ಉಪಾಧ್ಯಾಯ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 10.15ರಿಂದ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಅಮೃತ ನಾರಾಯಣ ಮತ್ತು ತಂಡ, ಸಂಗೀತ ಕಛೇರಿ: ರಾಮಕೃಷ್ಣನ್ ಮೂರ್ತಿ, ಪಿಟೀಲು: ಚಾರುಮತಿ ರಘುರಾಂ, ಮೃದಂಗ: ವಿಜಯ್ ನಟೇಶನ್, ಜಿ. ಗುರುಪ್ರಸಾದ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ಶ್ರೀರಾಮೋತ್ಸವ: ಬೆಳಿಗ್ಗೆ 9ಕ್ಕೆ ಶ್ರೀರಾಮ ಪಟ್ಟಾಭಿಷೇಕ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಭರತನಾಟ್ಯ ಪ್ರದರ್ಶನ: ಜತಿನ್ ಅಕಾಡೆಮಿ ವಿದ್ಯಾರ್ಥಿಗಳಿಂದ, 'ಪಿಟೀಲು ಯುಗಳಗೀತೆ': ಮೈಸೂರು ಮಂಜುನಾಥ್ ಮತ್ತು ಸುಮಂತ್ ಮಂಜುನಾಥ್, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ಗಿರಿಧರ್ ಉಡುಪ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಸಂಜೆ 5.30ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಭರತನಾಟ್ಯ ಪ್ರದರ್ಶನ: ಅನನ್ಯಾ, ಗಾಯನ: ಅಮೃತಾ ಮುರಳಿ, ಪಿಟೀಲು: ಆರ್. ಕೆ. ಶ್ರೀರಾಮಕುಮಾರ್, ಮೃದಂಗ: ಅರುಣ್ ಪ್ರಕಾಶ್, ಘಟ: ಎಸ್.ಎನ್. ನಾರಾಯಣಮೂರ್ತಿ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15 ರಿಂದ

ರಾಮನವಮಿ ಕಾರ್ಯಕ್ರಮ: ಗಾಯನ: ವಸುಧಾ ಶ್ರೀಕಾಂತ್ ಕೊಟ್ಟೆ, ಪಿಟೀಲು: ಹ್ರಿಷಿತಾ ಕೇದಗೆ, ಮೃದಂಗ: ಅನಿರುದ್ಧ ವಾಸುದೇವ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮನವಮಿ ಸಂಗೀತೋತ್ಸವ: ತ್ರಿಚೂರ್ ಸಹೋದರರು, ದ್ವಂದ ಗಾಯನ: ರಾಮ್‌ಕುಮಾರ್ ಮೋಹನ್, ಕೃಷ್ಣ ಮೋಹನ್, ಪಿಟೀಲು: ವಿಶ್ವೇಶ್ ಚಂದ್ರಶೇಖರ್, ಮೃದಂಗ: ತ್ರಿಚೂರ್ ಆರ್. ಮೋಹನ್, ಘಟ: ಕೋವೈ ಸುರೇಶ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಲಕ್ಷ್ಮೀ ನಾಗರಾಜ್, ಇಂದು ನಾಗರಾಜ್, ಪಿಟೀಲು: ವೈಭವ್ ರಮಣಿ, ಮೃದಂಗ: ಅದಮ್ಯ ರಮಾನಂದ್, ಮೋರ್ಸಿಂಗ: ಭಾಗ್ಯಲಕ್ಷ್ಮಿ ಕೃಷ್ಣ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ದಂಪತಿ ಆತ್ಮಹತ್ಯೆ

ಬೆಂಗಳೂರು: ಪೀಣ್ಯ ಠಾಣೆ ವ್ಯಾಪ್ತಿಯ ಚೊಕ್ಕಸಂದ್ರದ ಮನೆಯೊಂದರಲ್ಲಿ ಜಗದೀಶ್ (35), ಅವರ ಪತ್ನಿ ನಂದಿನಿ (30) ನೇಣು ಹಾಕಿಕೊಂಡು ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ತುಮಕೂರಿನ ಜಗದೀಶ್ ಹಾಗೂ ನಂದಿನಿ, ಮೂರು ವರ್ಷಗಳ ಹಿಂದೆ ಮದುವೆಯಾಗಿದ್ದರು. ಜಗದೀಶ್, ಟೆಂಪೊ ಚಾಲಕ. ನಂದಿನಿ, ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ. ದಂಪತಿಗೆ ಮಕ್ಕಳು ಇರಲಿಲ್ಲ' ಎಂದು ಪೊಲೀಸರು ಹೇಳಿದರು.

'ಇಬ್ಬರೂ ಒಂದೇ ಫ್ಯಾನ್‌ಗೆ ನೇಣು ಹಾಕಿಕೊಂಡು ಗುರುವಾರ ಆತ್ಮಹತ್ಯೆಗೆ ಶರಣಾಗಿದ್ದಾರೆ. ಮನೆಯಲ್ಲಿ ಯಾವುದೇ ಮರಣ ಪತ್ರ ಸಿಕ್ಕಿಲ್ಲ' ಎಂದು ತಿಳಿಸಿದರು.

'ಕಾರ್ಡ್ ರಸ್ತೆ ಮೇಲ್ಸೇತುವೆ ಸುರಕ್ಷಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಸ್ಟ್ ಆಫ್ ಕಾರ್ಡ್ ರಸ್ತೆಯ ಮಂಜುನಾಥನಗರ ಮೇಲ್ಸೇತುವೆಯನ್ನು ತಜ್ಞರು ನಾಲ್ಕು ಬಾರಿ ತಪಾಸಣೆ ಮಾಡಿದ್ದು, ಯಾವುದೇ ತೊಂದರೆ ಇಲ್ಲ. ಸಾರ್ವಜನಿಕರು ವಾಹನಗಳಲ್ಲಿ ಸಂಚರಿಸಬಹುದು ಎಂದು ಬಿಬಿಎಂಪಿ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಸೂಗೂರ್ ತಿಳಿಸಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ತಜ್ಞರು ನೀಡಿರುವ ವರದಿಯಂತೆ ಯಾವುದೇ ತೊಂದರೆ ಇಲ್ಲ. ಆದರೂ 'ಸುರಕ್ಷತಾ ಆಡಿಟ್' ಮಾಡಿ ವರದಿ ನೀಡುವಂತೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಮತ್ತೊಂದು ಅಭಿಪ್ರಾಯ ಪಡೆಯಲು ಪತ್ರ ಬರೆಯಲಾಗಿದೆ. ಸಂಸ್ಥೆಯು ನೀಡುವ ವರದಿಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಈ ಮೇಲ್ಸೇತುವೆಯ ಕಾಮಗಾರಿಯನ್ನು ಎಂ. ವೆಂಕಟರಾವ್ ಇನ್‌ಫ್ರಾ ಪ್ರಾಜೆಕ್ಟ್ಸ್‌ಗೆ ವಹಿಸಲಾಗಿದ್ದು, ಅವರು 2016ರ ಮಾರ್ಚ್ 14ರಂದು ಕಾಮಗಾರಿ ಆರಂಭಿಸಿ, 2018ರ ಆ. 27ರಂದು ಮುಗಿಸಿದ್ದರು. ಈ ಮೇಲ್ಸೇತುವೆಯಲ್ಲಿ ಆರ್.ಇ ಪ್ಯಾನೆಲ್‌ಗಳಲ್ಲಿ ಬಲ್ಜಿಂಗ್ (ಉಬ್ಬುವುದು) ಕಂಡುಬಂದಿತ್ತು. ಅದನ್ನು ತಡೆಗಟ್ಟಲು 52 ಆರ್.ಇ ಪ್ಯಾನೆಲ್‌ಗಳಿಗೆ ನೈಲಿಂಗ್ ಅಳವಡಿಸಲಾಗಿದೆ. ಹೀಗಾಗಿ, ಮೇಲ್ಸೇತುವೆಯ ಆಡಿಟ್ ವರದಿ ನೀಡುವಂತೆ ಬೆಂಗಳೂರು ವಿಶ್ವವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗಕ್ಕೆ ಕೋರಿಲಾಗಿತ್ತು. ಅವರು 2022ರ ಫೆ.15ರಂದು ವರದಿ ನೀಡಿದ್ದರು.

ನಂತರ ಆರ್.ಇ ಪ್ಯಾನೆಲ್‌ಗಳ ಪಕ್ಕದಲ್ಲಿ 10 ಮೀಟರ್‌ಗಳ ಅಂತರದಲ್ಲಿ 12 ಅಡಿಯ ಕಬ್ಬಿಣದ ಸರಳುಗಳನ್ನು ಅಳವಡಿಸಲಾಗಿದೆ. ಅಂದಿನಿಂದ ಯಾವುದೇ ಸಮಸ್ಯೆ ಆಗಿಲ್ಲ. ಆದರೂ ಇದೀಗ ಸಾರ್ವಜನಿಕವಾಗಿ ಚರ್ಚೆ ಆಗುತ್ತಿರುವುದರಿಂದ ಐಐಎಸ್‌ಸಿ ಅವರಿಂದ ವರದಿ ಪಡೆಯಲಾಗುತ್ತಿದೆ ಎಂದು ವಿನಾಯಕ ಸೂಗೂರ್ ತಿಳಿಸಿದರು.

ಹೈಕೋರ್ಟ್‌ಗೆ ಮಾಹಿತಿ ನೀಡಿದ ಬೆಸ್ಕಾಂ

ಪಾದಚಾರಿ ಮಾರ್ಗದಲ್ಲಿದ್ದ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ನಗರದ ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಲಾಗಿದ್ದ ಟ್ರಾನ್ಸ್‌ಫಾರ್ಮರ್‌ಗಳ ಪೈಕಿ 2023ರ ಮಾರ್ಚ್ 30ರವರೆಗೆ ಒಟ್ಟು 1,911 ಟ್ರಾನ್ಸ್‌ಫಾರ್ಮರ್‌ಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ' ಎಂದು ಬೆಸ್ಕಾಂ (ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ) ಹೈಕೋರ್ಟ್‌ಗೆ ತಿಳಿಸಿದೆ.

ಮುಖ್ಯಾಂಶಗಳು
- ಸುರಕ್ಷಿತ ಸ್ಥಳಕ್ಕೆ 1,911 ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ
- ನಿವೃತ್ತ ವಿಂಗ್ ಕಮಾಂಡರ್ ಜಿ.ಬಿ. ಅತ್ರಿಯಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿ
- ಮುಂದಿನ ವಿಚಾರಣೆಗೆ ವರದಿ ಸಲ್ಲಿಕೆಗೆ ಸೂಚನೆ

ಪಾದಚಾರಿ ಮಾರ್ಗಗಳ ಮೇಲಿನ ಟ್ರಾನ್ಸ್‌ಫಾರ್ಮರ್‌ಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲು ನಿರ್ದೇಶಿಸಬೇಕು' ಎಂದು ಕೋರಿ ನಿವೃತ್ತ ವಿಂಗ್ ಕಮಾಂಡರ್ ಜಿ.ಬಿ. ಅತ್ರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬೆಸ್ಕಾಂ ಪರ ವಕೀಲರು ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ ಕುರಿತಂತೆ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿ, 'ಪಾದಚಾರಿ ಮಾರ್ಗಗಳ ಮೇಲೆ ಅಳವಡಿಸಲಾಗಿದ್ದ 2,587 ಟ್ರಾನ್ಸ್‌ಫಾರ್ಮರ್‌ಗಳನ್ನು ಗುರುತಿಸಲಾಗಿದೆ. ಅವುಗಳ ಪೈಕಿ 2023ರ ಮಾರ್ಚ್ 30ರವರೆಗೆ 1,911 ಟ್ರಾನ್ಸ್‌ಫಾರ್ಮರ್‌ಗಳನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ. ಹೊಸ ಮಾದರಿಯ ಸ್ಪನ್ ಪೋಲ್ ಸ್ವರೂಪಕ್ಕೆ ವರ್ಗಾಯಿಸಲಾಗಿದೆ. ಉಳಿದ 676 ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ ಕಾರ್ಯವನ್ನು 2023ರ ಸೆಪ್ಟೆಂಬರ್ ಒಳಗೆ ಪೂರ್ಣಗೊಳಿಸಲಾಗುವುದು' ಎಂದು ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಟ್ರಾನ್ಸ್‌ಫಾರ್ಮರ್‌ಗಳ ಸ್ಥಳಾಂತರ ಕಾರ್ಯ ಮುಂದುವರಿಸಬೇಕು. ಈ ಕುರಿತ ಪ್ರಗತಿ ವರದಿಯನ್ನು ಮುಂದಿನ ವಿಚಾರಣೆ ವೇಳೆಗೆ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.


SAMSUNG
Blue Fest
15th Mar - 30th Apr 2023
Neo QLED 8K
Full of surprises. Full of amazing offers.
Free~ Soundbar HW-Q950A (1 unit) worth ₹ 99990
Free~ Bezels (1 unit) worth ₹ 9900 with The Frame
Up to 20% cashback* + 10% Extra Cashback^ Samsung Axis Bank Credit Cards
20 year warranty** on Digital Inverter Compressor/Motor
10 year warranty** on Ceramic Enamel
Neo QLED TV
98QN90A MRP ₹ 2299000 Special promo price ₹ 1624000 (1 unit)
Free~ Soundbar HW-Q950A (1 unit) worth ₹ 99990 | Up to 20% cashback*
2 years warranty#
QLED TV
75Q60B MRP ₹ 384900 Special promo price ₹ 274990 (1 unit)
Free~ Soundbar HW-S801B (1 unit) worth ₹ 40990 | Up to 20% cashback*
2 years warranty#
Samsung Frame TV
75LS03B MRP ₹ 424900 Special promo price ₹ 294990 (1 unit)
Free~ Soundbar HW-S801B (1 unit) worth ₹ 40990 | Up to 20% cashback*
2 years warranty#
Soundbar with Q Symphony and Dolby Atmos Experience
HW-Q990B MRP ₹ 149900 Special promo price ₹ 99999 (1 unit)
Up to 10% cashback* | 0 Down payment+
Additional 10% off** with selected TVs
Side By Side Family Hub
RS7HCG8543SLHL MRP ₹ 279000 Special promo price ₹ 168000 (1 unit)
15% cashback* | Easy EMI starting ₹ 5490^^
20 year warranty** on Digital Inverter Compressor
Convertible 5 in 1 powered by Twin Cooling Plus™
RT42C5532S8/HL MRP ₹ 64990 Special promo price ₹ 48500 (1 unit)
15% cashback* | Easy EMI starting ₹ 1490^^
20 year warranty** on Digital Inverter Compressor
Direct Cool Refrigerator
RR21C2H25UZ/HL MRP ₹ 24999 Special promo price ₹ 18700 (1 unit)
Up to 5% cashback* | Easy EMI starting ₹ 990^^
20 year warranty** on Digital Inverter Compressor
AI Ecobubble™ Front Load Washing Machine
WW80T4040CXITL MRP ₹ 45500 Special promo price ₹ 37750 (1 unit)
15% cashback* | Easy EMI starting ₹ 990^^
20 year warranty** on Digital Inverter motor
Ecobubble™ Top Load Washing Machine
WA80BG4545BVTL MRP ₹ 25700 Special promo price ₹ 23400 (1 unit)
12.5% cashback* | Easy EMI starting ₹ 990^^
20 year warranty** on Digital Inverter motor
IntensiveWash™ dishwasher
DW60M6043FS/TL MRP ₹ 57990 Special promo price ₹ 48990 (1 unit)
15% cashback* | Easy EMI starting ₹ 2222^^
1 year standard warranty
Wi-Fi Masala & Sun Dry™
MC32B7382QD/TL MRP ₹ 39990 Special promo price ₹ 30490 (1 unit)
Up to 20% cashback* | Free$ Borosil kit (1 unit)
10 years warranty## on Ceramic Enamel Cavity
WindFree™ Split AC
AR18CY5AAGB MRP ₹ 76990 Special promo price ₹ 53490 (1 unit)
5% cashback* | 0 Down payment+
5 years warranty## on PCB Controller
Follow us on: samsung.com | @SamsungIndia | @SamsungIndia | SamsungIndia | @samsungindia
Re+ Please dispose of e-waste and plastic waste responsibly. For more information or for e-waste pick up, please call 1800 40 7267864 or 1800 5 7267864.
Image simulated for representational purpose only actual may vary. Colors and variants/models subject to availability. Offers valid till 15th March to 30th April 2023. Offers may be revised/withdrawn without prior notice. *Cashback subject to capping of upper limits and may vary product wise. ^10% Cashback applicable as per limits: Signature Variant: ₹ 2500 monthly, ₹ 10000 annually. Infinite Variant: ₹ 5000 monthly, ₹ 20000 annually. Third party and finance offers are at the sole discretion of the partners/ NBFC/ financiers. Final pricing subject to the dealer discretion. ~Free Soundbar and Bezel with select TVs. +0 down payment offer applicable on select credit cards. ^^Easy EMI as per MSME Scheme, which is exclusively applicable with Bajaj Finance. $Free Borosil kit with select partners. **Applicable only on Digital Inverter Motor & Digital Inverter Compressor on products sold after 1st December'22. #2 Years Warranty (1 Year Standard + 1 Year Extended Warranty on Panel only). ##T&C Apply. For detailed terms and conditions please visit https://images.samsung.com/is/content/samsung/assets/in/offer-tnc/blue-fest-2023-feb.pdf
HARSHA
Happiness. Redefined.
eHarsha.India digital_harsha www.harshaindia.com
Near Nayandahalli Metro Station,
Mysore Main Road,
BENGALURU - 560039.
Tel: 080-26983101
#Your Festival Your Celebrations
HARSHOTSAVA
ANNIVERSARY CELEBRATIONS
6th - 9th April 2023

ರಘು ಆಚಾರ್‌ಗೆ ದುಬಾರಿಯಾದ ಮಾತು

• ಜಿ.ಬಿ.ನಾಗರಾಜ್


ಜಿ.ರಘು ಆಚಾರ್

ಚಿತ್ರದುರ್ಗ: ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಲು ವರ್ಷದಿಂದ ಸಿದ್ಧತೆ ಮಾಡಿಕೊಂಡಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್, ವೀರಶೈವ ಲಿಂಗಾಯತ ಸಮುದಾಯ ಹಾಗೂ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕುರಿತು ಆಡಿದ ಮಾತು ಮುಳುವಾಗಿರುವಂತೆ ಕಾಣುತ್ತಿದೆ.

ಕಾಂಗ್ರೆಸ್‌ನ ಟಿಕೆಟ್ ಸಿಗುವ ಅತೀವ ಭರವಸೆಯಲ್ಲಿದ್ದ ಅವರು ಹೊಸ ಮನೆ ನಿರ್ಮಿಸಿ ಪೂಜೆಗೆ ವರಿಷ್ಠರನ್ನು ಆಹ್ವಾನಿಸಿದ್ದರು. ಪತ್ನಿ, ಸಹೋದರ ಹಾಗೂ ಅಭಿಮಾನಿಗಳೊಂದಿಗೆ ಕ್ಷೇತ್ರದಲ್ಲಿ ಪ್ರಚಾರ ನಡೆಸುತ್ತಿದ್ದರು. ಪಟ್ಟಿ ಬಿಡುಗಡೆಯಾಗುತ್ತಿದ್ದಂತೆ ಅವರಲ್ಲಿದ್ದ ಅಸಮಾಧಾನ ಸ್ಫೋಟಗೊಂಡಿದೆ.

ವೀರಶೈವ ಲಿಂಗಾಯತ ಸಮುದಾಯವನ್ನು ರಘು ಆಚಾರ್ ನಿಂದಿಸಿದ್ದಾರೆ ಎನ್ನಲಾದ ಆಡಿಯೊವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. 'ಇದು ನಕಲಿ ಆಡಿಯೊ' ಎಂಬುದಾಗಿ ಆಚಾರ್ ಸ್ಪಷ್ಟನೆ ನೀಡಿದ್ದರೂ ಸಮುದಾಯ ಆಕ್ರೋಶಗೊಂಡಿತ್ತು. 'ರಘು ಆಚಾರ್‌ಗೆ ಟಿಕೆಟ್ ನೀಡಬಾರದು' ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಆಗ್ರಹಿಸಿತ್ತು.

ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕುರಿತು 2018ರಲ್ಲಿ ಆಡಿದ ಮಾತು ಇತ್ತೀಚೆಗೆ ಮುನ್ನೆಲೆಗೆ ಬಂದಿತ್ತು. ನಾಟಕೋತ್ಸವಕ್ಕೆ ಆಗಮಿಸಿದ್ದ ಅಂದಿನ ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ ಅವರು ಮಠದಲ್ಲಿ ಸೇವಿಸುವ ಆಹಾರವನ್ನು ಅಧಿಕಾರಿಗಳು ಪರೀಕ್ಷಿಸಿದ್ದರು. ಇದನ್ನು ಸಾಣೇಹಳ್ಳಿ ಶ್ರೀ ಆಕ್ಷೇಪಿಸಿದ್ದರು. ಶ್ರೀಗಳ ನಡೆ ಖಂಡಿಸುವ ಭರದಲ್ಲಿ ರಘು ಆಚಾರ್ ಆಡಿದ ಮಾತುಗಳು ಮತ್ತೆ ಸಾಮಾಜಿಕ ಜಾಲತಾಣದಲ್ಲಿ ಹರಿದಾಡತೊಡಗಿದ್ದವು. ಇದನ್ನೇ ಮುಂದಿಟ್ಟುಕೊಂಡು ಬೀದಿಗೆ ಇಳಿದ ಹಾವೇರಿ ಜಿಲ್ಲೆಯ ವೀರಶೈವ ಲಿಂಗಾಯತ ಸಮುದಾಯ ಟಿಕೆಟ್ ನೀಡದಿರುವಂತೆ ಒತ್ತಡ ಹೇರಿತ್ತು.

'ರಘು ವೀರಶೈವ ಲಿಂಗಾಯತರ ವಿಚಾರದಲ್ಲಿ ನಡೆದುಕೊಳ್ಳುತ್ತಿರುವ ರೀತಿಯಿಂದ ಪಕ್ಷಕ್ಕೆ ಹಾನಿಯಾಗಿದೆ. ಲಿಂಗಾಯತರು ಪ್ರಬಲವಾಗಿರುವ ಕ್ಷೇತ್ರದಲ್ಲಿಯೂ ಇದು ಪರಿಣಾಮ ಬೀರುವ ಸಾಧ್ಯತೆ ಇತ್ತು. ಇದನ್ನು ವರಿಷ್ಠರ ಗಮನಕ್ಕೆ ತರಲಾಗಿತ್ತು' ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದ್ದಾರೆ.

'ಡಿಕೆಶಿ ಮೋಸ ಮಾಡಿದರು'

'ಚಿತ್ರದುರ್ಗ ವಿಧಾನಸಭಾ ಕ್ಷೇತ್ರಕ್ಕೆ ಟಿಕೆಟ್ ನೀಡದೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮೋಸ ಮಾಡಿದ್ದಾರೆ' ಎಂದು ಜಿ.ರಘು ಆಚಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

'ವಿಧಾನಪರಿಷತ್ ಬದಲಿಗೆ ವಿಧಾನಸಭೆಗೆ ಸ್ಪರ್ಧಿಸುವಂತೆ ಪಕ್ಷದ ವರಿಷ್ಠರು ಸಲಹೆ ನೀಡಿದ್ದರು. ಟಿಕೆಟ್ ಸಿಗುವ ನಿರೀಕ್ಷೆಯಿಂದ ಪಕ್ಷಕ್ಕೆ ತನು, ಮನ, ಧನ ಸಮರ್ಪಣೆ ಮಾಡಿದ್ದೆ. ಅರ್ಧದಾರಿವರೆಗೆ ಕರೆತಂದು ಕತ್ತು ಕುಯ್ದಿದ್ದಾರೆ. ಪ್ರಬಲ ಜಾತಿಯವರಲ್ಲ ಎಂಬ ಕಾರಣಕ್ಕೆ ರಾಜಕೀಯ ಜೀವನ ಹಾಳು ಮಾಡಿದ್ದಾರೆ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಏ. 17ರಂದು ನಾಮಪತ್ರ ಸಲ್ಲಿಸುತ್ತೇನೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯೇ ಅಥವಾ ಬೇರೆ ಪಕ್ಷದ ಅಭ್ಯರ್ಥಿಯೇ ಎಂಬುದು ತೀರ್ಮಾನವಾಗಬೇಕಿದೆ. ಹಿತೈಷಿಗಳು ಹಾಗೂ ಕ್ಷೇತ್ರದ ಮತದಾರರ ಅಭಿಪ್ರಾಯ ಸಂಗ್ರಹಿಸಿ ಮುಂದಿನ ಹೆಜ್ಜೆ ಇಡುತ್ತೇನೆ' ಎಂದು ಹೇಳಿದರು.

ಡಿಕೆಶಿ ಜೊತೆಗಿನ ಒಳಮುನಿಸು ಮುಳುವಾಯಿತೇ?

• ಬಿ.ಜೆ. ಧನ್ಯಪ್ರಸಾದ್


ವೈಎಸ್‌ವಿ.ದತ್ತ

ಚಿಕ್ಕಮಗಳೂರು: ಜೆಡಿಎಸ್ ತೊರೆದು ಈಚೆಗೆ ಕಾಂಗ್ರೆಸ್ ಸೇರಿದ್ದ ವೈ.ಎಸ್.ವಿ ದತ್ತ ಅವರಿಗೆ ಕಡೂರು ಕ್ಷೇತ್ರದ ಟಿಕೆಟ್ ಕೈತಪ್ಪಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಜೊತೆಗಿನ ಒಳಮುನಿಸು ಮುಳುವಾಯಿತೇ ಎಂಬ ಪ್ರಶ್ನೆ ಎದ್ದಿದೆ.

ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ವೈ.ಎಸ್.ವಿ.ದತ್ತ ಅವರು ಟಿಕೆಟ್ ನಿರೀಕ್ಷೆಯಲ್ಲೇ ಕಾಂಗ್ರೆಸ್ ಸೇರಿದ್ದರು. ಬೇಷರತ್ತಾಗಿ ಪಕ್ಷ ಸೇರಿರುವುದಾಗಿ ಹೇಳಿದ್ದ ಟಿಕೆಟ್ ಗಿಟ್ಟಿಸಲು ಒಳಗೊಳಗೆ ತೀವ್ರ ಕಸರತ್ತು ನಡೆಸಿದ್ದರು. ಇದೇ ಕೊನೆ ಚುನಾವಣೆ, ಮತ್ತೆ ಸ್ಪರ್ಧಿಸಲ್ಲ ಎಂಬ ಅಸ್ತ್ರವನ್ನೂ ಪ್ರಯೋಗಿಸಿದ್ದರು.

'ವೈ.ಎಸ್.ವಿ ದತ್ತ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಡುವೆ ಬಾಂಧವ್ಯ ಅಷ್ಟಕಷ್ಟೆ. ಅದರ ಜೊತೆಗೆ ಜಾತಿ ಸಮೀಕರಣ, ವಿವಿಧ ಬಲಗಳ ಲೆಕ್ಕಾಚಾರ ಅವರಿಗೆ ಟಿಕೆಟ್ ಕೈತಪ್ಪಲು ಕಾರಣ' ಎಂದು ಮುಖಂಡರೊಬ್ಬರು ತಿಳಿಸಿದರು.

ದತ್ತ ಜೆಡಿಎಸ್‌ನಲ್ಲಿದ್ದಾಗ ಕಡೂರು ಕ್ಷೇತ್ರ ದತ್ತ ಅವರಿಗೆ 'ಮೀಸಲು' ಎಂಬತೆ ಇತ್ತು. ಆ ಪಕ್ಷವನ್ನೇ ಅವರು ತೊರೆದಿದ್ದರು. ಕ್ಷೇತ್ರದ ಜೆಡಿಎಸ್ ಟಿಕೆಟ್ ಈಗಾಗಲೇ ಘೋಷಣೆಯಾಗಿದೆ. ಕಾಂಗ್ರೆಸ್ ಟಿಕೆಟ್ ಕೈತಪ್ಪಿದೆ. ದತ್ತ ಅವರಿಗೆ ಈಗ ತ್ರಿಶಂಕು ಸ್ಥಿತಿ ಎದುರಾಗಿದೆ.

ಕಾಂಗ್ರೆಸ್ ಟಿಕೆಟ್‌ಗೆ ಏಳು ಮಂದಿ ಅರ್ಜಿ ಸಲ್ಲಿಸಿದ್ದರು. ದತ್ತ ಅವರೂ ಆಕಾಂಕ್ಷಿಯಾಗಿದ್ದರು. ಕಳೆದ ಬಾರಿ ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಿ ಆನಂದ್ ಅವರು ಸೋಲುಂಡಿದ್ದರು. ಈಗ ಎರಡನೇ ಬಾರಿಗೆ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ. ಕ್ಷೇತ್ರದ ಬಹುಸಂಖ್ಯಾತ ಸಮುದಾಯಗಳಲ್ಲಿ ಒಂದಾಗಿರುವ ಕುರುಬರಿಗೆ ಪಕ್ಷ ಮತ್ತೊಮ್ಮೆ ಮಣೆ ಹಾಕಿದೆ.

'ಕೆ.ಎಸ್.ಆನಂದ್ ಅವರು ಕಳೆದ ಬಾರಿ ಸೋತ ನಂತರ ಪಕ್ಷದಿಂದ ದೂರ ಉಳಿದಿರಲಿಲ್ಲ. ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಕ್ಷೇತ್ರದ ಜನಾಭಿಪ್ರಾಯ, ಸಮೀಕ್ಷೆ ಆಧರಿಸಿ ವರಿಷ್ಠರು ಟಿಕೆಟ್ ಅಖೈರುಗೊಳಿಸಿದ್ದಾರೆ' ಎಂದು ಎಐಸಿಸಿ ಕಾರ್ಯದರ್ಶಿ ಬಿ.ಎಂ.ಸಂದೀಪ್ 'ಪ್ರಜಾವಾಣಿ'ಗೆ ತಿಳಿಸಿದರು.

> ದತ್ತ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡದೆ ದ್ರೋಹ ಮಾಡಿದೆ. ಅವರು ಮತ್ತೆ ಜೆಡಿಎಸ್‌ಗೆ ಬರುವುದಾದರೆ ಸ್ವಾಗತಿಸುತ್ತೇವೆ. ಪಕ್ಷ ಅವರಿಗೆ ಸೂಕ್ತಸ್ಥಾನ ನೀಡುತ್ತದೆ.
> **ಸಿ.ಎಂ.ಧನಂಜಯ**, ಕಡೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ

> ಕಾಂಗ್ರೆಸ್ ಸದಸ್ಯತ್ವ ಹೆಚ್ಚು ನೋಂದಣಿ ಮಾಡಿಸಿದ್ದು, ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದನ್ನು ಪರಿಗಣಿಸಿ ಟಿಕೆಟ್ ನೀಡಿದ್ದಾರೆ. ದತ್ತ ಅವರಿಗೆ ಪರಿಷತ್ತಿಗೆ ಪಕ್ಷವು ಅವಕಾಶ ಕಲ್ಪಿಸಬಹುದು
> **ಕೆ.ಎಸ್.ಆನಂದ್**, ಕಾಂಗ್ರೆಸ್ ಅಭ್ಯರ್ಥಿ, ಕಡೂರು

ಟಿಕೆಟ್ ತಪ್ಪಿದ್ದು ಏಕೆ ಗೊತ್ತಿಲ್ಲ: ದತ್ತ

'ಟಿಕೆಟ್ ಕೈತಪ್ಪಿದ್ದು ಯಾಕೆ ಎಂದು ಗೊತ್ತಿಲ್ಲ. ಕಾರ್ಯಕರ್ತರ ಅಭಿಪ್ರಾಯದಂತೆ ಕಾಂಗ್ರೆಸ್ ಸೇರಿದ್ದೆ, ನನಗೆ ಟಿಕೆಟ್ ಸಿಗದಿರುವುದು ಅವರಿಗೆ ನಿರಾಸೆ ಮೂಡಿಸಿದೆ. ಯಗಟಿಯಲ್ಲಿ ನಮ್ಮ ಕಾರ್ಯಕರ್ತರ ಸಭೆ ನಡೆಸುತ್ತೇನೆ. ಅವರ ಅಭಿಪ್ರಾಯ ಸಂಗ್ರಹಿಸಿ ಮುಂದಿನ ನಡೆ ನಿರ್ಧರಿಸುತ್ತೇನೆ' ಎಂದು ದತ್ತ 'ಪ್ರಜಾವಾಣಿ'ಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

630 ಕಿಮೀ ಪ್ರಯಾಣ: ದುಃಖದಲ್ಲೂ ಪರೀಕ್ಷೆ ಬರೆದ ವಿದ್ಯಾರ್ಥಿನಿ

ಶಿವಮೊಗ್ಗ: ದೂರದ ಕೊಪ್ಪಳದಲ್ಲಿ ಮೃತರಾದ ತಂದೆಯ ಪಾರ್ಥಿವ ಶರೀರ ನೋಡಲು ರಾತ್ರೋರಾತ್ರಿ 630 ಕಿಲೋ ಮೀಟರ್ ಪ್ರಯಾಣ ಮಾಡಿ ಬಂದ ವಿದ್ಯಾರ್ಥಿನಿಯೊಬ್ಬಳು ಎಸ್ಸೆಸ್ಸೆಲ್ಸಿ ಇಂಗ್ಲಿಷ್ ವಿಷಯದ ವಾರ್ಷಿಕ ಪರೀಕ್ಷೆ ಬರೆದ ಘಟನೆ ಜಿಲ್ಲೆಯ ಹೊಸನಗರ ತಾಲ್ಲೂಕು ಗೇರುಪುರದ ಇಂದಿರಾ ಗಾಂಧಿ ವಸತಿ ಶಾಲೆಯಲ್ಲಿ ಗುರುವಾರ ನಡೆದಿದೆ.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಆರ್ಶಿಯಾಳ ತಂದೆ ಅಬಿದ್ ಬಾಷಾ ಮಣಿಯಾರ್ ಕೊಪ್ಪಳದ ವಿಜಯನಗರ ಬಡಾವಣೆಯಲ್ಲಿ ಬುಧವಾರ ರಾತ್ರಿ 8ಕ್ಕೆ ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿದ್ದರು. ಅಂತಿಮ ದರ್ಶನಕ್ಕೆ ವಿದ್ಯಾರ್ಥಿನಿಯನ್ನು ಕರೆತರುವಂತೆ ಮನವಿ ಮಾಡಿದ್ದರು. ಆದರೆ, ಆರ್ಶಿಯಾ ಬೆಳಿಗ್ಗೆ 10.30ಕ್ಕೆ ಹೊಸನಗರದ ಪರೀಕ್ಷಾ ಕೇಂದ್ರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಬೇಕಿತ್ತು. ತಂದೆಯ ಅಂತಿಮ ದರ್ಶನ ಪಡೆಯುವುದು ಅನಿವಾರ್ಯವಾಗಿದ್ದರಿಂದ ಶಿಕ್ಷಕರು ಕೂಡಲೇ ಆಕೆಯನ್ನು ವ್ಯಾನ್ ಒಂದರಲ್ಲಿ ಕೊಪ್ಪಳಕ್ಕೆ ಕರೆದೊಯ್ದು, ತಂದೆಯ ದರ್ಶನ ಮಾಡಿಸಿ ಬೆಳಿಗ್ಗೆ ಮರಳಿ ಕರೆತಂದರು.

ಬಿಜೆಪಿ–ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಕಲ್ಲು ತೂರಾಟ

ಯಾದಗಿರಿ: ಹುಣಸಗಿ ತಾಲ್ಲೂಕಿನ ಕೊಡೇಕಲ್ಲ ಗ್ರಾಮದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮಧ್ಯೆ ಕಲ್ಲು ತೂರಾಟ ನಡೆದು 15 ಕಾರುಗಳು ಜಖಂ ಆಗಿದ್ದು, ಕೆಲವರಿಗೆ ಗಾಯಗಳಾಗಿವೆ.

ಕಾಂಗ್ರೆಸ್ ಕಾರ್ಯಕರ್ತರಾದ ರವಿಚಂದ್ರನ್, ಮಹೇಶ್, ರಾಮನಾಯಕ್, ಬಸು ಪೂಜಾರಿ, ಆಕಾಶ್ ಜೋಶಿ, ಬಸವರಾಜ್ ಕೆಂಭಾವಿ ಬೆನಕನಹಳ್ಳಿ ಎಂಬುವರು ಗಾಯಗೊಂಡಿದ್ದಾರೆ. ಕಾಂಗ್ರೆಸ್ ಮುಖಂಡ ರಾಜಾ ವೆಂಕಟಪ್ಪ ನಾಯಕ ಮತ್ತು ಬೆಂಬಲಿಗರು ನಾರಾಯಣಪುರದಲ್ಲಿ ಕಾಂಗ್ರೆಸ್ ಪಕ್ಷ ಸೇರ್ಪಡೆ ಕಾರ್ಯಕ್ರಮ ಮುಗಿಸಿಕೊಂಡು ಮರಳುವಾಗ, ಘಟನೆ ನಡೆದಿದೆ.

ಖರ್ಗೆ, ಸಿದ್ದರಾಮಯ್ಯ ಉನ್ನತ ನಾಯಕರು: ಪ್ರಚಾರ ಸಮಿತಿಯ ಅಧ್ಯಕ್ಷ ಪ್ರತಿಪಾದನೆ

'ನಾನೂ ಸಿ.ಎಂ ಸ್ಥಾನದ ಆಕಾಂಕ್ಷಿ'

ಪ್ರಜಾವಾಣಿ ವಾರ್ತೆ


ಎಂ.ಬಿ.ಪಾಟೀಲ

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತ್ರ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಗಳಲ್ಲ. ನಾನು ಸೇರಿದಂತೆ ಹಲವಾರು ನಾಯಕರು ಸಮರ್ಥರಿದ್ದೇವೆ ಎಂದು ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷ ಎಂ.ಬಿ.ಪಾಟೀಲ ಪ್ರತಿಪಾದಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಈ ಪಟ್ಟಿಯಲ್ಲಿ ಕೆಪಿಸಿಸಿ ಮಾಜಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಹಾಗೂ ಮಾಜಿ ಸಚಿವ ಕೃಷ್ಣ ಬೈರೇಗೌಡ ಸಹ ಇದ್ದಾರೆ' ಎಂದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಮಟ್ಟಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಿದ್ದರಾಮಯ್ಯ ಉನ್ನತ ನಾಯಕರು. ನಾನು ಸೇರಿದಂತೆ ಉಳಿದ ನಾಯಕರಾದ ಶಿವಕುಮಾರ್, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ ನಂತರದ ಸ್ಥಾನದಲ್ಲಿದ್ದೇವೆ' ಎಂದರು.

'ಪಕ್ಷಕ್ಕೆ ಬಹುಮತ ಬಂದ ಬಳಿಕ ಶಾಸಕರು ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡುತ್ತಾರೆ. ಅದರ ನಂತರ, ಪಕ್ಷದ ಹೈಕಮಾಂಡ್ ಅಂತಿಮ ತೀರ್ಮಾನ ಕೈಗೊಳ್ಳುತ್ತದೆ. ಕಾಂಗ್ರೆಸ್‌ನಲ್ಲಿ ಇದು ಹಿಂದಿನಿಂದಲೂ ಚಾಲ್ತಿಯಲ್ಲಿದ್ದು, ಈ ಸಲವೂ ಸಂಪ್ರದಾಯ ಮುಂದುವರಿಯಲಿದೆ' ಎಂದು ಅವರು ಹೇಳಿದರು.

ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವ ಮಹತ್ವಾಕಾಂಕ್ಷೆ ವ್ಯಕ್ತಪಡಿಸಿದರೆ ತಪ್ಪೇನಿಲ್ಲ. ಆದರೆ, ಮುಖ್ಯಮಂತ್ರಿ ಅಭ್ಯರ್ಥಿ ಎಂದು ಪಕ್ಷ ಯಾರನ್ನೂ ಬಿಂಬಿಸಿಲ್ಲ. ಕರ್ನಾಟಕ ವಿಧಾನಸಭಾ ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲೇ ಎದುರಿಸಲಾಗುವುದು ಎಂದು ಪಕ್ಷದ ಹೈಕಮಾಂಡ್ ಈಗಾಗಲೇ ಸ್ಪಷ್ಟಪಡಿಸಿದೆ ಎಂದರು.

ಲಿಂಗಾಯತರು ಈ ಬಾರಿ ಕಾಂಗ್ರೆಸ್‌ಗೆ ಸಂಪೂರ್ಣ ಬೆಂಬಲ ನೀಡಲಿದ್ದಾರೆ ಎಂದು ಪ್ರತಿಪಾದಿಸಿದ ಅವರು, ಮೀಸಲಾತಿ ವಿಷಯದಲ್ಲಿ ಬಿಜೆಪಿ ಸರ್ಕಾರವು ಲಿಂಗಾಯತರಿಗೆ ಮೋಸ ಮಾಡಿದೆ. ಕೇವಲ ಶೇ 2ರಷ್ಟು ಮೀಸಲಾತಿ ಹೆಚ್ಚಳ ಮಾಡಿದೆ. ಬಿ.ಎಸ್.ಯಡಿಯೂರಪ್ಪ ಅವರನ್ನು ಸಿ.ಎಂ ಸ್ಥಾನದಿಂದ ಏಕಾಏಕಿಯಾಗಿ ಕಿತ್ತು ಹಾಕಿದ್ದು ಸಹ ಇಡೀ ಸಮುದಾಯಕ್ಕೆ ಬೇಸರ ಉಂಟು ಮಾಡಿದೆ. ಬಿಜೆಪಿಯ ದ್ವಂದ್ವ ನೀತಿಯನ್ನು ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ ಬಯಲಿಗೆ ಎಳೆಯಲಿದೆ ಎಂದರು.

'ಈ ಚುನಾವಣೆಯಲ್ಲಿ ಲಿಂಗಾಯತರಿಗೆ ಪಕ್ಷವು ಗರಿಷ್ಠ ಸೀಟುಗಳನ್ನು ನೀಡಲಿದೆ. 166 ಕ್ಷೇತ್ರಗಳ ಪೈಕಿ 43 ಕ್ಷೇತ್ರಗಳಲ್ಲಿ ಲಿಂಗಾಯತ ಅಭ್ಯರ್ಥಿಗಳನ್ನೇ ಕಣಕ್ಕೆ ಇಳಿಸಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ನಡ್ಡಾಗೆ ಭಯವೇಕೆ'

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಯಾವ ವಿಚಾರದಲ್ಲಿ ಭಯ ಇದೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಪ್ರಶ್ನಿಸಿದರು.

ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಅಭ್ಯರ್ಥಿಗಳ ಹೆಸರು ಪ್ರಕಟಿಸಲು ಬಿಜೆಪಿ ವಿಳಂಬ ಮಾಡುತ್ತಿರುವುದು ಏಕೆ. ಇನ್ನೂ ಎಷ್ಟು ದಿನ ಆಕಾಂಕ್ಷಿಗಳನ್ನು ಕಾಯಿಸುತ್ತೀರಿ' ಎಂದು ವ್ಯಂಗ್ಯವಾಗಿ ಕೇಳಿದರು.

'ನಿಮ್ಮಲ್ಲಿ ಚುನಾವಣೆಗೆ ಸ್ಪರ್ಧಿಸಲು ಅಭ್ಯರ್ಥಿಗಳು ಇಲ್ಲದಿದ್ದರೆ ಸಿನಿಮಾ ನಟರಿಗೆ ಟಿಕೆಟ್ ಕೊಡಿ. ನಟರನ್ನು ಪಕ್ಷಕ್ಕೆ ಸೇರಿಸಿಕೊಳ್ಳಿ' ಎಂದೂ ಛೇಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಎಲ್ಲ ಕ್ಷೇತ್ರಗಳ ಅಭ್ಯರ್ಥಿಗಳ ಕುರಿತು ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಚರ್ಚೆಯಾಗಿದೆ. ಎರಡು ಪಟ್ಟಿಗಳನ್ನು ಪ್ರಕಟಿಸಿದ್ದೇವೆ. ಬಾಕಿ ಉಳಿದ ಕ್ಷೇತ್ರಗಳ ಪಟ್ಟಿಯನ್ನು ಮುಂದಿನ ದಿನಗಳಲ್ಲಿ ಘೋಷಣೆ ಮಾಡುತ್ತೇವೆ' ಎಂದರು.

ಬಂಡಾಯ: ಪಾಟೀಲಗೆ ಟಿಕೆಟ್

ಕಲಬುರಗಿ: ಅಫಜಲಪುರ ಕ್ಷೇತ್ರದ ಹಾಲಿ ಶಾಸಕ ಎಂ.ವೈ. ಪಾಟೀಲ ಅವರು ಈ ಬಾರಿ ಸ್ಪರ್ಧೆಯಿಂದ ಹಿಂದಕ್ಕೆ ಸರಿದು ತಮ್ಮ ಮಗ ಅರುಣಕುಮಾರ ಪಾಟೀಲ ಅವರಿಗೆ ಅವಕಾಶ ಕಲ್ಪಿಸಲು ಮುಂದಾಗಿದ್ದರು. ಆದರೆ, ಇದರಿಂದ ಬಂಡಾಯ ಏಳುವ ಸಾಧ್ಯತೆ ಇದ್ದ ಕಾರಣ ಕಾಂಗ್ರೆಸ್ ಹೈಕಮಾಂಡ್ ಈ ಬಾರಿಯು ಪಾಟೀಲ ಅವರಿಗೆ ಟಿಕೆಟ್ ಘೋಷಿಸಿದೆ.

ಕೆಲ ತಿಂಗಳ ಹಿಂದೆ ಎಂ.ವೈ.ಪಾಟೀಲ, 'ಈ ಬಾರಿ ನನ್ನ ಪುತ್ರ ಅರುಣಕುಮಾರ್ ಪಾಟೀಲ ಅವರಿಗೆ ಟಿಕೆಟ್ ನೀಡಿ' ಎಂದು ಕೋರಿದ್ದರು. ಆದರೆ, ಕ್ಷೇತ್ರದಲ್ಲಿ ಅರುಣಕುಮಾರ ಪಾಟೀಲ ಹೊರತುಪಡಿಸಿ ಆರು ಮಂದಿ ಟಿಕೆಟ್ ಆಕಾಂಕ್ಷಿಗಳಾಗಿದ್ದರು. ಅವರಲ್ಲಿ ಕುರುಬ, ಮುಸ್ಲಿಂ, ಕೋಲಿ ಮತ್ತು ಲಿಂಗಾಯತ ಸಮುದಾಯದ ಮುಖಂಡರೂ ಇದ್ದರು.

'ಅರುಣಕುಮಾರ ಪಾಟೀಲ ಅವರಿಗೆ ಟಿಕೆಟ್ ನೀಡಿದರೆ ಸ್ವಪಕ್ಷೀಯರಲ್ಲೇ ಅಸಮಾಧಾನ ತಲೆದೋರಬಹುದು ಎಂಬ ಉದ್ದೇಶದಿಂದ ಎಂ.ವೈ. ಪಾಟೀಲ ಅವರಿಗೆ ಟಿಕೆಟ್ ನೀಡಲಾಗಿದೆ' ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಜಗದೇವ ಗುತ್ತೇದಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಅಖಂಡ'ಗೆ ಮತ್ತೆ ನಿರಾಶೆ

ಬೆಂಗಳೂರು: ಕಾಂಗ್ರೆಸ್ ಪ್ರಕಟಿಸಿದ ಎರಡನೇ ಪಟ್ಟಿಯಲ್ಲಿಯೂ ಪುಲಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಹೆಸರು ಇಲ್ಲ. ಹೀಗಾಗಿ, ಅಖಂಡ ಮತ್ತೆ ನಿರಾಶರಾಗಿದ್ದಾರೆ. ಇವರು 2018ರ ವಿಧಾನಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಅತೀ ಹೆಚ್ಚಿನ ಅಂತರದಿಂದ ಗೆಲುವು ಸಾಧಿಸಿದ್ದರು.

'ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿಯಲ್ಲಿ ನಡೆದ ಘಟನೆಯ ಕಾರಣಕ್ಕೆ ಮುಸ್ಲಿಂ ಸಮುದಾಯದ ಮತಗಳು ಅವರ ಕೈ ತಪ್ಪಬಹುದು ಎನ್ನಲಾಗಿದೆ. ಹೀಗಾಗಿ, ಅವರಿಗೆ ಟಿಕೆಟ್ ನೀಡುವ ವಿಷಯದಲ್ಲಿ ನಾಯಕರಲ್ಲಿ ಒಮ್ಮತ ಮೂಡಿಲ್ಲ ಎಂದು ಗೊತ್ತಾಗಿದೆ. ಮೊದಲ ಪಟ್ಟಿಯಲ್ಲಿ ಹೆಸರು ಘೋಷಣೆಯಾಗದ ಕಾರಣ ಜಮೀರ್ ಅಹ್ಮದ್ ಜೊತೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅಖಂಡ ಚರ್ಚೆ ನಡೆಸಿದ್ದರು. ಹೀಗಾಗಿ, ಎರಡನೇ ಪಟ್ಟಿಯಲ್ಲಿ ಅಖಂಡಗೆ ಟಿಕೆಟ್ ಘೋಷಣೆ ಆಗಬಹುದು ಎಂದೇ ನಿರೀಕ್ಷಿಸಲಾಗಿತ್ತು.

'ಸುದೀಪ್ ಚಿತ್ರಗಳ ಪ್ರದರ್ಶನ ನಿಷೇಧ ಉದ್ದೇಶ ಇಲ್ಲ'

ನವದೆಹಲಿ: ಚುನಾವಣಾ ಆಯೋಗವು ನಟ ಸುದೀಪ್ ಅಭಿನಯದ ಚಿತ್ರಗಳ ಪ್ರದರ್ಶನವನ್ನು ನಿಷೇಧಿಸುವ ಯಾವುದೇ ಉದ್ದೇಶ ಹೊಂದಿಲ್ಲ ಎಂದು ಮೂಲಗಳು ಗುರುವಾರ ಹೇಳಿದೆ.

'ಸುದೀಪ್ ಅವರು ಸಿ.ಎಂ ಪರ ಪ್ರಚಾರ ಮಾಡುವುದಾಗಿ ಘೋಷಿಸಿದ್ದಾರೆ. ಸ್ವತಃ ಅವರೇ ಚುನಾವಣೆಗೆ ಸ್ಪರ್ಧಿಸುತ್ತಿಲ್ಲ. ಹೀಗಾಗಿ, ಅವರ ನಟನೆಯ ಚಿತ್ರಗಳು ಹಾಗೂ ಜಾಹೀರಾತುಗಳ ಪ್ರದರ್ಶನದ ಮೇಲೆ ಆಯೋಗವು ನಿಷೇಧ ಹೇರುವ ಸಾಧ್ಯತೆಗಳು ಕಡಿಮೆ' ಎಂದು ಮೂಲಗಳು ಹೇಳಿವೆ.

ಈ ಹಿನ್ನೆಲೆಯಲ್ಲಿ, ಥಿಯೇಟರ್‌ಗಳು, ಚಾನೆಲ್‌ಗಳಲ್ಲಿ ಸುದೀಪ್ ನಟನೆಯ ಚಿತ್ರಗಳು, ಜಾಹೀರಾತುಗಳ ಪ್ರದರ್ಶನವನ್ನು ಫಲಿತಾಂಶ ಪ್ರಕಟವಾಗುವವರೆಗೆ ನಿಷೇಧಿಸಬೇಕು ಎಂದು ಕೋರಿ ಶಿವಮೊಗ್ಗ ಮೂಲದ ವಕೀಲ ಕೆ.ಪಿ.ಶ್ರೀಪಾಲ್ ಎಂಬುವವರು ಆಯೋಗಕ್ಕೆ ಪತ್ರ ಬರೆದಿದ್ದರು.

ಬಂಡಾಯ: ಬಿಜೆಪಿ ಪೂರ್ವಭಾವಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭ್ಯರ್ಥಿಗಳ ಪಟ್ಟಿ ಪ್ರಕಟವಾದ ಬಳಿಕ ಬಂಡಾಯ, ಪಕ್ಷಾಂತರವನ್ನು ತಡೆಯಲು ಬಿಜೆಪಿ ಕಸರತ್ತು ಆರಂಭಿಸಿದೆ. ಈ ಸಂಬಂಧ ಪಕ್ಷದ ಪ್ರಮುಖ ನಾಯಕರು ಗುರುವಾರ ಸರಣಿ ಸಭೆ ನಡೆಸಿದ್ದಾರೆ.

ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು 9ರಂದು ಬಿಡುಗಡೆ ಮಾಡುವ ಸಾಧ್ಯತೆ ಇದೆ. ಪ್ರತಿ ಕ್ಷೇತ್ರಕ್ಕೂ 2–3 ಹೆಸರು ನಮೂದಿಸಲಾಗಿದ್ದು, ದೆಹಲಿಯಲ್ಲಿ ಪಟ್ಟಿ ಅಂತಿಮಗೊಳಿಸಲಾಗುವುದು ಎಂದು ಮೂಲಗಳು ಹೇಳಿವೆ.

ಬಂಡಾಯ ಏಳಬಹುದಾದ ಕ್ಷೇತ್ರಗಳ ಪಟ್ಟಿ ಮಾಡಿರುವ ವರಿಷ್ಠರು ಟಿಕೆಟ್ ಆಕಾಂಕ್ಷಿಗಳನ್ನು ಕರೆಸಿ ಚರ್ಚಿಸಿದ್ದಾರೆ. ಪಕ್ಷದ ರಾಷ್ಟ್ರೀಯ ನಾಯಕರ ಸೂಚನೆಯಂತೆ ಈ ಕಸರತ್ತು ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಗುಜರಾತ್ ಮತ್ತು ಇತರ ರಾಜ್ಯಗಳಲ್ಲಿ ಇದೇ ಮಾದರಿ ಅನುಸರಿಸಿ, ಬಂಡಾಯ ತಣಿಸಲಾಗಿತ್ತು. ಇಲ್ಲಿಯೂ ಅದೇ ಯತ್ನ ನಡೆಸಲಾಗುತ್ತಿದೆ. ಜನಪ್ರಿಯತೆ ಮತ್ತು ಗೆಲ್ಲುವ ಮಾನದಂಡ ಆಧರಿಸಿ ಟಿಕೆಟ್ ನೀಡಲಿದ್ದು, ಟಿಕೆಟ್ ಸಿಗದವರು ಬೇಸರಗೊಳ್ಳುವುದು ಸಹಜ. ಅವರಿಗೆ ಪರ್ಯಾಯ ವ್ಯವಸ್ಥೆಯ ಭರವಸೆ ನೀಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ತಂಡ ಈ ಕಾರ್ಯವನ್ನು ನಿಭಾಯಿಸುತ್ತಿದೆ.

ದೆಹಲಿಯಲ್ಲಿ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳ್ಳಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಶುಕ್ರವಾರ ದೆಹಲಿಗೆ ತೆರಳಲಿದ್ದಾರೆ.

'ಜನರ ಮೂರ್ಖರಾಗಿಸಲು 'ಗ್ಯಾರಂಟಿ' ಯೋಜನೆ'

ಬೆಂಗಳೂರು: 'ಕಾಂಗ್ರೆಸ್ ಪಕ್ಷದ 'ಗ್ಯಾರಂಟಿ' ಯೋಜನೆಗಳ ಜಾರಿಗೆ ₹1 ಲಕ್ಷ ಕೋಟಿ ಬೇಕಾಗುತ್ತದೆ. ಕಾಂಗ್ರೆಸ್ ನಾಯಕರು ಹೋಮ್ ವರ್ಕ್ ಮಾಡದೇ, ಜನರನ್ನು ಮೂರ್ಖರಾಗಿಸಲು ಇದನ್ನು ಪ್ರಕಟಿಸಿದ್ದಾರೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿಅವರು, 'ಕರ್ನಾಟಕದ ಬಜೆಟ್ ಮೊತ್ತವೇ ₹3 ಲಕ್ಷ ಕೋಟಿ ಇದೆ. ₹1 ಲಕ್ಷ ಕೋಟಿ ಗ್ಯಾರಂಟಿಗೆ ಯೋಜನೆಗಳಿಗೆ ವ್ಯಯಿಸಿದರೆ ರಾಜ್ಯ ನಡೆಸಲು ಎಲ್ಲಿಂದ ಹಣ ತರುತ್ತಾರೆ. ಇದು ಕಾರ್ಯಸಾಧುವಲ್ಲದ ಭರವಸೆ' ಎಂದು ಅವರು ಪ್ರತಿಪಾದಿಸಿದರು.

ಹಿಂದೆ ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶದಲ್ಲಿ ಇಂತಹದೇ ಭರವಸೆ ನೀಡಿದ್ದರು. ಅಧಿಕಾರಕ್ಕೆ ಬಂದ ಮೇಲೆ ಏನೂ ಮಾಡಲಿಲ್ಲ. ಏಕೆಂದರೆ ಈಡೇರಿಸಲಾಗದ ಭರವಸೆಗಳನ್ನೇ ನೀಡಿದ್ದರು. ಕರ್ನಾಟಕದಲ್ಲೂ ಅಷ್ಟೇ ಅವರು ಕೊಟ್ಟ ಯಾವುದೇ ಭರವಸೆಗಳನ್ನು ಈಡೇರಿಸುವುದಿಲ್ಲ' ಎಂದು ಅವರು ಹೇಳಿದರು.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಏ. 9ಕ್ಕೆ ಬಿಡುಗಡೆ

ಶಿವಮೊಗ್ಗ: 'ಏ. 9ರಂದು ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ. ನಾಲ್ಕು ಹಂತಗಳಲ್ಲಿ ಅಭಿಪ್ರಾಯ ಪಡೆದು ಅಭ್ಯರ್ಥಿಗಳ ಆಯ್ಕೆ ನಡೆದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ವಿಧಾನಸಭಾ ಚುನಾವಣೆಯಲ್ಲಿ ಶಿಗ್ಗಾವಿ ಹಾಗೂ ಚನ್ನಗಿರಿ ಎರಡೂ ಕಡೆ ಸ್ಪರ್ಧಿಸುವಿರಾ' ಎಂಬ ಸುದ್ದಿಗಾರರು ಪ್ರಶ್ನೆಗೆ ಗರಂ ಆದ ಮುಖ್ಯಮಂತ್ರಿ, 'ಯಾರ್ರೀ ಅದನ್ನು ಹೇಳಿದ್ದು, ಯಾವೋನು ಅದನ್ನು ಹೇಳಿದೋನು... ಎರಡು ಕಡೆ ಸ್ಪರ್ಧಿಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ಗೋವಿಂದರಾಜನಗರದಿಂದಲೇ ಸ್ಪರ್ಧೆ'

ಬೆಂಗಳೂರು: 'ನನ್ನ ರಾಜಕೀಯ ಯಶಸ್ಸಿಗೆ ಕಾರಣವಾದ, ಕರ್ಮಭೂಮಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದಲೇ ಈ ಬಾರಿ ಸ್ಪರ್ಧಿಸುತ್ತೇನೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು. 'ನನ್ನ ರಾಜಕೀಯ ಜೀವನ ತೆರೆದ ಪುಸ್ತಕದಂತೆ. 45 ವರ್ಷಗಳಿಂದ ರಾಜಕಾರಣದಲ್ಲಿದ್ದೇನೆ. ಯಶಸ್ಸು ಕಾಣಲು ಗೋವಿಂದರಾಜನಗರ ಕ್ಷೇತ್ರ ಕಾರಣ. ಇಲ್ಲಿನ ಎಲ್ಲ ಜನರನ್ನು ಒಂದೇ ರೀತಿಯಲ್ಲಿ ನೋಡಿದ್ದೇನೆ. ಇದೇ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ' ಎಂದರು.

'ಕೈ'ತಪ್ಪಿದ ಟಿಕೆಟ್: ಬಂಡಾಯ ಬಿಸಿ

ಒಂದನೇ ಪುಟದಿಂದ

'ಟಿಕೆಟ್ ಸಿಗುವ ನಿರೀಕ್ಷೆಯಿಂದ ಪಕ್ಷಕ್ಕೆ ತನು ಮನ ಧನ ಸಮರ್ಪಣೆ ಮಾಡಿದ್ದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವ ಕುಮಾರ್ ಅರ್ಧ ದಾರಿಗೆ ಕರೆ ತಂದು ಮೋಸ ಮಾಡಿದ್ದಾರೆ. ಈ ಚುನಾವಣೆಯಲ್ಲಿ ಸ್ಪರ್ಧಿಸುವುದು ಖಚಿತ. ಇದೇ 17ರಂದು ನಾಮಪತ್ರ ಸಲ್ಲಿಸುವೆ' ಎಂದು ರಘು ಆಚಾರ್ ಪ್ರಕಟಿಸಿದ್ದಾರೆ.

ಗಂಗಾವತಿ ಕ್ಷೇತ್ರದಲ್ಲಿ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಅವರನ್ನು ಕಣಕ್ಕೆ ಇಳಿಸಲು ಪಕ್ಷ ತೀರ್ಮಾನಿಸಿದೆ. ಇತರ ಆಕಾಂಕ್ಷಿಗಳಾದ ಎಚ್.ಆರ್.ಶ್ರೀನಾಥ್ ಹಾಗೂ ಮಲ್ಲಿಕಾರ್ಜುನ ನಾಗಪ್ಪ ಅಸಮಾಧಾನ ಹೊರ ಹಾಕಿದ್ದಾರೆ. 'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾರ್ಯಕರ್ತರ ಜತೆಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳುವೆ' ಎಂದು ಶ್ರೀನಾಥ್ ಪ್ರತಿಕ್ರಿಯಿಸಿದ್ದಾರೆ.

ಕಲಘಟಗಿ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ಮಾಜಿ ಸಚಿವ ಸಂತೋಷ್ ಲಾಡ್ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ನಾಗರಾಜ್ ಛಬ್ಬಿ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತ್ತು. ಈಗ ಲಾಡ್ 'ಕೈ' ಮೇಲಾಗಿದೆ. 'ನನಗೆ ಟಿಕೆಟ್ ಸಿಗುವ ಭರವಸೆ ಇದೆ. ಒಂದು ವೇಳೆ ಕೈತಪ್ಪಿದರೆ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ. ಸ್ಪರ್ಧೆ ಮಾಡುವುದು ಖಚಿತ' ಎಂದು ಛಬ್ಬಿ ಹೇಳಿಕೆ ನೀಡಿದ್ದರು. ಅವರ ಮುಂದಿನ ನಡೆ ಕುತೂಹಲ ಮೂಡಿಸಿದೆ.

ಧಾರವಾಡ ಗ್ರಾಮೀಣ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಅಂಜುಮಾನ್ ಸಂಸ್ಥೆಯ ಮಾಜಿ ಅಧ್ಯಕ್ಷ ಇಸ್ಮಾಯಿಲ್ ತಮಟಗಾರ ಆಕ್ರೋಶ ವ್ಯಕ್ತಪಡಿಸಿದ್ದು, ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡುವುದಾಗಿ ತಿಳಿಸಿದ್ದಾರೆ.

ವಲಸಿಗರಿಗೆ ಮಣೆ: ಪಕ್ಷಕ್ಕೆ ಇತ್ತೀಚೆಗೆ ಸೇರ್ಪಡೆಯಾದ ಮಾಜಿ ಶಾಸಕರಾದ ಎನ್.ವೈ.ಗೋಪಾಲಕೃಷ್ಣ, ಎಸ್.ಆರ್. ಶ್ರೀನಿವಾಸ್, ವಿಧಾನಪರಿಷತ್ ಮಾಜಿ ಸದಸ್ಯ ಬಾಬುರಾಬ್ ಚಿಂಚನಸೂರು, ಮುಖಂಡರಾದ ವಿ.ಎಸ್.ಪಾಟೀಲ, ಕೆ.ಸಿ.ವೀರೇಂದ್ರ, ಬಿ.ಎಲ್.ದೇವರಾಜ ಅವರಿಗೆ ಮಣೆ ಹಾಕಲಾಗಿದೆ. ಆದರೆ, ಕಡೂರು ಕ್ಷೇತ್ರದಿಂದ ಟಿಕೆಟ್ ಬಯಸಿದ್ದ ಮಾಜಿ ಶಾಸಕ ವೈ.ಎಸ್.ವಿ.ದತ್ತಾ ಅವರಿಗೆ ನಿರಾಸೆಯಾಗಿದೆ.

ಶಿಗ್ಗಾವಿಗಿಲ್ಲ ಕುಲಕರ್ಣಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಶಿಗ್ಗಾವಿಯಲ್ಲಿ ಮಾಜಿ ಸಚಿವ ವಿನಯ ಕುಲಕರ್ಣಿ ಹಾಗೂ ಕಂದಾಯ ಸಚಿವ ಆರ್.ಅಶೋಕ ಪ್ರತಿನಿಧಿಸುವ ಪದ್ಮನಾಭನಗರ ಕ್ಷೇತ್ರದಲ್ಲಿ ಹಿರಿಯ ರಾಜಕಾರಣಿ ಪಿ.ಜಿ.ಆರ್.ಸಿಂಧ್ಯ ಅವರಿಗೆ ಟಿಕೆಟ್ ನೀಡಿ ಪ್ರಬಲ ಸ್ಪರ್ಧೆ ನೀಡಲು ಪಕ್ಷ ಮುಂದಾಗಿದೆ ಎಂದು ಕಾಂಗ್ರೆಸ್ ಪಡಸಾಲೆಯಲ್ಲಿ ಚರ್ಚೆಗಳು ನಡೆದಿದ್ದವು. ವಿನಯ ಕುಲಕರ್ಣಿ ಅವರನ್ನು ಧಾರವಾಡ ಕ್ಷೇತ್ರದ ಹುರಿಯಾಳುವನ್ನಾಗಿ ಮಾಡಲಾಗಿದೆ. ಪದ್ಮನಾಭನಗರ ಕ್ಷೇತ್ರದಲ್ಲಿ ಗುತ್ತಿಗೆದಾರ ವಿ.ರಘುನಾಥ ನಾಯ್ಡು ಅವರನ್ನು ಕಣಕ್ಕೆ ಇಳಿಸಲಾಗಿದೆ.

ಪರಿಶಿಷ್ಟ ಜಾತಿಯ ಎಡಗೈ ಒಳಪಂಗಡದ ಅಭ್ಯರ್ಥಿಗಳನ್ನು ಕನಿಷ್ಠ 15 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಸಬೇಕು ಎಂದು ಲಾಬಿ ನಡೆಸಿದ್ದ ಮಾಜಿ ಸಚಿವರಾದ ಎಚ್. ಆಂಜನೇಯ ಹಾಗೂ ಆರ್.ಬಿ. ತಿಮ್ಮಾಪುರ ಅವರ ಹೆಸರು ಎರಡನೇ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ. 'ಎಡಗೈಯವರಿಗೆ ಹೆಚ್ಚಿನ ಟಿಕೆಟ್ ನೀಡಬೇಕು ಎಂದು ನಾನು ಹೋರಾಟ ನಡೆಸಿದ್ದೆ. ಆದರೆ, ನನ್ನ ಹೆಸರೇ ಮೊದಲನೇ ಪಟ್ಟಿಯಲ್ಲಿ ಇಲ್ಲ. ಕ್ಷೇತ್ರದಲ್ಲೂ ಪ್ರಚಾರ ನಡೆಸಲು ಹಿನ್ನಡೆಯಾಗಿದೆ' ಎಂದು ಆಂಜನೇಯ ಅವರು ಸಿದ್ದರಾಮಯ್ಯ ಬಳಿ ಅಳಲು ತೋಡಿಕೊಂಡಿದ್ದರು. 'ಎರಡನೇ ಪಟ್ಟಿಯಲ್ಲಿ ನಿಮ್ಮ ಹೆಸರು ಇರಲಿದೆ. ನವದೆಹಲಿ ಹಾಗೂ ಬೆಂಗಳೂರಿಗೆ ಬರಬೇಡಿ. ಅದರ ಬದಲು ಕ್ಷೇತ್ರದಲ್ಲಿ ಪ್ರಚಾರ ಮಾಡಿ' ಎಂದು ಸಿದ್ದರಾಮಯ್ಯ ಕಿವಿಮಾತು ಹೇಳಿದ್ದರು ಎಂದು ತಿಳಿದು ಬಂದಿದೆ.

ಅಪ್ಪ ಜೆಡಿಎಸ್–ಮಗ 'ಕೈ' ಅಭ್ಯರ್ಥಿ

ಅಪ್ಪ ಎ.ಮಂಜು ಅರಕಲಗೂಡು ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದರೆ, ಮಗ ಮಂಥರ್ ಗೌಡ ಮಡಿಕೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಮಂಜು ಸಚಿವರಾಗಿದ್ದರು. ಕಳೆದ ಲೋಕಸಭಾ ಚುನಾವಣೆ ವೇಳೆಯಲ್ಲಿ ಬಿಜೆಪಿಗೆ ಸೇರ್ಪಡೆಯಾಗಿ ಹಾಸನ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಇತ್ತೀಚೆಗೆ ಜೆಡಿಎಸ್‌ಗೆ ಸೇರಿದ್ದರು. ಅವರನ್ನು ಅರಕಲಗೂಡಿನಿಂದ ಕಣಕ್ಕೆ ಇಳಿಸುವುದಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಈಗಾಗಲೇ ಪ್ರಕಟಿಸಿದ್ದಾರೆ.

ಅಪ್ಪನ ಜತೆಗೆ ಮಗ ಮಂಥರ್ ಗೌಡ ಸಹ ಬಿಜೆಪಿಗೆ ಸೇರಿದ್ದರು. ಕಳೆದ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ಮಂಥರ್ 'ಕೈ'ಪಾಳಯಕ್ಕೆ ಜಿಗಿದಿದ್ದರು. ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ 102 ಮತಗಳ ಅಂತರದಿಂದ ಸೋಲು ಕಂಡಿದ್ದರು.

ಅರ್ಜಿ ಹಾಕದವರಿಗೂ ಟಿಕೆಟ್

ಅರ್ಜಿ ಹಾಕಿದವರಿಗೆ ಮಾತ್ರ ಟಿಕೆಟ್ ನೀಡಲಾಗುತ್ತದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಈ ಹಿಂದೆ ಪ್ರಕಟಿಸಿದ್ದರು. ಅರ್ಜಿ ಹಾಕದವರಿಗೂ ಈಗ ಟಿಕೆಟ್ ಸಿಕ್ಕಿದೆ.

ಇತ್ತೀಚೆಗೆ ಪಕ್ಷಕ್ಕೆ ಸೇರ್ಪಡೆಯಾದ ಎನ್.ವೈ.ಗೋಪಾಲಕೃಷ್ಣ, ಎಸ್.ಆರ್.ಶ್ರೀನಿವಾಸ್, ಬಿ.ಎಲ್.ದೇವರಾಜ್, ಬಾಬುರಾವ್ ಚಿಂಚನಸೂರು ಅವರಿಗೆ ಟಿಕೆಟ್ ಸಿಕ್ಕಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಟಿಕೆಟ್‌ಗಾಗಿ ಅರ್ಜಿ ಹಾಕದ ಸಿದ್ದೇಗೌಡ ಅವರಿಗೂ ಅದೃಷ್ಟ ಖುಲಾಯಿಸಿದೆ.

43 ಕ್ಷೇತ್ರಗಳಿಗೆ ಕಾದು ನೋಡುವ ತಂತ್ರ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಮತ್ತೆ 15 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ (ಸಿಇಸಿ) ಗುರುವಾರ ಅಂತಿಮಗೊಳಿಸಿದೆ. ಉಳಿದ 43 ಕ್ಷೇತ್ರಗಳಿಗೆ ಕಾದು ನೋಡುವ ತಂತ್ರ ಅನುಸರಿಸಲು ಸಮಿತಿ ತೀರ್ಮಾನಿಸಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಪಕ್ಷದ ಕಚೇರಿಯಲ್ಲಿ ನಡೆದ ಸಭೆಯಲ್ಲಿ 58 ಕ್ಷೇತ್ರಗಳ ಕುರಿತು ಚರ್ಚಿಸಲಾಯಿತು. ಅಭ್ಯರ್ಥಿಗಳ ಏಕ ಹೆಸರು ಇರುವ 15 ಕ್ಷೇತ್ರಗಳ ಪಟ್ಟಿಯನ್ನು ಅಖೈರುಗೊಳಿಸಲಾಯಿತು.

ಉಳಿದ ಕ್ಷೇತ್ರಗಳಿಗೆ ತಲಾ ಇಬ್ಬರು ಆಕಾಂಕ್ಷಿಗಳ ಹೆಸರನ್ನು ಪಕ್ಷದ ಪರಿಶೀಲನಾ ಸಮಿತಿ ಶಿಫಾರಸು ಮಾಡಿದೆ. ಈ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರುಗಳನ್ನು ಮಲ್ಲಿಕಾರ್ಜುನ ಖರ್ಗೆ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅಂತಿಮಗೊಳಿಸಲಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಲಹೆಗಳನ್ನು ಪಡೆದು ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಇನ್ನು ಚುನಾವಣಾ ಸಮಿತಿ ಸಭೆ ಇರುವುದಿಲ್ಲ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ತಿಳಿಸಿದರು.

'ಪುಲಕೇಶಿನಗರದ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಸೇರಿದಂತೆ ಎಲ್ಲ ಹಾಲಿ ಶಾಸಕರಿಗೆ ಟಿಕೆಟ್ ನೀಡಲು ಸಭೆಯಲ್ಲಿ ಸಹಮತ ವ್ಯಕ್ತವಾಗಿದೆ. ಗುಜರಾತ್ ಮಾದರಿಯಲ್ಲೇ ಕರ್ನಾಟಕದಲ್ಲಿ ಹಲವು ಶಾಸಕರಿಗೆ ಬಿಜೆಪಿ ಟಿಕೆಟ್ ನಿರಾಕರಿಸುವ ಸಾಧ್ಯತೆ ಇದೆ. ಬಿಜೆಪಿಯ ಮೊದಲ ಪಟ್ಟಿ ಪ್ರಕಟಿಸುವ ತನಕ ಇನ್ನೊಂದು ಪಟ್ಟಿ ಪ್ರಕಟಿಸದೆ ಇರಲು ಸಭೆಯಲ್ಲಿ ನಿರ್ಧರಿಸಲಾಯಿತು. ಬಿಜೆಪಿಯಿಂದ ಸಚಿವರು ಹಾಗೂ ಶಾಸಕರು ಬಂದರೆ ಟಿಕೆಟ್ ನೀಡಲಾಗುವುದು. ವಲಸಿಗರಿಗಾಗಿ ಕೆಲವು ಕ್ಷೇತ್ರಗಳನ್ನು ಮೀಸಲಿಡಲಾಗಿದೆ' ಎಂದು ಅವರು ಹೇಳಿದರು.

ಹೈಕಮಾಂಡ್ ಒಪ್ಪಿದರೆ ಕೋಲಾರ ಕ್ಷೇತ್ರದಿಂದಲೂ ಸ್ಪರ್ಧಿಸುವುದಾಗಿ ಸಿದ್ದರಾಮಯ್ಯ ಹೇಳಿದ್ದಾರೆ. ಕೋಲಾರ ಕ್ಷೇತ್ರದ ಕುರಿತು ಚುನಾವಣಾ ಸಮಿತಿ ಸಭೆಯಲ್ಲಿ ಗುರುವಾರವೂ ಚರ್ಚೆ ಆಗಿಲ್ಲ. ಕೋಲಾರ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸ್ಪರ್ಧೆ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಚೇರಿಗೆ ಮುತ್ತಿಗೆ, ಆಕ್ರೋಶ

ಒಂದನೇ ಪುಟದಿಂದ...

ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಬಂದಿದ್ದ ರಾಧಾಕೃಷ್ಣ ಕಾಂಗ್ರೆಸ್ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದರು. 15 ಮಂದಿ ಅರ್ಜಿ ಸಲ್ಲಿಸಿದ್ದರೂ ರಾಧಾಕೃಷ್ಣ ಅವರಿಗೆ ಅವಕಾಶದ ಸಾಧ್ಯತೆ ಇದೆ ಎಂದೇ ಹೇಳಲಾಗಿತ್ತು. ಆದರೆ, ಹೈಕಮಾಂಡ್ ಗಣಿಗ ಪಿ.ರವಿಕುಮಾರ್ ಗೌಡ ಹೆಸರು ಘೋಷಿಸುತ್ತಿದ್ದಂತೆ ರಾಧಾಕೃಷ್ಣ ಬೆಂಬಲಿಗರ ಆಕ್ರೋಶದ ಕಟ್ಟೆಯೊಡೆಯಿತು.

'ಪಟ್ಟಿಯಲ್ಲಿ ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಶುಕ್ರವಾರದಿಂದ ನಿರಂತರ ಪ್ರತಿಭಟನೆ ನಡಸಲಾಗುವುದು' ಎಂದು ಕೀಲಾರ ಬೆಂಬಲಿಗರು ಎಚ್ಚರಿಕೆ ನೀಡಿದ್ದಾರೆ.

ಕಿತ್ತೂರು ಕ್ಷೇತ್ರವನ್ನು ಆರು ಬಾರಿ ಪ್ರತಿನಿಧಿಸಿದ ಡಿ.ಬಿ. ಇನಾಮದಾರ ಅವರು ಅನಾರೋಗ್ಯಕ್ಕೆ ಒಳಗಾದ ಹಿನ್ನೆಲೆಯಲ್ಲಿ, ಬಾಬಾಸಾಹೇಬ ಪಾಟೀಲ ಅವರಿಗೆ ಕಾಂಗ್ರೆಸ್ ಟಿಕೆಟ್ ಘೋಷಿಸಿದೆ. ಇದನ್ನು ಖಂಡಿಸಿ ಇನಾಮದಾರ ಅಭಿಮಾನಿಗಳು ಹಾಗೂ ಕೆಲ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಇನಾಮದಾರ ಮನೆ ಮುಂದೆ ಕಾರ್ಯಕರ್ತರು ಟೈರ್‌ಗೆ ಬೆಂಕಿ ಹಚ್ಚಿ, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರಗೆ ಧಿಕ್ಕಾರ ಕೂಗಿದರು.

ಕಾಂಗ್ರೆಸ್ ಅಭ್ಯರ್ಥಿಗಳ ಎರಡನೇ ಪಟ್ಟಿ

ಕ್ಷೇತ್ರ	ಅಭ್ಯರ್ಥಿ
ನಿಪ್ಪಾಣಿ	ಕಾಕಾಸಾಹೇಬ್ ಪಾಟೀಲ
ಗೋಕಾಕ	ಮಹಾಂತೇಶ ಕಡಾಡಿ
ಕಿತ್ತೂರು	ಬಾಬಾಸಾಹೇಬ್ ಡಿ.ಪಾಟೀಲ
ಸವದತ್ತಿ ಯಲ್ಲಮ್ಮ	ವಿಶ್ವಾಸ್ ವಸಂತ ವೈದ್ಯ
ಮುಧೋಳ	ಆರ್.ಬಿ.ತಿಮ್ಮಾಪುರ
ಬೀಳಗಿ	ಜೆ.ಟಿ.ಪಾಟೀಲ
ಬಾದಾಮಿ	ಭೀಮಸೇನ್ ಬಿ.ಚಿಮ್ಮನಕಟ್ಟಿ
ಬಾಗಲಕೋಟೆ	ಎಚ್.ವೈ.ಮೇಟಿ
ವಿಜಯಪುರ ನಗರ	ಅಬ್ದುಲ್ ಹಮೀದ್ ಮುಶ್ರೀಫ್
ನಾಗಠಾಣ	ವಿಠಲ ಕಟಕದೊಂಡ
ಅಫಜಲಪುರ	ಎಂ.ವೈ.ಪಾಟೀಲ
ಯಾದಗಿರಿ	ಚನ್ನಾರೆಡ್ಡಿ ಪಾಟೀಲ ತುನ್ನೂರು
ಗುರುಮಿಠಕಲ್	ಬಾಬುರಾವ್ ಚಿಂಚನಸೂರು
ಕಲಬುರಗಿ ದಕ್ಷಿಣ	ಅಲ್ಲಮಪ್ರಭು ಪಾಟೀಲ
ಬಸವಕಲ್ಯಾಣ	ವಿಜಯ್ ಧರ್ಮ ಸಿಂಗ್
ಗಂಗಾವತಿ	ಇಕ್ಬಾಲ್ ಅನ್ಸಾರಿ
ನರಗುಂದ	ಬಿ.ಆರ್.ಯಾವಗಲ್
ಧಾರವಾಡ	ವಿನಯ ಕುಲಕರ್ಣಿ
ಕಲಘಟಗಿ	ಸಂತೋಷ್ ಎಸ್.ಲಾಡ್
ಶಿರಸಿ	ಭೀಮಣ್ಣ ನಾಯ್ಕ
ಯಲ್ಲಾಪುರ	ವಿ.ಎಸ್.ಪಾಟೀಲ
ಕೂಡ್ಲಿಗಿ	ಡಾ.ಎನ್.ಟಿ.ಶ್ರೀನಿವಾಸ್
ಮೊಳಕಾಲ್ಮುರು	ಎನ್.ವೈ.ಗೋಪಾಲಕೃಷ್ಣ
ಚಿತ್ರದುರ್ಗ	ಕೆ.ಸಿ.ವೀರೇಂದ್ರ (ಪಪ್ಪಿ)
ಹೊಳಲ್ಕೆರೆ	ಎಚ್.ಆಂಜನೇಯ
ಚನ್ನಗಿರಿ	ಬಸವರಾಜು ವಿ.ಶಿವಗಂಗಾ
ತೀರ್ಥಹಳ್ಳಿ	ಕಿಮ್ಮನೆ ರತ್ನಾಕರ
ಉಡುಪಿ	ಪ್ರಸಾದ್‌ರಾಜ್ ಕಾಂಚನ್
ಕಡೂರು	ಆನಂದ್ ಕೆ.ಎಸ್.
ತುಮಕೂರು ನಗರ	ಇಕ್ಬಾಲ್ ಅಹ್ಮದ್
ಗುಬ್ಬಿ	ಎಸ್.ಆರ್.ಶ್ರೀನಿವಾಸ್
ಯಲಹಂಕ	ಬಿ.ಕೇಶವ ರಾಜಣ್ಣ
ಯಶವಂತಪುರ	ಎಸ್.ಬಾಲರಾಜ್ ಗೌಡ
ಮಹಾಲಕ್ಷ್ಮಿ ಬಡಾವಣೆ	ಕೇಶವಮೂರ್ತಿ
ಪದ್ಮನಾಭ ನಗರ	ವಿ.ರಘುನಾಥ ನಾಯ್ಡು
ಮೇಲುಕೋಟೆ	ದರ್ಶನ್ ಪುಟ್ಟಣ್ಣಯ್ಯ (ಬೆಂಬಲ) (ಸರ್ವೋದಯ ಕರ್ನಾಟಕ ಪಕ್ಷ)
ಮಂಡ್ಯ	ಪಿ.ರವಿಕುಮಾರ್
ಕೆ.ಆರ್.ಪೇಟೆ	ಬಿ.ಎಲ್.ದೇವರಾಜ್
ಬೇಲೂರು	ಬಿ.ಶಿವರಾಮ್
ಮಡಿಕೇರಿ	ಮಂಥರ್ ಗೌಡ
ಚಾಮುಂಡೇಶ್ವರಿ	ಸಿದ್ದೇಗೌಡ
ಕೊಳ್ಳೆಗಾಲ	ಎ.ಆರ್.ಕೃಷ್ಣಮೂರ್ತಿ

ನಾರಿ ಸೂತ್ರ, ಪ್ರಚಾರಕ್ಕೆ ಮಾತ್ರ

• ನೀಲಾ ಎಂ.ಎಚ್.



'ವನಿತಾ ಸಂಗಾತಿ' ಯೋಜನೆಯಡಿ ಗಾರ್ಮೆಂಟ್ಸ್ ಉದ್ಯೋಗಿಗಳಿಗೆ ಉಚಿತ ಬಸ್‌ಪಾಸ್ ನೀಡುವುದಾಗಿ 2021ರ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಘೋಷಿಸುತ್ತದೆ. ಈ ಯಶಸ್ವಿ ಯೋಜನೆಯನ್ನು 30 ಲಕ್ಷ ಕಾರ್ಮಿಕರಿಗೆ ವಿಸ್ತರಿಸುವುದಾಗಿ ಈ ವರ್ಷದ ಬಜೆಟ್‌ನಲ್ಲಿ ಅದೇ ಸರ್ಕಾರ ಪ್ರತಿಪಾದಿಸುತ್ತದೆ. ಅರೆ... ಹೌದೇ... ಲಕ್ಷಾಂತರ ಮಂದಿಗೆ ಉಚಿತ ಬಸ್‌ಪಾಸ್ ನೀಡುವುದೆಂದರೆ ಸಾಮಾನ್ಯವೇ? ಇದು ಖರೆಯೇ ಆಗಿದ್ದರೆ ಒಮ್ಮೆ ನೋಡಿಯೇಬಿಡೋಣ, ಮೊದಲು ಘೋಷಿಸಿದವರಲ್ಲಿ ಅದೆಷ್ಟು ಮಂದಿ ಫಲಾನುಭವಿಗಳಾಗಿರಬಹುದು ಎಂದುಕೊಂಡು ಘೋಷಣೆಯ ಬೆನ್ನುಹತ್ತಿದರೆ, ಯೋಜನೆಯ ಅಸಲಿಯತ್ತು ಬಯಲಾಗುತ್ತದೆ!

ಉದ್ಯೋಗದಾತರು ಶೇ 60, ಸಾರಿಗೆ ಸಂಸ್ಥೆ ಹಾಗೂ ಉದ್ಯೋಗಿಗಳು ತಲಾ ಶೇ 10, ಕಾರ್ಮಿಕ ಕಲ್ಯಾಣ ಮಂಡಳಿ ಶೇ 20ರಷ್ಟು ಆರ್ಥಿಕ ಹೊರೆ ಹೊತ್ತರಷ್ಟೇ ಈ ಯೋಜನೆ ಜಾರಿಗೆ ಬರಲು ಸಾಧ್ಯ. ತೀವ್ರ ಒತ್ತಡ ಹೇರಿ ಮಾಲೀಕರನ್ನು ಒಲಿಸಿಕೊಂಡ ಸುಮಾರು 900 ಮಂದಿ ಮಾತ್ರ ಈಗ ಈ ಸೌಲಭ್ಯದ ಫಲಾನುಭವಿಗಳು. ಹಾಗಿದ್ದರೆ ಉಳಿದವರಿಗೆ ಈ ಭಾಗ್ಯ ಕರುಣಿಸಲು ಸರ್ಕಾರ ಏನು ಮಾಡುತ್ತದೆ? ನಿಜವೆಂದರೆ, ಏನೂ ಮಾಡುವುದಿಲ್ಲ, ಮಗುಮ್ಮಾಗಿ ಇದ್ದುಬಿಡುತ್ತದೆ.

ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯೊಬ್ಬರು, ಬಹುತೇಕ ಮಹಿಳೆಯರನ್ನೇ ಒಳಗೊಂಡ ಗಾರ್ಮೆಂಟ್ಸ್ ಉದ್ಯೋಗಿಗಳ ವೇತನವನ್ನು ₹ 18 ಸಾವಿರಕ್ಕೆ ಏರಿಸುವುದಾಗಿ ಭಾಷಣ ಮಾಡಿಯೇ ಮಾಡಿದರು. ಪ್ರಚಾರ ವಾಹನಕ್ಕೆ ಕಟ್ಟಿದ ಮೈಕ್‌ನಲ್ಲಿ ಹಾಡಿನ ರೂಪದಲ್ಲಿಯೂ ಈ ಭರವಸೆ ಮೊಳಗಿಯೇ ಮೊಳಗಿತು. ಅದರಂತೆ ಅವರದೇ ಪಕ್ಷವೀಗ ಮತ್ತೆ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳೇ ಸಂದಿವೆ. ಆದರೂ ವೇತನ ಮಾತ್ರ ಹಿಂದಿದ್ದ ₹ 11 ಸಾವಿರ ದಾಟಿಯೇ ಇಲ್ಲ!

ಮಹಿಳೆಯರನ್ನು ಆಮಿಷದ ಗಾಳಕ್ಕೆ ಸಿಲುಕಿಸುವ ಕಲೆಯಲ್ಲಿ ರಾಜಕಾರಣಿಗಳು ಸಿದ್ಧಹಸ್ತರು. ಅವರಿಗಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಒಮ್ಮೆ ಹೀಗೆ ಭರಪೂರ ಭರವಸೆ ಹರಿಸಿ ಕೈತೊಳೆದುಕೊಂಡರೆ ಮುಗಿಯಿತು. ಆಮೇಲಿನದು ಏನಾದರೇನು? ಕೇಳುವವರಾರು?

ಮಹಿಳೆಯರು ಮೊದಲಿಗಿಂತ ಈಗ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತ ಚಲಾಯಿಸುತ್ತಾರಷ್ಟೆ. ಆದರೆ ಆನಂತರ ಏನಾಗುತ್ತದೆ, ನಮ್ಮ ಜನಪ್ರತಿನಿಧಿಗಳಿಂದ ನಮಗಾಗಿ ನಾವು ಏನೆಲ್ಲ ಕೇಳಬಹುದು ಎಂಬುದರ ಅರಿವಾದರೂ ಹೆಚ್ಚಿನವರಿಗೆ ಇದೆಯೇ? ರಾಜಕಾರಣವೆಂಬ 'ಮಾರುಕಟ್ಟೆ'ಯಲ್ಲಿ ಈಗ ಕಚ್ಚಾ ವಸ್ತುಗಳು, ಗ್ರಾಹಕರು, ಉತ್ಪಾದಕರು ಎಲ್ಲವೂ ಆಗಿರುವ ಮಹಿಳೆಯರಿಗೆ, ಚುನಾವಣೆ ಬಂತೆಂದರೆ ಎಲ್ಲಿಲ್ಲದ ಬೇಡಿಕೆ. ಅವರಿಗಾಗಿ ಪುಂಖಾನುಪುಂಖ ಯೋಜನೆಗಳ ಘೋಷಣೆ. ಕಾರ್ಯರೂಪಕ್ಕೆ ಇಳಿಸುವ ಸಂದರ್ಭ ಬಂದಾಗ ಮಾತ್ರ ಎಲ್ಲ ಪಕ್ಷಗಳ ಬಣ್ಣವೂ ಬಟಾಬಯಲು.

ಹಿಂದಿನ ವರ್ಷವಷ್ಟೇ ನಡೆದ ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಶೇ 40ರಷ್ಟು ಸೀಟುಗಳನ್ನು ಮಹಿಳೆಯರಿಗೆ ನೀಡಲು ಮುಂದಾದ ಕಾಂಗ್ರೆಸ್ ಪಕ್ಷದ ನಿರ್ಧಾರ, ಪ್ರಬುದ್ಧ ರಾಜಕೀಯ ವಲಯದಲ್ಲಿ ಸಂಚಲನವನ್ನೇ ಸೃಷ್ಟಿಸಿತು. ಇದು, ಮಹಿಳಾ ಪ್ರಾತಿನಿಧ್ಯದ ವಿಷಯದಲ್ಲಿ ಪಕ್ಷ ಗಂಭೀರವಾಗಿರುವುದನ್ನು ಸೂಚಿಸುವಂತಿದೆ ಎಂದೇ ಹೇಳಲಾಗಿತ್ತು. ಈವರೆಗೂ ಮತಬ್ಯಾಂಕ್ ರೂಪದಲ್ಲಷ್ಟೇ ಮಹಿಳೆಯರನ್ನು ಕಾಣುತ್ತಾ ಬಂದಿರುವ ರಾಜಕಾರಣದಲ್ಲಿ ಬದಲಾವಣೆ ತರುವ ದಿಸೆಯಲ್ಲಿ ಇದೊಂದು ಅನಿವಾರ್ಯವಾಗಿದ್ದ ಕ್ರಮ, ಮಹಿಳಾಶಕ್ತಿಯು ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವುದು ಪ್ರಜಾತಂತ್ರದ ಚೆಲುವನ್ನು ಹೆಚ್ಚಿಸುವ ಪ್ರಯತ್ನ ಎಂದೆಲ್ಲಾ ಈ ನಡೆ ಬಿಂಬಿತವಾಗಿತ್ತು. ಸಹಜವಾಗಿಯೇ ಕರ್ನಾಟಕಕ್ಕೂ ಇದೇ ನೀತಿ ಅನ್ವಯವಾಗಬಹುದೆಂಬ ನಿರೀಕ್ಷೆಯೂ ಇತ್ತು. ಆದರೆ ಈಗ ಬಿಡುಗಡೆಯಾಗಿರುವ ರಾಜ್ಯದ 124 ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಆರು ಮಂದಿಯಷ್ಟೇ ಮಹಿಳೆಯರಿದ್ದರೆ, 42 ಅಭ್ಯರ್ಥಿಗಳಿರುವ ಎರಡನೇ ಪಟ್ಟಿಯಲ್ಲಂತೂ ಒಬ್ಬ ಮಹಿಳೆಗೂ ಸ್ಥಾನವಿಲ್ಲ! ಮಹಿಳೆಯರಿಗಾಗಿ ಪಕ್ಷಗಳು ಪ್ರಣಾಳಿಕೆಯಲ್ಲಿ ನೀಡುವ ಭರವಸೆಗಳಾದರೂ ಎಂಥವು? ಗೃಹಲಕ್ಷ್ಮಿ, ಗೃಹಶಕ್ತಿಯಂತಹ ಹೆಸರುಗಳಲ್ಲಿ ಕುಟುಂಬದ ಮುಖ್ಯಸ್ಥೆಗೆ ಮನೆಯ ವೆಚ್ಚ ನಿರ್ವಹಣೆಗಾಗಿ ಸಹಾಯಧನ, ಸ್ತ್ರೀಶಕ್ತಿ ಸಂಘಗಳ ಸಾಲ ಮನ್ನಾ, ಉಚಿತ ಸ್ಮಾರ್ಟ್‌ಫೋನ್ ವಿತರಣೆ... ಒಟ್ಟಾರೆ, ಮತಬುಟ್ಟಿಗೆ ಸುಲಭವಾಗಿ ಕೈಹಾಕಬಹುದಾದ ವರ್ಗಗಳ ಮನತಣಿಸುವ ಗಿಲೀಟು ಯೋಜನೆಗಳೇ. ಇಂತಹ ವರ್ಗಗಳನ್ನು ಭಾವನಾತ್ಮಕವಾಗಿ ಮಣಿಸಿ ಒಮ್ಮೆ ಮತದ ಇಡುಗಂಟು ಪಡೆದರಾಯಿತು. ಮಹಿಳೆಯರ ಸುರಕ್ಷೆ, ಅತ್ಯಾಚಾರ, ವರದಕ್ಷಿಣೆ ಪಿಡುಗು, ಆಸ್ತಿ ಮೇಲಿನ ಹಕ್ಕುಸ್ವಾಮ್ಯ, ಹೆಣ್ಣುಭ್ರೂಣ ಹತ್ಯೆ, ವೇತನ– ಬಡ್ತಿಯಲ್ಲಿ ತಾರತಮ್ಯ ನಿವಾರಣೆ, ಹೆಚ್ಚುತ್ತಿರುವ ಲಿಂಗಾನುಪಾತದಂತಹ ವಿಷಯಗಳೆಲ್ಲಾ ಯಾರಿಗೆ ಬೇಕಾಗಿವೆ?

'ಗಾಡ್‌ಫಾದರ್'ಗಳ ನೆರವು, ಕೌಟುಂಬಿಕ ಹಿನ್ನೆಲೆಯಿಂದಷ್ಟೇ ರಾಜಕೀಯ ಪ್ರವೇಶಿಸಲು ಸಾಧ್ಯವಾಗುತ್ತಿರುವ ಬೆರಳೆಣಿಕೆಯ ಮಹಿಳಾ ರಾಜಕಾರಣಿಗಳ ಸ್ಥಿತಿಯೂ ಇದಕ್ಕಿಂತ ಭಿನ್ನವೇನಲ್ಲ. 'ಆರತಿಗೊಬ್ಬಳು ಮಗಳು...' ಎಂಬ ಓಬಿರಾಯನ ಕಾಲದ ನುಡಿಗಟ್ಟಿನಂತೆ, ಸಚಿವ ಸಂಪುಟವನ್ನು ಅಂದಗಾಣಿಸಲು ಹೆಚ್ಚೆಂದರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿಯಂತಹ ಖಾತೆಗಳಲ್ಲಿ ಆಕೆಯನ್ನು ತಂದು ಕೂರಿಸಿದರಾಯಿತು. ಉಳಿದ ಆಯಕಟ್ಟಿನ ಖಾತೆಗಳ ಉಸಾಬರಿಗೆ ಆಕೆ ಬರದಿದ್ದರಾಯಿತು.

ಹೊತ್ತು ಮುಳುಗುತ್ತಿದ್ದಂತೆ, ಮನೆಯಲ್ಲಿ ಬಿಟ್ಟು ಬಂದ ತಮ್ಮ ಹೆಣ್ಣುಮಕ್ಕಳ ಬಗ್ಗೆ ತಮಗೂ ಚಿಂತೆ ಎಂದು ಸದನದಲ್ಲಿ ಅಲವತ್ತುಕೊಳ್ಳುವ ಮಹಿಳಾ ಜನಪ್ರತಿನಿಧಿಗಳು, ಅತ್ಯಾಚಾರ ಸಂತ್ರಸ್ತ ಹೆಣ್ಣುಮಕ್ಕಳ ವಿಚಾರದಲ್ಲಿ ಪುರುಷ ಜನಪ್ರತಿನಿಧಿಗಳ ಅಸೂಕ್ಷ್ಮವಾದ ಹೇಳಿಕೆಗಳಿಗೆ ಚಕಾರ ಎತ್ತುವುದಿಲ್ಲ. ಶಬರಿಮಲೆ ದೇಗುಲಕ್ಕೆ ಮಹಿಳೆಯರ ಪ್ರವೇಶ ನಿಷಿದ್ಧದ ಬಗ್ಗೆ ಕ್ರಾಂತಿಕಾರಿಯಾಗಿ ಮಾತನಾಡಿದ್ದ ಮಹಿಳಾ ರಾಜಕಾರಣಿಯೊಬ್ಬರ ಸಂದರ್ಶನಕ್ಕೆ ತೆರಳಿದ್ದಾಗ, ಮುಟ್ಟಾದ 'ಅಪವಿತ್ರ' ಹೆಣ್ಣುಮಕ್ಕಳ ವಿಚಾರದಲ್ಲಿ ತಮ್ಮ ಅಮ್ಮ, ಅಜ್ಜಿಯಂದಿರು ಅನುಸರಿಸುವ ಕಟ್ಟುಕಟ್ಟಳೆಗಳನ್ನು ಆಕೆ ಅತೀವ ಹೆಮ್ಮೆಯಿಂದ ವರ್ಣಿಸಿದ್ದರು!

ಹೆಣ್ಣುಮಕ್ಕಳ ಇಂತಹ ದೌರ್ಬಲ್ಯಗಳ ಅರಿವಿರುವುದರಿಂದಲೇ ಬೊಟ್ಟಿಡದ ಮಹಿಳೆಯನ್ನು ಪ್ರಶ್ನಿಸುವ, ಸವಲತ್ತು ಕೇಳಲು ಬಂದ ಮಹಿಳೆಯ ಕೆನ್ನೆಗೆ ಬಾರಿಸುವ, ಅವಾಚ್ಯವಾಗಿ ನಿಂದಿಸುವ ಧಾರ್ಷ್ಟ್ಯವನ್ನು ತೋರಲು ನಮ್ಮ ಜನಪ್ರತಿನಿಧಿಗಳಿಗೆ ಸಾಧ್ಯವಾಗಿರುವುದು. ಮತ್ತೆ ಮತ್ತೆ ಅವೇ ಜಾಳುಜಾಳು ಯೋಜನೆಗಳನ್ನು ಮುಂದಿಡುತ್ತಾ ಮಹಿಳೆಯರ ಮತಬುಟ್ಟಿಯನ್ನು ಅವರು ಕಸಿದುಕೊಳ್ಳುತ್ತಿರುವುದು.

ಮಹಿಳೆಯನ್ನು ಮೂಲದಲ್ಲೇ ಸಬಲೀಕರಿಸುವ, ಕೌಟುಂಬಿಕ ಚೌಕಟ್ಟಿನಲ್ಲಿ ನಡೆಯುವ ದೌರ್ಜನ್ಯ, ಅಸಮಾನತೆಯನ್ನು ನಿವಾರಿಸುವ, ಆಕೆಯನ್ನು ಪರಿಭಾವಿಸುತ್ತಿರುವ ದೃಷ್ಟಿಕೋನವನ್ನೇ ಸಂಪೂರ್ಣ ಬದಲಿಸದ ವಿನಾ ಸಮಾನತೆ ಅಸಾಧ್ಯವೆಂಬ ಅರಿವನ್ನು ಸಮಾಜಕ್ಕೆ ಮನಗಾಣಿಸಬೇಕಾದ ಜರೂರಿದೆ. ಇಂತಹ ವಿಶಾಲ ಚಿಂತನೆ, ದೂರಗಾಮಿ ಪರಿಣಾಮಗಳನ್ನು ಒಳಗೊಂಡ ಒಂದಾದರೂ ಯೋಜನೆ, ದೇಶದಲ್ಲಿ ಚುನಾವಣಾ ಪರ್ವ ಆರಂಭವಾದಂದಿನಿಂದ ಇಂದಿನವರೆಗೆ ಯಾವ ಪಕ್ಷದ್ದಾದರೂ ಕಾರ್ಯನೀತಿ ಆಗಿರುವ ನಿದರ್ಶನ ಇದೆಯೇ? ಅದಾಗದ ವಿನಾ, ಆ ದಿಸೆಯಲ್ಲಿ ಮಹಿಳೆಯರು ಸಂಪೂರ್ಣ ಎಚ್ಚರಗೊಳ್ಳದ ವಿನಾ ಹುಚ್ಚು ಕುದುರೆಗಳಂತಾಗಿರುವ ಪುರುಷ ರಾಜಕಾರಣಿಗಳಿಗೆ ಲಗಾಮು ಹಾಕುವುದು ಅಸಾಧ್ಯವೇ ಹೌದು.

ಜಾರಿಗಲ್ಲ, ಚಿಂತನೆಗಷ್ಟೇ ಬೆಳ್ಳಿಹಬ್ಬ!

ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು, ಪ್ರಧಾನಿಯಾಗಿದ್ದ ಎಚ್.ಡಿ.ದೇವೇಗೌಡರು 1996ರ ಸೆಪ್ಟೆಂಬರ್‌ನಲ್ಲಿ ಸದನದಲ್ಲಿ ಮಂಡಿಸಿ ಈಗ 26 ವರ್ಷಗಳೇ ಗತಿಸಿವೆ. ಕಾಂಗ್ರೆಸ್ ಬೆಂಬಲಿತ ಸಂಯುಕ್ತ ರಂಗ ಸರ್ಕಾರ ಅಂದು ಇಟ್ಟಿದ್ದ ಆ ಕ್ರಾಂತಿಕಾರಕ ಹೆಜ್ಜೆ, ಒಳಮೀಸಲಾತಿ ಬೇಡಿಕೆಯೇ ನೆವವಾಗಿ ಈವರೆಗೆ ಒಂದಿಂಚೂ ಕದಲದೆ ನಿಂತಲ್ಲೇ ನಿಂತಿದೆ.

ಈ ಮೀಸಲಾತಿಯ ಪರವಾಗಿ ಪಕ್ಷಾತೀತ, ಜಾತ್ಯತೀತ, ವರ್ಗಾತೀತವಾದ ದನಿಯೊಂದು ಗಟ್ಟಿಗೊಳ್ಳದಿದ್ದರೆ, ಮಹಿಳಾ ಮೀಸಲಾತಿ ಚಿಂತನೆ ರೂಪುಗೊಂಡ ದಿನಾಚರಣೆಗಷ್ಟೇ ನಾವು ಸಂಭ್ರಮಿಸಬೇಕಾಗುತ್ತದೆ ವಿನಾ ಅದು ಕಾರ್ಯರೂಪಕ್ಕೆ ಬಂದ ಸುದಿನಕ್ಕಲ್ಲ.

ಹೀಗಿತ್ತು 2018 ಕರ್ನಾಟಕ ವಿಧಾನಸಭಾ ಚುನಾವಣೆ

- **222** ಚುನಾವಣೆ ನಡೆದ ಕ್ಷೇತ್ರಗಳು (ಒಟ್ಟು ಕ್ಷೇತ್ರ 224)
- **2,636** ಕಣದಲ್ಲಿದ್ದ ಅಭ್ಯರ್ಥಿಗಳು
- **219** ಮಹಿಳಾ ಅಭ್ಯರ್ಥಿಗಳ ಸಂಖ್ಯೆ
- **7** ಆಯ್ಕೆಯಾದ ಮಹಿಳೆಯರು
- **200** ಠೇವಣಿ ಕಳೆದುಕೊಂಡವರು
- **12** ಠೇವಣಿ ಉಳಿಸಿಕೊಂಡವರು
- **2** ಬಳಿಕ ನಡೆದ ಉಪಚುನಾವಣೆಯಲ್ಲಿ ಗೆದ್ದ ಮಹಿಳೆಯರು
- **9** ಒಟ್ಟು ಮಹಿಳಾ ಸದಸ್ಯರ ಬಲ
- **5%** ಕ್ಕಿಂತ ಕಡಿಮೆ ಮಹಿಳಾ ಜನಪ್ರತಿನಿಧಿಗಳ ಪ್ರಮಾಣ

ಮಹಿಳಾ ಮತ

ಮಹಿಳಾ ಮೀಸಲಾತಿ ಕಾನೂನು ಜಾರಿಗೆ ಬರಲೇಬೇಕು



ಮಹಿಳೆಯರು ರಾಜಕೀಯವಾಗಿ ಸಬಲರಾಗಲು, ರಾಜಕೀಯ ಕ್ಷೇತ್ರದಲ್ಲಿ ಸೂಕ್ತ ಪ್ರಾತಿನಿಧ್ಯ ಸಿಗುವಂತಾಗಲು ಮಹಿಳಾ ಮೀಸಲಾತಿ ಕಾನೂನು ಜಾರಿಗೆ ಬರಲೇಬೇಕು. ಇಲ್ಲದೇ ಇದ್ದರೆ, ಲೋಕಸಭೆ, ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಮಹಿಳೆಯರಿಗೆ ಸ್ಥಾನಮಾನ, ರಾಜಕೀಯ ಶಕ್ತಿ ಸಿಗಲು ಸಾಧ್ಯವೇ ಇಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಶೇ 50ರಷ್ಟು ಮಹಿಳಾ ಮೀಸಲಾತಿ ಇರುವುದರಿಂದಲೇ ನನ್ನಂಥವರು ಕೆಳಹಂತದಿಂದ ಈಗಿನ ಹಂತದವರೆಗೆ ಬೆಳೆದು ಬರಲು ಸಾಧ್ಯವಾಗಿದೆ. ಮೀಸಲಾತಿ ಮೂಲಕ ಅವಕಾಶ ಕಲ್ಪಿಸಿದರೆ ಪುರುಷರಿಗೆ ಸಮಾನವಾಗಿ ಮುಂದೆ ಬರಬಹುದು.

ಎಲ್ಲರಿಗೂ ಸಮಾನ ಅವಕಾಶವನ್ನು ಸಂವಿಧಾನ ನೀಡಿದೆ. ಅಂಬೇಡ್ಕರ್ ಕೂಡಾ ಅದನ್ನು ಪ್ರತಿಪಾದಿಸಿದ್ದಾರೆ. ಆದರೆ, ಸ್ವಾತಂತ್ರ್ಯ ಸಿಕ್ಕಿದ 75 ವರ್ಷಗಳ ಬಳಿಕವೂ ರಾಜಕೀಯವೂ ಸೇರಿದಂತೆ ಕೆಲವು ವಿಚಾರಗಳಲ್ಲಿ ಈ ಸಮಾನತೆ ಕಾಣಲು ಸಾಧ್ಯ ಆಗಿಲ್ಲ. ಕೇವಲ ಬಾಯಿ ಮಾತಿನಿಂದ ಸಮಾನತೆ ಸಿಗಲು ಸಾಧ್ಯವೂ ಇಲ್ಲ. ಹೀಗಾಗಿ, ಕಾನೂನು ಜಾರಿ ಆಗಲೇ ಬೇಕು. 2008ರಲ್ಲಿಯೇ ನಮ್ಮ ಪಕ್ಷದ ನಾಯಕಿ ಸೋನಿಯಾ ಗಾಂಧಿಯವರು ಮಹಿಳಾ ಮೀಸಲಾತಿ ಕಾನೂನು ರೂಪಿಸಲು ಮುಂದಾಗಿದ್ದರು. 2019ರಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಮಹಿಳಾ ಮೀಸಲಾತಿ ಕಾನೂನು ತರುವುದಾಗಿ ಬಿಜೆಪಿ ಭರವಸೆ ನೀಡಿತ್ತು. ಆದರೆ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸಾಕಷ್ಟು ಬಹುಮತ ಇದ್ದರೂ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಈ ಮಸೂದೆ ಅಂಗೀಕಾರಕ್ಕೆ ಮುಂದಾಗಿಲ್ಲ. ಹೀಗಾಗಿ, ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಶೇ 50ರಷ್ಟು ಪ್ರಮಾಣದಲ್ಲಿ ಮಹಿಳಾ ಮೀಸಲಾತಿ ಬೇಡಿಕೆ ಇನ್ನೂ ಈಡೇರಿಲ್ಲ.

ಪುಷ್ಪಾ ಅಮರನಾಥ್, ಅಧ್ಯಕ್ಷೆ, ಕೆಪಿಸಿಸಿ ಮಹಿಳಾ ಘಟಕ

ಮಹಿಳಾ ಮೀಸಲಾತಿಯಿಂದ ನ್ಯಾಯ ಸಾಧ್ಯ



ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಶೇ 33 ರಷ್ಟು ಮಹಿಳಾ ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಲೋಕಸಭೆ ಅಂಗೀಕರಿಸಬೇಕು. ಆಗ ಮಾತ್ರ ಮಹಿಳೆಯರಿಗೆ ನ್ಯಾಯ ಸಿಗಲು ಸಾಧ್ಯ. ಇಲ್ಲವಾದರೆ ವಿಧಾನಸಭೆ ಅಥವಾ ಲೋಕಸಭಾ ಚುನಾವಣೆಗಳಲ್ಲಿ ಸುಲಭವಾಗಿ ಅವಕಾಶಗಳು ಸಿಗುವುದು ದೂರದ ಮಾತು. ಟಿಕೆಟ್‌ಗಾಗಿ ಎಷ್ಟೇ ಹೋರಾಟ ಮಾಡಿದರೂ, ಯಾವುದೇ ಪಕ್ಷವಿರಲಿ ಗೆಲುವಿನ ಮಾನದಂಡವನ್ನು ಮಾತ್ರ ಪರಿಗಣಿಸಲಾಗುತ್ತದೆ. ಇದರಿಂದ ಮಹಿಳೆಯರಿಗೆ ನ್ಯಾಯ ಸಿಗುವುದಿಲ್ಲ.

ಎದುರಾಳಿ ಪಕ್ಷದಲ್ಲಿ ಪ್ರಬಲ ಅಭ್ಯರ್ಥಿ ಸ್ಪರ್ಧಿಸಿದರೆ, ಮಹಿಳೆಯರಿಗೆ ಅವಕಾಶ ಸಿಗುವುದೇ ಕಷ್ಟ. ಮಹಿಳೆಯರು ಎದುರಿಸುವುದು ಕಷ್ಟ ಎಂಬ ಮನೋಭಾವವಿರುತ್ತದೆ. ಮಹಿಳಾ ಮೀಸಲಾತಿ ಜಾರಿ ಆದರೆ, ಅವಕಾಶ ಹೆಚ್ಚಾಗುತ್ತದೆ. ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆಯರ ಸಬಲೀಕರಣಕ್ಕೆ ನಮ್ಮ ಪಕ್ಷ ಆದ್ಯತೆ ನೀಡಿದೆ. ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಇದರ ಜತೆಗೆ ಸಮಾಜವೂ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಕಲ್ಪಿಸುವ ಬಗ್ಗೆ ಯೋಚಿಸಬೇಕು. ಹಿಂದಿಗಿಂತಲೂ ಈಗ ಸಾಕಷ್ಟು ಸುಧಾರಣೆಯಾಗಿದೆ.

ಗೀತಾ ವಿವೇಕಾನಂದ, ಅಧ್ಯಕ್ಷೆ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ

ಪುರುಷರ ಮನಸ್ಥಿತಿಯೂ ಬದಲಾಗಬೇಕು



ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮಿಸಲಾತಿ ಇರುವುದರಿಂದ ಹೆಚ್ಚಿನ ಆದ್ಯತೆ ಸಿಗುತ್ತಿದೆ. ಆದರೆ, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಸಿಗುತ್ತಿಲ್ಲ. ಲೋಕಸಭೆ ಮತ್ತು ವಿಧಾನಸಭೆಗೆ ಶೇ 33 ರಷ್ಟು ಮಹಿಳಾ ಮೀಸಲಾತಿ ಜಾರಿ ಮಾಡಿದರೆ ಶೇ 100 ರಷ್ಟು ನ್ಯಾಯ ಸಿಗುತ್ತದೆ. ಇದರ ಜತೆಗೆ ಪುರುಷರ ಮನಸ್ಥಿತಿಯೂ ಬದಲಾಗಬೇಕು. ಸಮಾನತೆ ಮತ್ತು ಗೌರವದ ಬಗ್ಗೆ ವೇದಿಕೆಗಳಲ್ಲಿ ಭಾಷಣ ಮಾಡುತ್ತಾರೆ. ಚುನಾವಣಾ ಟಿಕೆಟ್ ಮತ್ತು ಅಧಿಕಾರದ ಪ್ರಶ್ನೆ ಬಂದಾಗ ಮಹಿಳೆಯರನ್ನು ಪರಿಗಣಿಸುವುದಿಲ್ಲ. ಈ ಮನಸ್ಥಿತಿ ಬದಲಿಸಿಕೊಂಡರೆ ಮಹಿಳೆಯರಿಗೆ ಅವಕಾಶಗಳು ಸಿಗುತ್ತವೆ. ಮೀಸಲಾತಿ ಜೊತೆಗೆ ಪ್ರತಿಭಾವಂತ ಮಹಿಳೆಯರಿಗೆ ಅವಕಾಶ ಕೊಡುವ ಮನಸ್ಥಿತಿ ನಾಯಕರುಗಳಿಗೂ ಇರಬೇಕು.

ಕುಶಲಸ್ವಾಮಿ, ಅಧ್ಯಕ್ಷೆ, ಎಎಪಿ, ರಾಜ್ಯ ಮಹಿಳಾ ಘಟಕ

ಪ್ರಜಾ ಪತ್ರ

ಉತ್ತಮ ನಾಯಕನ ಆರಿಸೋಣ



ಚುನಾವಣೆಯೂ ಪ್ರಜಾಪ್ರಭುತ್ವದ ಆಧಾರ ಸ್ತಂಭ. ಪ್ರತಿಯೊಬ್ಬರು ಇದನ್ನು ಅರಿತು ಮತದಾನ ಮಾಡಬೇಕು. ರಾಜಕೀಯ ವ್ಯವಸ್ಥೆಯನ್ನು ನಿಯಂತ್ರಿಸಲು ಸಾರ್ವಜನಿಕರಿಗಿರುವ ಅಸ್ತ್ರವೇ ಮತದಾನ. ಇದನ್ನು ದೇಶದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುವ, ತಾರತಮ್ಯ ಮಾಡದೆ ಆಡಳಿತ ನಡೆಸುವ ನಾಯಕನ ಆಯ್ಕೆಗೆ ಬಳಸೋಣ. ನಾವು ಚಲಾಯಿಸುವ ಒಂದೊಂದು ಮತವೂ ಮಹತ್ವದ ಬದಲಾವಣೆ ತರುತ್ತದೆ. ಹೀಗಾಗಿ ಅರ್ಹರೆಲ್ಲರೂ ಮತದಾನ ಮಾಡಬೇಕು.

ಉಷಾ ರಾಥೋಡ, ವಿಜಯಪುರ

ಮತದಾನದ ಚಾಟಿ ಬೀಸೋಣ



ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಮತ ಕೇಳುವವರಿಗೆ ಚಾಟಿ ಬೀಸುವ ಕೆಲಸವಾಗಬೇಕು. ಮತದಾರರು ಯಾವುದೇ ಆಮಿಷಗಳಿಗೆ ಬಲಿಯಾಗದೇ ಉತ್ತಮ, ಕಳಂಕರಹಿತ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಪಕ್ಷದ ಹೈಕಮಾಂಡ್‌ನ ಅಡಿಯಾಳಾಗಿ ಕೆಲಸ ಮಾಡುವ ನಾಯಕನನ್ನು ಚುನಾಯಿಸಬಾರದು. ಆಡಳಿತ ನಡೆಸುವ ಜನನಾಯಕ ಸುಶಿಕ್ಷಿತ, ಸಂವಿಧಾನದ ಆಶಯಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸುವಂತಿರಬೇಕು. ಜನರ ನಾಡಿಮಿಡಿತ ಅರಿತು, ಕ್ಷೇತ್ರಕ್ಕೆ ಅಗತ್ಯ ಮೂಲಸೌಕರ್ಯ ಒದಗಿಸುವ, ಶಿಕ್ಷಣಕ್ಕೆ ಆದ್ಯತೆ ನೀಡಿ, ನ್ಯಾಯ ಸಮ್ಮತವಾಗಿ ಜವಾಬ್ದಾರಿ ನಿರ್ವಹಿಸುವ ವ್ಯಕ್ತಿಯನ್ನು ಆಯ್ಕೆ ಮಾಡಬೇಕು.

ಮಹಮ್ಮದ್ ಖಾನ್ ಬಿ., ದಾವಣಗೆರೆ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಮುದ್ದಹನುಮೇಗೌಡರಿಗೆ ಟಿಕೆಟ್ ಕೈ ತಪ್ಪಿದ್ದೇ ಹೆಚ್ಚು



ಕುಣಿಗಲ್: ತಾಲ್ಲೂಕಿನವರೇ ಆದ ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ರಾಜಕೀಯ ಜೀವನದಲ್ಲಿ ಸ್ಪರ್ಧೆಗಿಂತ ಟಿಕೆಟ್‌ನಿಂದ ವಂಚಿತರಾಗಿದ್ದೇ ಹೆಚ್ಚು.

ಈ ಹಿಂದೆ ಕುಣಿಗಲ್ ಶಾಸಕರಾಗಿ ಆಯ್ಕೆಯಾಗಿದ್ದರೂ, ನಂತರದ ದಿನಗಳಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಟಿಕೆಟ್ ಕೈತಪ್ಪಿದ್ದವು. ಈಗ ಬಿಜೆಪಿಯಲ್ಲಿ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ.

1989ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಅಂತಿಮ ಕ್ಷಣದಲ್ಲಿ ಟಿಕೆಟ್ ಕೈ ತಪ್ಪಿ ಅಂದಿನ ಮಾಜಿ ಸಂಸದರಾಗಿದ್ದ ಕೆ. ಲಕ್ಕಪ್ಪ ಅಭ್ಯರ್ಥಿಯಾದರು. 2008ರಲ್ಲಿ ಬಿ.ಬಿ. ರಾಮಸ್ವಾಮಿಗೌಡ ಅಭ್ಯರ್ಥಿಯಾಗುವ ಮೂಲಕ ಕಾಂಗ್ರೆಸ್ ಟಿಕೆಟ್‌ನಿಂದ ವಂಚಿತರಾದರು.

ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿ 2013ರಲ್ಲಿ ಜೆಡಿಎಸ್ ಪಕ್ಷದಿಂದ ಬಿ– ಫಾರಂ ಪಡೆದು ನಾಮಪತ್ರ ಸಲ್ಲಿಸಿದ್ದರೂ, ಬೇರೆ ಅಭ್ಯರ್ಥಿಗೆ ಸಿ–ಫಾರಂ ಕೊಟ್ಟಿದ್ದರಿಂದ ಟಿಕೆಟ್ ಕಳೆದುಕೊಂಡರು. ನಂತರ ಕಾಂಗ್ರೆಸ್ ಸೇರಿ ತುಮಕೂರು ಸಂಸದರಾಗಿ ಆಯ್ಕೆ ಆಗಿದ್ದರು. ಎರಡನೇ ಬಾರಿಗೆ ಸ್ಪರ್ಧಿಸಲು ಸಿದ್ಧರಾಗಿದ್ದಾಗ, ಜೆಡಿಎಸ್ ಜತೆಗಿನ ಹೊಂದಾಣಿಕೆಯಿಂದಾಗಿ ಮತ್ತೆ ಸ್ಪರ್ಧಿಸುವ ಅವಕಾಶದಿಂದ ವಂಚಿತರಾದರು.

ವಿಧಾನಸಭೆಯ ಚುನಾವಣೆಯಲ್ಲಿ ಕುಣಿಗಲ್ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಹುರಿಯಾಳಾಗಿ ಸ್ಪರ್ಧಿಸಲು ಪ್ರಯತ್ನ ನಡೆಸಿದ್ದರು. ಟಿಕೆಟ್ ಸಿಗುವುದು ಅನುಮಾನ ಎಂಬುದು ಗೊತ್ತಾಗುತ್ತಿದ್ದಂತೆ ಬಿಜೆಪಿ ಸೇರಿದ್ದಾರೆ. ಟಿಕೆಟ್‌ಗೆ ಪ್ರಯತ್ನ ನಡೆಸಿದ್ದು, ಬಿಜೆಪಿ ಯಾರಿಗೆ ಟಿಕೆಟ್ ನೀಡುತ್ತದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ!

ಮಾತಿನೇಟು



ನಿಮ್ಮ ವಂಶ ಬಿಟ್ಟು ಬೇರೆಯವರ ವಂಶ ಅಭಿವೃದ್ಧಿ ಆಗಬೇಕೆಂದರೆ ಜೆಡಿಎಸ್‌ಗೆ ಮತ ಹಾಕಿ. ನಿಮ್ಮ ವಂಶ ಬಿಟ್ಟು ಹೊರದೇಶದ ವಂಶ ಅಭಿವೃದ್ಧಿ ಆಗಬೇಕಾದ್ರೆ ಕಾಂಗ್ರೆಸ್‌ಗೆ ಮತ ಹಾಕಿ. ನಿಮ್ಮ ವಂಶದ ಜೊತೆಗೆ ದೇಶದ ಅಭಿವೃದ್ಧಿ ಆಗಬೇಕಾದ್ರೆ ಬಿಜೆಪಿಗೆ ಮತ ಹಾಕಿ.

ಶ್ರುತಿ, ಚಿತ್ರನಟಿ

ಸೆಲೆಬ್ರಿಟಿ ಮಾತು



ಜವಾಬ್ದಾರಿಗಳಿಗೆ ಹೆಗಲಾದರೆ ದೇಶಕ್ಕೆ ಮುನ್ನಡೆ

ಜಾವಗಲ್ ಶ್ರೀನಾಥ್, ಕ್ರಿಕೆಟಿಗ

ಮತದಾನ, ದೇಶವು ತನ್ನ ಪ್ರತಿಯೊಬ್ಬ ಪ್ರಜೆಗೆ ನೀಡಿರುವ ಹಕ್ಕು. ಮತದ ಪಾವಿತ್ರ್ಯತೆ ಹಾಗೂ ಮೌಲ್ಯವನ್ನು ಉಳಿಸಿಕೊಳ್ಳಬೇಕಾದ್ದು ನಮ್ಮ ಜವಾಬ್ದಾರಿ. ಯಾವುದೇ ಆಮಿಷಕ್ಕೆ ಒಳಗಾಗಬಾರದು. 'ಯಾರು ಕೊಡುತ್ತಾರೋ ಕೊಡಲಿ. ಅದನ್ನು ತೆಗೆದುಕೊಂಡು ನಮ್ಮಿಷ್ಟದವರಿಗೆ ಮತ ನೀಡುತ್ತೇವೆ' ಎಂಬ ಮನೋಭಾವ ಬೆಳೆಸಿಕೊಂಡರೆ ನಮ್ಮ ಮೌಲ್ಯವನ್ನೇ ಮಾರಿಕೊಂಡಂತೆ. ಅದು ನಮ್ಮೊಳಗೆ ಅನೈತಿಕತೆಯನ್ನು ಗೊತ್ತಿಲ್ಲದೆ ಬೆಳೆಸುತ್ತದೆ. ಹೀಗಾಗಿ ಜವಾಬ್ದಾರಿಯಿಂದ ನಮ್ಮ ಹಕ್ಕನ್ನು ಚಲಾಯಿಸಬೇಕು. ಎಲ್ಲರೂ ಮತದಾನ ಮಾಡಬೇಕು. ಜವಾಬ್ದಾರಿಗಳಿಗೆ ಹೆಗಲಾದರೆ ದೇಶವು ಮುನ್ನಡೆಯುತ್ತದೆ.



ಬೈಕ್ ಸವಾರ ಸೊಂಟಕ್ಕೆ ಕಟ್ಟಿಕೊಂಡು ಸಾಗುತ್ತಿದ್ದ ನೋಟಿನ ಕಂತೆಯನ್ನು ದಾವಣಗೆರೆ ಜಿಲ್ಲೆಯ ನ್ಯಾಮತಿಯ ಜೀನಹಳ್ಳಿ ಚೆಕ್‌ಪೋಸ್ಟ್ ಬಳಿ ಚುನಾವಣಾಧಿಕಾರಿಗಳು ವಶಪಡಿಸಿಕೊಂಡರು.

ಮತ ಆಮಿಷ, ಸಿಕ್ಕಿದ್ದೇನು?

- **₹1.5** ಕೋಟಿ ನಗದು — ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕೂಗನೊಳ್ಳಿ
- **₹1.47** ಕೋಟಿ ನಗದು — ಗದಗ ಜಿಲ್ಲೆಯ ವಿವಿಧೆಡೆ
- **₹1.06** ಕೋಟಿ ಮೌಲ್ಯದ ಮದ್ಯ ವಶ — ಮೈಸೂರಿನ ವಿವಿಧೆಡೆ

ಗಾಳಿ ಮಾತು


ಕ್ರಿಕೆಟ್ ಬೆಟ್ಟಿಂಗ್ ನೋಡಿದ್ದೇವೆ, ಚುನಾವಣಾ ಫಲಿತಾಂಶದ ಬೆಟ್ಟಿಂಗ್ ದಂಧೆ ಕಂಡಿದ್ದೇವೆ. ಈಗ ವಿಧಾನಸಭಾ ಚುನಾವಣೆಗೂ ಮೊದಲೇ ಅಭ್ಯರ್ಥಿ ಯಾರಾಗಬಹುದೆಂದು ಕೋಟ್ಯಂತರ ರೂಪಾಯಿ ಬೆಟ್ಟಿಂಗ್ ಕಟ್ಟುತ್ತಿರುವುದು ಹೊಸ ಬೆಳವಣಿಗೆ.

2019ರ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ ಸುಮಲತಾ– ನಿಖಿಲ್ ಕುಮಾರಸ್ವಾಮಿ ಪರ ನಡೆದಿದ್ದ ಬೆಟ್ಟಿಂಗ್ ದಂಧೆ ರಾಷ್ಟ್ರದ ಗಮನ ಸೆಳೆದಿತ್ತು. ಈಗ ಮದ್ದೂರಿನಲ್ಲಿ ಒಂದೇ ಪಕ್ಷದಲ್ಲಿ ಅಭ್ಯರ್ಥಿ ಯಾರಾಗಬಹುದೆಂಬ ಬೆಟ್ಟಿಂಗ್ ದಂಧೆ ಜೋರಾಗಿದೆ.

ಮದ್ದೂರು ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿರುವ ಉದ್ಯಮಿ ಕದಲೂರು ಉದಯ್, ಎಸ್.ಎಂ.ಕೃಷ್ಣ ಸಹೋದರನ ಪುತ್ರ ಎಸ್.ಗುರುಚರಣ್ ಪರವಾಗಿ ಬೆಂಬಲಿಗರು, ಬುಕ್ಕಿಗಳು ಕನಿಷ್ಠ ₹ 5 ಲಕ್ಷದಿಂದ ಗರಿಷ್ಠ ₹ 1 ಕೋಟಿವರೆಗೂ ಬೆಟ್ಟಿಂಗ್ ಕಟ್ಟಿದ್ದಾರಂತೆ. ಒಂದು ತಿಂಗಳಿಂದ ನಡೆದಿರುವ ಇದು ಮದ್ದೂರು ದಾಟಿ ಮಂಡ್ಯ, ರಾಮನಗರ ಜಿಲ್ಲೆಯ ಚನ್ನಪಟ್ಟಣದವರೆಗೂ ವ್ಯಾಪಿಸಿದೆ. ಹಣ ಕಟ್ಟಿರುವ ರಿಯಲ್ ಎಸ್ಟೇಟ್ ನಡೆಸುವವರು, ಸ್ಥಳೀಯ ಉದ್ಯಮಿಗಳು, ವಿವಿಧ ರಾಜಕೀಯ ಪಕ್ಷಗಳ ಮುಖಂಡರು ನಡೆಸಿರುವ ಮೊಬೈಲ್ ಫೋನ್ ಸಂಭಾಷಣೆಗಳು ಹರಿದಾಡುತ್ತಿವೆ. 'ಹಣ ಕಟ್ಟುವವರು ಇದಕ್ಕಾಗಿಯೇ ಬೆಂಗಳೂರಿನಲ್ಲಿ ತೆರೆದಿರುವ ಕಚೇರಿ ಸಂಪರ್ಕಿಸುತ್ತಾರೆ. ಚನ್ನಪಟ್ಟಣದ ಉದ್ಯಮಿಯೊಬ್ಬರು ಉದಯ್ ಪರ ₹ 1 ಕೋಟಿ, ಮಂಡ್ಯದವರೊಬ್ಬರು ₹ 50 ಲಕ್ಷ ಕಟ್ಟಿದ್ದಾರೆ' ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.


ಕ್ಷೇತ್ರದ ಕೂಗು

• **ಕ್ಷೇತ್ರ: ಮಂಗಳೂರು ದಕ್ಷಿಣ**
• **ಶಾಸಕ: ಡಿ.ವೇದವ್ಯಾಸ ಕಾಮತ್** (ಬಿಜೆಪಿ)




▸ ಮಂಗಳೂರಿನ ಪಂಪ್‌ವೆಲ್ ಪ್ರದೇಶದಲ್ಲಿ ನೂತನ ಬಸ್‌ನಿಲ್ದಾಣ ನಿರ್ಮಿಸಿ ಮಂಗಳೂರು ನಗರದ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಬೇಕು ಎಂಬುದು ದಶಕಗಳ ಬೇಡಿಕೆ. ಬಸ್‌ನಿಲ್ದಾಣ ನಿರ್ಮಾಣಕ್ಕಾಗಿ ಮಹಾನಗರ ಪಾಲಿಕೆಯು ರಾಷ್ಟ್ರೀಯ ಹೆದ್ದಾರಿ 66ರ ಪಕ್ಕದಲ್ಲಿ 7 ಎಕರೆ 23.5 ಸೆಂಟ್ಸ್ ಜಾಗವನ್ನು 2008ರಲ್ಲಿ ಸ್ವಾಧೀನಪಡಿಸಿಕೊಂಡಿದ್ದರೂ ಬಸ್‌ನಿಲ್ದಾಣ ನಿರ್ಮಿಸಲು ಸಾಧ್ಯವಾಗಿಲ್ಲ. ನಗರದೊಳಗಿನ ರಸ್ತೆಗಳಲ್ಲಿ ರಸ್ತೆ ಅಪಘಾತ ಮರುಕಳಿಸುತ್ತಿದ್ದು, ಅನೇಕ ಮಂದಿ ಪ್ರಾಣ ಕಳೆದುಕೊಂಡಿದ್ದಾರೆ.

• **ಕ್ಷೇತ್ರ: ಮಂಗಳೂರು ಉತ್ತರ**
• **ಶಾಸಕ: ಡಾ.ಭರತ್ ಶೆಟ್ಟಿ ವೈ** (ಬಿಜೆಪಿ)




▸ ವಿಶೇಷ ಆರ್ಥಿಕ ವಲಯ, ಎಂಆರ್‌ಪಿಎಲ್, ಎಂಸಿಎಫ್‌ನಂತಹ ಕೈಗಾರಿಕೆಗಳು, ನವಮಂಗಳೂರು ಬಂದರು ಈ ಕ್ಷೇತ್ರದಲ್ಲಿವೆ. ಇವುಗಳ ಸ್ಥಾಪನೆಗಾಗಿ ಭೂಮಿ ಬಿಟ್ಟುಕೊಟ್ಟ ಸ್ಥಳೀಯರಿಗೆ ಈ ಸಂಸ್ಥೆಗಳಲ್ಲಿ ಉದ್ಯೋಗ ನೀಡಬೇಕು ಎಂಬುದು ದಶಕಗಳ ಕೂಗು. ಇಲ್ಲಿನ ಕೈಗಾರಿಕೆಗಳ ತ್ಯಾಜ್ಯ ನೀರು ಸೇರಿ ಈ ಪರಿಸರದ ಜಲಮೂಲಗಳು ಮಲಿನಗೊಂಡಿವೆ. ಕೈಗಾರಿಕೆಗಳ ಕೊಳಕು ನೀರು ಫಲ್ಗುಣಿ ನದಿಯನ್ನು ಸೇರುವುದನ್ನು ತಪ್ಪಿಸಲು ಕೊಳಚೆ ನೀರು ಶುದ್ಧೀಕರಣ ಘಟಕ ಸ್ಥಾಪಿಸಬೇಕೆಂಬ ಬೇಡಿಕೆ ಈಡೇರಿಲ್ಲ.

• **ಕ್ಷೇತ್ರ: ಮಂಗಳೂರು (ಉಳ್ಳಾಲ)**
• **ಶಾಸಕ: ಯು.ಟಿ.ಖಾದರ್** (ಕಾಂಗ್ರೆಸ್)




▸ ಕಡಲ್ಕೊರೆತ ಪ್ರಮುಖ ಸಮಸ್ಯೆ. ತಲಪಾಡಿ ಗ್ರಾಮದವರೆಗೆ ಅರಬ್ಬೀ ಸಮುದ್ರದ ಕಿನಾರೆಯಂಚಿನಲ್ಲಿ ಪ್ರತಿ ಮಳೆಗಾಲದಲ್ಲೂ ಗಜಗಾತ್ರದ ಅಲೆಗಳು ಕಿನಾರೆಯಂಚಿನ ಮನೆಗಳನ್ನು ಆಪೋಶನ ಪಡೆಯುತ್ತಲೇ ಇವೆ. ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನಲ್ಲಿ ಕೈಗೊಂಡ ಕಡಲ್ಕೊರೆತ ತಡೆ ಯೋಜನೆಯೂ ಯಶಸ್ವಿಯಾಗಿಲ್ಲ. ಮುಡಿಪು, ಕೊಣಾಜೆ, ಉಳ್ಳಾಲ ಪರಿಸರದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆ ತೀವ್ರವಾಗಿ ಕಾಡುತ್ತದೆ. ನಾಲ್ಕು ವೈದ್ಯಕೀಯ ಕಾಲೇಜುಗಳಿರುವ ಪ್ರದೇಶಗಳೂ ಸೇರಿದಂತೆ ಉಳ್ಳಾಲ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಸೌಕರ್ಯವೇ ಇಲ್ಲ.

• **ಕ್ಷೇತ್ರ: ಬಂಟ್ವಾಳ**
• **ಶಾಸಕ: ರಾಜೇಶ್ ನಾಯ್ಕ್ ಉಳೇಪಾಡಿ** (ಬಿಜೆಪಿ)




▸ ಕಲ್ಲಿನ ಅಕ್ರಮ ಗಣಿಗಾರಿಕೆ ಹಾಗೂ ಅಕ್ರಮ ಮರಳುಗಾರಿಕೆ ಕ್ಷೇತ್ರದಾದ್ಯಂತ ವ್ಯಾಪಕವಾಗಿ ನಡೆಯುತ್ತಿದೆ. ವೀರಕಂಬ, ಬಾಳ್ತಿಲ, ವಾಮದಪದವು, ಸ್ವರ್ಣಾಡು ಮೊದಲಾದೆಡೆ ಕಲ್ಲು ಗಣಿಗಾರಿಕೆ ಹಾಗೂ ತುಂಬೆ, ಸರಪಾಡಿ, ಫರಂಗಿಪೇಟೆ, ಕಡೇಶಿವಾಲಯದಂತಹ ಕಡೆ ಮರಳುಗಾರಿಕೆ ನಡೆಯುತ್ತಿದೆ. ಕಲ್ಲು, ಮರಳು ಸಾಗಿಸುವ ವಾಹನಗಳಿಂದಾಗಿ ರಸ್ತೆಗಳೂ ಹದಗೆಟ್ಟಿವೆ. ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.

• **ಕ್ಷೇತ್ರ: ಬೆಳ್ತಂಗಡಿ**
• **ಶಾಸಕ: ಹರೀಶ್ ಪೂಂಜ** (ಬಿಜೆಪಿ)



▸ ಈ ಕ್ಷೇತ್ರದಲ್ಲಿರುವ ಕುದುರೆಮುಖ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯ ಕುತ್ಲೂರು, ಸುಲ್ಕೇರಿಮೊಗ್ರು, ನಾವೂರ ಮೊದಲಾದ ಗ್ರಾಮಗಳು ಸಂಪರ್ಕ ರಸ್ತೆ, ಸೇತುವೆ, ವಿದ್ಯುತ್‌ನಂತಹ ಮೂಲಸೌಕರ್ಯ ಕೊರತೆ ಎದುರಿಸುತ್ತಿವೆ. ಈ ಪ್ರದೇಶದ ನೂರಾರು ಮನೆಗಳು ಈಗಲೂ ಸೌರವಿದ್ಯುತ್ತನ್ನೇ ನೆಚ್ಚಿಕೊಂಡಿವೆ. ಅಕ್ರಮ–ಸಕ್ರಮ ಯೋಜನೆಯಡಿ 25 ಸಾವಿರಕ್ಕೂ ಅಧಿಕ ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಬೆಳ್ತಂಗಡಿ ಪಟ್ಟಣದಲ್ಲಿ ಸುಸಜ್ಜಿತ ಬಸ್ ನಿಲ್ದಾಣವೂ ಇಲ್ಲ.

• **ಕ್ಷೇತ್ರ: ಸುಳ್ಯ**
• **ಶಾಸಕ: ಎಸ್.ಅಂಗಾರ** (ಬಿಜೆಪಿ)




▸ ಕ್ಷೇತ್ರದ ಬಹುಪಾಲು ಅರಣ್ಯ ಪ್ರದೇಶದಿಂದ ಕೂಡಿದೆ. ಕಾಡು ಪ್ರಾಣಿಗಳ ಉಪಟಳ ಜನರನ್ನು ಕಾಡುತ್ತಿರುವ ಸಮಸ್ಯೆ. ಆನೆಗಳು ಕೃಷಿ ಭೂಮಿಗೆ ಲಗ್ಗೆ ಇಟ್ಟು ಬೆಳೆ ನಾಶ ಮಾಡುವುದು ತಪ್ಪುತ್ತಿಲ್ಲ. ಕಾಡಾನೆ ದಾಳಿಯಿಂದ ಜೀವಹಾನಿಯೂ ಸಂಭವಿಸಿದ್ದು, ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂಬುದು ಕ್ಷೇತ್ರದ ಜನರ ಪ್ರಮುಖ ಬೇಡಿಕೆ. ಕ್ಷೇತ್ರದ ಪ್ರಮುಖ ರಸ್ತೆಗಳು ಮೇಲ್ದರ್ಜೆಗೇರಿವೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳ ಸ್ಥಿತಿ ಸುಧಾರಣೆಯಾಗಬೇಕಿದೆ.

• **ಕ್ಷೇತ್ರ: ಪುತ್ತೂರು**
• **ಶಾಸಕ:** ಸಂಜೀವ ಮಠಂದೂರು (ಬಿಜೆಪಿ)

▸ ಪುತ್ತೂರಿನ ಸರ್ಕಾರಿ ಆಸ್ಪತ್ರೆಯನ್ನು 300 ಹಾಸಿಗೆ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಿ, ಸರ್ಕಾರಿ ವೈದ್ಯಕೀಯ ಕಾಲೇಜು ಆರಂಭಿಸಬೇಕು ಎಂಬುದು ಪ್ರಮುಖ ಬೇಡಿಕೆ. ಈಗಿರುವ ಸರ್ಕಾರಿ ಆಸ್ಪತ್ರೆಯ ಬಳಿಯೇ ಇದಕ್ಕಾಗಿ 7 ಎಕರೆ ಜಮೀನನ್ನು ಹಾಗೂ ನಗರದ ಹೊರವಲಯದ ಸೇಡಿಯಾಪುವಿನಲ್ಲಿ 40 ಎಕರೆಯನ್ನು ಈ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ. ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದು, ಇದರ ನಿವಾರಣೆಗಾಗಿ ಶಾಶ್ವತ ಯೋಜನೆ ರೂಪಿಸಬೇಕೆಂಬ ಕೂಗು ಇದೆ.

• **ಕ್ಷೇತ್ರ: ಮೂಲ್ಕಿ– ಮೂಡುಬಿದಿರೆ**
• **ಶಾಸಕ: ಉಮಾನಾಥ ಕೋಟ್ಯಾನ್** (ಬಿಜೆಪಿ)



▸ ಮೂಡುಬಿದಿರೆ ಪಟ್ಟಣದಲ್ಲಿ ಒಳಚರಂಡಿ ಸಂಪರ್ಕ ಇನ್ನೂ ಸಾಧ್ಯವಾಗಿಲ್ಲ. ಶೈಕ್ಷಣಿಕ ಕೇಂದ್ರವಾಗಿ ಬೆಳವಣಿಗೆ ಹೊಂದುತ್ತಿರುವ ಈ ಪಟ್ಟಣ ಮತ್ತಷ್ಟು ಅಭಿವೃದ್ಧಿ ಹೊಂದುವುದಕ್ಕೆ ತೊಡಕಾಗಿ ಪರಿಣಮಿಸಿದೆ. ಪಟ್ಟಣದಲ್ಲಿ ಹಳೆ ಮಾರುಕಟ್ಟೆಯನ್ನು ಕೆಡವಿ ಹೊಸ ಮಾರುಕಟ್ಟೆ ನಿರ್ಮಿಸುವ ಕಾಮಗಾರಿಯಲ್ಲಿ ಐದು ವರ್ಷಗಳಿಂದ ಯಾವುದೇ ಪ್ರಗತಿಯಾಗಿಲ್ಲ. ಈ ಕ್ಷೇತ್ರದ ವ್ಯಾಪ್ತಿಯ ಮೂಲ್ಕಿ ಪಟ್ಟಣ ಪಂಚಾಯಿತಿ ಹಾಗೂ ಹಳೆಯಂಗಡಿ ಪರಿಸರದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ವ್ಯಾಪಕವಾಗಿದೆ.



❦ ಸುಭಾಷಿತ ❦

ಮುಂದಿರುವ ಹುಣ್ಣಿಮೆಯ ಸೊಬಗನ್ನು ಸವಿಯದೆ,
ಮುಂಬರಲಿರುವ ಅಮಾವಾಸ್ಯೆಯನ್ನು ನೆನೆದು ಕೊರಗುತ್ತಾ
ಕೂರುವುದು ವಿವೇಕವೆನ್ನಿಸದು.

-ಕೆ.ಎಸ್.ನಿಸಾರ್ ಅಹಮದ್

ಕರ್ನಾಟಕದ ಗಡಿ ಗ್ರಾಮಸ್ಥರಿಗೆ ವಿಮೆ ಮಹಾರಾಷ್ಟ್ರದ ಉದ್ಧಟತನ

ಮಹಾರಾಷ್ಟ್ರದ ಶಿವಸೇನಾ ಮತ್ತು ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರ 'ಮಹಾತ್ಮ ಜ್ಯೋತಿರಾವ್ ಫುಲೆ ಜನಾರೋಗ್ಯ ಯೋಜನೆ' ಹೆಸರಿನ ಆರೋಗ್ಯ ವಿಮೆಯನ್ನು ಕರ್ನಾಟಕದ ಗಡಿಯೊಳಗಿನ 865 ಗ್ರಾಮಗಳ ಜನರಿಗೆ ನೀಡಲು ಆದೇಶ ಹೊರಡಿಸಿದೆ. ಮೇಲ್ನೋಟಕ್ಕೆ ಇದು ಆರೋಗ್ಯ ಸೇವೆ ಎನಿಸಿದರೂ, ಔದಾರ್ಯದ ಉರುಳಿನಲ್ಲಿ ಜನರನ್ನು ಕೆಡವಿ, ಕರ್ನಾಟಕದೊಳಗಿನ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿದ್ದೆಂದು ದಾಖಲೆ ಸೃಷ್ಟಿಸುವ ಹುನ್ನಾರವಲ್ಲದೇ ಮತ್ತೇನಲ್ಲ. ಕರ್ನಾಟಕದ ಗಡಿಯೊಳಗಿನ ಜನರಿಗೂ ವಿಮೆ ಜಾರಿ ಮಾಡುವುದಾಗಿ ಅಲ್ಲಿನ ಸರ್ಕಾರ ಹೇಳಿತ್ತು. ಆದೇಶ ಹೊರಟ ಬಳಿಕವಷ್ಟೇ ಮಹಾರಾಷ್ಟ್ರದ ನಡೆಯ ಹಿಂದಿನ ಉದ್ದೇಶ ಬಯಲಾಗಿದೆ. ಆರೋಗ್ಯ ವಿಮೆಯ ನಿಯಮಗಳಲ್ಲಿ ಈ ಯೋಜನೆಯು ಮರಾಠಿ ಹಾಗೂ ಮರಾಠಿಯೇತರ ಭಾಷಿಕರಿಗೂ ಅನ್ವಯ ಎಂಬ ಉಲ್ಲೇಖವಿದೆ. ಯೋಜನೆಯ ಫಲಾನುಭವಿಯಾಗಬೇಕಾದರೆ 'ಮರಾಠಿ ಭಾಷಿಕ' ಎಂದು ಘೋಷಣಾ ಪತ್ರ ನೀಡುವುದನ್ನು ಕಡ್ಡಾಯಗೊಳಿಸಿರುವುದು ಮಹಾರಾಷ್ಟ್ರ ಸರ್ಕಾರದ ಕೆಟ್ಟ ನಡೆಯನ್ನು ತೋರಿಸುತ್ತದೆ. ಘೋಷಣಾ ಪತ್ರದಲ್ಲಿ 'ನಾನು, ಮಹಾರಾಷ್ಟ್ರ ಸರ್ಕಾರ ದಾವೆ ಹೂಡಿದ ಗ್ರಾಮದ ನಿವಾಸಿಯಾಗಿದ್ದೇನೆ. ನಾನು ಮತ್ತು ನನ್ನ ಕುಟುಂಬದವರು ಇಂತಿಷ್ಟು ವರ್ಷಗಳಿಂದ ಇಲ್ಲಿ ವಾಸವಿದ್ದು, ಮರಾಠಿ ಭಾಷಿಕರಾಗಿದ್ದೇವೆ. ನಾನು ನೀಡಿದ ಮಾಹಿತಿ ಸತ್ಯ ಎಂದು ಪ್ರಮಾಣ ಮಾಡುತ್ತೇನೆ. ಮಾಹಿತಿ ಸುಳ್ಳಾಗಿದ್ದರೆ ಮಹಾರಾಷ್ಟ್ರ ಸರ್ಕಾರ ನಮ್ಮ ವಿರುದ್ಧ ಕ್ರಮ ಜರುಗಿಸಬಹುದು' ಎಂದು ಬರೆದುಕೊಡಬೇಕಾಗುತ್ತದೆ. ಈ ರೀತಿಯ ಘೋಷಣಾಪತ್ರದ ಜತೆ, ವಿಮಾ ಅರ್ಜಿಯನ್ನು ಸಂಗ್ರಹಿಸಲು ಆರೋಗ್ಯ ಇಲಾಖೆ ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ಕಳುಹಿಸಲು ಅಲ್ಲಿನ ಸರ್ಕಾರ ತಯಾರಿ ನಡೆಸಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ವಿವಾದ ಸುಪ್ರೀಂ ಕೋರ್ಟ್ ಮುಂದಿದೆ. ಇಂತಹ ಹೊತ್ತಿನೊಳಗೆ, 'ನಾನು ಮರಾಠಿ ಭಾಷಿಕ, ನಾನು ಮತ್ತು ನನ್ನ ಕುಟುಂಬದವರು ಇಷ್ಟು ವರ್ಷದಿಂದ ಇಲ್ಲಿಯೇ ವಾಸ ಮಾಡಿದ್ದೇವೆ' ಎಂಬ ಪ್ರಮಾಣಪತ್ರವನ್ನು ಸಂಗ್ರಹಿಸಿ, 865 ಗ್ರಾಮಗಳ ನಿವಾಸಿಗಳು ಮಹಾರಾಷ್ಟ್ರದವರು ಎಂಬ ದಾಖಲೆ ಸಂಗ್ರಹಿಸುವ ಗುರಿ ಅಲ್ಲಿನ ಸರ್ಕಾರದ್ದಾಗಿದೆ. ಆರೋಗ್ಯ ವಿಮೆಯ ಆಮಿಷಕ್ಕೆ ಒಳಗಾಗಿ ಮರಾಠಿಗರಲ್ಲದವರೂ ಹೀಗೆ ಬರೆದುಕೊಟ್ಟರೆ, ಗ್ರಾಮವಾಸಿಗಳಲ್ಲಿ ಬಹುಸಂಖ್ಯಾತರು ಮರಾಠಿಗರೇ ಎಂಬುದಕ್ಕೆ ಪ್ರಮಾಣಪತ್ರ ಸಹಿತ ಪುರಾವೆ ಸಿಕ್ಕಂತಾಗುತ್ತದೆ. ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಕನ್ನಡ ನಾಡಿನ ಪ್ರದೇಶಗಳನ್ನು ಕಬಳಿಸಲು ಮಹಾರಾಷ್ಟ್ರ ಮುಂದಾಗಿದೆ ಎಂಬುದಕ್ಕೆ ಬೇರೆ ಪುರಾವೆ ಬೇಕಾಗಿಲ್ಲ.



ಮೇಲ್ನೋಟಕ್ಕೆ ಇದು ಆರೋಗ್ಯ ಸೇವೆ ಎನಿಸಿದರೂ, ಔದಾರ್ಯದ ಉರುಳಿನಲ್ಲಿ ಜನರನ್ನು ಕೆಡವಿ, ಕರ್ನಾಟಕದೊಳಗಿನ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿದ್ದೆಂದು ದಾಖಲೆ ಸೃಷ್ಟಿಸುವ ಹುನ್ನಾರವಲ್ಲದೇ ಮತ್ತೇನಲ್ಲ

ಭಾಷಾವಾರು ಪ್ರಾಂತ್ಯ ವಿಂಗಡಣೆಯ ಬಳಿಕ ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಕೇಂದ್ರ ಸರ್ಕಾರದ ಕೆಲವು ಸಂಸ್ಥೆಗಳಷ್ಟೇ ಪೂರ್ವಾನುಮತಿ ಇಲ್ಲದೆ ಯಾವುದೇ ರಾಜ್ಯದೊಳಗೆ ಪ್ರವೇಶಿಸಬಹುದು. ಒಂದು ರಾಜ್ಯದ ಗಡಿಯೊಳಗೆ ನೆರೆ ರಾಜ್ಯದ ಅಧಿಕಾರಿಗಳು ಸರ್ಕಾರಿ ಕೆಲಸದ ನಿಮಿತ್ತ ಪ್ರವೇಶಿಸಬೇಕಾದರೆ, ಕಾರ್ಯಾಚರಣೆಗೆ ಉದ್ದೇಶಿಸಿರುವ ರಾಜ್ಯ ಸರ್ಕಾರದ ಅಧಿಕೃತ ಅನುಮತಿ ಪಡೆಯಬೇಕಿದೆ. ಕಳ್ಳರು, ಅಪರಾಧಿಗಳನ್ನು ಹಿಡಿಯುವ ಪೊಲೀಸರಿಗೂ ಇದು ಅನ್ವಯ. ಈ ನಿಯಮ ಅನೂಚಾನವಾಗಿ ನಡೆದುಬಂದಿರುವಾಗ, ಈ ರೀತಿ ವಿಮೆ ಜಾರಿ ಮಾಡುವುದು ಒಕ್ಕೂಟ ವ್ಯವಸ್ಥೆಯ ಪಾವಿತ್ರ್ಯ ಮತ್ತು ಅಸ್ಮಿತೆಗೆ ಧಕ್ಕೆ ತರುವ ಕ್ರಮ. ಮರಾಠಿ ಭಾಷಿಕರು ಎಂದು ಸ್ವಯಂ ಘೋಷಣಾ ಪ್ರಮಾಣಪತ್ರ ಸಲ್ಲಿಸಬೇಕು ಎಂಬುದು ಒಕ್ಕೂಟ ವ್ಯವಸ್ಥೆಯಲ್ಲಿ ಸ್ವೀಕಾರಾರ್ಹ ನಡೆ ಅಲ್ಲ. ಗಡಿ ವಿವಾದ ನ್ಯಾಯಾಲಯದಲ್ಲಿರುವಾಗ ಮಹಾರಾಷ್ಟ್ರದ ಕ್ರಮವು ಅಸಮಂಜಸ. ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆ ಘೋಷಣೆಯಾಗಿದ್ದು, ಈಗ ಇರುವ ಸರ್ಕಾರಕ್ಕೆ ಯಾವುದೇ ನಿರ್ಣಯ ಕೈಗೊಳ್ಳುವ ಅಧಿಕಾರವಿಲ್ಲ. ಇಂತಹ ಹೊತ್ತಿನೊಳಗೆ ಮಹಾರಾಷ್ಟ್ರದ ಶಿವಸೇನಾ- ಬಿಜೆಪಿ ಮೈತ್ರಿ ಸರ್ಕಾರ, ಹೊಸ ದಾಳ ಉರುಳಿಸಿರುವುದನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗಂಭೀರವಾಗಿ ಪರಿಗಣಿಸಿ, ಸೂಕ್ತ ನಿರ್ದೇಶನವನ್ನು ಇಷ್ಟರಲ್ಲೇ ಕೊಡಬೇಕಿತ್ತು. ಕರ್ನಾಟಕದಲ್ಲಿನ ಚುನಾಯಿತ ಸರ್ಕಾರ ಅಧಿಕಾರವಿಲ್ಲದ ಸ್ಥಿತಿಯಲ್ಲಿರುವಾಗ ನಾಡಿನ ಹಿತ ಕಾಪಾಡುವುದು ಹಾಗೂ ಒಕ್ಕೂಟ ವ್ಯವಸ್ಥೆಯಲ್ಲಿ ಸರ್ವರಿಗೂ ಸಮಾನ ಅಧಿಕಾರ ಇದೆ ಎಂದು ಖಾತರಿಪಡಿಸುವುದು ಪ್ರಧಾನಿ ಮತ್ತು ಗೃಹ ಸಚಿವರ ಸಾಂವಿಧಾನಿಕ ಹೊಣೆ. ಯಾವುದೇ ಎರಡು ರಾಜ್ಯಗಳ ಮಧ್ಯೆ ಇಂತಹ ವಿವಾದ ಭುಗಿಲೆದ್ದಾಗ ಮೋದಿ ಮತ್ತು ಅಮಿತ್ ಶಾ ಮೌನಕ್ಕೆ ಶರಣಾಗುತ್ತಾರೆ. ಕರ್ನಾಟಕದಲ್ಲಿ ತಮ್ಮದೇ ಪಕ್ಷದ ನೇತೃತ್ವದ ಸರ್ಕಾರ ಇರುವಾಗ ಈ ವಿಷಯದಲ್ಲಿ ಅವರು ಮೌನ ಮುರಿಯಬೇಕಿದೆ. ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿಯ 25 ಸಂಸದರು ಗೆದ್ದಿದ್ದಾರೆ. ಆದರೆ, ನೆಲ, ಜಲ, ಭಾಷೆಯ ವಿಷಯ ಬಂದಾಗ ಇವರು ಮುನ್ನೆಲೆಗೆ ಬರುವುದು ವಿರಳ. ಇವರಿಗೆ ನಾಡಿನ ಬಗ್ಗೆ ನೈಜ ಬದ್ಧತೆ ಇದ್ದರೆ, ಚುನಾವಣೆ ನಡೆಯುವ ಈ ಹೊತ್ತಿನಲ್ಲಾದರೂ ಕೇಂದ್ರದ ಮೇಲೆ ಒತ್ತಡ ಹಾಕಿ, ಮಹಾರಾಷ್ಟ್ರದ ಈ ಕೃತ್ಯಕ್ಕೆ ಕಡಿವಾಣ ಹಾಕಿಸಬೇಕು.

ದಿನದ ಟ್ವೀಟ್


ಸೂಕ್ತ ನಿಯಮ ಜಾರಿಯಾಗಲಿ



ಅನಿಯಂತ್ರಿತ ವಲಸೆಗೆ ಕಡಿವಾಣ ಹಾಕಬೇಕು. ಅದೇ ಸಮಯಕ್ಕೆ, ವಲಸೆ ಕಾರ್ಮಿಕರ ಮೇಲಿನ ದೌರ್ಜನ್ಯಕ್ಕೂ ಕಡಿವಾಣ ಬೀಳಬೇಕಿದೆ...

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

ಕಿಡಿನುಡಿ



ಬಿಜೆಪಿಯು ನೊಂದ ದಲಿತ ಮತ್ತು ಹಿಂದುಳಿದ ಸಮುದಾಯದ ಮೀಸಲಾತಿ ಬೇಡಿಕೆಯನ್ನು ಈಡೇರಿಸಿದೆ. ಈ ವಿಷಯದಲ್ಲಿ ಕಾಂಗ್ರೆಸ್ ಮಾಡಿಕೊಂಡು ಬಂದ ಅನ್ಯಾಯವೇ ಅದಕ್ಕೆ ತಿರುಗುಬಾಣವಾಗಿದೆ. ಅವರಿಗೆ ರಾಜಕೀಯ ಇಚ್ಛಾಶಕ್ತಿ ಇರಲಿಲ್ಲ. ಈಗ ನಾವು ಮಾಡಿದ್ದಕ್ಕೆ ಅವರು ಹತಾಶರಾಗಿದ್ದಾರೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 7-4-1998

• ಜಡತ್ವ- ಅಶಿಸ್ತು ನೀಗಿಸಲು ಸೋನಿಯಾ ಗಾಂಧಿ ಕರೆ

ನವದೆಹಲಿ, ಏ. 6– ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಇಂದು ಎಐಸಿಸಿ ಮಹಾಧಿವೇಶನದ ಸಮ್ಮತಿ ಪಡೆದ ಸೋನಿಯಾ ಗಾಂಧಿ ಅವರು, ಪಕ್ಷದಲ್ಲಿ 'ಸೋಮಾರಿತನ ಮತ್ತು ಅಶಿಸ್ತು' ಸಲ್ಲದೆಂದು ಕಟುವಾಗಿ ಟೀಕಿಸಿದ್ದಾರೆ.

ಸೀತಾರಾಂ ಕೇಸರಿ ಅವರ ಬದಲಿಗೆ ದಿಢೀರನೆ ತಮ್ಮನ್ನು ನೇಮಕ ಮಾಡಿದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯ ಮಾರ್ಚ್ 14ರ ನಿರ್ಣಯವನ್ನು ಸ್ಥಿರೀಕರಿಸಲು ಇಂದು ನಡೆದ ಒಂದು ದಿನದ ವಿಶೇಷ ಎಐಸಿಸಿ ಅಧಿವೇಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಮೇಲೆ ತಾವು ಪೂರ್ಣ ಹತೋಟಿ ಸಾಧಿಸಲು ತಳದಿಂದ ಮೇಲಿನವರೆಗೂ ಅದನ್ನು ಪುನರ್‌ರಚಿಸುವ ಇಂಗಿತವನ್ನು ಅವರು ಪ್ರಕಟಿಸಿದರು.

• ಆರ್ಥಿಕ ಸ್ಥಿತಿ ಸುಧಾರಣೆಗೆ ಕಠಿಣ ಕ್ರಮ- ಪ್ರಧಾನಿ ಎಚ್ಚರಿಕೆ

ನವದೆಹಲಿ, ಏ. 6 (ಪಿಟಿಐ)– 'ದೇಶದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದ್ದು ಇದರಿಂದಾಗಿ ಕೇಂದ್ರ ಸರ್ಕಾರ ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ' ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಹೇಳಿದ್ದಾರೆ.

ಬಿಜೆಪಿ ಅಸ್ತಿತ್ವಕ್ಕೆ ಬಂದು 18 ವರ್ಷಗಳು ಸಂದಿರುವ ಹಿನ್ನೆಲೆಯಲ್ಲಿ ಬಿಜೆಪಿಯ ಕೇಂದ್ರ ಕಚೇರಿಯಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, 'ಈ ನಿರ್ಧಾರಗಳನ್ನು ಜನತೆಯ ಮುಂದೆ ಸೂಕ್ತ ರೀತಿಯಲ್ಲಿ ಇಡುವ ಜವಾಬ್ದಾರಿ ಬಿಜೆಪಿ ಕಾರ್ಯಕರ್ತರ ಮೇಲಿದೆ' ಎಂದು ಮನವಿ ಮಾಡಿದರು.

50 ವರ್ಷಗಳ ಹಿಂದೆ

ಶನಿವಾರ, 7-4-1973

• ಭಾರತ ಸೇನೆ ನೆರವಿನಿಂದ ಸಿಕ್ಕಿಂನ 3 ಠಾಣೆಗಳು ಮತ್ತೆ ಆಡಳಿತದ ವಶಕ್ಕೆ

ಗಾಂಗ್‌ಟೋಕ್, ಏ. 6– ಸಿಕ್ಕಿಂ ಚೋಗ್ಯಾಲರ ಮನವಿಯನ್ನನುಸರಿಸಿ ಭಾರತದ ಸೇನೆಯ ನೆರವಿನಿಂದ ರಂಗಪೋ, ರೇನೋಕ್ ಮತ್ತು ರಂಗಾಲಿ ಪೊಲೀಸ್ ಠಾಣೆಗಳನ್ನು ಸೈನಿಕರು ಸರ್ಕಾರ ವಿರೋಧಿ ಪ್ರದರ್ಶನಕಾರರಿಂದ ಗುರುವಾರ ರಾತ್ರಿ ವಶಪಡಿಸಿಕೊಂಡರು.

ಸಿಕ್ಕಿಂ ರಾಷ್ಟ್ರೀಯ ಕಾಂಗ್ರೆಸ್, ಜನತಾ ಕಾಂಗ್ರೆಸ್ ಪಕ್ಷಗಳು ಆಡಳಿತ ಸುಧಾರಣೆಗಾಗಿ ಜಂಟಿಯಾಗಿ ಆರಂಭಿಸಿದ ಚಳವಳಿಯಿಂದ ಎರಡು ದಿನಗಳಿಂದ ಗಲಭೆಗೆ ಒಳಗಾಗಿದ್ದ ಈ ಪ್ರದೇಶದಲ್ಲಿ ಶಾಂತ ಪರಿಸ್ಥಿತಿ ಉಂಟಾಗುತ್ತಿದೆ ಎಂದು ವರದಿಗಳು ಹೇಳಿವೆ.

• ವಿದೇಶಿ ಬ್ಯಾಂಕುಗಳಲ್ಲಿ ಮಾಜಿ ರಾಜರ ಹಣ

ನವದೆಹಲಿ, ಏ. 6– ರಾಜಧನವನ್ನು ರದ್ದು ಮಾಡಿದಾಗ ಮೂವತ್ತೊಂದು ಮಂದಿ ಮಾಜಿ ರಾಜರು ವಿದೇಶಿ ಬ್ಯಾಂಕುಗಳಲ್ಲಿ ಹಣ ಇಟ್ಟಿದ್ದರು.

ಈ ರೀತಿ ವಿದೇಶಿ ಬ್ಯಾಂಕುಗಳಲ್ಲಿ ಆ ಮಾಜಿ ರಾಜರಿಟ್ಟಿದ್ದ ಒಟ್ಟು ಹಣ 1.2 ಕೋಟಿ ರೂಪಾಯಿ ಆಗಿತ್ತು.

ಈ ಅಂಶವನ್ನು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ನೀಡಲಾದ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ.

ಆರೋಗ್ಯದ ಮೇಲೆ ಹೂಡುವ ಬಂಡವಾಳವು 'ಲಾಭದಾಯಕ' ಎಂಬುದು ಗಮನಾರ್ಹ

ಆರೋಗ್ಯದ 'ಅಮೃತ ಮಹೋತ್ಸವ'



ವಿಶ್ಲೇಷಣೆ

ಡಾ.ಕೆ.ಎಸ್. ಪವಿತ್ರ

ವಿಶ್ವ ಆರೋಗ್ಯ ದಿನದ ಅಮೃತ ಮಹೋತ್ಸವ ಇಂದು (ಏ. 7). ಅಂದರೆ, ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಜನ್ಮತಾಳಿ 75 ವರ್ಷಗಳು. 1948ರಲ್ಲಿ ಹಲವು ರಾಷ್ಟ್ರಗಳು ಒಟ್ಟಾಗಿ, ಇಡೀ ಜಗತ್ತಿನ ಜನರ ಆರೋಗ್ಯದ ಪರವಾಗಿ ದುಡಿಯಲೆಂದು ಹುಟ್ಟುಹಾಕಿದ ಸಂಸ್ಥೆಯ ಅನುಭವದ ದಾರಿ ಇದು. ಈ ಹಾದಿಯಲ್ಲಿ ನಡೆದುಬಂದ ಆರೋಗ್ಯ ಕ್ಷೇತ್ರಕ್ಕೆ ಇದೀಗ ಸಾಧನೆಗಳಿಗಾಗಿ ಸಂಭ್ರಮಿಸುವ ಸಮಯವೂ ಹೌದು, ಇನ್ನೂ ಕ್ರಮಿಸಬೇಕಾಗಿರುವ ಸುದೀರ್ಘ ದಾರಿಯಲ್ಲಿನ ಅಡೆತಡೆಗಳನ್ನು ನಿವಾರಿಸುವ ಉಪಾಯಗಳ ಬಗ್ಗೆ ಚಿಂತಿಸಬೇಕಾದ ಹೊತ್ತೂ ಹೌದು.

ಒಬ್ಬ ವ್ಯಕ್ತಿಯ ಆಯುಷ್ಯ 1800ರಲ್ಲಿ ಇದ್ದ ಸರಾಸರಿ 25.4 ವರ್ಷಗಳಿಂದ, ನಂತರದ 220 ವರ್ಷಗಳಲ್ಲಿ 70 ವರ್ಷಕ್ಕೆ ಏರಿದೆ. ಸ್ವಾತಂತ್ರ್ಯ ಗಳಿಸಿದ ವರ್ಷ 1947ರಲ್ಲಿ 31 ವರ್ಷಗಳಾಗಿದ್ದರೆ, 2005ರ ಹೊತ್ತಿಗೆ ಅದು 64 ವರ್ಷಗಳಾಗಿ ಸುಧಾರಿಸಿತ್ತು. ಪ್ರತೀ ಸಾವಿರ ಜನರಿಗೆ 45 ಸಾವುಗಳು ಸಂಭವಿಸುತ್ತಿದ್ದರೆ, ಈಗ ಈ ಸಂಖ್ಯೆ 8ಕ್ಕೆ ಇಳಿದಿದೆ! ಮಾತೃಮರಣದ ಅನುಪಾತದಲ್ಲಿ ಗಣನೀಯ ಇಳಿಕೆ, ಪೋಲಿಯೊ ನಿರ್ಮೂಲನ, ಯಶಸ್ವಿ ಕುಟುಂಬ ಯೋಜನೆ, ಸ್ತ್ರೀ ಭ್ರೂಣಹತ್ಯೆಗೆ ಸಂಬಂಧಿಸಿದಂತೆ ಕಠಿಣ ಕಾನೂನು ಜಾರಿ... ಇವೆಲ್ಲ ಕಡಿಮೆ ಸಾಧನೆಗಳಲ್ಲ. ಚುಚ್ಚುಮದ್ದು, ಲಸಿಕೆ, ಔಷಧಿಗಳ ಸುಲಭ ಲಭ್ಯತೆಯೂ ಒಂದು ಗಮನಾರ್ಹ ಅಂಶವೇ.

ಇವೆಲ್ಲ ಹೆಮ್ಮೆಪಡಬಹುದಾದ ಸಾಧನೆಗಳು ಎಂದು ಬೆನ್ನು ತಟ್ಟಿಕೊಳ್ಳಬಹುದಾದರೆ, ನಾವು ಗಮನ ಹರಿಸದಿರುವ ಸಂಗತಿಗಳು ಬೆನ್ನು ತಟ್ಟುವ ಕೈಯನ್ನು ತತ್‌ಕ್ಷಣ ಹಿಂದೆ ತೆಗೆದುಕೊಳ್ಳುವಂತೆ ಮಾಡುತ್ತವೆ! ಆಯುಷ್ಯವೇನೋ ಏರಿದೆ, ಆದರೆ ಬದುಕುಳಿದ ವೃದ್ಧರ ಜೀವನದ ಗುಣಮಟ್ಟ?! ಗುಟುಕು ಜೀವ ಉಳಿದರೂ, ಮುಂದುವರಿದ ವೈದ್ಯಕೀಯ ವಿಜ್ಞಾನವು ಆ ವ್ಯಕ್ತಿಯನ್ನು ಹೇಗಾದರೂ ಮಾಡಿ ಉಳಿಸಿಕೊಡಬಹುದೇ ವಿನಾ ಜೀವನದ ಗುಣಮಟ್ಟಕ್ಕೆ ಅದು ಖಾತರಿ ನೀಡಲು ಸಾಧ್ಯವಿಲ್ಲ.

ಆರೋಗ್ಯಕ್ಕಾಗಿ ಖರ್ಚು ಮಾಡುವುದನ್ನು ನಾವು ಒಂದು 'ನಷ್ಟ' ಎಂಬಂತೆ ಭಾವಿಸುತ್ತೇವೆ. ಆಡಳಿತ ವ್ಯವಸ್ಥೆ ಮತ್ತು ವ್ಯಕ್ತಿ ಇಬ್ಬರಿಗೂ ಇದು ಅನ್ವಯಿಸುತ್ತದೆ ಎನ್ನುವುದೇ ಅಚ್ಚರಿಯ ಸಂಗತಿ. ಆರ್ಥಿಕ ಸಚಿವಾಲಯವು ಆರೋಗ್ಯಕ್ಕಾಗಿ ಮೀಸಲಿಡುವ ಹಣವನ್ನು ಸಾಮಾಜಿಕ ವಲಯದ ಖರ್ಚು ಎಂದು ಭಾವಿಸುತ್ತದೆ. ಅದೇ ವ್ಯಕ್ತಿಗಳು ತಮ್ಮ ಆರೋಗ್ಯಕ್ಕಾಗಿ ತನು ಮನ ಧನವನ್ನು ತೊಡಗಿಸಲು ಮನಸ್ಸು ಮಾಡುವುದು ಅಂತಹ ಅನಿವಾರ್ಯ ಸ್ಥಿತಿ ಬಂದೊದಗಿದಾಗ ಅಥವಾ ಕಾಯಿಲೆ ಉಲ್ಬಣಿಸಿದಾಗ ಮಾತ್ರ. ಆಡಳಿತ ವ್ಯವಸ್ಥೆ ಮತ್ತು ಸಾರ್ವಜನಿಕರು ಆರೋಗ್ಯಕ್ಕಾಗಿ ವ್ಯಯಿಸುವ ಹಣ ಹಾಗೂ ಪರಿಶ್ರಮವನ್ನು ನೋಡಬೇಕಾದದ್ದು, ಅದು ಖಚಿತವಾಗಿ ಲಾಭ ತಂದುಕೊಡಬಲ್ಲ ಬಂಡವಾಳ ಎಂಬಂತೆ!

ಆರೋಗ್ಯಕ್ಕೆ ಪೂರಕವಾದ ಜೀವನಶೈಲಿಯ ಅಳವಡಿಕೆಯು ಜನರಿಗೆ ನಂತರದ ದಿನಗಳಲ್ಲಿ ಪಡೆಯಬೇಕಾದ ಚಿಕಿತ್ಸೆ ಹಾಗೂ ದೀರ್ಘಕಾಲಿಕ ಆರೈಕೆ ಅಗತ್ಯವಾದ ಕಾಯಿಲೆಗಳನ್ನು ತಪ್ಪಿಸಬಲ್ಲದು. ಹಾಗೆಯೇ ಆಡಳಿತ ವ್ಯವಸ್ಥೆಯು ತನ್ನ ಪ್ರಜೆಗಳಿಗಾಗಿ ಆರೋಗ್ಯ ವಲಯದಲ್ಲಿ ವಿನಿಯೋಗಿಸುವ ಹಣವು ಜನರ ಆರೋಗ್ಯವನ್ನು ಸುಧಾರಿಸುವುದಷ್ಟೇ ಅಲ್ಲ, ಆರ್ಥಿಕತೆಯನ್ನೂ ಬೆಳೆಸಬಲ್ಲದು.

ಪ್ರಸ್ತುತ, ಆರೋಗ್ಯ ವಲಯಕ್ಕೆ ಕಡಿಮೆ ಹಣ ವ್ಯಯಿಸುವ ರಾಷ್ಟ್ರಗಳಲ್ಲಿ ಭಾರತವೂ ಸೇರಿದೆ. ದೇಶದ ವರಮಾನಕ್ಕೆ ಹೋಲಿಸಿದರೆ, ಆರೋಗ್ಯ ಕ್ಷೇತ್ರಕ್ಕೆ ಮೀಸಲಿಡಬೇಕಾದ ಹಣದ ಸುಮಾರು ಅರ್ಧದಷ್ಟನ್ನು ಮಾತ್ರ ನಾವೀಗ ವ್ಯಯಿಸುತ್ತಿದ್ದೇವೆ. ಇದು ಫಿಲಿಪ್ಪೀನ್ಸ್, ಇಂಡೊನೇಷ್ಯಾದಂತಹ ಸಣ್ಣ ರಾಷ್ಟ್ರಗಳು ವ್ಯಯಿಸುವ ಶೇ 7-10ಕ್ಕಿಂತ ಕಡಿಮೆ. ಇದನ್ನು ನಾವು ಮಾಡುತ್ತಿರುವ 'ಕಡಿಮೆ ಖರ್ಚು' ಎನ್ನುವುದಕ್ಕಿಂತ ಹೂಡುತ್ತಿರುವ 'ಕಡಿಮೆ ಬಂಡವಾಳ' ಎಂದೇ ಹೇಳಬೇಕಾಗುತ್ತದೆ. ಇಂತಹ ಕಡಿಮೆ ಬಂಡವಾಳ ಹೂಡಿಕೆಯ ನೇರ ಪರಿಣಾಮವೆಂದರೆ, ವೈಯಕ್ತಿಕವಾಗಿ ಮಾಡಬೇಕಾದ ಖರ್ಚಿನ ಪ್ರಮಾಣ ಹೆಚ್ಚುತ್ತದೆ. ಇದರಿಂದ ಶೇ 5-7ರಷ್ಟು ಜನ ಪ್ರತಿವರ್ಷ ಬಡತನದ ವರ್ಗಕ್ಕೆ ಸೇರ್ಪಡೆಯಾಗುತ್ತಾರೆ. ಅಲ್ಲದೆ ಇದು, ಅಸಾಂಕ್ರಾಮಿಕ ರೋಗಗಳಾದ ಕ್ಯಾನ್ಸರ್, ಹೃದ್ರೋಗ, ಸಕ್ಕರೆ ಕಾಯಿಲೆಯಂತಹವುಗಳ ಹೊರೆಯನ್ನು ಹೆಚ್ಚಿಸುತ್ತದೆ.

ಆರೋಗ್ಯದ ಮೇಲೆ ಹೆಚ್ಚು ಹಣ ವಿನಿಯೋಗಿಸುವುದನ್ನು ಆರ್ಥಿಕ ತಜ್ಞರು 'ಲಾಭದಾಯಕ' ಎಂದೇ ಗುರುತಿಸಿರುವುದು ಇಲ್ಲಿ ವಿಶೇಷವಾಗಿ ಗಮನಾರ್ಹ. ಕೋವಿಡ್‌ನಂತಹ ಸಾಂಕ್ರಾಮಿಕದ ನಂತರ ಇದರ ಅರಿವು ಮತ್ತಷ್ಟು ಹೆಚ್ಚಬೇಕು ಎಂಬ ಆಶಯ ಇದೆ.

ಆರ್ಥಿಕತೆಯ ಮಸೂರದಿಂದ ನೋಡುವುದಾದರೆ, ಆರೋಗ್ಯಕ್ಕಾಗಿ ವಿನಿಯೋಗಿಸುವುದು ಮೂರು ಕಾರಣಗಳಿಂದ ಮುಖ್ಯವಾಗುತ್ತದೆ. ಮೊದಲನೆಯದು, ಆರೋಗ್ಯವಂತ ನಾಗರಿಕರಿಗೆ ಕೆಲಸದಲ್ಲಿ ಹೆಚ್ಚು ರಜೆ ಪಡೆಯಬೇಕಾದ ಅಗತ್ಯ ಬರುವುದಿಲ್ಲ. ಅವರು ಹೆಚ್ಚು ದುಡಿಯುತ್ತಾರೆ, ಲಾಭ ಗಳಿಸುತ್ತಾರೆ, ಲಾಭ ತಂದುಕೊಡುತ್ತಾರೆ. ಆರೋಗ್ಯವಂತ ಮಕ್ಕಳು ಶಿಕ್ಷಣ ಪೂರ್ಣಗೊಳಿಸುವ ಸಾಧ್ಯತೆಯೂ ಹೆಚ್ಚು. ಅದರಿಂದ ಅವರು ಆರೋಗ್ಯವಂತ ಹಿರಿಯರಾಗಿ ರೂಪುಗೊಂಡು, ತಮಗಾಗಿ ಹಾಗೂ ದೇಶಕ್ಕಾಗಿ ಉತ್ತಮ ಆದಾಯವನ್ನು ತರಬಲ್ಲರು. ಅಂತಿಮವಾಗಿ, ಇವೆರಡೂ ದೇಶದ ಆರ್ಥಿಕ ಪ್ರಗತಿಯನ್ನು ಮುನ್ನಡೆಸಬಲ್ಲವು.

ಎರಡನೆಯದು, ಆರೋಗ್ಯ ಕ್ಷೇತ್ರವು ಒಳ್ಳೆಯ ಉದ್ಯೋಗದಾತ ಕ್ಷೇತ್ರವೂ ಹೌದು. ಲಕ್ಷಗಟ್ಟಲೆ ಹೊಸ ಉದ್ಯೋಗಗಳನ್ನು ಅದು ಸೃಷ್ಟಿಸಬಲ್ಲದು. ನಿರುದ್ಯೋಗ ಸಮಸ್ಯೆ ಸುಧಾರಿಸುವಂತೆ ಮಾಡಬಲ್ಲದು. ಅಷ್ಟಲ್ಲದೆ ಬೇರೆ ವಲಯಗಳಲ್ಲಿಯೂ ಅದು ಅಚ್ಚರಿದಾಯಕವಾಗಿ ಉದ್ಯೋಗಗಳನ್ನು ಸೃಷ್ಟಿಸಬಲ್ಲದು. ವಿಶ್ವ ಆರೋಗ್ಯ ಸಂಸ್ಥೆಯ 'ಆರ್ಥಿಕ ಅಭಿವೃದ್ಧಿ ಮತ್ತು ಆರೋಗ್ಯ' ಕುರಿತ ವರದಿಯು ಆರೋಗ್ಯ ಕ್ಷೇತ್ರದ ಪ್ರತಿಯೊಬ್ಬ ಹೊಸ ಉದ್ಯೋಗಿಯೂ ಅನ್ಯ ಕ್ಷೇತ್ರದಲ್ಲಿ ಉದ್ಯೋಗವನ್ನು ಸೃಷ್ಟಿಸಬಲ್ಲರು ಎಂದು ಹೇಳುತ್ತದೆ.

ಮೂರನೆಯದು, ಪ್ರಬಲ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಆರ್ಥಿಕ ಕ್ಷಮತೆಯನ್ನು ಹೆಚ್ಚಿಸುತ್ತದೆ. ಅಂದರೆ ಕೋವಿಡ್, ಯುದ್ಧದಂತಹ ಸನ್ನಿವೇಶಗಳಲ್ಲಿ ಒಂದು ದೇಶದ ಆರ್ಥಿಕ ವ್ಯವಸ್ಥೆ ಕುಸಿದರೂ, ಅಲ್ಲಿನ ಆರೋಗ್ಯ ವ್ಯವಸ್ಥೆ ಸುಸ್ಥಿತಿಯಲ್ಲಿದ್ದರೆ ಜನರ ಆರೋಗ್ಯ ಸ್ಥಿತಿ ಉತ್ತಮವಾಗಿಯೇ ಇರುತ್ತದೆ. ಆಗ ದೇಶದ ಸುಧಾರಣಾ ಕಾರ್ಯ ಸುಲಭವಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸು ಮಾಡಿರುವ, ತಂಬಾಕು, ಮದ್ಯಪಾನ, ಸಕ್ಕರೆ ಮಿಶ್ರಿತ ಸಂಸ್ಕರಿತ ಆಹಾರ (ಆ್ಯಡೆಡ್ ಶುಗರ್) ಮತ್ತು ಪಳೆಯುಳಿಕೆ ಇಂಧನಗಳ ಮೇಲಿನ ಆರೋಗ್ಯ ತೆರಿಗೆಗಳು ಇಲ್ಲಿ ಉಲ್ಲೇಖಾರ್ಹ. ಇವುಗಳಿಂದ ಕಾಯಿಲೆಗಳು ಕಡಿಮೆಯಾಗಿ ಆರೋಗ್ಯಕ್ಕೂ ಲಾಭ, ಅನಾರೋಗ್ಯದ ಖರ್ಚು ಕಡಿಮೆ, ತೆರಿಗೆಯಿಂದ ಆರ್ಥಿಕತೆಗೆ ಆದಾಯ.

ವಿಶ್ವ ಆರೋಗ್ಯ ದಿನಾಚರಣೆ ಹಾಗೂ ವಿಶ್ವ ಆರೋಗ್ಯ ಸಂಸ್ಥೆಯ ಅಸ್ತಿತ್ವದ ಸಾರ್ಥಕತೆ ನಮ್ಮೆಲ್ಲರ ಆರೋಗ್ಯದಲ್ಲಿ ಅಡಗಿದೆ. ಜೀವನದ ಯಶಸ್ಸಿನ ವ್ಯಾಖ್ಯೆಯಲ್ಲಿಯೂ ಹಣ, ಖ್ಯಾತಿಗಿಂತ ಆರೋಗ್ಯಕ್ಕೇ ಹೆಚ್ಚು ಮಹತ್ವ. ಅಂತಹ ಆರೋಗ್ಯವನ್ನು ನಿರ್ಧರಿಸುವ ಬಹುಮುಖ್ಯ ಅಂಶ ಇಂದು ದುಬಾರಿ ಪರೀಕ್ಷೆ, ಚಿಕಿತ್ಸೆಗಳಿಗಿಂತ ಹೆಚ್ಚಾಗಿ ನಮ್ಮ ಜೀವನಶೈಲಿಯನ್ನು ಆಧರಿಸಿದೆ. ನಾವು ದೀರ್ಘಕಾಲ ಜೀವ ಉಳಿಸಿಕೊಳ್ಳುವುದರ ಜೊತೆಗೆ, ಗುಣಮಟ್ಟದ ಜೀವನ, ಸ್ವಾವಲಂಬಿ ಬದುಕನ್ನು ನಮ್ಮದಾಗಿಸಿಕೊಳ್ಳುತ್ತೇವೆ ಎಂಬುದೇ ನಮ್ಮ ಮಕ್ಕಳಿಗೆ ನಾವು ಗಳಿಸಿಕೊಡಬಹುದಾದ ಅತಿ ಅಮೂಲ್ಯ ಆಸ್ತಿ. ಅಂದ ಮೇಲೆ ಆರೋಗ್ಯಕ್ಕಾಗಿ ನಾವು ಹೂಡಲೇಬೇಕಾದದ್ದು ತನು ಮನ ಧನದ ಬಂಡವಾಳ ಹಾಗೂ ಟಿ.ವಿ, ಮೊಬೈಲ್‌ನಂತಹವುಗಳ ವೀಕ್ಷಣೆಗಿಂತ ಹೆಚ್ಚಾಗಿ ಜನರಿಗೆ ನೀಡಬೇಕಾದ ಸಮಯ. ಇದರ ಅರಿವಿನೊಂದಿಗೆ, ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಜೊತೆಗೆ ಆರೋಗ್ಯದ ಅಮೃತ ಮಹೋತ್ಸವವನ್ನೂ ಆಚರಿಸೋಣ!



ಚುರುಮುರಿ



ಜಂಪಿಂಗ್ ಸ್ಟಾರ್ಸ್!

• ಬಿ.ಎನ್.ಮಲ್ಲೇಶ್

'ಗುರೂ... ಬೇಂದ್ರೆ ಕವಿ ಈಗ ಇರ್ಬೇಕಿತ್ತು' ಎಂದ ಗುಡ್ಡೆ.

'ಯಾಕೆ?' ದುಬ್ಬೀರ ಕೇಳಿದ.

'ಈ ರಾಜಕಾರಣಿಗಳ ಪಕ್ಷ ಜಿಗಿದಾಟ ನೋಡಿ 'ಕಪ್ಪೆಗಳು ಹಾರುತಿವೆ ನೋಡಿದಿರಾ?' ಅಂತ ಪದ್ಯ ಬರೀತಿದ್ರು ಅನುಸ್ತೆ...'

'ಇದು ಕಪ್ಪೆಗಳಿಗೆ ಅವಮಾನ. ಪಾಪ ಅವು ಹುಳ, ಹುಪ್ಪಡಿ ತಿನ್ನೋಕೆ ನೆಗೀತಾವು. ಈ ರಾಜಕಾರಣಿಗಳಂಗೆ ಕುರ್ಚಿ ಹಿಡಿಯಾಕಲ್ಲ' ತೆಪರೇಸಿ ಆಕ್ಷೇಪಿಸಿದ.

'ಹೋಗ್ಲಿ ಬಿಡಪ, ಈಗ ಸಿನಿಮಾ ನಟರನ್ನ ಆ ಸ್ಟಾರು, ಈ ಸ್ಟಾರು ಅಂತ ಕರೀತಾರಲ್ಲ, ಅದೇ ತರ ಈ ಜಿಗಿಯೋ ರಾಜಕಾರಣಿಗಳನ್ನ 'ಜಂಪಿಂಗ್ ಸ್ಟಾರ್ಸ್' ಅಂತ ಕರೀಬೋದಾ?'

'ಕರಿ, ಯಾರು ಬ್ಯಾಡಂತಾರೆ... ಇವರ ಜಿಗಿದಾಟ, ನೆಗೆದಾಟ ನೋಡಿದ್ರೆ ಒಲಿಂಪಿಕ್ಸ್‌ನಲ್ಲಿ ಲಾಂಗ್ ಜಂಪ್, ಹೈ ಜಂಪ್‌ನಲ್ಲಿ ಮೆಡ್ಲು ತರ್ತಿದ್ರು ಅನುಸ್ತತಪ್ಪ' ದುಬ್ಬೀರ ನಕ್ಕ.

'ಅಲ್ಲ, ಇವರಿಗೇನು ಪಕ್ಷದ ಸಿದ್ಧಾಂತ, ರೀತಿ ನೀತಿ ಇಲ್ವ? ಇವತ್ತಿಲ್ಲಿ, ನಾಳೆ ಅಲ್ಲಿ, ನಾಡಿದ್ದು ಇನ್ನೊಂದ್ ಪಕ್ಷ. ಸ್ವಲ್ಪನಾದ್ರು ಬದ್ಧತೆ ಅನ್ನೋದು ಬ್ಯಾಡ್ವಾ?' ತೆಪರೇಸಿಗೆ ಕೋಪ.

'ಬದ್ಧತೆ? ಏನು ಹಂಗಂದ್ರೆ?' ಗುಡ್ಡೆಗೂ ನಗು.

'ಅಲ್ಲ ವೋಟ್ ಹಾಕಿದವ್ರಿಗೆ ಬೆಲೆ ಇಲ್ವಾ?'

'ಬೆಲೆ? ಕೊಡ್ತಾರಲ್ಲ ಕುಕ್ಕರು, ಸೀರೆ, ಸಾವಿರ, ಎರಡು ಸಾವಿರ...'

'ಅಲ್ಲ ಇದಕ್ಕೆಲ್ಲ ಕೊನೆ ಯಾವಾಗ?'

'ಮನೆಯಿಂದ ನಿನ್ನೆಂಡ್ತಿ ಫೋನ್ ಬರುತ್ತಲ್ಲ, ಆವಾಗ...'

'ಲೇಯ್ ಎಲ್ಲದಕ್ಕೂ ತಮಾಸಿ ಅಲ್ಲ, ನಾನು ಸೀರಿಯಸ್ಸಾಗಿ ಕೇಳ್ತಿದೀನಿ' ಗುಡ್ಡೆ ಮೇಲೆ ತೆಪರೇಸಿ ರೇಗಿದ.

'ಲೇ ತೆಪರ, ಜಾಸ್ತಿ ತಲೆ ಕೆಡಿಸ್ಕಾಬ್ಯಾಡ, ಪಕ್ಷ, ಸಿದ್ಧಾಂತ, ಬದ್ಧತೆ ಇವೆಲ್ಲ ಮಾತಿನ ಬದ್ನೇಕಾಯಿ. ರಾಜಕಾರಣಿಗಳದ್ದೆಲ್ಲ ಒಂದೇ ಸಿದ್ಧಾಂತ'.

'ಏನು?'

'ಅಧಿಕಾರ ಹಿಡಿಯೋದು, ದುಡ್ಡು ಮಾಡೋದು'.

'ಮತ್ತೆ ನಾವು?'

'ಮಂಗ್ಯಾಗಳ ತರ ಪರಪರ ಮೈ ಕೆರ್ಕಳಾದು...' ಗುಡ್ಡೆ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಪರೀಕ್ಷೆಗೂ ಫೇಲಾಗುವ ಪೇಚು!

ಶಿಕ್ಷಣ ಪದ್ಧತಿಯ ಅವಿಭಾಜ್ಯ ಅಂಗವಾದ ಪರೀಕ್ಷೆಯೇ ಭಿನ್ನ ಭಿನ್ನ ಸವಾಲುಗಳಿಗೆ ಎದೆಯೊಡ್ಡಬೇಕಿದೆ

• ಯೋಗಾನಂದ


ಶ್ರಮಿಕನೊಬ್ಬನಿಗೆ ಹೊರೆ ಕಟ್ಟಿಗೆಯನ್ನು ತೋರಿಸಿ 'ಇಪ್ಪತ್ತೇ ನಿಮಿಷದಲ್ಲಿ ಇದನ್ನು ಸೀಳಬೇಕು ಅಂದರೆ ನೀನೇನು ಮಾಡುತ್ತಿ?' ಎನ್ನಲಾಯಿತಂತೆ. ಅದಕ್ಕೆ ಆತ 'ಮೊದಲ ಹತ್ತು ನಿಮಿಷದಲ್ಲಿ ಕೊಡಲಿಯನ್ನು ಹರಿತಗೊಳಿಸುತ್ತೇನೆ. ನಂತರದ ಹತ್ತು ನಿಮಿಷದಲ್ಲಿ ಕಟ್ಟಿಗೆ ಸೀಳುತ್ತೇನೆ' ಎಂದನಂತೆ. 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎಂಬುದು, ಶೈಕ್ಷಣಿಕ ವರ್ಷವಿಡೀ ಓದು, ಬರಹವನ್ನು ನಿರ್ಲಕ್ಷಿಸಿ, ಪರೀಕ್ಷಾ ದಿನಗಳಲ್ಲಿ ನಡೆಯುವ ತರಾತುರಿಯ ಸಿದ್ಧತೆಯನ್ನು ಬಿಂಬಿಸುತ್ತದೆ.

ವಿದ್ಯಾಲಯಗಳ ಮುಖ್ಯ ಗುರಿ ವಿದ್ಯಾರ್ಥಿಗಳನ್ನು ಅಗತ್ಯ ಜ್ಞಾನ ಮತ್ತು ಕೌಶಲದೊಂದಿಗೆ ರಾಷ್ಟ್ರದ ಪ್ರಗತಿಗೆ ಅಣಿಗೊಳಿಸುವುದು. ಅದಕ್ಕಾಗಿ ಕಾಲಕಾಲಕ್ಕೆ ಅವರ ಅರಿವು ಮತ್ತು ಅನುಭವಗಳನ್ನು ಒರೆಗೆ ಹಚ್ಚುವುದು ಅನಿವಾರ್ಯ. ಹಾಗಾಗಿಯೆ ಪರೀಕ್ಷೆಗಳೆಂದರೆ ಪ್ರಶ್ನೆಪತ್ರಿಕೆಗೊಂದು ಉತ್ತರಪತ್ರಿಕೆ, ಮೌಲ್ಯಮಾಪನ, ಫಲಿತಾಂಶ ಮಾತ್ರವಲ್ಲ. ಅದು ವಿದ್ಯಾರ್ಥಿಗಳ ಕಲಿಕಾಮಟ್ಟ, ಅಧ್ಯಯನದಲ್ಲಿ ಅವರಿಗೆ ಎದುರಾಗುವ ಸಮಸ್ಯೆಗಳು ಮತ್ತು ಸಂದೇಹಗಳು, ಸಂದ ಬೋಧನೆಯ ಗುಣಮಟ್ಟ, ಮುಂದಿನ ಜೀವನಗತಿ... ಇವೆಲ್ಲದರ ನಿಷ್ಕರ್ಷೆ.

ಶಿಕ್ಷಣ ಪದ್ಧತಿಯ ಅವಿಭಾಜ್ಯ ಅಂಗವಾದ ಪರೀಕ್ಷೆಯೇ ಭಿನ್ನ ಭಿನ್ನ ಸವಾಲುಗಳಿಗೆ ಎದೆಯೊಡ್ಡಬೇಕಿದೆ. ಪರೀಕ್ಷೆಯಲ್ಲಿ ನಕಲು, ಪ್ರಶ್ನೆಪತ್ರಿಕೆ ಸೋರಿಕೆ ಇಡೀ ಪರೀಕ್ಷಾ ವ್ಯವಸ್ಥೆಯನ್ನೇ ಅಲುಗಾಡಿಸುವ ಅಸುರರು. ವಾಸ್ತವವಾಗಿ ನಕಲು ಮತ್ತು ಪ್ರಶ್ನೆಗಳ ಸೋರಿಕೆ ಒಂದೇ ನಾಣ್ಯದ ಎರಡು ಮುಖಗಳು. ಈ ನಾಣ್ಯ ಎಲ್ಲಿಯವರೆಗೆ ಚಲಾವಣೆಯಲ್ಲಿ ಇರುವುದೋ ಅಲ್ಲಿಯವರೆಗೆ ಪರೀಕ್ಷೆಯಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಅಸಾಧ್ಯ. ಹೇಗಾದರೂ ಪರೀಕ್ಷೆಯಲ್ಲಿ ಪಾಸಾಗಬೇಕೆನ್ನುವ ಅವಿವೇಕದ ಹಟವೇ ಪರೀಕ್ಷಾ ಅಕ್ರಮಗಳ ಮೂಲ. ಫೇಲಾಗುವ ಭಯ, ಆಲಸ್ಯ, ಕಿರು ಪರೀಕ್ಷೆಗಳಿಗೆ ಗೈರು, ಹೋಂವರ್ಕ್ ಕಡೆಗಣನೆ, ಆತ್ಮವಿಶ್ವಾಸದ ಕೊರತೆ, ಶಾಲೆಯಲ್ಲಿ ಅಭ್ಯಾಸ ಪರಿಕರಗಳ ಅಭಾವ, ಕಡು ಬಡತನ ವಿದ್ಯಾರ್ಥಿಗಳನ್ನು ಶೈಕ್ಷಣಿಕ ದುರಾಚಾರಗಳಿಗೆ ಪ್ರೇರೇಪಿಸುತ್ತವೆ. ಜೊತೆಗೆ ಬೋಧನೆಯೂ ಅಸಮರ್ಪಕವಾಗಿ, ಪೋಷಕರೂ ಅಗತ್ಯ ನಿಗಾ ವಹಿಸದಿದ್ದರೆ ಪರಿಸ್ಥಿತಿ ಏನಾದೀತು?

ಕೆಲವೆಡೆ ಶಿಕ್ಷಕರು ಮತ್ತು ಪೋಷಕರೇ ನಕಲನ್ನು ಪರೋಕ್ಷವಾಗಿ ಉತ್ತೇಜಿಸುವ ವರದಿಗಳಂತೂ ಬೆಚ್ಚಿಬೀಳಿಸುತ್ತವೆ. ಅಕ್ರಮಗಳ ನಿವಾರಣೆಗೆ ಹೆಜ್ಜೆ ಹೆಜ್ಜೆಗೂ ಜಾಗೃತದಳಗಳ ನಿಯೋಜನೆಯೇನೊ ಇದೆ. ಪ್ರಶ್ನೆಪತ್ರಿಕೆಗಳು ಹಾಗೂ ಉತ್ತರಪತ್ರಿಕೆಗಳ ಭದ್ರತೆಗೆ ವಿಶೇಷ ಉಸ್ತುವಾರಿಯಿದೆ. ಕಿಸೆಗಳಲ್ಲಿ ಚೀಟಿ, ಪುಟ್ಟ ಡೈರಿ ಇರಿಸಿಕೊಳ್ಳುವುದರಿಂದ ಹಿಡಿದು ಅಸಲಿ ವಿದ್ಯಾರ್ಥಿಯ ಪರವಾಗಿ ನಕಲಿ ವಿದ್ಯಾರ್ಥಿ ಪರೀಕ್ಷೆಗೆ ಹಾಜರಾಗುವ ತನಕ ಶೈಕ್ಷಣಿಕ ಅಪ್ರಾಮಾಣಿಕತೆ ತನ್ನ ಕರಾಳಹಸ್ತ ಚಾಚಬಲ್ಲದು.

ಅತ್ಯಂತ ಶಿಸ್ತು, ಸಂಯಮ, ನಿಯಮಬದ್ಧವಾಗಿ ಪರೀಕ್ಷೆಗಳು ಸಾಗುವ ಕೇಂದ್ರಗಳಿಗೆ ಬರವಿಲ್ಲ. ಇಂಥವುಗಳ ಸಂಖ್ಯೆ ವೃದ್ಧಿಸಿದಷ್ಟೂ ಶಿಕ್ಷಣ ಯಜ್ಞಕ್ಕೆ ಸಾಫಲ್ಯದ ಗರಿಮೆ, ಹಿರಿಮೆ. ಪರೀಕ್ಷಾ ಅಕ್ರಮಗಳಲ್ಲಿ ಸಣ್ಣವು, ದೊಡ್ಡವು ಎನ್ನುವುದಿಲ್ಲ. ಒಂದೊಂದರಿಂದಲೂ ಸ್ವತಃ ತಪ್ಪೆಸಗುವ ವ್ಯಕ್ತಿಯ ಮತ್ತು ಶೈಕ್ಷಣಿಕ ಬೆಳವಣಿಗೆಯ ಅಧಃಪತನ. ಒಟ್ಟಾರೆ ಅದು ಹಾಲಿ ಮತ್ತು ಭಾವಿ ಪೀಳಿಗೆಗಳ ಮೇಲೆ ಘೋರ ದುಷ್ಪರಿಣಾಮ ಬೀರುವ ಶೈಕ್ಷಣಿಕ ವ್ಯಾಧಿ.



ವಿದ್ಯಾಲಯಗಳು, ವಿಶ್ವವಿದ್ಯಾಲಯಗಳು ನೀಡುವ ಅಂಕಪಟ್ಟಿ, ಅರ್ಹತಾ ಪತ್ರಗಳನ್ನು ಅನುಮಾನದಿಂದ ನೋಡುವಂತಾಗುವುದು ಎಂತಹ ದುರ್ದೆಸೆ? ದುರ್ನಡತೆಯಿಂದ ಬರುವ ಅಧಿಕ ಅಂಕಗಳಿಂದ ಜ್ಞಾನ ಲಭಿಸೀತೆ? ಅಷ್ಟಕ್ಕೂ ಪರೀಕ್ಷೆ ಎನ್ನುವುದು ನಕಲು ಮಾಡಿಯಾದರೂ ಪಾಸಾಗುವಷ್ಟು ಅಮೂಲ್ಯವೇ? ಇಂತಹ ಪ್ರಶ್ನೆಗಳಿಂದ ಆತ್ಮಾವಲೋಕನವಾದರೆ ಯಾರಾದರೂ ನಕಲಿಗೆ ವಿದಾಯ ಹೇಳಿಯಾರು.

ಸನ್ನಡತೆ ಮನೆಯಿಂದಲೇ ಪ್ರಾರಂಭವಾಗುವುದಂತೆ. ವಿದ್ಯಾಲಯಗಳ ಮುಖ್ಯಸ್ಥರು ಪರೀಕ್ಷೆ ಶುರುವಾಗುವ ಮೊದಲು ಪೋಷಕರು- ಬೋಧಕರ ಸಭೆ ಕರೆದು, ಅಕ್ರಮಮುಕ್ತವಾಗಿ ಮತ್ತು ವಿಶ್ವಸನೀಯವಾಗಿ ಪರೀಕ್ಷೆ ನಡೆಸುವ ಬಗ್ಗೆ ಚರ್ಚಿಸಬೇಕು. ವಿಶೇಷವಾಗಿ ಪೋಷಕರು ತಮ್ಮ ಮಕ್ಕಳಿಗೆ ಪರೀಕ್ಷೆಯೇ ಎಲ್ಲ ಎನ್ನುವ ಭ್ರಮೆ ಮೂಡಿಸಬಾರದು. 'ಮಾಡು ಇಲ್ಲ ಮಡಿ' ಎನ್ನಲು ಪರೀಕ್ಷೆ ಸಮರವೇನಲ್ಲವಲ್ಲ! ನಪಾಸು ಅಪರಾಧವೂ ಅಲ್ಲ, ನಾಚಿಕೆಗೇಡೂ ಅಲ್ಲ. ಉತ್ತರಿಸಲು ಪ್ರಯತ್ನಿಸಿ ಸೋಲುವುದೂ ಒಂದು ವಿಶಿಷ್ಟ ಅನುಭಾವ.

ಬರಿದಾದ ಮನಸ್ಸನ್ನು ತೆರೆದ ಮನಸ್ಸನ್ನಾಗಿಸುವುದೇ ಶಿಕ್ಷಣದ ಉದ್ದೇಶ. ಸರ್ಕಾರದ ವತಿಯಿಂದ ಪರೀಕ್ಷಾ ಕೊಠಡಿ ಮೇಲ್ವಿಚಾರಕರಿಗೆ ತರಬೇತಿ ಕಮ್ಮಟಗಳ ಅಗತ್ಯವಿದೆ. ಪ್ರಶ್ನೆಪತ್ರಿಕೆಗಳಲ್ಲಿ ನುಸಳಬಹುದಾದ ದೋಷಗಳು ಉತ್ತರಪತ್ರಿಕೆಗಳ ಮೌಲ್ಯಮಾಪನದ ಗುಣಮಟ್ಟ ತಗ್ಗಿಸಬಹುದು. ಹಾಗಾಗಿ ಪ್ರಶ್ನೆಪತ್ರಿಕೆಗಳನ್ನು ಬಹು ಜಾಗರೂಕವಾಗಿ ಕಣ್ಣಲ್ಲಿ ಕಣ್ಣಿಟ್ಟು ರಚಿಸುವುದು ಅತ್ಯಗತ್ಯ. ಸಂದೇಹಾಸ್ಪದ ಮತ್ತು ಸಂಶಯಾಸ್ಪದ ಪ್ರಶ್ನೆಗಳು ಗೊಂದಲಕ್ಕೆ ಕಾರಣವಾಗುತ್ತವೆ. ಅಸ್ಪಷ್ಟ ಪ್ರಶ್ನೆಗಳಿಂದ ಸ್ಪಷ್ಟ ಉತ್ತರಗಳ ನಿರೀಕ್ಷೆ ತಾನೆ ಹೇಗೆ? ಅಂಥವನ್ನು ಕೈಬಿಡುವುದೇ ಸರಿ. ಪ್ರಶ್ನೆಗಳು 35 ಅಂಕಗಳನ್ನು ಪಡೆಯಲು ಸರಾಗವಾಗುವಂತೆ ಮತ್ತು 80- 90 ಅಂಕಗಳನ್ನು ಪಡೆಯಲು ಕೊಂಚವಾದರೂ ಕಷ್ಟಪಡುವಂತೆ ಇರಬೇಕೆನ್ನುವುದು ಸರ್ವರೂ ಸಮ್ಮತಿಸುವ ಯುಕ್ತ ಮಾದರಿ.

ವಾಚಕರ ವಾಣಿ

ಯೋಗ್ಯರನ್ನು ಆಯ್ಕೆ ಮಾಡದಿದ್ದರೆ...

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತದಾರರು ಸಮರ್ಥ, ಯೋಗ್ಯ ಹಾಗೂ ಅರ್ಹತೆ ಉಳ್ಳವರನ್ನು ಆಯ್ಕೆ ಮಾಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಬೇಕಿದೆ. ರಾಜಕೀಯ ಪಕ್ಷಗಳು ಒಡ್ಡುವ ಆಮಿಷಗಳಿಗೆ ಬಲಿಯಾಗಿ ಪ್ರಜ್ಞಾವಂತ ಜನನಾಯಕರನ್ನು ನಾವು ಆಯ್ಕೆ ಮಾಡದೇಹೋದರೆ, ಹಿಂದಿನ ಚುನಾವಣೆಯ ಬಳಿಕ ನಡೆದ ರಾಜಕೀಯ ಏರಿಳಿತ, ಶಾಸಕರ ಖರೀದಿ, ವ್ಯಾಪಕ ಭ್ರಷ್ಟಾಚಾರಕ್ಕೆ ರಾಜ್ಯ ಮತ್ತೊಮ್ಮೆ ಸಾಕ್ಷಿಯಾಗಬೇಕಾಗುತ್ತದೆ.

ರಾಜ್ಯದಲ್ಲಿ ಹಿಂದೆ ಸಮ್ಮಿಶ್ರ ಸರ್ಕಾರಗಳ ರಚನೆಯಿಂದ ಸ್ವಜನಪಕ್ಷಪಾತ, ರಾಜಕೀಯ ಮೌಲ್ಯಗಳ ಪತನ ಹಾಗೂ ಭ್ರಷ್ಟಾಚಾರದಿಂದಾಗಿ ಅಭಿವೃದ್ಧಿ ಕುಂಠಿತವಾಗಿದ್ದನ್ನು ಕಂಡಿದ್ದೇವೆ. ಕರ್ನಾಟಕದ ಮತದಾರರು ಬುದ್ಧಿವಂತರು ಹಾಗೂ ವಿವೇಕಿಗಳು. ಹಾಗಾಗಿ ಅವರು ಸರಿಯಾಗಿ ಯೋಚಿಸಿ ಸ್ಥಿರ ಸರ್ಕಾರವನ್ನು ಅಧಿಕಾರಕ್ಕೆ ತರಬೇಕಿದೆ.

ನಾಗರಾಜ್ ಗೊಣಲ್, ಶಿಕಾರಿಪುರ

ದೇವರ ಹುಂಡಿ ಹಣ ಇತರ ಕಾರ್ಯಕ್ಕೆ ಸಲ್ಲ

ನಂಜನಗೂಡಿನ ದೇವಸ್ಥಾನದ ಹುಂಡಿ ಹಣವನ್ನು ಸಮುದಾಯ ಭವನಗಳನ್ನು ಕಟ್ಟಲು ಮತ್ತು ಲೋಕೋಪಯೋಗಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಮುಂದಾಗಿರುವ ಅಲ್ಲಿನ ಶಾಸಕರ ನಡೆ ಮಾದರಿಯಾದುದು ಎಂದು ಡಾ. ಸರ್ಜಾಶಂಕರ್ ಹರಳಿಮಠ ಅವರು ಹೇಳಿದ್ದಾರೆ (ವಾ.ವಾ., ಏ. 6). ಹುಂಡಿಗೆ ಹಾಕುವ ಹಣವು ಆ ದೇವಸ್ಥಾನದ ನಿರ್ವಹಣೆಗೆ ಬಳಕೆಯಾಗಬೇಕು ಎನ್ನುವ ಕಾನೂನು ಇರದೇ ಹೋಗಿದ್ದರೂ ಸಾರ್ವಜನಿಕರ ಆ ಹಣವನ್ನು ದೇವಸ್ಥಾನಕ್ಕೆ ಹೊರತಾದ ಕೆಲಸಗಳಿಗೆ ವಿನಿಯೋಗಿಸುವುದು ತಪ್ಪಾಗುತ್ತದೆ.

ಮುಖ್ಯಮಂತ್ರಿ ಪರಿಹಾರ ನಿಧಿಗೆ ಜನ ದೇಣಿಗೆ ಕೊಡುತ್ತಲೇ ಇರುತ್ತಾರೆ. ಅದು ಸಹ ಸಾರ್ವಜನಿಕ ಹಣವೇ. ಅಂದಮಾತ್ರಕ್ಕೆ ಸರ್ಕಾರವು ಆ ಹಣವನ್ನು ಸಾಲುಛತ್ರ ಕಟ್ಟಿಸಲು ಬಳಸಿದರೆ ಒಪ್ಪಲು ಸಾಧ್ಯವೇ? ದೇವಸ್ಥಾನದ ಜೀರ್ಣೋದ್ಧಾರ, ದೇವಸ್ಥಾನಕ್ಕೆ ಬರುವವರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸುವುದು, ದೇವಸ್ಥಾನದ ಆಡಳಿತವು ನಡೆಸುವ ಉಚಿತ ಶಾಲೆ ಅಥವಾ ಧರ್ಮಾಸ್ಪತ್ರೆಗಳ ಗುಣಮಟ್ಟ ಸುಧಾರಣೆಗೆ ಮಾತ್ರವೇ ಹುಂಡಿಯ ಹಣ ಬಳಸಬೇಕಾದದ್ದು ಶಕ್ಯ. ಹಾಗಾಗಿ, ಶಾಸಕರ ನಡೆ ಮಾದರಿಯಾಗುವುದಿಲ್ಲ. ಅದು, ದೇಗುಲದ ದೀಪಕ್ಕೆ ಎರವಲು ಎಣ್ಣೆ ತಂದು, ಭಕ್ತರ ಹರಕೆಯ ಹಣವನ್ನು ತುಪ್ಪದ ಅಡುಗೆಗೆ ಬಳಸುವುದಕ್ಕೆ ಸಮ.

ಶ್ರೀಕಂಠ ನಂಜನಗೂಡು, ಬೆಂಗಳೂರು

ನಕಲು ವ್ಯಾಧಿಗೆ ಬೇಕು ಮದ್ದು

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸಾಮೂಹಿಕ ನಕಲು ನಡೆಯುವ ಬಗ್ಗೆ ರವೀಂದ್ರ ಪಾಟೀಲ ಅವರು ವಾಸ್ತವವನ್ನು ಬಿಚ್ಚಿಟ್ಟಿದ್ದಾರೆ (ವಾ.ವಾ., ಏ. 6). ಆದರೆ ಈ ನಕಲಿನ ವ್ಯಾಧಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮಾತ್ರ ಇಲ್ಲ, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ವ್ಯಾಪಿಸಿದೆ. ಕೆಲವು ವರ್ಷಗಳ ಹಿಂದೆ ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯದ ಒಟ್ಟಾರೆ ಫಲಿತಾಂಶ ಶೇ 30- 40ರ ಆಸುಪಾಸಿನಲ್ಲೇ ಇರುತ್ತಿತ್ತು. ಈಗ ಶೇ 80-90 ದಾಟುತ್ತಿರುವುದನ್ನು ನೋಡಿದರೆ ಅಚ್ಚರಿಯಾಗುತ್ತದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಈ ಫಲಿತಾಂಶ ದಾಖಲಿಸುವ ಎಷ್ಟೋ ವಿದ್ಯಾರ್ಥಿಗಳು ಪಿಯುಸಿಯಲ್ಲಿ ಏಕೆ ಅನುತ್ತೀರ್ಣರಾಗುತ್ತಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಸಿಗುತ್ತಿಲ್ಲ.

'ಕಡಿಮೆ ಫಲಿತಾಂಶ ಪಡೆದ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರನ್ನು ಶಿಕ್ಷಣ ಇಲಾಖೆಯ ಅಧಿಕಾರಿಗಳು ವರ್ಷಪೂರ್ತಿ ಹೀಯಾಳಿಸುವ ಪ್ರವೃತ್ತಿ ಈಚೆಗೆ ಹೆಚ್ಚಾಗಿ ಕಂಡುಬರುತ್ತಿದೆ. ಅದರಿಂದ ಪಾರಾಗುವ ಸಲುವಾಗಿ ಶಿಕ್ಷಕರು ಸಾಮೂಹಿಕ ನಕಲಿಗೆ ಸಹಕರಿಸಲು ಮುಂದಾಗಿ, ಸಿಕ್ಕಿಬಿದ್ದು ಅಮಾನತಿನ ಶಿಕ್ಷೆಗೆ ಗುರಿಯಾಗುತ್ತಿದ್ದಾರೆ' ಎಂದು ಶಿಕ್ಷಕ ಮಿತ್ರರೊಬ್ಬರು ಹೇಳಿದ ಮಾತು ಕೇಳಿದರೆ, ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸುವಲ್ಲಿ ಆಡಳಿತ ವ್ಯವಸ್ಥೆ ಎಡವಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಸಿಸಿ ಟಿ.ವಿ ಹಾಗೂ ಪೊಲೀಸ್ ಕಾವಲಿನ ಜೊತೆಗೆ ನಿಷೇಧಾಜ್ಞೆ ಜಾರಿಯಲ್ಲಿದ್ದಾಗಲೂ ಪರೀಕ್ಷೆಯ ಪಾವಿತ್ರ್ಯ ಕಾಪಾಡಿಕೊಳ್ಳಲು ಸಾಧ್ಯವಾಗದಿರುವುದು ವಿಷಾದನೀಯ. ಸಾಮೂಹಿಕ ನಕಲು ತಡೆಗಟ್ಟುವ ದಿಸೆಯಲ್ಲಿ ಇಲಾಖೆಯ ಅಧಿಕಾರಿಗಳು ಬದ್ಧತೆಯಿಂದ ಕಾರ್ಯೋನ್ಮುಖರಾಗಬೇಕಿದೆ.

ಅನಸೂಯ ವಿ., ಮಂಡ್ಯ

ಕೈಜೋಡಿಸುವ ಸಂಸ್ಕೃತಿಯಲ್ಲಿದೆ ಮಹತ್ವ

ರಾಜಕೀಯ ನಾಯಕರು ಅಥವಾ ಸೆಲೆಬ್ರಿಟಿಗಳಿಗೆ ಸಾರ್ವಜನಿಕವಾಗಿ ಮುತ್ತಿಡುವುದು ಕೆಟ್ಟದ್ದಲ್ಲ, ಇದು ಪರದೇಶಗಳಲ್ಲಿ ಚಾಲ್ತಿಯಲ್ಲಿರುವ ಪದ್ಧತಿ ಎಂದು ಕೆ.ವಿ. ವಾಸು ಹೇಳಿದ್ದಾರೆ (ವಾ.ವಾ., ಏ. 4). ಸ್ವಾಮಿ, ನೀವೇ ಹೇಳಿದಂತೆ ಮುತ್ತಿಡುವುದು ವಿದೇಶಗಳಲ್ಲಿರುವ ಸಂಸ್ಕೃತಿ. ಆದರೆ, ಕೈಜೋಡಿಸಿ ನಮಸ್ಕರಿಸುವುದು ನಮ್ಮ ಭಾರತೀಯರ ಸಂಸ್ಕೃತಿ, ಸಂಪ್ರದಾಯ. ಕೋವಿಡ್ ಸಮಯದಲ್ಲಂತೂ ಆಲಿಂಗನ, ಹಸ್ತಲಾಘವ ಸಂಸ್ಕೃತಿಗಳು ಸಂಪೂರ್ಣವಾಗಿ ಸ್ವಯಂನಿಷೇಧಕ್ಕೆ ಒಳಗಾಗಿದ್ದವು. ಬದಲಿಗೆ ಕೈಜೋಡಿಸಿ ನಮಸ್ಕಾರ ಮಾಡುವ ಸಂಸ್ಕೃತಿಯೇ ಎಲ್ಲ ದೃಷ್ಟಿಯಿಂದಲೂ ಒಳ್ಳೆಯದು ಎಂದು ಇಡೀ ವಿಶ್ವಕ್ಕೆ ಅರಿವಾಯಿತು. ಆದರೆ, ಪ್ರಸ್ತುತದಲ್ಲಿ ಆಲಿಂಗನ ಸಂಸ್ಕೃತಿ ಭಾರತೀಯರಲ್ಲೂ ಸಾಮಾನ್ಯ ಹಾಗೂ ಸಾರ್ವತ್ರಿಕವಾಗುತ್ತಿದೆ!

ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ಕಾಂಗ್ರೆಸ್‌ನ ಚಾಳಿ ಬಿಜೆಪಿಗೆ ಏಕೆ?

ಕಾಂಗ್ರೆಸ್ ಪಕ್ಷವು ಈ ಹಿಂದೆ ತಮಿಳುನಾಡಿನ ಲೋಕಸಭಾ ಕ್ಷೇತ್ರವೊಂದಕ್ಕೆ ಜನಪ್ರಿಯ ನಟಿ ವೈಜಯಂತಿ ಮಾಲಾ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿತ್ತು. ಆಗ ಅಂದಿನ ಜನಸಂಘವು ಇದನ್ನು ಟೀಕಿಸಿ, 'ಕಾಂಗ್ರೆಸ್ ಪಕ್ಷ ಚುನಾವಣೆಯಲ್ಲಿ ತನ್ನ ಪ್ರಣಾಳಿಕೆಯ ಆಧಾರದ ಮೇಲೆ ಗೆಲ್ಲುವುದರ ಬದಲು, ಸಿನಿಮಾ ತಾರೆಯರ ಸೌಂದರ್ಯದ ಬೆಂಬಲ ಪಡೆಯುವುದೇಕೆ?' ಎಂದು ಹೀಯಾಳಿಸಿತ್ತು.

ಆದರೆ ಈಗ, ಅದೇ ಜನಸಂಘದಿಂದ ರೂಪುಗೊಂಡಿರುವ ಬಿಜೆಪಿಯು ಚುನಾವಣೆಯನ್ನು ತನ್ನ ಪ್ರಣಾಳಿಕೆಯ ಆಧಾರದ ಮೇಲೆ ಗೆಲ್ಲುವ ಬದಲು, ಸಿನಿಮಾ ನಟ ನಟಿಯರ ಆಕರ್ಷಕ ವ್ಯಕ್ತಿತ್ವದ ಬೆಂಬಲವನ್ನು ಅವಲಂಬಿಸುತ್ತಿರುವುದು ಕಾಂಗ್ರೆಸ್‌ನ ಚಾಳಿಯನ್ನು ಮುಂದುವರಿಸಿದಂತೆ ಅಲ್ಲವೇ?

ಕೆ.ಎನ್.ಭಗವಾನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕೀಯ ತೆರೆ ಮೇಲೆ ಚಿತ್ರ ತಾರೆಯರು

ಪ್ರಜಾವಾಣಿ ವಾರ್ತೆ

ಕನ್ನಡ ಚಿತ್ರರಂಗಕ್ಕೂ ರಾಜ್ಯದ ರಾಜಕಾರಣಕ್ಕೂ ದೊಡ್ಡ ನಂಟಿದೆ. ಕನ್ನಡ ಚಿತ್ರರಂಗದ ಹತ್ತಾರು ದೊಡ್ಡ ತಾರೆಯರು ರಾಜಕಾರಣದಲ್ಲೂ ತಮ್ಮ ಅದೃಷ್ಟ ಪರೀಕ್ಷಿಸಿದ್ದಾರೆ. ಅವರಲ್ಲಿ ಕೆಲವರು ಯಶಸ್ವಿಯಾಗಿದ್ದಾರೆ. ಹಲವರು ಹೀಗೆ ಬಂದು, ಹಾಗೆ ಹೋಗಿದ್ದಾರೆ. ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಂತಂತೆ, ರಾಜಕಾರಣದಲ್ಲೂ ಗಟ್ಟಿಯಾಗಿ ನಿಂತವರ ಸಂಖ್ಯೆ ಕಡಿಮೆಯೇ.

ಕೆಲವು ಚಿತ್ರನಟರು ಸಕ್ರಿಯ ರಾಜಕಾರಣ ಪ್ರವೇಶಿಸದೇ ಇದ್ದರೂ ರಾಜಕಾರಣಿಗಳ ಪರವಾಗಿ ಮತ್ತು ರಾಜಕೀಯ ಪಕ್ಷಗಳ ಪರವಾಗಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ನಟ ಸುದೀಪ್ ಅವರು ಈಚೆಗಷ್ಟೇ, ಮುಖ್ಯಮಂತ್ರಿ ಬೊಮ್ಮಾಯಿ ಪರವಾಗಿ ಪ್ರಚಾರ ಮಾಡುತ್ತೇನೆ ಎಂದು ಹೇಳಿದ್ದಾರೆ. ನಟ ರವಿಚಂದ್ರನ್ ಸಹ ಈ ಹಿಂದೆ ಕೆಲವು ರಾಜಕಾರಣಿಗಳ ಪರವಾಗಿ ಪ್ರಚಾರ ನಡೆಸಿದ್ದರು. ನಟ ದರ್ಶನ್, ಯಶ್ ಈ ಹಿಂದೆ ಚುನಾವಣಾ ಪ್ರಚಾರ ನಡೆಸಿದ್ದಾರೆ.

ಕನ್ನಡ ಚಿತ್ರರಂಗ ಮತ್ತು ರಾಜಕಾರಣದ ನಡುವಣ ಸಂಬಂಧವು, ಪಕ್ಕದ ತಮಿಳುನಾಡು, ಆಂಧ್ರ ಪ್ರದೇಶ ಮತ್ತು ತೆಲಂಗಾಣಕ್ಕಿಂತ ತೀರಾ ಭಿನ್ನವಾದುದು. ತಮಿಳುನಾಡು ಮತ್ತು ಅವಿಭಜಿತ ಆಂಧ್ರಪ್ರದೇಶದ ಚಿತ್ರರಂಗಗಳು ಆಯಾ ರಾಜ್ಯಗಳ ರಾಜಕಾರಣದ ದಿಕ್ಕನ್ನೇ ಬದಲಿಸಿದ ಉದಾಹರಣೆಗಳು ನಮ್ಮೆದುರು ಇವೆ. ತೆಲುಗು ಚಿತ್ರರಂಗದ ಮಹಾತಾರೆ ಎನ್.ಟಿ.ರಾಮರಾವ್ ಚುನಾವಣಾ ರಾಜಕಾರಣದಲ್ಲಿ ಯಶಸ್ಸು ಕಂಡಿದ್ದಲ್ಲದೆ, ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದರು. ತೆರೆಯ ಮೇಲೆ ಅವರಿಗಿದ್ದ ವರ್ಚಸ್ಸು, ಯಶಸ್ವಿ ರಾಜಕಾರಣಿಯಾಗಿ ಇನ್ನಷ್ಟು ಹೆಚ್ಚಾಗಿತ್ತು. ಎನ್‌ಟಿಆರ್ ನಂತರದ ತಲೆಮಾರಿನ ಸೂಪರ್‌ಸ್ಟಾರ್‌ಗಳಲ್ಲಿ ಒಬ್ಬರಾದ ಚಿರಂಜೀವಿ ಸಹ ರಾಜಕಾರಣದಲ್ಲಿ ಅದೃಷ್ಟ ಪರೀಕ್ಷೆಗೆ ಇಳಿದಿದ್ದರು. ಅವರು ಚುನಾವಣೆಯಲ್ಲಿ ಯಶಸ್ಸು ಕಂಡರೂ ಅವರ ಪಕ್ಷದ ಅಭ್ಯರ್ಥಿಗಳಿಗೆ ಗೆಲ್ಲುವ ಅದೃಷ್ಟವಿರಲಿಲ್ಲ. ಈಚಿನ ದಿನಗಳಲ್ಲಿ ತೆಲುಗು ಚಿತ್ರರಂಗದ ತಾರೆಗಳು ರಾಜಕಾರಣದಿಂದ ದೂರವೇ ಉಳಿದಿದ್ದಾರೆ.


ಬಿಜೆಪಿ ಪತ್ರಿಕಾಗೋಷ್ಠಿಯಲ್ಲಿ ನಟ ಸುದೀಪ್


ಪಕ್ಕದ ತಮಿಳುನಾಡಿನ ರಾಜಕಾರಣಕ್ಕೂ, ಅಲ್ಲಿನ ಚಿತ್ರರಂಗಕ್ಕೂ ಬಿಡಿಸಲಾರದ ನಂಟು. ಚಿತ್ರ ಸಾಹಿತಿಯಾಗಿದ್ದ ಎಂ. ಕರುಣಾನಿಧಿ ಅವರು ಅಣ್ಣಾದೊರೈ ನಂತರ ಡಿಎಂಕೆ ಪಕ್ಷವನ್ನು ಹಲವು ದಶಕಗಳ ಕಾಲ ಮುನ್ನಡೆಸಿದ್ದರು. ತಮಿಳುನಾಡಿನ ಮುಖ್ಯಮಂತ್ರಿಯೂ ಆಗಿದ್ದರು. ಎಂಜಿಆರ್ ಸಹ ಚಿತ್ರರಂಗದಿಂದಲೇ ರಾಜಕಾರಣಕ್ಕೂ ಧುಮುಕಿ, ಅಲ್ಲಿಯೂ ಯಶಸ್ಸು ಕಂಡವರು. ರಾಜ್ಯದ ಮುಖ್ಯಮಂತ್ರಿಯೂ ಆಗಿದ್ದರು. ಚಿತ್ರತಾರೆ ಜಯಲಲಿತಾ ಸಹ ಹಲವು ಬಾರಿ ಮುಖ್ಯಮಂತ್ರಿಯಾಗಿದ್ದರು. ಖುಷ್ಬೂ ಸುಂದರ್, ಕಮಲ್ ಹಾಸನ್ ಸಕ್ರಿಯ ರಾಜಕಾರಣದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹೊಸ ತಲೆಮಾರಿನ ತಮಿಳು ನಟರು ತಮ್ಮ ರಾಜಕೀಯ ಸಿದ್ಧಾಂತಗಳನ್ನು ಬಹಿರಂಗವಾಗಿಯೇ ಹೇಳಿಕೊಂಡಿದ್ದಾರೆ. ಜತೆಗೆ, ಸರ್ಕಾರಗಳ ನೀತಿಗಳನ್ನು ಬಹಿರಂಗವಾಗಿಯೇ ಖಂಡಿಸಿದ್ದಾರೆ.

ಕನ್ನಡ ಚಿತ್ರರಂಗದ ಹತ್ತಾರು ತಾರೆಯರು ರಾಜಕಾರಣಕ್ಕೆ ಬಂದರೂ, ಸಚಿವಸ್ಥಾನ ಪಡೆದರೂ, ದೊಡ್ಡಮಟ್ಟದ ಯಶಸ್ಸು ಪಡೆದದ್ದು ಕಡಿಮೆ. ಎನ್‌ಟಿಆರ್ ಮತ್ತು ಎಂಜಿಆರ್ ತಲೆಮಾರಿನ ಕನ್ನಡ ಚಿತ್ರರಂಗದ ದೊಡ್ಡ ತಾರೆಯಾಗಿದ್ದ ರಾಜ್‌ಕುಮಾರ್ ಅವರು ರಾಜಕಾರಣದಿಂದ ದೂರವೇ ಉಳಿದಿದ್ದರು. ರಾಜಕಾರಣಕ್ಕೆ ಬನ್ನಿ ಎಂದು ರಾಜಕೀಯ ನಾಯಕರು, ಪಕ್ಷಗಳು ದುಂಬಾಲು ಬಿದ್ದಾಗಲೂ ರಾಜ್‌ಕುಮಾರ್ ಅವರು ಅದನ್ನು ತಿರಸ್ಕರಿಸಿದ್ದರು. ಗೋಕಾಕ್ ಚಳವಳಿಯ ಮುಂಚೂಣಿಯಲ್ಲಿ ಇದ್ದರೂ, ರಾಜ್‌ಕುಮಾರ್ ಅವರು ರಾಜಕಾರಣಕ್ಕೆ ಬರಲಿಲ್ಲ. ಆನಂತರ ರಾಜಕಾರಣಕ್ಕೆ ಬಂದ ಅನಂತನಾಗ್, ನಂತರದ ದಿನಗಳಲ್ಲಿ ಸಕ್ರಿಯ ರಾಜಕಾರಣದಿಂದ ದೂರವೇ ಉಳಿದರು. ರಾಜ್ಯ ರಾಜಕಾರಣದಲ್ಲಿ ಈಗಲೂ ಹತ್ತಾರು ಸಿನಿಮಾ ತಾರೆಯರು ಸಕ್ರಿಯವಾಗಿದ್ದಾರೆ. ಆದರೆ, ಅದು ರಾಜ್ಯದ ರಾಜಕಾರಣವನ್ನು ಪ್ರಭಾವಿಸುವ ಅಥವಾ ಅದರ ದಿಕ್ಕನ್ನು ಬದಲಿಸುವಷ್ಟು ಪ್ರಬಲವಾಗಿಲ್ಲ.

ಅನಂತನಾಗ್



ಹೆಸರಾಂತ ನಟ ಅನಂತ್‌ನಾಗ್ ಅವರು ಐದು ದಶಕಗಳ ಹಿಂದೆಯೇ ರಾಜಕಾರಣ ಆರಂಭಿಸಿದ್ದವರು. ಮಾಜಿ ಮುಖ್ಯ-ಮಂತ್ರಿಗಳಾದ ರಾಮಕೃಷ್ಣ ಹೆಗಡೆ ಹಾಗೂ ಜೆ.ಎಚ್. ಪಟೇಲ್ ಅವರ ರಾಜಕೀಯ ಒಡನಾಡಿಯಾಗಿದ್ದರು. ಜನತಾ ಪಕ್ಷದ ಅಂದಿನ ಚುನಾವಣೆಗಳಲ್ಲಿ ಪ್ರಮುಖ ತಾರಾ ಪ್ರಚಾರಕರಾಗಿ ಅನಂತ್‌ನಾಗ್ ಗುರುತಿಸಿಕೊಂಡಿದ್ದರು. ಆದರೆ, ಚುನಾವಣಾ ಸ್ಪರ್ಧೆಯು ಅವರಿಗೆ ಆರಂಭದಲ್ಲಿ ಸೋಲು ತಂದಿತು. 1983ರ ಉತ್ತರ ಕನ್ನಡ ಲೋಕಸಭಾ ಚುನಾವಣೆಯಲ್ಲಿ, ಜ್ಞಾನಪೀಠ ಪುರಸ್ಕೃತ ಸಾಹಿತಿ ಶಿವರಾಮ ಕಾರಂತ್ ಅವರು ಅನಂತ್‌ನಾಗ್ ಅವರಿಗೆ ಎದುರಾಳಿಯಾಗಿದ್ದರು. ಆದರೆ, ಇಬ್ಬರು ಖ್ಯಾತನಾಮರೂ ಸೋಲು ಕಾಣಬೇಕಾಯಿತು. 1994ರಲ್ಲಿ ವಿಧಾನಸಭೆ ಪ್ರವೇಶಿಸಿ, ಪಟೇಲ್ ಸಚಿವ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿದರು. 2004ರಲ್ಲಿ ಮತ್ತೆ ಚುನಾವಣಾ ಕಣಕ್ಕೆ ಧುಮುಕಿದ ಅವರು, ಚಾಮರಾಜಪೇಟೆಯಲ್ಲಿ ಸೋಲು ಕಾಣಬೇಕಾಯಿತು.



ಶಂಕರ್‌ನಾಗ್: ಅನಂತ್ ನಾಗ್ ಅವರ ಸಹೋದರ ಹಾಗೂ ಕನ್ನಡ ಚಿತ್ರರಂಗದ ಖ್ಯಾತ ನಟ ನಿರ್ದೇಶಕ ಹಾಗೂ ತಂತ್ರಜ್ಞರಾಗಿ ಹೆಸರಾಗಿದ್ದ ಶಂಕರ್‌ನಾಗ್ ಅವರು ಸಕ್ರಿಯ ರಾಜಕೀಯದಲ್ಲಿ ತೊಡಗಿಸಿಕೊಂಡವರಲ್ಲ. ಆದರೆ ತಮ್ಮ ಸಹೋದರ ಅನಂತ್‌ನಾಗ್ ಪರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು.

‘ಮುಖ್ಯಮಂತ್ರಿ’ ಚಂದ್ರು

‘ಮುಖ್ಯಮಂತ್ರಿ’ ನಾಟಕದಿಂದ ಪ್ರಸಿದ್ಧರಾಗಿ, ನೂರಾರು ಸಿನಿಮಾಗಳಲ್ಲಿ ನಟಿಸಿರುವ ಮುಖ್ಯಮಂತ್ರಿ ಚಂದ್ರು ಅವರು 1985ರಲ್ಲಿ ರಾಜಕೀಯ ಪ್ರವೇಶ ಮಾಡಿದ್ದರು. ಗೌರಿಬಿದನೂರು ಕ್ಷೇತ್ರದಿಂದ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾದರು. 90ರ ದಶಕದಲ್ಲಿ ಅವರು ಬಿಜೆಪಿ ಸೇರ್ಪಡೆಯಾಗಿ ಎರಡು ಅವಧಿಗೆ ವಿಧಾನ ಪರಿಷತ್ತಿಗೆ ಆಯ್ಕೆಯಾದರು. 2014ರಲ್ಲಿ ಪಕ್ಷ ಬದಲಿಸಿದ ಅವರು ಕಾಂಗ್ರೆಸ್ ಸೇರಿದರು. ಪರಿಷತ್‌ಗೆ ಮರು ಆಯ್ಕೆ ಮಾಡಲು ಕಾಂಗ್ರೆಸ್ ಹಿಂದೇಟು ಹಾಕಿತು ಎಂದು ಆರೋಪಿಸಿದ ಅವರು ಎಂಟು ವರ್ಷಗಳ ಬಳಿಕ ಕಾಂಗ್ರೆಸ್ ತ್ಯಜಿಸಿದರು. ಈಗ ಅವರು ರಾಜ್ಯದಲ್ಲಿ ಆಮ್ ಆದ್ಮಿ ಪಕ್ಷವನ್ನು ಕಟ್ಟುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ.

ಜಗ್ಗೇಶ್

ಆರಂಭದಲ್ಲಿ ಖಳನಾಯಕನ ಪಾತ್ರದಲ್ಲಿ ನಟಿಸಿ ನಂತರದ ದಿನಗಳಲ್ಲಿ ನಾಯಕ ಸ್ಥಾನಕ್ಕೆ ಬಡ್ತಿ ಪಡೆದು ಯಶಸ್ವಿಯಾಗಿರುವ ಜಗ್ಗೇಶ್ ರಾಜಕೀಯದ ಸೆಳೆತದಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಆರಂಭದಲ್ಲಿ ಕಾಂಗ್ರೆಸ್‌ನಿಂದ ವಿಧಾನಸಭೆಗೆ ಸ್ಪರ್ಧಿಸಿ ಗೆಲುವನ್ನೂ ಕಂಡ ಅವರು ನಂತರದ ದಿನಗಳಲ್ಲಿ ಬಿಜೆಪಿ ಸೇರಿದರು. ಬಿಜೆಪಿಯಿಂದ ಪರಿಷತ್‌ಗೆ ಆಯ್ಕೆಯಾದರು. ರಸ್ತೆಸಾರಿಗೆ ನಿಗಮದ ಉಪಾಧ್ಯಕ್ಷರಾಗಿಯೂ ಕೆಲಸ ಮಾಡಿದರು. ಉಪಚುನಾವಣೆಯಲ್ಲಿ ಸೋಲಿನ ರುಚಿಯನ್ನೂ ನೋಡಿದರು. ಇತ್ತೀಚೆಗೆ ರಾಜ್ಯಸಭೆಗೆ ಆಯ್ಕೆಯಾಗಿದ್ದು, ಸಂಸತ್ತಿನಲ್ಲಿ ಕನ್ನಡದಲ್ಲಿ ಮಾತನಾಡಿದ ಗಮನ ಸೆಳೆದಿದ್ದಾರೆ.

ಬಿ.ಸಿ. ಪಾಟೀಲ್

ಪೊಲೀಸ್ ಅಧಿಕಾರಿಯಾಗಿ ವೃತ್ತಿಜೀವನ ಆರಂಭಿಸಿದ ಬಿ.ಸಿ ಪಾಟೀಲ್, ಚಿತ್ರರಂಗದ ಸೆಳೆತದಿಂದ ಅಲ್ಲಿಯೂ ಮೋಡಿ ಮಾಡಿದರು. ಯಶಸ್ವಿ ಚಿತ್ರಗಳನ್ನು ನೀಡಿದ ಅವರನ್ನು ರಾಜಕೀಯವೂ ಸೆಳೆಯಿತು. 2004ರಲ್ಲಿ ಜೆಡಿಎಸ್ ಪಕ್ಷದಿಂದ ಹಿರೇಕೆರೂರು ಕ್ಷೇತ್ರದಲ್ಲಿ ಮೊದಲ ಬಾರಿ ಸ್ಪರ್ಧಿಸಿ ಶಾಸಕರಾದರು. 2008ರಲ್ಲಿ ಜೆಡಿಎಸ್ ತೊರೆದು ಕಾಂಗ್ರೆಸ್‌ನಿಂದ ಮತ್ತೊಮ್ಮೆ ವಿಧಾನಸಭೆಗೆ ಆರಿಸಿಬಂದರು. ಮಂದಿನ ಚುನಾವಣೆಯು ಅವರಿಗೆ ಸೋಲಿನ ನಿರಾಸೆ ಮೂಡಿಸಿತು. ಆದರೆ 2018ರಲ್ಲಿ ಗೆಲುವಿನ ನಗೆ ಬೀರಿದರು. ಸಚಿವ ಸ್ಥಾನದ ನಿರೀಕ್ಷೆಯಿದ್ದರೂ ಅವರಿಗೆ ಸಿಗಲಿಲ್ಲ. ವರ್ಷದಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಿಜೆಪಿ ಸೇರ್ಪಡೆಯಾದರು. ಉಪಚುನಾವಣೆಯಲ್ಲಿ ಗೆದ್ದು ಯಡಿಯೂರಪ್ಪ ಸಂಪುಟದಲ್ಲಿ ಸಚಿವರಾದರು. ಬಸವರಾಜ ಬೊಮ್ಮಾಯಿ ಸರ್ಕಾರದಲ್ಲಿ ಕೃಷಿ ಖಾತೆ ನಿರ್ವಹಿಸುತ್ತಿದ್ದು, ಸದ್ಯ ರಾಜಕೀಯದಲ್ಲಿ ಸಕ್ರಿಯವಾಗಿದ್ದಾರೆ.

ಸಿ.ಪಿ. ಯೋಗೀಶ್ವರ್

ಸಿನಿಮಾರಂಗಕ್ಕೆ ಕಲಾವಿದನಾಗಿ ಪದಾರ್ಪಣೆ ಮಾಡಿದ ಸಿ.ಪಿ. ಯೋಗೀಶ್ವರ್ ಅವರು ನಾಯಕ ನಟರಾಗಿ ಕೆಲವು ಸಿನಿಮಾಗಳಲ್ಲಿ ಹೆಸರು ಮಾಡಿದರು. ಅವರು ರಾಜಕೀಯ ಪಯಣ ಆರಂಭಿಸಿದ್ದು ಕಾಂಗ್ರೆಸ್ ಪಕ್ಷದಿಂದ. ಆದರೆ ಅವರು ಹಲವು ಪಕ್ಷಗಳ ಜೊತೆ ಗುರುತಿಸಿಕೊಂಡಿದ್ದಾರೆ. 2008ರಲ್ಲಿ ಕಾಂಗ್ರೆಸ್ ತೊರೆದು, ಬಿಜೆಪಿ ಸೇರ್ಪಡೆಯಾಗಿ, ಉಪಚುನಾವಣೆಯಲ್ಲಿ ಗೆಲುವು ದಾಖಲಿಸಿದರು. ಅವರಿಗೆ ಸಂಪು ಟದಲ್ಲಿ ಸ್ಥಾನವೂ ದೊರೆಯಿತು. 2013ರಲ್ಲಿ ಅವರ ಚಿತ್ತ ಸಮಾಜವಾದಿ ಪಕ್ಷದತ್ತ ಹರಿಯಿತು. ಚನ್ನಪಟ್ಟಣದಲ್ಲಿ ಸೈಕಲ್ ಚಿಹ್ನೆಯಡಿ ಗೆದ್ದು ಮತ್ತೆ ವಿಧಾನಸಭೆಗೆ ಬಂದರು. ಅವರ ಮುಂದಿನ ಹಾದಿ ಮತ್ತೆ ಕಾಂಗ್ರೆಸ್‌ನತ್ತ, ಇದಾದ ಬಳಿಕ ಬಿಜೆಪಿಯತ್ತ ಸಾಗಿತು.


ಕುಮಾರ್ ಬಂಗಾರಪ್ಪ

‘ಅಶ್ವಮೇಧ’ದಂತಹ ಯಶಸ್ವಿ ಚಿತ್ರಗಳಲ್ಲಿ ಕಾಣಿಸಿಕೊಂಡು, ಆ್ಯಕ್ಷನ್ ದೃಶ್ಯಗಳು ಹಾಗೂ ಡಾನ್ಸ್‌ನಲ್ಲಿ ಹೆಸರಾಗಿದ್ದ ಕುಮಾರ್ ಬಂಗಾರಪ್ಪ ಅವರು ಆಕಸ್ಮಿಕವಾಗಿ ರಾಜಕೀಯಕ್ಕೆ ಬಂದವರು. ಮಾಜಿ ಮುಖ್ಯಮಂತ್ರಿ ಬಂಗಾರಪ್ಪ ಅವರು ಲೋಕಸಭೆಗೆ ಆಯ್ಕೆಯಾದಾಗ ತೆರವಾಗಿದ್ದ ಸೊರಬ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕುಮಾರ್ ಕಣಕ್ಕಿಳಿದು ಗೆದ್ದುಬಂದರು. ಚಿಕ್ಕ ವಯಸ್ಸಿನಲ್ಲಿ ಶಾಸನಸಭೆಗೆ ಆಯ್ಕೆಯಾದ ಹೆಗ್ಗಳಿಕೆ ಇವರದ್ದು. ಸತತ ಮೂರು ಬಾರಿ ಅವರು ಶಾಸಕರಾದರು. ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ತಮ್ಮ ಸಹೋದರ ಮಧು ಬಂಗಾರಪ್ಪ ವಿರುದ್ಧ ಸ್ಪರ್ಧಿಸಿ ಗೆದ್ದು ಬಂದರು. ಒಮ್ಮೆ ಸಮಾಜವಾದಿ ಪಕ್ಷದಿಂದಲೂ ಆಯ್ಕೆಯಾಗಿದ್ದರು. ಕಾಂಗ್ರೆಸ್‌ನಿಂದ ಬಿಜೆಪಿಗೆ ಜಿಗಿದಿದ್ದ ಅವರು ಕೆಲವೇ ದಿನಗಳಲ್ಲಿ ಮತ್ತೆ ಕಾಂಗ್ರೆಸ್‌ಗೆ ಬಂದಿದ್ದರು. ಇದೀಗ ಬಿಜೆಪಿ ಶಾಸಕರಾಗಿದ್ದು, ಸಕ್ರಿಯ ರಾಜಕಾರಣದಲ್ಲಿ ಗುರುತಿಸಿಕೊಂಡಿದ್ದಾರೆ.

ಉಪೇಂದ್ರ

ಪ್ರಖ್ಯಾತ ನಟ, ನಿರ್ದೇಶಕ ಉಪೇಂದ್ರ ಅವರು ರಾಜಕೀಯ ಪ್ರವೇಶಿಸಿದ್ದು ಐದು ವರ್ಷಗಳ ಹಿಂದೆ. ಅವರ ಕಲ್ಪನೆಯ ‘ಪ್ರಜಾಕೀಯ’ ಎಂಬ ರಾಜಕೀಯ ವೇದಿಕೆಯ ಅಡಿ, ಕರ್ನಾಟಕ ಪ್ರಜ್ಞಾವಂತರ ಜನತಾ ಪಕ್ಷವನ್ನು (ಕೆಪಿಜೆಪಿ) ಕಟ್ಟಿದ್ದರು. ಪಕ್ಷದಿಂದ ಹಲವು ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆದರೆ ಉಪೇಂದ್ರ ಅವರು ಸ್ಪರ್ಧೆಯಿಂದ ದೂರವುಳಿದಿದ್ದರು. ಆದರೆ ಆಂತರಿಕ ಕಲಹದ ಕಾರಣ ಪಕ್ಷದಿಂದ ಹೊರಬಂದ ಅವರು, ಉತ್ತಮ ಪ್ರಜಾಕೀಯ ಪಕ್ಷವನ್ನು ಸ್ಥಾಪಿಸಿದರು. ರಾಜಕೀಯ ವೇದಿಕೆ ಸ್ಥಾಪಿಸಿದ್ದರೂ, ಅವರು ಸದ್ಯ ಸಿನಿಮಾರಂಗದಲ್ಲಿ ಸಕ್ರಿಯರಾಗಿದ್ದಾರೆ.

ಅಂಬರೀಷ್



ಕನ್ನಡ ಚಿತ್ರರಂಗದ ರೆಬೆಲ್ ಸ್ಟಾರ್ ಎಂದೇ ಹೆಸರಾಗಿದ್ದ ಅಂಬರೀಷ್ ಅವರು ಚಿತ್ರರಂಗದ ಹಾಗೆಯೇ ರಾಜಕೀಯದಲ್ಲೂ ಹೆಸರಾದವರು. 1994ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿ ಸಕ್ರಿಯ ರಾಜಕಾರಣ ಆರಂಭಿಸಿದರು. ಜನತಾದಳಕ್ಕೆ ಸೇರ್ಪಡೆಯಾಗಿ, 1998ರಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಆರಿಸಿಬಂದರು. ನಂತರ ಕಾಂಗ್ರೆಸ್‌ಗೆ ಮರು ಸೇರ್ಪಡೆಯಾದ ಅವರು ಕೇಂದ್ರದಲ್ಲಿ ಸಚಿವರಾಗಿಯೂ ಕೆಲಸ ಮಾಡಿದರು. ಒಟ್ಟು ಮೂರು ಬಾರಿ ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿದರು. ವಿಧಾನಸಭೆಗೂ ಆಯ್ಕೆಯಾಗಿದ್ದ ಅವರು ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿಯೂ ಕೆಲಸ ಮಾಡಿದ್ದರು.

ಶಶಿಕುಮಾರ್

ಕನ್ನಡ ಚಿತ್ರರಂಗದ ಜನಪ್ರಿಯ ನಟರಲ್ಲಿ ಒಬ್ಬರಾದ ಶಶಿಕುಮಾರ್ ಅವರು ರಾಜಕಾರಣಿಯಾಗಿಯೂ ಯಶಸ್ಸು ಪಡೆದವರು. 1999ರಲ್ಲಿ ಜೆಡಿಯು ಟಿಕೆಟ್‌ನಿಂದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಕಣಕ್ಕೆ ಇಳಿದಿದ್ದರು. ಸಂಸತ್ತಿಗೆ ಆಯ್ಕೆಯಾಗಿದ್ದರು. ನಂತರದ ವರ್ಷಗಳಲ್ಲಿ ಜೆಡಿಎಸ್ ಸೇರಿದ್ದರು. 2006ರಲ್ಲಿ ಜೆಡಿಎಸ್ ತೊರೆದು, ಕಾಂಗ್ರೆಸ್ ಸೇರಿದ್ದರು. ಕೆಲವೇ ತಿಂಗಳ ಹಿಂದೆ ಬಿಜೆಪಿ ಸೇರಿದ್ದರು.

ನಟಿಯರ ಪ್ರಾತಿನಿಧ್ಯ ಹೆಚ್ಚು

ಕರ್ನಾಟಕ ರಾಜಕಾರಣದಲ್ಲಿ ಸಿನಿಮಾ ನಟಿಯರ ಸಂಖ್ಯೆ ದೊಡ್ಡದೇ ಇದೆ. ಸಕ್ರಿಯ ರಾಜಕಾರಣದಲ್ಲಿ ಇರುವ ನಟರ ಸಂಖ್ಯೆಗಿಂತ ನಟಿಯರ ಸಂಖ್ಯೆಯೇ ಹೆಚ್ಚು ಎಂದರೆ ತಪ್ಪಾಗಲಾರದು. ಸಿನಿಮಾ ನಟಿಯರು ರಾಜಕಾರಣಕ್ಕೆ ಬರುವ ಪ್ರವೃತ್ತಿ ತೀರಾ ಹೊಸದೂ ಅಲ್ಲ, ಹಳೆಯದ್ದೂ ಅಲ್ಲ. ಹಾಗೆ ನೋಡಿದರೆ ಒಂದು ದಶಕದಿಂದ ಈಚೆಗೆ ಸಕ್ರಿಯ ರಾಜಕಾರಣಕ್ಕೆ ಬಂದ ಸಿನಿಮಾ ನಟಿಯರ ಸಂಖ್ಯೆ ಹೆಚ್ಚಾಗಿದೆ. ಹಲವು ನಟಿಯರು ಇಲ್ಲಿ ಯಶಸ್ವಿಯೂ ಆಗಿದ್ದಾರೆ

ಉಮಾಶ್ರೀ



ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಂಡಿದ್ದ ಕನ್ನಡದ ಹೆಸರಾಂತ ನಟಿಯರಲ್ಲಿ ಉಮಾಶ್ರೀ ಮೊದಲ ಸಾಲಿನಲ್ಲಿ ನಿಲ್ಲುತ್ತಾರೆ. ರಾಜಕಾರಣದಲ್ಲಿ ಅವರ ಪಯಣ ಆರಂಭವಾಗಿ ಎರಡು ದಶಕ ದಾಟಿದೆ. 2001ರಲ್ಲಿ ಮೊದಲ ಬಾರಿಗೆ ವಿಧಾನಪರಿಷತ್ ಸದಸ್ಯೆಯಾಗಿ ಆಯ್ಕೆಯಾಗಿದ್ದರು. 2008ರವರೆಗೂ ವಿಧಾನ ಪರಿಷತ್ ಸದಸ್ಯೆಯಾಗಿದ್ದ ಅವರು, ಅದೇ ವರ್ಷದ ವಿಧಾನಸಭಾ ಚುನಾವಣೆಯ ಮೂಲಕ ಚುನಾವಣಾ ರಾಜಕಾರಣಕ್ಕೆ ಧುಮುಕಿದ್ದರು. ತೇರದಾಳ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಮೂಲಕ, ಬಿಜೆಪಿಯ ಸಿದ್ದು ಸವದಿ ವಿರುದ್ಧ ಸ್ಪರ್ಧಿಸಿ ಸೋತಿದ್ದರು. 2013ರಲ್ಲಿ ಅದೇ ಕ್ಷೇತ್ರದಲ್ಲಿ ಬಿಜೆಪಿಯ ಸಿದ್ದು ಸವದಿ ಅವರನ್ನು ಸೋಲಿಸಿ, ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳಕಲ್ಯಾಣ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದರು. 2018ರ ಚುನಾವಣೆಯಲ್ಲಿ ಸೋತರೂ, ರಾಜಕಾರಣದಲ್ಲಿ ಅವರು ಸಕ್ರಿಯವಾಗಿಯೇ ಇದ್ದಾರೆ. ಕ್ಷೇತ್ರದ ಜನರ ಜತೆಗೆ ಸಭೆ, ಸಂವಾದಗಳನ್ನು ನಡೆಸುತ್ತಿದ್ದಾರೆ.

ಜಯಮಾಲಾ



ನಟಿ ಜಯಮಾಲಾ ಅವರು ಅಧಿಕೃತವಾಗಿ ಕಾಂಗ್ರೆಸ್ ಪಕ್ಷವನ್ನು ಸೇರಿದ್ದರು. ಚುನಾವಣಾ ಪ್ರಚಾರಗಳಲ್ಲಿ, ರಾಜಕೀಯ ಚರ್ಚೆ ಮತ್ತು ಸಂವಾದಗಳಲ್ಲಿ ಭಾಗಿಯಾಗಿದ್ದರು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜಯಮಾಲಾ ಅವರು ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದರು. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ಸಚಿವೆಯಾಗಿ ಕಾರ್ಯನಿರ್ವಹಿಸಿದ್ದರು. ಆ ಸರ್ಕಾರದಲ್ಲಿ ಇದ್ದ ಏಕೈಕ ಸಚಿವೆ ಅವರಾಗಿದ್ದರು. ಮೈತ್ರಿ ಸರ್ಕಾರದ ಪತನದ ನಂತರ, ಸಕ್ರಿಯ ರಾಜಕಾರಣದಿಂದ ಅವರು ದೂರ ಉಳಿದಿದ್ದಾರೆ.

ರಮ್ಯಾ



‘ಚಂದನವನದ ರಾಣಿ’ ಎಂದೇ ಖ್ಯಾತರಾದ ರಮ್ಯಾ ಅವರದ್ದೂ ರಾಜಕಾರಣದಲ್ಲಿ ಗಮನಾರ್ಹ ಪಯಣ. 2013ರಲ್ಲಿ ಮಂಡ್ಯ ಲೋಕಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದ ಅವರು, ಗೆದ್ದು ಮೊದಲ ಬಾರಿ ಸಂಸತ್ ಪ್ರವೇಶಿಸಿದ್ದರು. 2014ರ ಲೋಕಸಭಾ ಚುನಾವಣೆಯ ನಂತರ ರಾಜಕಾರಣದಿಂದ ದೂರವೇ ಉಳಿದಿದ್ದ ಅವರು, ನಂತರದ ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಸಾಮಾಜಿಕ ಜಾಲತಾಣಗಳ ವಿಭಾಗದ ಮುಖ್ಯಸ್ಥೆಯಾಗಿ ಕೆಲಸ ಮಾಡಿದ್ದರು. ಆದರೆ, 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ನಂತರ ರಾಜಕಾರಣದಿಂದ ದೂರವೇ ಉಳಿದಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ‘ಭಾರತ್ ಜೋಡೊ ಯಾತ್ರೆ’ಯಲ್ಲಿ ರಮ್ಯಾ ಕಾಣಿಸಿಕೊಂಡಿದ್ದರು.

ಸುಮಲತಾ ಅಂಬರೀಷ್



ನಟಿ ಸುಮಲತಾ ಅವರು ರಾಜಕಾರಣ ಪ್ರವೇಶಿಸಿದ್ದು ಅಂಬರೀಷ್ ಅವರ ಕಾಲಾನಂತರ. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದರು. ಅಂದಿನ ಚುನಾವಣೆಯಲ್ಲಿ ರಾಜ್ಯದಲ್ಲೇ ಹೆಚ್ಚು ಸದ್ದು ಮಾಡಿದ ಕ್ಷೇತ್ರವಿದು. ಕನ್ನಡ ಚಿತ್ರರಂಗದ ಹಲವು ಪ್ರಮುಖರು ಸುಮಲತಾ ಬೆಂಬಲಕ್ಕೆ ನಿಂತಿದ್ದರು. ಕಾಂಗ್ರೆಸ್ ಪರೋಕ್ಷ ಬೆಂಬಲ ನೀಡಿತ್ತು. ಮೊದಲ ಚುನಾವಣೆಯಲ್ಲೇ ಗೆದ್ದು ಸಂಸತ್ತು ಪ್ರವೇಶಿಸಿದ್ದರು. ಈಗ ಬಿಜೆಪಿಯನ್ನು ಬೆಂಬಲಿಸುವುದಾಗಿ ಸುಮಲತಾ ಹೇಳಿದ್ದಾರೆ. ತಮ್ಮ ಮಗನ ಮದುವೆಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿದ್ದಾರೆ.

● ಬಿಜೆಪಿ ವಕ್ತಾರೆಯಾಗಿರುವ ನಟಿ ಮಾಳವಿಕಾ ಅವಿನಾಶ್ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡ ಕನ್ನಡ ಚಿತ್ರರಂಗದ ಪ್ರತಿನಿಧಿಗಳಲ್ಲಿ ಒಬ್ಬರು. ಚುನಾವಣಾ ರಾಜಕಾರಣ ಪ್ರವೇಶಿಸುವ ಇಂಗಿತ ವ್ಯಕ್ತಪಡಿಸಿದ್ದರಾದರೂ ಇನ್ನೂ ಅವಕಾಶ ದೊರೆತಿಲ್ಲ. ನಟಿ ತಾರಾ ಅನೂರಾಧ ಅವರು ಸಕ್ರಿಯ ರಾಜಕಾರಣದಲ್ಲಿದ್ದಾರೆ. ಬಿಜೆಪಿಯಲ್ಲಿದ್ದಾರೆ. ನಟಿ ಶ್ರುತಿ 2008ರಲ್ಲಿ ಬಿಜೆಪಿ ಸೇರಿದ್ದರು. ನಂತರದ ವರ್ಷಗಳಲ್ಲಿ ಕೆಜೆಪಿ ಸೇರಿದ್ದರು. ಪೂಜಾಗಾಂಧಿ ಬಿಎಸ್‌ಆರ್ ಕಾಂಗ್ರೆಸ್ ಮೂಲಕ ಕಣಕ್ಕೆ ಇಳಿದು ಸೋತಿದ್ದರು. ಇನ್ನು ಭಾವನಾ ರಾಮಣ್ಣ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದರು. ಈಚೆಗಷ್ಟೇ ಕಾಂಗ್ರೆಸ್‌ಗೆ ಹೋಗಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇರಳದ ಹಿಂದೂ ದೇವಸ್ಥಾನಗಳಲ್ಲಿ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಸಮುದಾಯದ ಪೂಜಾರಿಗಳನ್ನು ನೇಮಿಸಲಾಗಿದೆ ಎಂದು ಆರೋಪಿಸುವ ಕೆಲವು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಹಿಂದೂ ಧರ್ಮೀಯರ ಪ್ರಾರ್ಥನಾ ಸ್ಥಳಗಳಲ್ಲಿ ಇಸ್ಲಾಂ ಧರ್ಮದ ಆಚರಣೆಗೆ ಅವಕಾಶ ಮಾಡಿಕೊಡಲಾಗಿದೆ ಎಂದು ಜಾಲತಾಣ ಬಳಕೆದಾರರು ಆರೋಪಿಸಿದ್ದಾರೆ. ಇದನ್ನು ಕುರಿತ ವಿಡಿಯೊವೊಂದು ಹರಿದಾಡುತ್ತಿದೆ. ಅನ್ಯ ಧರ್ಮೀಯರನ್ನು ಹಿಂದೂ ದೇವಾಲಯಗಳಿಗೆ ನೇಮಕ ಮಾಡಿದ್ದರಿಂದ ಈ ರೀತಿಯ ಅಸಂಬದ್ಧ ಘಟನೆಗಳು ನಡೆಯುತ್ತಿವೆ ಎಂದು ಪೋಸ್ಟ್‌ಗಳಲ್ಲಿ ಹೇಳಲಾಗಿದೆ. ಆದರೆ ಈ ಆರೋಪಗಳು ಸುಳ್ಳು.



ಕೇರಳ ಸರ್ಕಾರದ ತೆಗೆದುಕೊಂಡ ಕ್ರಮದಂತೆ ಹಿಂದೂ ಧಾರ್ಮಿಕ ಕಾರ್ಯಗಳಲ್ಲಿ ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಸಮುದಾಯದ ಪೂಜಾರಿಗಳು ಭಾಗಿಯಾಗಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ವಿಚಾರ ಎಂದು ‘ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್’ ವೆಬ್‌ಸೈಟ್ ತಿಳಿಸಿದೆ. ಕೇರಳದ ಪ್ರಸಿದ್ಧ ಪ್ರದರ್ಶನ ಕಲೆ ತೆಯ್ಯಂಗೆ ಸಂಬಂಧಿಸಿದ ವಿಡಿಯೊ ಇದಾಗಿದೆ. ಧಾರ್ಮಿಕ ಆಚರಣೆಯೂ ಆಗಿರುವ ತೆಯ್ಯಂ ಧಾರ್ಮಿಕ ನೃತ್ಯಾಚರಣೆಯಲ್ಲಿ ಇಸ್ಲಾಂ ಪ್ರಾರ್ಥನೆಯನ್ನು ಅಳವಡಿಸಿರುವುದು ಧಾರ್ಮಿಕ ಸಾಮರಸ್ಯಕ್ಕೆ ಉದಾಹರಣೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ವ್ಯವಸ್ಥೆಯೇ ಹೀಗೆ

ಪ್ರಿಯ ಹಿತಗಳನ್ವೇಷೆಯಿಂ ಕರ್ಮಪರಿಪೋಷೆ |
ಕ್ರಿಯೆಯ ಪಾರಂಪರ್ಯ ಜನ್ಮಾಂತರೀಯ ||
ನಿಯತವಿಂತು ಜಗತ್ಸಂವರ್ಧನೆಗೆ ನರತೃಷ್ಣೆ |
ಜಯ ಪೂರ್ಣವೆಂದದಕ್ಕೆ? – ಮಂಕುತಿಮ್ಮ ||
858||

ಪದ-ಅರ್ಥ: ಹಿತಗಳನ್ವೇಷೆಯಿಂ = ಹಿತಗಳ + ಅನ್ವೇಷೆಯಿಂ(ಅನ್ವೇಷಣೆಯಿಂದ), ಕರ್ಮಪರಿಪೋಷೆ = ಕರ್ಮದ ಪೋಷಣೆ, ಪಾರಂಪರ್ಯ = ಪರಂಪರೆಯಿಂದ, ಜನ್ಮಾಂತರೀಯ = ಜನ್ಮಾಂತರಗಳಿಂದ ಬಂದದ್ದು, ನಿಯತವಿಂತು = ನಿಯತವು + ಇಂತು, ಜಗತ್ಸಂವರ್ಧನೆಗೆ = ಜಗತ್ + ಪ್ರವರ್ಧನೆಗೆ(ಬೆಳವಣಿಗೆಗೆ), ನರತೃಷ್ಣೆ = ನರಬಯಕೆಗಳು.

ವಾಚ್ಯಾರ್ಥ: ತಮಗೆ ಪ್ರಿಯವಾದ, ಹಿತವಾದವುಗಳ ಅನ್ವೇಷಣೆಯೇ ಕರ್ಮಕ್ಕೆ ಪ್ರೇರಣೆ. ಕರ್ಮಫಲಗಳ ಹೊಂದಾಣಿಕೆ ಜನ್ಮ ಜನ್ಮಾಂತರದ್ದು. ಹೀಗೆ ಜಗತ್ತಿನ ಬೆಳವಣಿಗೆಗೆ ಮನುಷ್ಯನ ಬಯಕೆಗಳೇ ಕಾರಣವಾಗಿರುವಾಗ, ಸಂಪೂರ್ಣ ಜಯ ಎನ್ನುವುದು ಸಾಧ್ಯವೇ?

ವಿವರಣೆ: ಪ್ರಪಂಚದಲ್ಲಿ ಕರ್ಮ ಎನ್ನುವುದು ಜನ್ಮಸಿದ್ಧವಾದದ್ದು. ಯಾವ ಪ್ರಾಣಿಯೂ ಕರ್ಮಮಾಡದೇ ಬದುಕುವುದು ಸಾಧ್ಯವಿಲ್ಲ. ಕರ್ಮ ಮನುಷ್ಯನನ್ನು ನೆರಳಿನಂತೆ ಅಂಟಿಕೊಂಡೇ ಇರುತ್ತದೆ. ಫಲದ ಆಸೆಯಿಲ್ಲದೆ ಕರ್ಮಮಾಡಬೇಕೆಂಬುವರು ಯಾರು? ಅವರು ಮೋಕ್ಷಾರ್ಥಿಗಳು. ಅಂಥವರು ನಮ್ಮಲ್ಲಿ ಎಷ್ಟು ಮಂದಿ ಇದ್ದೇವೆ ಕಾಮ್ಯಾರ್ಥಿಗಳ ಸಂಖ್ಯೆಯೇ ಹೆಚ್ಚು. ನಾವೆಲ್ಲ ನಾನಾ ಅಪೇಕ್ಷೆಗಳನ್ನು ಹೊಂದಿದವರು. ಯಾವ ಕರ್ಮಗಳನ್ನು ಮಾಡುವುದರಿಂದ ನಮಗೆ ಪ್ರಿಯವೊ, ಹಿತವೊ, ಅದನ್ನೇ ನಾವು ಮಾಡುತ್ತೇವೆ. ನಮ್ಮ ಆಸೆಗಳೇ ನಮ್ಮ ಕರ್ಮಗಳಿಗೆ ಪ್ರೇರಕವಾದವುಗಳು. ‘ಮಹಾಭಾರತದಲ್ಲಿ ದೌಪದಿ ಧರ್ಮರಾಜನಿಗೆ ಹೇಳುವ ಮಾತು ಹೀಗಿದೆ. “ಸರ್ವೇ ಹಿ ಸ್ವಂ ಸಮುತ್ಥಾನಮುಪಜೀವಂತಿ ಜಂತವ: ||
ಅಪಿ ಧಾತಾ ವಿಧಾತಾ ಚ ಯಥಾಯಮುದಕೇ ಬಕ: || ಸಕಲ ಪ್ರಾಣಿಗಳೂ ತಾವು ಅಭಿವೃದ್ಧಿ ಹೊಂದುವ ಕರ್ಮಗಳನ್ನು ಆಶ್ರಯಿಸಿ ಜೀವಿಸುತ್ತವೆ. ಸರೋವರದ ಸಮೀಪದಲ್ಲಿ ಬಕಪಕ್ಷಿ ಧ್ಯಾನ ಮಾಡುವಂತೆ ನಿಂತಿದ್ದರೂ ಅದರ ಉದ್ದೇಶ ತನಗೆ ಬೇಕಾದ ಮೀನು ಹಿಡಿಯುವುದೇ. ಹೀಗೆ ಮನುಷ್ಯ ತನ್ನ ಹಿತ ಸಾಧನೆಗೆ ಕರ್ಮಮಾಡುತ್ತಾನೆ, ಕರ್ಮವನ್ನು ವೃದ್ಧಿಸಿಕೊಳ್ಳುತ್ತಾನೆ. ಕರ್ಮಮಾಡುವುದರಿಂದ ಒಂದಷ್ಟು ಪಾಪ, ಪುಣ್ಯಗಳು ಅಂಟಿಕೊಳ್ಳುವುದುಂಟು. ಆ ಪಾಪ ಪುಣ್ಯಗಳು ನಮ್ಮನ್ನು ಜನ್ಮಜನ್ಮಾಂತರಕ್ಕೆ ಬೆನ್ನಟ್ಟಿ ಬರುತ್ತವೆ. ಹೀಗೊಂದು ಚಕ್ರದಲ್ಲಿ ನಾವು ಸಿಕ್ಕಿಹಾಕಿಕೊಳ್ಳುತ್ತೇವೆ. ಹಿತಸಾಧನೆಗೆ ಕರ್ಮ, ಕರ್ಮದ ಬೆಳವಣಿಗೆ. ಕರ್ಮದ ಫಲಗಳಾದ ಪಾಪ-ಪುಣ್ಯಗಳು ನಮ್ಮನ್ನು ಅನೇಕ ಜನ್ಮಗಳ ಕಾಲ ಅಟ್ಟಿಕೊಂಡು ಬರುತ್ತವೆ. ಪ್ರಪಂಚದ ಅಭಿವೃದ್ಧಿಗೆ ಕರ್ಮಬೇಕು. ಈ ಕರ್ಮಗಳು ನಡೆಯಬೇಕಾದರೆ ಮನುಷ್ಯನಲ್ಲಿ ಎಂದೆಂದೂ ಹಿಂಗದ ಆಸೆ, ಅಪೇಕ್ಷೆಗಳು ಇರಬೇಕು. ವ್ಯವಸ್ಥೆಯೇ ಹೀಗಿರಬೇಕಾದರೆ ಸಂಪೂರ್ಣವಾದ ಜಯ ಸಾಧ್ಯವೇ? ಸಂಪೂರ್ಣ ಜಯವೆಂದರೆ ಯಾರಿಗೂ, ಯಾವ ಅಪೇಕ್ಷೆಯೂ ಇಲ್ಲದೆ ಕೇವಲ ಮೋಕ್ಷಾಪೇಕ್ಷಿಯಾಗಿರುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಶುಕ್ರವಾರ ಏಪ್ರಿಲ್ 7, 2023

ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಕೃಷ್ಣ ಪ್ರತಿಪದ್ ಗಂ. 10-21 ನಕ್ಷತ್ರ: ಚಿತ್ತಾ ಗಂ. 13-33 ಯೋಗ: ಹರ್ಷಣ ಗಂ. 25-25, ಕರಣ: ಕೌಲವ ಗಂ. 10-21, ಮೀನ ಮಾಸದ 23 ನೇ ದಿನ, ಮಳೆನಕ್ಷತ್ರ: ರೇವತಿ 2. ರಾಹುಕಾಲ : ಬೆಳಿಗ್ಗೆ 10-30 - 12-00 ಸೂರ್ಯೋದಯ : 06-26 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 15 ರಂಜಾನ್
ದಿನ ವಿಶೇಷ : ಗುಡ್ ಫ್ರೈಡೇ (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 4, 10

ಮೇಷ: ಕಾರ್ಖಾನೆ ಕೆಲಸಗಾರರಿಗೆ ಹೆಚ್ಚಿನ ಕೆಲಸದ ಕಾರಣ ಸಾಂಸಾರಿಕ ಜವಾಬ್ದಾರಿ ನೋಡಲು ಕಷ್ಟವಾಗುತ್ತದೆ. ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿರಿ.

ವೃಷಭ: ರಾಜಕಾರಣಿಗಳಿಗೆ ಶುಭ ಸುದ್ದಿ ದೊರೆಯಲಿದೆ. ಆಗು- ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ. ಪ್ರತಿಭೆ ಮತ್ತು ಕೌಶಲಗಳು ಬೆಳಕಿಗೆ ಬಂದು ಇತರರಿಗೆ ವಿಶೇಷ ವ್ಯಕ್ತಿ ಎನಿಸುವಿರಿ.

ಮಿಥುನ: ಒಡನಾಡಿಗಳ ಪ್ರೀತಿ ವಿಶ್ವಾಸ ಸಹಕಾರದಿಂದ ಕಾರ್ಯ ಸುಲಭದಲ್ಲಿ ಸಾಧಿಸುವಿರಿ. ಮನೆ ಕೊಳ್ಳುವ ವಿಷಯದ ಬಗ್ಗೆ ಮನೆಯವರಿಂದ ಹೆಚ್ಚಿನ ಮಾಹಿತಿ ಕೇಳಬೇಕಾಗುತ್ತದೆ. ಶಿಕ್ಷಕ ವೃತ್ತಿ ಆರಂಭಿಸುವ ಬಗ್ಗೆ ಆಲೋಚಿಸಿ.

ಕರ್ಕಾಟಕ: ಯಾವುದೇ ಪರಿಸ್ಥಿತಿಯಲ್ಲಿ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವ ತೀರ್ಮಾನವನ್ನು ಮಾಡದಿರಿ. ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದಲ್ಲಿ ಪರಿಹಾರವಾಗುವುದು.

ಸಿಂಹ: ಆರೋಗ್ಯದ ವಿಷಯದಲ್ಲಿ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ರಕ್ಷಿಸಲಿದೆ.

ಕನ್ಯಾ: ಇಂದು ನಿಮಗೆ ಕಠಿಣ ದಿನವಾಗಿರುತ್ತದೆ. ಹವಾಮಾನದಲ್ಲಿ ಆಗುವ ಬದಲಾವಣೆ ಆರೋಗ್ಯದ ಮೇಲೆ ಸಂಪೂರ್ಣ ಪ್ರಭಾವ ಬೀರಲಿದೆ. ದೇಹದಲ್ಲಿನ ಅಧಿಕ ಉಷ್ಣಾಂಶದಿಂದ ದಂತವ್ಯಾಧಿ ಸಂಭವಿಸಬಹುದು.

ತುಲಾ: ಸ್ವತ್ತು ಕೊಳ್ಳುವ ವಿಚಾರದಲ್ಲಿ ಕಾನೂನಿನ ಸಲಹೆ ಅವಶ್ಯವಾಗಿ ಪಡೆಯಿರಿ. ತೈಲ ವ್ಯಾಪಾರಗಳಿಂದ ಲಾಭ. ಆಪ್ತರ ಕಷ್ಟಗಳ ಕಡೆಗೆ ನೆರವಾಗುವ ತೀರ್ಮಾನಕ್ಕೆ ಬನ್ನಿ. ಪುಣ್ಯ ಸಂಪಾದನೆಯಾಗುವುದು.

ವೃಶ್ಚಿಕ: ಸರಿ ತಪ್ಪು ತೀರ್ಮಾನ ಹೇಳುವ ಜವಾಬ್ದಾರಿ ತೆಗೆದುಕೊಳ್ಳಬೇಡಿ. ಕೆಲಸ ಕಾರ್ಯಗಳು ವಿಳಂಬಗತಿಯಲ್ಲಿ ಸಾಗಿದರೂ ದಿನಾಂತ್ಯದಲ್ಲಿ ಪೂರ್ಣಗೊಳ್ಳಲಿವೆ. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಅಧಿಕ ಲಾಭ.

ಧನು: ಆರ್ಥಿಕ ಸಮಸ್ಯೆ ಎದುರಾಗಿ ಸಹೋದರರ ಅಥವಾ ಸಂಬಂಧಿಕರ ಸಹಾಯ ಕೇಳುವುದು ಅನಿವಾರ್ಯ. ವೃತ್ತಿ ಬದಲಾವಣೆಯ ಸಮಸ್ಯೆ ನಿವಾರಣೆ. ಭೂಮಿ ಖರೀದಿ ವಿಚಾರ ಮುಂದಕ್ಕೆ ಹಾಕುವ ಪರಿಸ್ಥಿತಿ ಕಂಡುಬಂದೀತು.

ಮಕರ: ಹೊರಗುತ್ತಿಗೆ ವ್ಯವಹಾರಗಳಲ್ಲಿ ಶ್ರಮ, ಒತ್ತಡ ಹೆಚ್ಚಲಿದೆ ಹಾಗೂ ಅವುಗಳಿಂದ ವರಮಾನ ಹೆಚ್ಚಲಿದೆ. ತಂದೆಯವರ ವ್ಯವಹಾರದ ವಿಷಯ ತಿಳಿದುಕೊಂಡು ಮುಂದುವರಿಯುವಿರಿ. ಶುಭ ಸುದ್ದಿ ಕೇಳಿ ಬರುವುದು.

ಕುಂಭ: ವದಂತಿಗಳಿಗೆ ಕಿವಿಗೊಡದೆ ನಿಮ್ಮ ಕೆಲಸವನ್ನು ಮುಂದು ವರೆಸಿ ಕೊಂಡು ಹೋಗಿರಿ. ಕೆಲಸಗಾರರ ಸಮಸ್ಯೆಗಳಿಗೆ ಸ್ಪಂದಿಸುವುದು ಅನಿವಾರ್ಯ. ಉಪನ್ಯಾಸಕಲೆಯನ್ನು ಹೊಂದಿದವರಿಗೆ ಉತ್ತಮ ವೇದಿಕೆ ಪ್ರಾಪ್ತಿ.

ಮೀನ: ತಪ್ಪುಗಳನ್ನು ತಿದ್ದಿಹೇಳುವಲ್ಲಿ ಹಿರಿಯ ಅಧಿಕಾರಿಗಳು ಈ ದಿನ ನಿಮ್ಮ ನೆರವಿಗೆ ನಿಲ್ಲುವರು. ವಾಸಸ್ಥಾನದ ಬದಲಾವಣೆ ಬಯಸಿದ ನಿಮಗೆ ಹರ್ಷದ ಸಮಯವಾಗಿದೆ. ಸಾಂಸಾರಿಕವಾಗಿ ಸುಖ-ದುಃಖಗಳ ಸಮ್ಮಿಶ್ರ ಫಲವಿದೆ.

ಪದಬಂಧ 5281 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮರದಲ್ಲಿರುವ ದುಂಬಿ ಕಾಣುತ್ತಿದೆಯೇ? (4)
3.ಈತ ನಿಪು (4)
5.ಮನಸ್ಸಿನ ಅಸ್ವಾಸ್ಥ್ಯವಿದು (3)
6.ವಿಶೇಷ ಕಾರ್ಯಕ್ಕಾಗಿ ನೇಮಿಸಲಾದ ಸಮಿತಿ (3)
8.ಬಾನುಲಿಯ ಹತ್ತಿರವಿರುವ ಗಬ್ಬಿಲ (3)
9.ನಯವಾಗಿ ಗೋಚರಿಸಿದ ಅಕ್ಷಿ (3)
10.ಇಕ್ಕಟ್ಟಿನಲ್ಲಿ ಸಿಲುಕಿರುವ ಸೂರ್ಯ ವಂಶದ ಒಬ್ಬ ರಾಜ (3)
12.ನಲ್ವತ್ತಾದ ಹಿಂದಿಯವ ಧರಿಸಿದ ಕನ್ನಡಕ (3)
14.ಕರದಲ್ಲಿರುವ ಮೃತ ದೇಹ (4)
15.ಮರದೊಳಗೆ ಚಲುವು ಕಂಡೀತೇ (4)

ಮೇಲಿಂದ ಕೆಳಕ್ಕೆ
1. ಕಟ್ಟುಪಾಡು ಇಲ್ಲಿ ಉಲ್ಟಾ ಕಾಣುತ್ತಿದೆಯಲ್ಲಾ! (3)
2.ಮನ್ಮಥನ ಪತ್ನಿ (2)
3.ಟಪಾಲು ಬಂದಾಗ ಆಗಿರುವ ಹಿಸ್ಸೆ (2)
4.ನೂಲು ತೆಗೆಯುವ ಸಾಧನ (3)
7.ಆನೆಯ ನಡಿಗೆ (5)
8.ಓಲಗದ ವಾದ್ಯಗಳನ್ನು ನುಡಿಸುವುದು (5)
9.ಈತ ನೃತ್ಯ ಮಾಡುವವನು (3)
11.ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಅತೀ ಶ್ರೀಮಂತ (3)
12.ಚಾದರನ್ನು ಹಿಡಿದಿರುವ ಸೇವಕ (2)
13.ಹೂವು ಇಲ್ಲಿದೆ (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	■		■	■	■		■	■
■	■		■	■	■		■	■
9			■	■	■	10		11
	■	■	12		13	■	■	
14				■	15			

5280ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವವಿದ್ಯಾಲಯ
4.ತಿದ್ದುಪಡಿ 5.ರಸನ
7.ಏಕೈಕ 10.ಪುಕಾರು
12.ಕಮರಿ 13.ಬಾಲರವಿ
15.ಪ್ರಮಾಣವಚನ

ಮೇಲಿಂದ ಕೆಳಕ್ಕೆ:
1.ವಿತರಕ 2.ಯತಿ
3.ಬಡಿವಾರ 6.ನರುಗಂಪು
7.ಏಮಾರು 8.ಕರಣಿಕ
9.ಸುಮಬಾಣ
11.ಪರಿಜ್ಞಾನ 14.ವಿಪ್ರ

ಸುಡೊಕು 5667

	7	9			3		8	
	4			8			5	9
8			2	6		7		4
	8			2		1		5
		2	8		5		6	
5				3			2	
9		7	5					6
						9	4	
4	3		6		1		7	2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5666 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ರೈಲಿಗೆ ಬೆಂಕಿ ಹಚ್ಚಿದ್ದ ಪ್ರಕರಣ: ಆರೋಪಿ ಕೇರಳಕ್ಕೆ


ಶಾರುಕ್ ಸೈಫಿ

ಕೋಯಿಕ್ಕೋಡ್ (ಪಿಟಿಐ): ಚಲಿಸುತ್ತಿದ್ದ ರೈಲಿನ ಬೋಗಿಯೊಳಗೆ ಬೆಂಕಿ ಹಚ್ಚಿ ಮೂವರು ಪ್ರಯಾಣಿಕರ ಸಾವಿಗೆ ಕಾರಣನಾಗಿದ್ದ ಆರೋಪಿ ಶಾರುಕ್ ಸೈಫಿಯನ್ನು ರಸ್ತೆ ಮಾರ್ಗದ ಮೂಲಕ ಗುರುವಾರ ಕೇರಳಕ್ಕೆ ಕರೆತರಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಶಾರುಕ್‌ನನ್ನು ಕೋಯಿಕ್ಕೋಡ್ ವೈದ್ಯಕೀಯ ಕಾಲೇಜಿನಲ್ಲಿ ಆರೋಗ್ಯ ತಪಾಸಣೆಗೆ ಒಳಪಡಿಸಲಾಗುತ್ತಿದೆ ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅನಿಲ್ ಕಾಂತ್ ಅವರು ತಿಳಿಸಿದ್ದಾರೆ.

‘ನಾವು ಇದುವರೆಗೆ ಆರೋಪಿಯ ವಿಚಾರಣೆ ಆರಂಭಿಸಿಲ್ಲ. ವೈದ್ಯರ ತಂಡ ಆತನ ಆರೋಗ್ಯ ತಪಾಸಣೆ ಪೂರ್ಣಗೊಳಿಸಿದ ಬಳಿಕ ಆರಂಭಿಸುತ್ತೇವೆ’ ಎಂದೂ ಅವರು ವಿವರಿಸಿದ್ದಾರೆ.

‘ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲೂ ಶಾರುಕ್ ಸೈಫಿ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಕೃತ್ಯದ ಹಿಂದೆ ಬೇರೆ ವ್ಯಕ್ತಿಗಳ ಕೈವಾಡ ಇದೆಯೇ ಎಂಬುದು ವಿಚಾರಣೆಯ ಬಳಿಕ ತಿಳಿದು ಬರಲಿದೆ’ ಎಂದೂ ಹೇಳಿದ್ದಾರೆ.

‘ಕೇರಳ ಪೊಲೀಸರ ವಿಶೇಷ ತನಿಖಾ ತಂಡ, ಕೇಂದ್ರ ಗುಪ್ತಚರ ಸಂಸ್ಥೆ ಮತ್ತು ಮಹಾರಾಷ್ಟ್ರ ಪೊಲೀಸರ ಜಂಟಿ ಕಾರ್ಯಾಚರಣೆಯಿಂದಾಗಿ ಆರೋಪಿಯನ್ನು ಶೀಘ್ರ ಬಂಧಿಸಲು ಸಾಧ್ಯವಾಯಿತು’ ಎಂದೂ ಅನಿಲ್ ಕಾಂತ್ ಅವರು ಮಾಹಿತಿ ನೀಡಿದ್ದಾರೆ.

ಕೋಯಿಕ್ಕೋಡ್‌ನ ವೈದ್ಯಕೀಯ ಕಾಲೇಜಿಗೆ ಶಾರುಕ್‌ನನ್ನು ಬಿಗಿ ಭದ್ರತೆಯಲ್ಲಿ ಕರೆದೊಯ್ಯಲಾಗಿತ್ತು. ಈತನನ್ನು ಮಹಾರಾಷ್ಟ್ರದ ರತ್ನಗಿರಿಯಲ್ಲಿ ಬುಧವಾರ ಬಂಧಿಸಲಾಗಿತ್ತು.

ನಡೆಯದ ಬಜೆಟ್ ಅಧಿವೇಶನ: ಪ್ರತಿಪಕ್ಷಗಳಿಂದ ಒಗ್ಗಟ್ಟು ಪ್ರದರ್ಶನ

‘ದೇಶ ಸರ್ವಾಧಿಕಾರದತ್ತ ಸಾಗಲಿದೆ’


ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ವಿರೋಧ ಪಕ್ಷಗಳ ಸಂಸದರು ಸಂಸತ್ ಭವನದಿಂದ ವಿಜಯ ಚೌಕದವರೆಗೂ ಗುರುವಾರ ‘ತಿರಂಗಾ ನಡಿಗೆ’ ಕೈಗೊಂಡರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘ಬಜೆಟ್ ಅಧಿವೇಶನದ ಎರಡನೇ ಅವಧಿಯೂ ಚರ್ಚೆ ಇಲ್ಲದೆ ಮುಕ್ತಾಯಗೊಂಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ಧೋರಣೆಯೇ ಕಾರಣ. ಇದು ಹೀಗೆ ಮುಂದುವರಿದರೆ ಪ್ರಜಾಪ್ರಭುತ್ವ ವಿನಾಶಗೊಂಡು ದೇಶವು ನಿಧಾನವಾಗಿ ಸರ್ವಾಧಿಕಾರಿ ಆಡಳಿತದತ್ತ ಹೊರಳಲಿದೆ’ ಎಂದು ಪ್ರತಿಪಕ್ಷಗಳು ಹರಿಹಾಯ್ದಿವೆ.

ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ), ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಹಾಗೂ ಸಮಾಜವಾದಿ ಪಕ್ಷ (ಎಸ್‌ಪಿ) ಸೇರಿದಂತೆ ಇತರೆ ಪಕ್ಷಗಳು ಮತ್ತೊಮ್ಮೆ ಒಗ್ಗಟ್ಟು ಪ್ರದರ್ಶಿಸಿದ್ದು, ಕೇಂದ್ರದ ವಿರುದ್ಧ ಟೀಕಾ ಪ್ರಹಾರ ಮುಂದುವರಿಸಿವೆ.

‘ಬಿಜೆಪಿ ಆಡಳಿತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಾಯ ಎದುರಾಗಿದೆ’ ಎಂದು ಆರೋಪಿಸಿರುವ ವಿವಿಧ ಪಕ್ಷಗಳ ಸಂಸದರು, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಸಂಸತ್ ಭವನದಿಂದ ವಿಜಯ ಚೌಕದವರೆಗೂ ಗುರುವಾರ ‘ತಿರಂಗಾ ನಡಿಗೆ’ ಕೈಗೊಂಡರು.

ಮೆರವಣಿಗೂ ಮುನ್ನ ಎಲ್ಲರೂ ಸಂಸತ್ ಭವನದ ದ್ವಾರ ಸಂಖ್ಯೆ–1ರ ಬಳಿ ಸೇರಿದ್ದರು. ಅಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕೂಡ ರಾಷ್ಟ್ರ ಧ್ವಜ ಹಿಡಿದಿದ್ದರು.

ಸಂಸತ್ತಿನ ಬಜೆಟ್ ಅಧಿವೇಶನದ ಆರಂಭದಿಂದಲೂ ಒಗ್ಗಟ್ಟು ಪ್ರದರ್ಶಿಸಿದ್ದ ವಿರೋಧ ಪಕ್ಷಗಳು, ಪ್ರತಿಭಟನೆಗಳ ಮೂಲಕ ಆಡಳಿತಾರೂಢ ಪಕ್ಷಕ್ಕೆ ಬಿಸಿ ಮುಟ್ಟಿಸಿದ್ದವು. ಲೋಕಸಭೆ ಸ್ಪೀಕರ್ ಆಯೋಜಿಸಿದ್ದ ಔಪಚಾರಿಕ ಚಹಾ ಕೂಟವನ್ನೂ ಬಹಿಷ್ಕರಿಸಿದವು.

ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒಪ್ಪಿಸಲೇಬೇಕೆಂದು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಬಿಗಿಪಟ್ಟು ಹಿಡಿದಿದ್ದವು. ಹೀಗಾಗಿ ಉಭಯ ಸದನಗಳಲ್ಲಿ ಕೋಲಾಹಲವೇ ಸೃಷ್ಟಿಯಾಗಿತ್ತು.

ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಂಡಿದ್ದ ಟಿಎಂಸಿ, ಎಸ್‌ಪಿ, ಬಿಆರ್‌ಎಸ್ ಹಾಗೂ ಆಮ್ ಆದ್ಮಿ ಪಕ್ಷ ಗುರುವಾರದ ಮೆರವಣಿಗೆ ವೇಳೆ ಕಾಂಗ್ರೆಸ್ ಜೊತೆ ಕೈಜೋಡಿಸಿದವು. ಇದರಿಂದ ಪ್ರತಿಪಕ್ಷಗಳ ಒಗ್ಗಟ್ಟಿಗೆ ಮತ್ತಷ್ಟು ಬಲ ಬಂದಂತಾಗಿದೆ.

ಮೆರವಣಿಗೆ ನಂತರ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ಅವರು, ‘ಕೇಂದ್ರ ಸರ್ಕಾರವು ಕೇವಲ 12 ನಿಮಿಷಗಳಲ್ಲಿ ₹50 ಲಕ್ಷ ಕೋಟಿ ಮೊತ್ತದ ಬಜೆಟ್ ಅಂಗೀಕರಿಸಿದೆ. ಹೀಗಿದ್ದರೂ ಪ್ರತಿಪಕ್ಷಗಳಿಗೆ ಇಚ್ಛಾಶಕ್ತಿ ಇಲ್ಲ. ಪದೇ ಪದೇ ಕಲಾಪಕ್ಕೆ ಅಡ್ಡಿಪಡಿಸಿದ್ದಾಗಿ ಆರೋಪಿಸುತ್ತಲೇ ಇದೆ. ಸದನದಲ್ಲಿ ಗದ್ದಲ ಸೃಷ್ಟಿಸಿದ್ದು ಆಡಳಿತ ಪಕ್ಷದವರು. ಮುಂಚಿತವಾಗಿಯೇ ನೋಟಿಸ್ ನೀಡಿದ್ದರೂ ನಮಗೆ ಮಾತನಾಡುವುದಕ್ಕೆ ಅವರು ಅವಕಾಶ ಕೊಡಲಿಲ್ಲ. ಆಡಳಿತಾರೂಢ ಸರ್ಕಾರವೊಂದು ಈ ಬಗೆಯ ಧೋರಣೆ ಅನುಸರಿಸಿದ್ದನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘19 ರಾಜಕೀಯ ಪಕ್ಷಗಳು ಸಂಸತ್ತಿನಲ್ಲಿ ಅದಾನಿ ಸಮೂಹದ ವಿಚಾರವನ್ನು ಒಕ್ಕೊರಲಿನಿಂದ ಪ್ರಸ್ತಾಪಿಸಿದ್ದವು. ಎರಡೂವರೆ ವರ್ಷಗಳಲ್ಲೇ ಅದಾನಿ ಸಂಪತ್ತು ₹12 ಲಕ್ಷ ಕೋಟಿಗೆ ಏರಿದ್ದು ಹೇಗೆ ಎಂದೂ ಪ್ರಶ್ನಿಸಿದ್ದವು. ಆದರೆ ಸರ್ಕಾರ ಈವರೆಗೂ ನಮ್ಮ ಪ್ರಶ್ನೆಗೆ ಉತ್ತರ ನೀಡಿಲ್ಲ. ಈ ವಿಚಾರದಲ್ಲಿ ಕೇಂದ್ರವು ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದೆ. ಹೀಗಾಗಿಯೇ ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜೆಪಿಸಿ ತನಿಖೆಗೆ ಒಪ್ಪಿಸಲು ಹಿಂದೇಟು ಹಾಕುತ್ತಿದೆ’ ಎಂದು ದೂರಿದ್ದಾರೆ.

ಲೋಕಸಭೆಯಲ್ಲಿ 45 ಗಂಟೆಯಷ್ಟೇ ಕಲಾಪ

‘ಈ ಬಾರಿಯ ಬಜೆಟ್ ಅಧಿವೇಶನದ ವೇಳೆ ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಕ್ರಮವಾಗಿ ಕೇವಲ 45 ಗಂಟೆ ಮತ್ತು 31 ಗಂಟೆ ಕಲಾಪ ನಡೆದಿದೆ’ ಎಂದು ‘ಥಿಂಕ್ ಟ್ಯಾಂಕ್ ಆರ್ಗನೈಸೇಷನ್’ ಗುರುವಾರ ಹೇಳಿದೆ.

‘ಬಜೆಟ್ ಅಧಿವೇಶನದ ವೇಳೆ ಲೋಕಸಭೆಯು 133.6 ಗಂಟೆ ಹಾಗೂ ರಾಜ್ಯಸಭೆ 130 ಗಂಟೆ ಕಾರ್ಯನಿರ್ವಹಿಸಬೇಕಿತ್ತು. ಆದರೆ ಪದೇ ಪದೇ ಅಡ್ಡಿ ಉಂಟಾಗಿದ್ದರಿಂದ ತೀರಾ ಕಡಿಮೆ ಅವಧಿಯ ಕಲಾಪ ನಡೆದಿದೆ’ ಎಂದು ತಿಳಿಸಲಾಗಿದೆ.

ವಿಪಕ್ಷಗಳ ವಿರುದ್ಧ ರಿಜಿಜು ವಾಗ್ದಾಳಿ

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಕಾಂಗ್ರೆಸ್ ಹಾಗೂ ಇತರೆ ವಿರೋಧ ಪಕ್ಷಗಳ ವಿರುದ್ಧ ಗುರುವಾರ ಕಿಡಿಕಾರಿದ್ದಾರೆ.

‘ಒಬ್ಬ ವ್ಯಕ್ತಿಯ ಸಲುವಾಗಿ (ರಾಹುಲ್ ಗಾಂಧಿ) ಕಾಂಗ್ರೆಸ್ ಮತ್ತು ಅದರ ‘ಗ್ಯಾಂಗ್’ ಲೋಕಸಭೆ ಬಜೆಟ್ ಅಧಿವೇಶನಕ್ಕೆ ಅಡ್ಡಿಪಡಿಸಿವೆ. ವಿರೋಧ ಪಕ್ಷಗಳ ಸಂಸದರು ಅಂತಿಮ ದಿನವೂ ಕಪ್ಪು ಬಟ್ಟೆ ಧರಿಸಿ ಕಲಾಪದಲ್ಲಿ ಪಾಲ್ಗೊಂಡಿದ್ದಾರೆ. ಆ ಮೂಲಕ ಸಂಸತ್ತಿಗೆ ಮತ್ತೊಮ್ಮೆ ಅವಮಾನ ಮಾಡಿದ್ದಾರೆ’ ಎಂದಿದ್ದಾರೆ.

‘ಸಂಸತ್ತಿನ ಘನತೆ ಕಾಪಾಡುವುದು ನಮ್ಮ ಉದ್ದೇಶವಾಗಿತ್ತು. ಒಬ್ಬ ವ್ಯಕ್ತಿಗಾಗಿ ಕಾಂಗ್ರೆಸ್ ಹಾಗೂ ಇತರೆ ವಿರೋಧ ಪಕ್ಷಗಳು ಏನೆಲ್ಲಾ ಮಾಡುತ್ತಿವೆ ಎಂಬುದನ್ನು ಇಡಿ ದೇಶವೇ ನೋಡುತ್ತಿದೆ. ನ್ಯಾಯಾಂಗದ ಮೇಲೆ ಒತ್ತಡ ಹೇರುವ ಸಲುವಾಗಿ ಕಾಂಗ್ರೆಸ್ ನಾಯಕರು ಹಾಗೂ ಆ ಪಕ್ಷದ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಗುಜರಾತ್‌ನ ಸೂರತ್‌ಗೆ ತೆರಳಿದ್ದನ್ನೂ ನಾವು ಗಮನಿಸಿದ್ದೇವೆ. ಅವರ ಈ ನಡೆ ಖಂಡನೀಯವಾದುದು’ ಎಂದಿದ್ದಾರೆ.

ಬಿಜೆಪಿಗೆ ಭೀತಿ ಶುರುವಾಗಿದೆ. ಭಾರತ್ ಜೋಡೊ ಯಾತ್ರೆ ಬಳಿಕ ರಾಹುಲ್ ಗಾಂಧಿ ಅವರು ಬಿಜೆಪಿಗೆ ದುಃಸ್ವಪ್ನವಾಗಿ ಕಾಡಲಾರಂಭಿಸಿದ್ದಾರೆ
ಟಿ.ಆರ್.ಬಾಲು, ಡಿಎಂಕೆ ಸಂಸದ

ದೇಶವನ್ನು ರಕ್ಷಿಸುವ ದಿಸೆಯಲ್ಲಿ ನಾವು ಕೆಲಸ ಮಾಡಲಿದ್ದೇವೆ. ಕೇಂದ್ರವು ಪ್ರಜಾಪ್ರಭುತ್ವದ ಕುರಿತು ಮಾತನಾಡುತ್ತದೆ. ಆದರೆ ನುಡಿದಂತೆ ನಡೆಯುವುದಿಲ್ಲ
ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ


ನಾವು ಕೇಂದ್ರವನ್ನು ಟೀಕಿಸಬಹುದು. ಆದರೆ ಗೌತಮ್ ಅದಾನಿಯನ್ನಲ್ಲ. ರಾಹುಲ್ ಗಾಂಧಿ ಅನರ್ಹತೆಯು ಇದನ್ನು ಸಾರಿ ಹೇಳುತ್ತದೆ
ಸಂಜಯ್ ಸಿಂಗ್, ಎಎಪಿ ಸಂಸದ

ವಿರೋಧ ಪಕ್ಷಗಳ ಒಗ್ಗಟ್ಟು ಮುರಿಯಲು ಕೆಲವರು ಮುಂದಾಗಿದ್ದರು. ಅವರ ಪ್ರಯತ್ನಗಳೆಲ್ಲಾ ವಿಫಲಗೊಂಡಿವೆ. ನಾವು ಇನ್ನಷ್ಟು ಹತ್ತಿರವಾಗಿದ್ದೇವೆ.
ಕೆ.ಕೇಶವ ರಾವ್, ಬಿಆರ್‌ಎಸ್ ಸಂಸದ

ಸುದ್ದಿ 2 ನಿಮಿಷ

ನವಲಖಾ ಜಾಮೀನು ಅರ್ಜಿ ತಿರಸ್ಕೃತ

ಮುಂಬೈ (ಪಿಟಿಐ): ಎಲ್ಗಾರ್ ಪರಿಷತ್–ಮಾವೋವಾದಿ ಸಂಪರ್ಕ ಪ್ರಕರಣದಲ್ಲಿ ಬಂಧನದಲ್ಲಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರ ಜಾಮೀನು ಅರ್ಜಿಯನ್ನು ಇಲ್ಲಿನ ಎನ್‌ಐಎ ವಿಶೇಷ ನ್ಯಾಯಾಲಯ ಗುರುವಾರ ತಿರಸ್ಕರಿಸಿದೆ.



ನವಲಖಾ ಅವರ ಜಾಮೀನು ಅರ್ಜಿ ಸಂಬಂಧ ಕಳೆದ ತಿಂಗಳು ವಿಶೇಷ ನ್ಯಾಯಾಧೀಶರು ನೀಡಿದ್ದ ಆದೇಶವನ್ನು ಬಾಂಬೆ ಹೈಕೋರ್ಟ್ ರದ್ದು ಮಾಡಿತ್ತು. ಜೊತೆಗೆ ನವಲಖಾ ಅವರ ಅರ್ಜಿಯನ್ನು ಮತ್ತೊಮ್ಮೆ ಆಲಿಸುವಂತೆ ವಿಶೇಷ ನ್ಯಾಯಾಲಯಕ್ಕೆ ಸೂಚಿಸಿತ್ತು. ‘ವಿಶೇಷ ನ್ಯಾಯಾಲಯ ನೀಡಿದ ಆದೇಶದಲ್ಲಿ ಸಾಕ್ಷ್ಯಗಳ ಕುರಿತ ವಿಶ್ಲೇಷಣೆ ಸಮರ್ಪಕವಾಗಿಲ್ಲ’ ಎಂದೂ ಹೈಕೋರ್ಟ್ ಹೇಳಿತ್ತು.

ಇದರಂತೆ ವಿಶೇಷ ನ್ಯಾಯಾಧೀಶ ರಾಜೇಶ್ ಕಠಾರಿಯಾ ಅವರು ಅರ್ಜಿಯ ವಿಚಾರಣೆ ನಡೆಸಿ ಜಾಮೀನು ಅರ್ಜಿಯನ್ನು ತಿರಸ್ಕರಿಸಿದರು.

ಹನುಮಾನ್ ಜಯಂತಿ ಶಾಂತಿಯುತ

ಕೋಲ್ಕತ್ತ (ಪಿಟಿಐ): ಭದ್ರತಾ ಪಡೆಗಳ ಕಾವಲಿನ ನಡುವೆ ಪಶ್ಚಿಮ ಬಂಗಾಳದಲ್ಲಿ ಗುರುವಾರ ಹನುಮಾನ್ ಜಯಂತಿ ಆಚರಣೆ ಶಾಂತಿಯುತವಾಗಿ ನಡೆಯಿತು.

ರಾಮನವಮಿ ಅಂಗವಾಗಿ ಇತ್ತೀಚೆಗೆ ನಡೆದ ಮೆರವಣಿಗೆ ವೇಳೆ ಹಿಂಸಾಚಾರ ನಡೆದಿತ್ತು. ಈ ಹಿನ್ನೆಲೆಯಲ್ಲಿ, ಹನುಮಾನ್ ಜಯಂತಿ ಸಂದರ್ಭದಲ್ಲಿ ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿತ್ತು.

ಪರಿಶೀಲನೆ: ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರು ಕೋಲ್ಕತ್ತದ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಹನುಮಾನ್ ಜಯಂತಿ ಆಚರಣೆಯ ಅಂಗವಾಗಿ ಕೈಗೊಂಡಿರುವ ಭದ್ರತಾ ಕ್ರಮಗಳನ್ನು ಪರಿಶೀಲಿಸಿದರು.

ಬಾಲ ಹನುಮಾನ್ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದ ಬಳಿಕ ಅವರು, ಭದ್ರತಾ ಸಿಬ್ಬಂದಿ, ವ್ಯಾಪಾರಸ್ಥರು ಹಾಗೂ ಸ್ಥಳೀಯರೊಂದಿಗೆ ಮಾತುಕತೆ ನಡೆಸಿದರು ಎಂದು ಮೂಲಗಳು ಹೇಳಿವೆ. ‘ನೋಡಿ ನನ್ನನ್ನು ರಾಜ್ಯಪಾಲರನ್ನಾಗಿ ಮಾಡಿದ್ದು ಜನ. ಹಾಗಾಗಿ ನಾನು ಅವರೊಂದಿಗೆ ಇರಬೇಕು’ ಎಂದು ಆನಂದ ಬೋಸ್ ಅವರು ಎಕ್ಬಾಲ್ಪುರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಜೆಡಿಎಸ್ ಮತ್ತು ಎಐಎಂಐಎಂ ಪಕ್ಷಗಳ ನಡುವಣ ಮೈತ್ರಿಯು ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ತೊಡಕಾಗಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

10ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಹೆಚ್. ಹೆಚ್. ಮುನಿಸ್ವಾಮಿ ಗೌಡ
DGM (Rtd)
(Karnataka State Agro Corn Products Ltd, Hebbal, Bangalore)
ಜನನ: 3-10-1937 ಮರಣ: 7-04-2013
ಇಂತಿ ದುಃಖತಪ್ತರು – ಕುಟುಂಬದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಿಜೆಪಿ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಹೇಳಿಕೆ

‘ಭ್ರಷ್ಟಾಚಾರದಿಂದ ದೇಶ ಮುಕ್ತಗೊಳಿಸಲು ಬದ್ಧ’

ನವದೆಹಲಿ (ಪಿಟಿಐ): ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಹಾಗೂ ಕಾನೂನು–ಸುವ್ಯವಸ್ಥೆಯಂತಹ ವಿಷಯಗಳು ದೇಶಕ್ಕೆ ಸವಾಲು ಒಡ್ಡಿವೆ. ದೇಶವನ್ನು ಇಂಥ ಸವಾಲುಗಳಿಂದ ಮುಕ್ತಗೊಳಿಸುವ ಸಂಬಂಧ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಬಿಜೆಪಿ ಬದ್ಧವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಬಿಜೆಪಿಯ 44ನೇ ಸಂಸ್ಥಾಪನಾ ದಿನ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

‘2014ರಲ್ಲಿ ಪಕ್ಷವು ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂತು. ಸಾಮ್ರಾಜ್ಯಶಾಹಿ ಮನಸ್ಥಿತಿಯ ಕೆಲವರಿಗೆ ಇದನ್ನು ಸಹಿಸಲು ಆಗುತ್ತಿಲ್ಲ. ಹೀಗಾಗಿ ಅವರು ಈ ದೇಶದ ಬಡವರು ಹಾಗೂ ಹಿಂದುಳಿದವರನ್ನು ಅವಮಾನಿಸುತ್ತಲೇ ಇದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಹಾಗೂ ಇತರ ರಾಜಕೀಯ ಪಕ್ಷಗಳ ವಿರುದ್ಧ ಟೀಕಾಪ್ರಹಾರ ನಡೆಸಿದ ಮೋದಿ, ‘ಪ್ರಮುಖ ವಿರೋಧ ಪಕ್ಷದ ಸಂಸ್ಕೃತಿಯನ್ನೇ ಉಳಿದ ವಿರೋಧ ಪಕ್ಷಗಳು ಮೈಗೂಡಿಸಿಕೊಂಡಿವೆ. ಅವುಗಳು ಕೂಡ ಸ್ವಜನ ಪಕ್ಷಪಾತ, ಸರ್ವಾಧಿಕಾರಿ ಧೋರಣೆ , ಜಾತೀಯತೆ ಹಾಗೂ ಪ್ರಾದೇಶಿಕವಾದಕ್ಕೆ ಜೋತು ಬಿದ್ದಿವೆ’ ಎಂದರು.

‘ಅತಿ ಆತ್ಮವಿಶ್ವಾಸ ಬೇಡ’: ‘2024ರಲ್ಲಿ ಚುನಾವಣೆಯಲ್ಲಿ ಬಿಜೆಪಿಯನ್ನು ಯಾರೂ ಸೋಲಿಸಲು ಸಾಧ್ಯ ಇಲ್ಲ ಎಂಬುದು ಎಲ್ಲರಿಗೂ ಮನದಟ್ಟಾಗಿದೆ.


ನವದೆಹಲಿಯಲ್ಲಿ ಗುರುವಾರ ನಡೆದ ಬಿಜೆಪಿ ಸಂಸ್ಥಾಪನಾ ದಿನ ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಮಾತನಾಡಿದರು –ಪಿಟಿಐ ಚಿತ್ರ

ಆದರೂ, ನಮ್ಮಲ್ಲಿ ಅತಿ ಆತ್ಮವಿಶ್ವಾಸ ಇರುವುದು ಸರಿಯಲ್ಲ’ ಎಂದು ಕಾರ್ಯಕರ್ತರಿಗೆ ಮೋದಿ ಎಚ್ಚರಿಕೆ ನೀಡಿದರು.

‘ಬಿಜೆಪಿ ಕಾರ್ಯಕರ್ತರಾಗಿ ನಾವು ಚುನಾವಣೆಗಳಲ್ಲಿ ಮಾತ್ರ ಗೆದ್ದರೆ ಸಾಲದು, ದೇಶದ ಪ್ರತಿಯೊಬ್ಬ ಪ್ರಜೆಯ ಹೃದಯವನ್ನೂ ಗೆಲ್ಲಬೇಕು’ ಎಂದರು.

‘ವಿರೋಧ ಪಕ್ಷಗಳು ಹತಾಶೆಗೊಂಡಿದ್ದು, ಸರ್ಕಾರದ ವಿರುದ್ಧ ನಾನಾಬಗೆಯ ಆರೋಪಗಳನ್ನು ಮಾಡುತ್ತಿವೆ. ಅವುಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿವೆ. ಹೀಗಾಗಿಯೇ ಆಡಳಿತಾರೂಢ ಪಕ್ಷವಾದ ಬಿಜೆಪಿ ವಿರುದ್ಧ ಆರೋಪಗಳನ್ನು ಹೊರಿಸುವುದು, ಪಿತೂರಿ ನಡೆಸುವುದರಲ್ಲಿ ತೊಡಗಿವೆ’ ಎಂದು ಹೇಳಿದರು.

ಹನುಮಾನ್ ಜಯಂತಿಯನ್ನು ಪ್ರಸ್ತಾಪಿಸಿದ ಮೋದಿ, ‘ಆಂಜನೇಯನಂತೆ ಪಕ್ಷವು ನಿಸ್ವಾರ್ಥ ಸೇವೆಯಲ್ಲಿ ನಂಬಿಕೆ ಹೊಂದಿದೆ’ ಎಂದರು.

‘ಸಾಧಿಸುವ ಛಲ ಇದ್ದಲ್ಲಿ ಯಶಸ್ಸು ಲಭಿಸುತ್ತದೆ ಎಂಬುದು ಹನುಮಾನ್ ದೇವರ ಜೀವನವನ್ನು ಗಮನಿಸಿದಾಗ ಗೊತ್ತಾಗುತ್ತದೆ. ದೈತ್ಯಶಕ್ತಿಗಳನ್ನು ಹನುಮಾನ್ ಮಟ್ಟಹಾಕಿದಂತೆ, ನಮ್ಮ ಸರ್ಕಾರ ಕೂಡ ಭ್ರಷ್ಟಾಚಾರ, ಸ್ವಜನ ಪಕ್ಷಪಾತದಂತಹ ಅನಿಷ್ಟಗಳ ನಿರ್ಮೂಲನೆಗೆ ಶ್ರಮಿಸುವುದು’ ಎಂದು ಹೇಳಿದರು.



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಗೋಡೆಬರಹ ಅಭಿಯಾನಕ್ಕೆ ಗುರುವಾರ ಚಾಲನೆ ನೀಡಿದರು–ಪಿಟಿಐ ಚಿತ್ರ

ಗೋಡೆ ಬರಹ ಅಭಿಯಾನಕ್ಕೆ ಚಾಲನೆ

ನವದೆಹಲಿ (ಪಿಟಿಐ): ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಪಕ್ಷವನ್ನು ಮತ್ತೊಮ್ಮೆ ಅಧಿಕಾರದ ಗದ್ದುಗೆಗೆ ಏರಿಸುವ ಉದ್ದೇಶದಿಂದ ಬಿಜೆಪಿಯು ‘ಇನ್ನೊಮ್ಮೆ ಮೋದಿ ಸರ್ಕಾರ’ ಹೆಸರಿನಡಿ ಗೋಡೆ ಬರಹದ ಅಭಿಯಾನವೊಂದನ್ನು ಕೈಗೊಂಡಿದೆ.

ಬಿಜೆಪಿ ಸಂಸ್ಥಾಪನಾ ದಿನವಾದ ಗುರುವಾರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಇಲ್ಲಿನ ಬಂಗಾಳಿ ಮಾರುಕಟ್ಟೆಯಲ್ಲಿ ಈ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ‘ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಬಿಜೆಪಿಯ ವರ್ಚಸ್ಸು ಹೆಚ್ಚಿದೆ. ಈ ಅಭಿಯಾನದ ಮೂಲಕ ಅವರ ‘ಸಬ್ ಕಾ ಸಾಥ್ ಸಬ್ ಕಾ ವಿಕಾಸ್’ ಮಂತ್ರವನ್ನು ಪ್ರತಿಯೊಬ್ಬರ ಬಳಿಯೂ ಕೊಂಡೊಯ್ಯುತ್ತೇವೆ’ ಎಂದು ನಡ್ಡಾ ಹೇಳಿದ್ದಾರೆ.

ಭಾರತದ ನರ್ಸ್‌ಗಳ ನೇಮಕಕ್ಕೆ ಬ್ರಿಟನ್ ನಿರ್ಧಾರ

ಲಂಡನ್ (ಪಿಟಿಐ): ಬ್ರಿಟನ್‌ನ ವೇಲ್ಸ್‌ನಲ್ಲಿಯ ಸರ್ಕಾರಿ ಸ್ವಾಮ್ಯದ ಸ್ಥಳೀಯ ಆರೋಗ್ಯ ಸಂಸ್ಥೆಯೊಂದು ಮುಂದಿನ ನಾಲ್ಕು ವರ್ಷಗಳಲ್ಲಿ ಸುಮಾರು 900 ವಿದೇಶಿ ನರ್ಸ್‌ಗಳನ್ನು ನೇಮಿಸಿಕೊಳ್ಳಲಿದ್ದು, ಇವರಲ್ಲಿ ಬಹುತೇಕರು ಕೇರಳದವರು ಆಗಿರಲಿದ್ದಾರೆ.

ಸ್ವಾನ್ಸೀ ಬೇ ವಿಶ್ವವಿದ್ಯಾಲಯ ಆರೋಗ್ಯ ಮಂಡಳಿಯು ಪ್ರಸಕ್ತ ಸಾಲಿನ ಹಣಕಾಸು ವರ್ಷದಲ್ಲಿ 350 ವಿದೇಶಿ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲಿದೆ. ಇದಕ್ಕಾಗಿ ₹47.99 ಕೋಟಿ ವಿನಿಯೋಗಿಸಲಿದೆ ಎಂದು ಬಿಬಿಸಿಯ ಲೋಕಲ್ ಡೆಮಾಕ್ರೆಸಿ ರಿಪೋರ್ಟಿಂಗ್ ಸರ್ವೀಸ್ (ಎಲ್‌ಡಿಆರ್‌ಎಸ್) ವರದಿ ಮಾಡಿದೆ.

ಕೇರಳ ನರ್ಸ್‌ಗಳ ನೇಮಕಕ್ಕೆ ವೆಸ್ಟ್ ಯಾರ್ಕ್‌ಶೈರ್ ಇಂಟಿಗ್ರೇಟೆಡ್ ಕೇರ್ ಸಿಸ್ಟಮ್ (ಡಬ್ಲ್ಯುವೈಐಸಿಎಸ್) ತಂಡವು ಕೇರಳ ಸಚಿವರ ಜೊತೆ ಈಗಾಗಲೇ ಮಾತುಕತೆ ನಡೆಸಿದೆ. ಭಾರತವಲ್ಲದೇ ಫಿಲಿಪ್ಪೀನ್ಸ್, ಆಫ್ರಿಕಾ ಮತ್ತು ವೆಸ್ಟ್ ಇಂಡಿಸ್‌ನಿಂದಲೂ ನರ್ಸ್‌ಗಳ ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಆರೋಗ್ಯ ವಲಯಕ್ಕೆ ಪರಿಣತ ಸಿಬ್ಬಂದಿ ಲಭಿಸಲಿದ್ದಾರೆ ಎಂದು ಸ್ವಾನ್ಸೀ ಬೇ ಆರೋಗ್ಯ ಮಂಡಳಿಯ ಅಧಿಕಾರಿ ಗಾರೆಥ್ ಹಾವೆಲ್ಸ್ ಹೇಳಿದ್ದಾರೆ.

ಹೊಸದಾಗಿ ನೇಮಕವಾಗುವ ನರ್ಸ್‌ಗಳಿಗೆ ಉನ್ನತ ಮಟ್ಟದ ತರಬೇತಿ ನೀಡಲಾಗುವುದು. ಇವರಿಗೆ ಆರಂಭಿಕ ವೇತನವಾಗಿ ₹27.61 ಲಕ್ಷ (27,055 ಪೌಂಡ್ಸ್) ನೀಡಲಾಗುವುದು. ಸ್ವಾನ್ಸೀ ಬೇ ಆರೋಗ್ಯ ಮಂಡಳಿಯಲ್ಲಿ 4,200 ನರ್ಸ್‌ಗಳು ಮತ್ತು ದಾದಿಯರ ಹುದ್ದೆಗಳಿವೆ. 1,322 ಸಿಬ್ಬಂದಿ ಮುಂದಿನ ಕೆಲ ವರ್ಷಗಳಲ್ಲಿ ನಿವೃತ್ತರಾಗುತ್ತಿದ್ದಾರೆ. ಹೀಗಾಗಿ ದೊಡ್ಡಮಟ್ಟದ ನೇಮಕಾತಿಗೆ ಮಂಡಳಿ ನಿರ್ಧರಿಸಿದೆ.

ಬೆಂಗಳೂರು ನಿವಾಸಿಗೆ ₹ 44 ಕೋಟಿ ಲಾಟರಿ

ಪ್ರಜಾವಾಣಿ ವಾರ್ತೆ

ಅಬುಧಾಬಿ: ಬೆಂಗಳೂರಿನ ನಿವಾಸಿ ಅರುಣ್ ಕುಮಾರ್ ವಾಟಕ್ಕೆ ಕೊರೊತ್ ಅವರಿಗೆ ಇಲ್ಲಿನ ‘ಬಿಗ್ ಟಿಕೆಟ್’ ನಡೆಸುವ ಲಾಟರಿಯಲ್ಲಿ ಅದೃಷ್ಟ ಒಲಿದಿದೆ. ಆನ್‌ಲೈನ್ ಮೂಲಕ ಟಿಕೆಟ್ ಖರೀದಿಸಿದ್ದ ಅವರು ₹ 44 ಕೋಟಿ (20 ದಶಲಕ್ಷ ದಿರ್‌ಹಂ) ಗೆದ್ದುಕೊಂಡಿದ್ದಾರೆ.

‘ಬಿಗ್ ಟಿಕೆಟ್’ ನೇರ ಪ್ರಸಾರದ ಡ್ರಾನಲ್ಲಿ ಅದೃಷ್ಟಶಾಲಿಗಳನ್ನು ಆಯ್ಕೆ ಮಾಡುತ್ತದೆ. ಅರುಣ್ ಅವರು ಆನ್‌ಲೈನ್‌ನಲ್ಲಿ ಮಾರ್ಚ್ 22ರಂದು ಲಾಟರಿ ಟಿಕೆಟ್ ಖರೀದಿಸಿದ್ದರು.

‘ಬಿಗ್ ಟಿಕೆಟ್’ ಪ್ರತಿನಿಧಿಗಳು ಮೊದಲಿಗೆ ಬಹುಮಾನ ಗೆದ್ದಿರುವುದರ ಮಾಹಿತಿ ನೀಡಿದಾಗ ಅರುಣ್ ನಂಬಿರಲಿಲ್ಲ. ಆದರೆ, ಪ್ರತಿನಿಧಿಗಳು ಲಾಟರಿಯಲ್ಲಿ ₹ 44,75,67,571 ಬಹುಮಾನ ಬಂದಿರುವುದನ್ನು ಮನದಟ್ಟು ಮಾಡಿದಾಗ ಇವರ ಸಂತೋಷಕ್ಕೆ ಪಾರವೇ ಇರಲಿಲ್ಲ.

‘ಬಹುಮಾನದ ದೊಡ್ಡ ಮೊತ್ತವನ್ನು ಹೂಡಿಕೆ ಮಾಡುತ್ತೇನೆ. ಸ್ವಂತ ಉದ್ದಿಮೆ ಆರಂಭಿಸುತ್ತೇನೆ ಎಂದು ಅರುಣ್ ಪ್ರತಿಕ್ರಿಯಿಸಿದ್ದಾರೆ’ ಎಂದು ‘ಗಲ್ಫ್‌ನ್ಯೂಸ್’ ವರದಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಕಾಕ್‌ಪಿಟ್‌ನಲ್ಲಿ ಹಾವು: ವಿಮಾನ ತುರ್ತು ಭೂ ಸ್ಪರ್ಶ

ಜೋಹನ್ಸ್‌ಬರ್ಗ್ (ಪಿಟಿಐ): ವೋರ್ಸೆಸ್ಟರ್‌ನಿಂದ ನೆಲ್ಸ್‌ಪ್ರೂಟ್‌ಗೆ ಹೊರಟಿದ್ದ ವಿಮಾನದ ಕಾಕ್‌ಪಿಟ್‌ನಲ್ಲಿ ನಾಗರ ಹಾವು ಕಾಣಿಸಿದ್ದರಿಂದ ವಿಮಾನವನ್ನು ತುರ್ತು ಭೂ ಸ್ಪರ್ಶ ಮಾಡಲಾಗಿದೆ.

ವಿಮಾನದಲ್ಲಿ ನಾಲ್ವರು ಪ್ರಯಾಣಿಕರಿದ್ದರು. ಪೈಲಟ್ ಸೀಟಿನ ಕೆಳಗೆ ಹಾವು ಕಾಣಿಸಿದಾಗ, ತಕ್ಷಣ ಈ ವಿಷಯವನ್ನು ವಿಮಾನ ನಿಲ್ದಾಣ ಅಧಿಕಾರಿಗಳಿಗೆ ಪೈಲಟ್ ರುಡಾಲ್ಫ್ ಎರಾಸ್ಮಸ್ ತಿಳಿಸಿದರು. ವಿಮಾನ ತುರ್ತು ಭೂ ಸ್ಪರ್ಶಕ್ಕೆ ಅಧಿಕಾರಿಗಳು ನೆರವಾದರು. ಪ್ರಯಾಣಿಕರನ್ನು ಸುರಕ್ಷಿತವಾಗಿ ಕೆಳಗಿಸಲಾಯಿತು. ಈ ಘಟನೆ ಸೋಮವಾರ ನಡೆದಿದೆ.

ಕೆನಡಾ: ಹಿಂದೂ ದೇಗುಲದ ಮೇಲೆ ದುಷ್ಕರ್ಮಿಗಳ ದಾಳಿ

ಟೊರೊಂಟೊ (ಪಿಟಿಐ): ಕೆನಡಾದ ಒಂಟಾರಿಯೊದಲ್ಲಿರುವ ಸ್ವಾಮಿ ನಾರಾಯಣ ದೇಗುಲದಲ್ಲಿ ದುಷ್ಕರ್ಮಿಗಳು ದಾಂದಲೆ ನಡೆಸಿದ್ದು, ಹಿಂದೂ ದೇಗುಲದ ಗೋಡೆಗಳನ್ನು ಜಖಂಗೊಳಿಸಿದ್ದಾರೆ.

ಇದು ದ್ವೇಷ ಪ್ರಚೋದನೆಯ ಕೃತ್ಯ ಎಂದು ಪೊಲೀಸರು ಹೇಳಿದ್ದಾರೆ. ಒಟ್ಟಾವದಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಕೃತ್ಯವನ್ನು ಖಂಡಿಸಿದೆ.

‘ಈ ಬಗ್ಗೆ ತನಿಖೆ ನಡೆದಿದೆ. ದುಷ್ಕರ್ಮಿಗಳಿಬ್ಬರು ದೇಗುಲದ ಗೋಡೆಗಳನ್ನು ಧ್ವಂಸಗೊಳಿಸುತ್ತಿರುವ, ಕೆಲವರು ನೋಡುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ದುಷ್ಕರ್ಮಿಗಳಿಗೆ ಶೋಧ ನಡೆಯುತ್ತಿದೆ’ ಎಂದು ಒಂಟಾರಿಯೊದ ವಿಂಡ್ಸರ್ ನಗರದ ಪೊಲೀಸರು ಹೇಳಿಕೆ ನೀಡಿದ್ದಾರೆ. ‘ದೇಗುಲದ ಗೋಡೆಗಳ ಮೇಲೆ ಹಿಂದೂ ವಿರೋಧಿ ಘೋಷಣೆ ಬರೆಯಲಾಗಿದೆ. ತನಿಖೆ ನಡೆಸಿ ಕ್ರಮಕೈಗೊಳ್ಳಬೇಕು’ ಎಂದು ಭಾರತದ ರಾಯಭಾರ ಕಚೇರಿ ಟ್ವೀಟ್‌ನಲ್ಲಿ ಒತ್ತಾಯಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook
KANNADA CUISINE chef required for restaurant in chennai. cnt 9841951343

Hospital & Medical Jobs
ಬೇಕಾಗಿದ್ದಾರೆ ಅನುಭವವಿರುವ/ ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತಿಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ: 7483960098, 9742270055

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಕೆಲಸ: ಮೊಬೈಲ್ ಟೈಪಿಂಗ್ ಬುಕ್ ರೈಟಿಂಗ್, ಫಾರಂಫಿಲ್ಲಿಂಗ್ ಡೇಟಾಎಂಟ್ರಿ,ಪೆನ್ಸಿಲ್ ಪ್ಯಾಕಿಂಗ್, ಪೇಪರ್ ಪ್ಯಾಕಿಂಗ್, ಎಸ್‌ಎಂಎಸ್ ಫಾರ್ವರ್ಡ್ ಕೆಲಸಗಳು ವಯಸ್ಸಿನ ಮಿತಿಯಿಲ್ಲ, ಸಂಬಳ,ವಾರಕ್ಕೆ 6000-15000/ 8431350629. 7349404849.

General
ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ,ITI ನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ.13,000 - 17,000. ph: 8951315839, 9880120052

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Old Madras Road
ಮನೆ ಮಾರಾಟಕ್ಕಿದೆ: ಬೆಂಗಳೂರಿನ ಹಳೇ ಬೈಯಪ್ಪನಹಳ್ಳಿಯ ಮೋಟಪ್ಪ ಬಡಾವಣೆಯಲ್ಲಿ, ತಲಾ 400 ಚ. ಅಡಿ ಇರುವಂತಹ ಅವಳಿ ನಿವೇಶನಗಳು ಪ್ರತಿ ಚ. ಅಡಿಗೆ ರೂ. 5000/- ದಂತೆ ಮಾರಾಟಕ್ಕಿದೆ. ಸಂಪರ್ಕಿಸಿ: 9448904183, 9986948267

ಪ್ರವಾಸ

Travel
ವಿಮಾನ ಪ್ರವಾಸ 03.05.2023 ರಿಂದ 5 ದಿನ ಕಾಶಿ, ಗಯಾ, ಪ್ರಯಾಗ್, ಅಯೋಧ್ಯಾ. Contact Travel Comfort: 9731001111/ 08041664646

★ವಿಮಾನದಲ್ಲಿ ಪ್ರವಾಸ★ 14.05.2023 9/13ದಿನಗಳು ಆಗ್ರಾ,ದೆಹಲಿ,ಕಾಶಿ,ಗಯಾ, ಪ್ರಯಾಗ,.19.06.2023 13ದಿನಗಳು ಕಾಶಿ,ನೇಪಾಳ ಮುಕ್ತಿನಾಥ,ಗಜೇಂದ್ರಮೋಕ್ಷ, ಜನಕಪುರ್ ಪ್ರವಾಸ. ಆರ್.ಗಾಂಧಿ ಟೂರ್ಸ್.(ರಿ).ತ್ಯಾಗರಾಜನಗರ. 9945445809/ 9902433500

13 ದಿನಗಳ ಉತ್ತರಭಾರತ ಪ್ರವಾಸ. 8 ದಿನಗಳ ಸಿಕ್ಕಿಂ,ಡಾರ್ಜಿಲಿಂಗ್ ಹಾಗು ಚಾರ್ ಧಾಮ್‌ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ ಬೆಂಗಳೂರು. 9740228186, 9980270467

TRAVEL CORNER



ಶ್ರೀರಾಜರಾಜೇಶ್ವರಿ ಟೂರ್ಸ್ 04.05.2023,12ದಿನ 4ಸಿಸ್ಟರ್ಸ್ ನಾರ್ತ್‌ಈಸ್ಟ್ ನಾಗಾಲ್ಯಾಂಡ್ ಮಿಝೋರಾಂ ಮಣಿಪುರ್ ತ್ರಿಪುರಸುಂದರಿ ಶಕ್ತಿಪೀಠ ಫ್ಲೋಟಿಂಗ್ ನ್ಯಾಷನಲ್ ಪಾರ್ಕ್ 9739618243 9743895346

ಶಿವನಂದಿ ಟ್ರಾವೆಲ್ಸ್ ಹನುಮಂತನಗರ,ಬೆಂಗಳೂರು ಅಮರನಾಥ್ ಯಾತ್ರೆ,ಕಟ್ರಾ ವೈಷ್ಣೋದೇವಿ,ದೆಹಲಿ,ಶ್ರೀನಗರ 12ದಿನಗಳು 1.7.2023, 14.7.2023. ಕಾಶಿಯಾತ್ರೆ, ದೆಹಲಿ,ಆಗ್ರಾ,ಅಯೋಧ್ಯ 13ದಿನಗಳು 17.5.2023. ದುಬೈ,ಅಬುಧಾಭಿ 5ದಿನಗಳು 17.4.2023, 15.5.2023 ಸಂಪರ್ಕಿಸಿ 9036056352 9481027363

22.4.2023ರಿಂದ 4 ದಿನ 2x2`A/C`ಬಸ್ಸಿನಲ್ಲಿ ರೂಮ್ ವಸತಿಯೊಂದಿಗೆ ಶಿರಡಿ, ಪಂಡರಾಪುರ,ಕೂಡಲಸಂಗಮ ಕೊಲ್ಲಾಪುರ,ಶನಿಸಿಂಗನಾಪುರ ಬಿಜಾಪುರ.`27.4.2023`ಮತ್ತು 5.5.2023ರಿಂದ 5ದಿನ ಕಾಶಿ, ಅಯೋಧ್ಯ,ಅಲಹಾಬಾದ್`, ಗಯಾ,ಬುದ್ಧಗಯಾ. 13.5.2023ರಿಂದ 6ದಿನಗಳು 2x2 A/C`ಬಸ್ಸಿನಲ್ಲಿ ರೂಮ್ ವಸತಿಯೊಂದಿಗೆ ರಾಮೇಶ್ವರ, ತ್ರಿವೇಂಡ್ರಮ್`ಕನ್ಯಾಕುಮಾರಿ ಅಲಪಿಬೋಟಿಂಗ್ ಕೋವಲಂಬೀಚ್ ಗುರುವಾಯೂರು ಮಧುರೈ. ಶ್ರೀ.ಗುರುರಾಜ`ಟ್ರಾವೆಲ್ಸ್. ಕೋಲಾರ:-9449652555, 9611082432, 8123099913.


Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH ಪ್ರಜಾವಾಣಿ

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು



ಹಿಡಿತ ತಪ್ಪಿದ ಬೆಂಗಳೂರು ಬೌಲಿಂಗ್ ಪಡೆ, ಬ್ಯಾಟಿಂಗ್ ವೈಫಲ್ಯ; ಕೆಕೆಆರ್‌ಗೆ 81 ರನ್ ಜಯ

ಶಾರ್ದೂಲ್ ಅಬ್ಬರ; ಹೌಹಾರಿದ ಆರ್‌ಸಿಬಿ

ಕೋಲ್ಕತ್ತ (ಪಿಟಿಐ): ಅಬ್ಬರದ ಬ್ಯಾಟಿಂಗ್ ಮಾಡಿದ ಶಾರ್ದೂಲ್ ಠಾಕೂರ್ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಯೋಜನೆಯನ್ನು ನುಚ್ಚುನೂರು ಮಾಡಿದರು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಶಾರ್ದೂಲ್ (68; 29ಎ) ಮಿಂಚಿನ ಬ್ಯಾಟಿಂಗ್ ಬಲದಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು 81 ರನ್‌ಗಳ ಗೆಲುವು ಸಾಧಿಸಿತು.

ಮೊದಲು ಬ್ಯಾಟ್ ಮಾಡಿದ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 204 ರನ್ ಗಳಿಸಿದರೆ, ಆರ್‌ಸಿಬಿ 17.4 ಓವರ್‌ಗಳಲ್ಲಿ 123 ರನ್‌ಗಳಿಗೆ ಆಲೌಟಾಯಿತು. ವರುಣ್ ಚಕ್ರವರ್ತಿ (15ಕ್ಕೆ 4), ಸುಯಶ್ ಶರ್ಮಾ (30ಕ್ಕೆ 3) ಮತ್ತು ಸುನಿಲ್ ನಾರಾಯಣ್ ಅವರು ಪ್ರಭಾವಿ ದಾಳಿ ನಡೆಸಿ ಬೆಂಗಳೂರಿನ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಸವಾಲಿನ ಗುರಿ ಬೆನ್ನಟ್ಟಿದ ಆರ್‌ಸಿಬಿಗೆ ವಿರಾಟ್ ಕೊಹ್ಲಿ (21) ಮತ್ತು ನಾಯಕ ಫಫ್ ಡುಪ್ಲೆಸಿ (23, 12 ಎ.) ಮೊದಲ ವಿಕೆಟ್‌ಗೆ 44 ರನ್ ಸೇರಿಸಿದರು. ಕೊಹ್ಲಿ ವಿಕೆಟ್ ಪಡೆದ ಸುನಿಲ್ ಈ ಜತೆಯಾಟ ಮುರಿದರು. ಆ ಬಳಿಕ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು.

ಶಾರ್ದೂಲ್ ಅಬ್ಬರ: ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶಾರ್ದೂಲ್ ಠಾಕೂರ್ ಕ್ರೀಸ್‌ಗೆ ಬರುವ ವೇಳೆಗೆ ನೈಟ್ ರೈಡರ್ಸ್ ತಂಡದ ಪ್ರಮುಖ ಬ್ಯಾಟರ್‌ಗಳೆಲ್ಲ ಡಗ್‌ಔಟ್‌ಗೆ ಮರಳಿದ್ದರು. 89 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ತಂಡವು ಅಲ್ಪಮೊತ್ತ ಗಳಿಸುವ ಆತಂಕದಲ್ಲಿತ್ತು.

ಆದರೆ ಆಲ್‌ರೌಂಡರ್ ಶಾರ್ದೂಲ್, ಆರ್‌ಸಿಬಿ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. 234.48ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಒಂಬತ್ತು ಬೌಂಡರಿ ಹಾಗೂ ಮೂರು ಸಿಕ್ಸರ್‌ಗಳನ್ನು ಸಿಡಿಸಿದರು. ರಿಂಕು ಸಿಂಗ್ (46; 33) ಅವರೊಂದಿಗೆ ಆರನೇ ವಿಕೆಟ್ ಜೊತೆಯಾಟದಲ್ಲಿ 103 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ಸ್ಕೋರ್ ದ್ವಿಶತಕದ ಗಡಿ ದಾಟಿತು.

ವಿಲಿ ಆರಂಭಿಕ ಪೆಟ್ಟು, ಗುರ್ಬಾಜ್ ಅರ್ಧಶತಕ: ಕೋಲ್ಕತ್ತ ತಂಡಕ್ಕೆ ಆರ್‌ಸಿಬಿಯ ವೇಗಿ ಡೇವಿಡ್ ವಿಲಿ ನಾಲ್ಕನೇ ಓವರ್‌ನಲ್ಲಿ ಬಲವಾದ ಪೆಟ್ಟುಕೊಟ್ಟರು. ಸತತ ಎರಡು ಎಸೆತಗಳಲ್ಲಿ ವೆಂಕಟೇಶ್ ಅಯ್ಯರ್ ಮತ್ತು ಮನದೀಪ್ ಸಿಂಗ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು.

ಇತ್ತ ವಿಕೆಟ್‌ಗಳು ಉರುಳುತ್ತಿದ್ದರೂ ಆರಂಭಿಕ ಬ್ಯಾಟರ್ ರೆಹಮಾನುಲ್ಲಾ ಗುರ್ಬಾಜ್ ಮಾತ್ರ ಉತ್ತಮ ಲಯದಲ್ಲಿ ಆಡುತ್ತಿದ್ದರು. 44 ಎಸೆತಗಳಲ್ಲಿ 57 ರನ್ ಗಳಿಸಿದರು. ಮೂರು ಅಮೋಘ ಸಿಕ್ಸರ್‌ಗಳನ್ನು ಸಿಡಿಸಿದರು. ರಿಂಕು ಸಿಂಗ್ ಮತ್ತು ಶಾರ್ದೂಲ್ ಬಿಟ್ಟರೆ, ಕೋಲ್ಕತ್ತ ಪರವಾಗಿ ಎರಡಂಕಿ ಮೊತ್ತ ಗಳಿಸಿದವರು ರೆಹಮಾನುಲ್ಲಾ ಮಾತ್ರ.

ಕಳಪೆ ಬೌಲಿಂಗ್: ಆರ್‌ಸಿಬಿ ತಂಡದ ಬೌಲರ್‌ಗಳು ಆರಂಭಿಕ ಓವರ್‌ಗಳಲ್ಲಿ ಒಂದಿಷ್ಟು ಹಿಡಿತ ಸಾಧಿಸಿದ್ದರು. ಆದರೆ, ಶಾರ್ದೂಲ್ ಅಬ್ಬರಕ್ಕೆ ಬಸವಳಿದರು. ಡೇವಿಡ್ ವಿಲ್ಲಿ ಬಿಟ್ಟರೆ ಉಳಿದವರೆಲ್ಲರೂ ದುಬಾರಿಯಾದರು. ಒಟ್ಟು 23 ಇತರೆ ರನ್‌ಗಳನ್ನು ಬಿಟ್ಟುಕೊಟ್ಟರು.


ಕೋಲ್ಕತ್ತ ತಂಡದ ಶಾರ್ದೂಲ್ ಠಾಕೂರ್ ಬ್ಯಾಟಿಂಗ್ ಶೈಲಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 7ಕ್ಕೆ204 (20 ಓವರ್‌ಗಳಲ್ಲಿ)
ರೆಹಮಾನುಲ್ಲಾ ಸಿ ಆಕಾಶ್ ಬಿ ಕರ್ಣ್ 57 (44ಎ, 4X6, 6X3)
ವೆಂಕಟೇಶ್ ಬಿ ಡೇವಿಡ್ 3 (7ಎ)
ಮನದೀಪ್ ಬಿ ಡೇವಿಡ್ 0 (1ಎ)
ರಾಣಾ ಸಿ ದಿನೇಶ್ ಬಿ ಬ್ರೇಸ್‌ವೆಲ್ 1(5ಎ)
ರಿಂಕುಸಿಂಗ್ ಸಿ ದಿನೇಶ್ ಬಿ ಹರ್ಷಲ್ 46 (33ಎ, 4X2, 6X3)
ರಸೆಲ್ ಸಿ ಕೊಹ್ಲಿ ಬಿ ಕರ್ಣ 0 (1ಎ)
ಶಾರ್ದೂಲ್ ಸಿ ಮ್ಯಾಕ್ಸ್‌ವೆಲ್ ಬಿ ಸಿರಾಜ್ 68 (29ಎ, 4X9, 6X3)
ಸುನಿಲ್ ಔಟಾಗದೆ 0 (1ಎ)
ಉಮೇಶ್ ಔಟಾಗದೆ 6 (2ಎ, 4X1)
ಇತರೆ: 23 (ಬೈ 4, ಲೆಗ್‌ಬೈ 6, ವೈಡ್ 10, ನೋಬಾಲ್ 3)
ವಿಕೆಟ್ ಪತನ: 1–26 (ವೆಂಕಟೇಶ್ ಅಯ್ಯರ್; 3.2), 2–26 (ಮನದೀಪ್ ಸಿಂಗ್; 3.3), 3–47 (ನಿತೀಶ್ ರಾಣಾ; 6.1), 4–89 (ರೆಹಮಾನುಲ್ಲಾ ಗುರ್ಬಾಜ್; 11.2), 5–89 (ಆ್ಯಂಡ್ರೆ ರಸೆಲ್; 11.3), 6–192 (ರಿಂಕು ಸಿಂಗ್; 18.6), 7–198 (ಶಾರ್ದೂಲ್ ಠಾಕೂರ್; 19.4)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–44–1, ಡೇವಿಡ್ ವಿಲಿ 4–1–16–2, ಆಕಾಶ್ ದೀಪ್ 2–0–30–0, ಮಿಚೆಲ್ ಬ್ರೇಸ್‌ವೆಲ್ 3–0–34–1, ಶಹಬಾಜ್ ಅಹಮದ್ 1–0–6–0, ಕರ್ಣ ಶರ್ಮಾ 3–0–26–2, ಹರ್ಷಲ್ ಪಟೇಲ್ 3–0–38–1

ರಾಯಲ್ ಚಾಲೆಂಜರ್ಸ್ ಬೆಂಗಳೂರು 123 (17.4 ಓವರ್‌ಗಳಲ್ಲಿ)
ವಿರಾಟ್ ಬಿ ಸುನಿಲ್ 21 (18ಎ, 4X3)
ಫಫ್ ಡುಪ್ಲೆಸಿ ಬಿ ಚಕ್ರವರ್ತಿ 23 (12ಎ, 4X2, 6X2)
ಬ್ರೇಸ್‌ವೆಲ್ ಸಿ ರಾಣಾ ಬಿ ಶಾರ್ದೂಲ್ 19 (18ಎ, 4X1, 6X1)
ಮ್ಯಾಕ್ಸ್‌ವೆಲ್ ಬಿ ಚಕ್ರವರ್ತಿ 5 (7ಎ, 4X1)
ಹರ್ಷಲ್ ಬಿ ಚಕ್ರವರ್ತಿ 0 (2ಎ)
ಶಾಬಾಜ್ ಸಿ ಠಾಕೂರ್ ಬಿ ಸುನಿಲ್ 1 (5ಎ)
ದಿನೇಶ್ ಸಿ ಚಕ್ರವರ್ತಿ ಬಿ ಸುಯಶ್ 9 (8ಎ, 4X1)
ಅನುಜ್ ಸಿ ಸುನಿಲ್ ಬಿ ಸುಯಶ್ 1 (5ಎ)
ವಿಲಿ ಔಟಾಗದೆ 20 (20 ಎ., 4X2)
ಕರ್ಣ ಸಿ ರಾಣಾ ಬಿ ಸುಯಶ್ 1 (3 ಎ)
ಆಕಾಶ್ ಸಿ ಮತ್ತು ಬಿ ವರುಣ್ 17 (8 ಎ., 4X2, 6X1)
ಇತರೆ: 6 (ಬೈ 4, ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1–44 (ವಿರಾಟ್ ಕೊಹ್ಲಿ; 4.5), 2–46 (ಫಫ್ ಡುಪ್ಲೆಸಿ; 5.2), 3–54 (ಗ್ಲೆನ್ ಮ್ಯಾಕ್ಸ್‌ವೆಲ್;7.2), 4–54 (ಹರ್ಷಲ್ ಪಟೇಲ್; 7.4), 5–61 (ಶಾಬಾಜ್; 8.5), 6–83 (ಮಿಚೆಲ್ ಬ್ರೇಸ್‌ವೆಲ್; 11.3), 7–84 (ಅನುಜ್ ರಾವತ್; 12.2), 8–86 (ದಿನೇಶ್ ಕಾರ್ತಿಕ್; 12.5), 9–96 (ಕರ್ಣ ಶರ್ಮಾ; 14.3), 10–123 (ಆಕಾಶ್ ದೀಪ್; 17.4)
ಬೌಲಿಂಗ್: ಉಮೇಶ್ ಯಾದವ್ 2–0–17–0, ಟಿಮ್ ಸೌಥಿ 2–0–25–0, ಸುನಿಲ್ ನಾರಾಯಣ್ 4–0–16–2, ವರುಣ್ ಚಕ್ರವರ್ತಿ 3.4–0–15–4, ಸುಯಶ್ ಶರ್ಮಾ 4–0–30–3, ಶಾರ್ದೂಲ್ ಠಾಕೂರ್ 2–0–15–1

ಫಲಿತಾಂಶ: ಕೆಕೆಆರ್‌ಗೆ 81 ರನ್ ಗೆಲುವು

ಮೊದಲ ಜಯದ ಮೇಲೆ ಸನ್‌ರೈಸರ್ಸ್ ಕಣ್ಣು

ಲಖನೌಗೆ ಹೈದರಾಬಾದ್ ಸವಾಲು

ಲಖನೌ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು ಶುಕ್ರವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಲಖನೌ ತಂಡಕ್ಕೆ ಇದು ಮೂರನೇ ಪಂದ್ಯ. ಆಡಿರುವ ಎರಡರಲ್ಲಿ ಒಂದು ಗೆದ್ದು ಇನ್ನೊಂದರಲ್ಲಿ ಸೋತಿದೆ. ಆದರೆ, ಸನ್‌ರೈಸರ್ಸ್ ತಂಡವು ಆಡಿರುವ ಒಂದು ಪಂದ್ಯದಲ್ಲಿ ಪರಾಭವಗೊಂಡಿದೆ. ಆ ಪಂದ್ಯಕ್ಕೆ ಅಲಭ್ಯರಾಗಿದ್ದ ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ, ಮಾರ್ಕೊ ಜೆನ್ಸನ್ ಮತ್ತು ಹೆನ್ರಿಚ್ ಕ್ಲಾಸೆನ್ ಅವರು ಇಲ್ಲಿ ಕಣಕ್ಕಿಳಿಯಲಿದ್ದಾರೆ. ಇದರಿಂದಾಗಿ ಸನ್‌ರೈಸರ್ಸ್ ತಂಡದಲ್ಲಿ ಉತ್ಸಾಹ ಗರಿಗೆದರಿದೆ.

2021ರ ಆವೃತ್ತಿಯಲ್ಲಿ ಹೈದರಾಬಾದ್ ತಂಡವು ಎಂಟನೇ ಸ್ಥಾನ ಪಡೆದಿತ್ತು. ಈ ಬಾರಿ ಬ್ಯಾಟರ್ ಏಡನ್ ಮರ್ಕರಂ ಅವರ ನಾಯಕತ್ವದ ಬಗ್ಗೆ ಹೆಚ್ಚಿನ ನಿರೀಕ್ಷೆಗಳು ಮೂಡಿವೆ.


ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್

ಬ್ಯಾಟಿಂಗ್ ವಿಭಾಗದಲ್ಲಿ ಮಯಂಕ್ ಅಗರವಾಲ್ ಉತ್ತಮ ಲಯದಲ್ಲಿದ್ದಾರೆ. ಆದರೆ ಅಭಿಷೇಕ್ ಶರ್ಮಾ, ರಾಹುಲ್ ತ್ರಿಪಾಠಿ, ಹ್ಯಾರಿ ಬ್ರೂಕ್ ಮತ್ತು ಗ್ಲೆನ್ ಫಿಲಿಪ್ ಪ್ರಮುಖ ಶಕ್ತಿಯಾಗಿದ್ದಾರೆ. ಆಲ್‌ರೌಂಡರ್ ಅಬ್ದುಲ್ ಸಮದ್, ವಾಷಿಂಗ್ಟನ್ ಸುಂದರ್ ಅವರು ಮಧ್ಯಮ ಕ್ರಮಾಂಕದಲ್ಲಿ ಬಲ ತುಂಬಬಲ್ಲರು.

ಲಖನೌ ತಂಡದಲ್ಲಿ ಅನುಭವಿ ಬ್ಯಾಟರ್‌ಗಳ ದಂಡು ಇದೆ. ರಾಹುಲ್ ಮತ್ತು ಕೈಲ್ ಮೇಯರ್ಸ್ ಉತ್ತಮ ಆರಂಭ ನೀಡಿದರೆ, ದೀಪಕ್ ಹೂಡಾ, ಆಯುಷ್ ಬಡೋಣಿ, ಮಾರ್ಕಸ್ ಸ್ಟೊಯಿನಿಸ್ ಹಾಗೂ ನಿಕೊಲಸ್ ಪೂರನ್ ಅಂತಿಮ ಹಂತದ ಓವರ್‌ಗಳಲ್ಲಿ ರನ್‌ಗಳನ್ನು ಸೂರೆ ಮಾಡಬಲ್ಲರು. ಇದರಿಂದಾಗಿ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗುವುದು.

ಇಲ್ಲಿಯ ಏಕನಾ ಕ್ರೀಡಾಂಗಣವು ಬ್ಯಾಟಿಂಗ್‌ಗೆ ಉತ್ತಮವಾದ ಪಿಚ್. ಇದರಲ್ಲಿ ರನ್‌ಗಳ ಹೊಳೆ ಹರಿಯುವ ಸಾಧ್ಯತೆ ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನೆಮಾ ಆ್ಯಪ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	2	2	0	0	4	0.700
ಪಂಜಾಬ್	2	2	0	0	4	0.333
ಕೋಲ್ಕತ್ತ	2	1	1	0	2	2.056
ರಾಜಸ್ಥಾನ	2	1	1	0	2	1.675
ಲಖನೌ	2	1	1	0	2	0.950
ಚೆನ್ನೈ	2	1	1	0	2	0.036
ಬೆಂಗಳೂರು	2	1	1	0	2	-1.256
ದೆಲ್ಲಿ	2	0	2	0	0	-1.703
ಮುಂಬೈ	1	0	1	0	0	-1.981
ಹೈದರಾಬಾದ್	1	0	1	0	0	-3.600

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ವುಡ್	ಲಖನೌ	8

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	149

ವಿಶ್ವಕಪ್ ಟೂರ್ನಿಗೆ ಕೇನ್ ಅಲಭ್ಯ

ವೆಲಿಂಗ್ಟನ್ (ಪಿಟಿಐ): ನ್ಯೂಜಿಲೆಂಡ್ ಕ್ರಿಕೆಟ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಅವರು ಗಾಯಗೊಂಡಿರುವ ಕಾರಣ ಇದೇ ವರ್ಷ ಭಾರತದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಅಲಭ್ಯರಾಗಿದ್ದಾರೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಅವರು ಗುಜರಾತ್ ಟೈಟನ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಅಹಮದಾಬಾದಿನಲ್ಲಿ ನಡೆದಿದ್ದ ಟೂರ್ನಿಯ ಮೊದಲ ಪಂದ್ಯದಲ್ಲಿ ಅವರು ಫೀಲ್ಡಿಂಗ್ ಮಾಡುವಾಗ ಬಿದ್ದು ಕಾಲಿಗೆ ಪೆಟ್ಟಾಗಿತ್ತು. ಅವರ ಬಲಗಾಲಿನ ಅಸ್ಥಿಮಜ್ಜೆಗೆ (ಎಸಿಎಲ್) ಧಕ್ಕೆಯಾಗಿದೆ.

ಮುಂದಿನ ಮೂರು ವಾರಗಳಲ್ಲಿ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಿದೆ. ಆದ್ದರಿಂದ ಅವರು ತಮ್ಮ ತವರಿಗೆ ಮರಳಿದ್ದಾರೆ.

ಟಕರ್ ಶತಕ; ಐರ್ಲೆಂಡ್ ತಂಡದ ಹೋರಾಟ


ಲೋರ್ಕನ್ ಟಕರ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಢಾಕಾ (ಎಎಫ್‌ಪಿ): ಲೋರ್ಕನ್ ಟಕರ್ (108) ಅವರ ಶತಕದ ನೆರವಿನಿಂದ ಐರ್ಲೆಂಡ್ ತಂಡ, ಬಾಂಗ್ಲಾದೇಶ ವಿರುದ್ಧದ ಏಕೈಕ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಮರುಹೋರಾಟ ನಡೆಸಿದೆ.

ಮೀರ್‌ಪುರದಲ್ಲಿ ನಡೆಯುತ್ತಿರುವ ಪಂದ್ಯದ ಮೂರನೇ ದಿನ ಗುರುವಾರದ ಆಟದ ಅಂತ್ಯಕ್ಕೆ ಐರ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ 8 ವಿಕೆಟ್‌ಗಳಿಗೆ 286 ರನ್ ಗಳಿಸಿತ್ತು. ಪ್ರವಾಸಿ ತಂಡ ಇದೀಗ 131 ರನ್‌ಗಳ ಮುನ್ನಡೆಯಲ್ಲಿದೆ.

4 ವಿಕೆಟ್‌ಗೆ 27 ರನ್‌ಗಳಿಂದ ಗುರುವಾರ ಆಟ ಮುಂದುವರಿಸಿದ ಐರ್ಲೆಂಡ್ ತಂಡಕ್ಕೆ ವಿಕೆಟ್‌ಕೀಪರ್ ಬ್ಯಾಟರ್ ಟಕರ್ ಆಸರೆಯಾದರು. 162 ಎಸೆತಗಳನ್ನು ಎದುರಿಸಿದ ಅವರು 14 ಬೌಂಡರಿ ಹಾಗೂ ಒಂದು ಸಿಕ್ಸರ್ ಹೊಡೆದರು. ಟೆಸ್ಟ್ ಪಂದ್ಯದಲ್ಲಿ ಶತಕ ಗಳಿಸಿದ ಐರ್ಲೆಂಡ್‌ನ ಎರಡನೇ ಬ್ಯಾಟರ್ ಎನಿಸಿಕೊಂಡರು.

ಟಕರ್ ಅವರು ಹ್ಯಾರಿ ಟೆಕ್ಟರ್ (56) ಅವರೊಂದಿಗೆ 6ನೇ ವಿಕೆಟ್‌ಗೆ 72 ಹಾಗೂ ಆ್ಯಂಡಿ ಮೆಕ್‌ಬ್ರೈನ್ (ಬ್ಯಾಟಿಂಗ್ 71) ಅವರೊಂದಿಗೆ 7ನೇ ವಿಕೆಟ್‌ಗೆ 111 ರನ್ ಸೇರಿಸಿದರು. ದಿನದಾಟದ ಅಂತ್ಯಕ್ಕೆ ಗ್ರಹಾಂ ಹ್ಯೂಮ್ (ಬ್ಯಾಟಿಂಗ್ 9) ಮೆಕ್‌ಬ್ರೈನ್ ಜೊತೆ ಕ್ರೀಸ್‌ನಲ್ಲಿದ್ದರು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್ ಮೊದಲ ಇನಿಂಗ್ಸ್ 214 ಮತ್ತು ಎರಡನೇ ಇನಿಂಗ್ಸ್ 107 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 286 (ಹ್ಯಾರಿ ಟೆಕ್ಟರ್ 56, ಲೋರ್ಕನ್ ಟಕರ್ 108, ಆ್ಯಂಡಿ ಮೆಕ್‌ಬ್ರೈನ್ ಬ್ಯಾಟಿಂಗ್ 71, ತೈಜುಲ್ ಇಸ್ಲಾಂ 86ಕ್ಕೆ 4, ಶಕೀಬ್ ಅಲ್ ಹಸನ್ 26ಕ್ಕೆ 2, ಎಬಾದತ್ ಹೊಸೇನ್ 36ಕ್ಕೆ 1) ಬಾಂಗ್ಲಾದೇಶ ಮೊದಲ ಇನಿಂಗ್ಸ್ 369

ಆರ್‌ಸಿಬಿ ವೇಗಿ ಟಾಪ್ಲಿ ಟೂರ್ನಿಯಿಂದ ‘ಔಟ್’


ಕೋಲ್ಕತ್ತ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ರೀಸ್ ಟಾಪ್ಲಿ ಅವರು ಗಾಯದ ಕಾರಣ ಐಪಿಎಲ್ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಮುಂಬೈ ಇಂಡಿಯನ್ಸ್ ತಂಡದ ವಿರುದ್ಧ ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದ ವೇಳೆ ಅವರ ಭುಜಕ್ಕೆ ಗಾಯವಾಗಿತ್ತು.

‘ಟಾಪ್ಲಿ ಅವರು ಐಪಿಎಲ್‌ನ ಇನ್ನುಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದು, ತವರಿಗೆ ಮರಳಿದ್ದಾರೆ. ಅವರಿಗೆ ಬದಲಿ ಆಟಗಾರನನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು’ ಎಂದು ಆರ್‌ಸಿಬಿ ಕೋಚ್ ಸಂಜಯ್ ಬಾಂಗರ್ ತಿಳಿಸಿದರು.

ಶ್ರೀಲಂಕಾದ ವಣಿಂದು ಹಸರಂಗ ಅವರು ಏ.10 ರಂದು ಹಾಗೂ ಆಸ್ಟ್ರೇಲಿಯದ ಜೋಶ್ ಹ್ಯಾಜೆಲ್‌ವುಡ್ ಅವರು ಏ.14 ರಂದು ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದರು.

ಷೇರುಪೇಟೆ ವಹಿವಾಟು



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹440
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹445

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ 17,557
ಇಂದಿನ ಅಂತ್ಯ 17,599
▲ 42
ದಿನದ ಕನಿಷ್ಠ 17,638

ಕೊಬ್ಬರಿ ಧಾರಣೆ

ಬೆಂಗಳೂರು ₹10,500-14,000

ಖಾದ್ಯ ತೈಲ ಮುಂಬೈ

(10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1710(1730)
ಸೋಯಾ (ರಿಫೈನ್ಡ್) ₹1065(1080)
ಸೂರ್ಯಕಾಂತಿ (ರಿಫೈನ್ಡ್) ₹1080(1080)
ಪಾಮೋಲಿನ್ ₹974(980)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)
ದಪ್ಪ ₹800-1,300
ಮಧ್ಯಮ ₹500-800
ಸಣ್ಣ ₹300-500

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹355-555
ದ್ವಿತಳಿ (ಬಿ.ವಿ) ₹200-625

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹146.5
ಆರ್‌ಎಸ್‌ಎಸ್-5 ₹141
ಗುಡ್ ಲಾಟ್ ₹132
(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ
6–4–2023
ಜಾವಾ 70/80(ಹೊಸ) 11750-11800
ಜಾವಾ 80/90(ಹೊಸ) 10850-10900
ದಪ್ಪ ಮಧ್ಯಪ್ರದೇಶ(ಹೊಸ) 11100-11200
ದಪ್ಪ ಗುಜರಾತ್(ಹೊಸ) 12100-12200

ಶೇಂಗಾ ಎಣ್ಣೆ (10 ಕೆಜಿಗೆ)
ಕಚ್ಚಾ (ತೆರಿಗೆ ಬಿಟ್ಟು) 1720(1740)
ಒಂದು ವಾರದ ಡೆಲಿವರಿ 1715(1735)
ಸೋಯಾ ಕಚ್ಚಾ 970(990)
ಪಾಮ್ ವಾರದ ಡೆಲಿವರಿ 972(978)
ಸೂರ್ಯಕಾಂತಿ ಎಣ್ಣೆ ಕಚ್ಚಾ 960(960)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
60275(60700)
ಬೆಳ್ಳಿ ಕೆ.ಜಿ 74000(73800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಮಾರುಕಟ್ಟೆ ಮೇಲೆ ಗಮನ’


ನವದೆಹಲಿ (ಪಿಟಿಐ): ಹಾಲಿನ ಉತ್ಪನ್ನಗಳ ಪೂರೈಕೆ ಹಾಗೂ ಬೇಡಿಕೆಯ ನಡುವಿನ ಅಂತರದ ಮೇಲೆ ಗಮನ ಇರಿಸಲಾಗಿದೆ, ಪರಿಸ್ಥಿತಿಯನ್ನು ಗಮನಿಸಿ ಉತ್ಪನ್ನಗಳ ಆಮದಿನ ಬಗ್ಗೆ ತೀರ್ಮಾನಿಸಲಾಗುತ್ತದೆ ಎಂದು ಕೇಂದ್ರ ಪಶುಸಂಗೋಪನೆ ಸಚಿವಾಲಯ ಹೇಳಿದೆ.

ಅಚ್ಚರಿಯ ತೀರ್ಮಾನ ಪ್ರಕಟಿಸಿದ ಭಾರತೀಯ ರಿಸರ್ವ್ ಬ್ಯಾಂಕ್

ರೆಪೊ ದರದಲ್ಲಿ ಬದಲಾವಣೆ ಇಲ್ಲ

ಮುಂಬೈ (ಪಿಟಿಐ): ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಅಚ್ಚರಿಯ ತೀರ್ಮಾನವನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ಶುಕ್ರವಾರ ಕೈಗೊಂಡಿದೆ. ಆದರೆ, ‘ಇದು ವಿರಾಮ ಮಾತ್ರ, ನಿಲುವಿನಲ್ಲಿ ಬದಲಾವಣೆ ಆಗಿಲ್ಲ’ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಶುಕ್ರವಾರಕ್ಕೂ ಮೊದಲು ಆರ್‌ಬಿಐ, 11 ತಿಂಗಳ ಅವಧಿಯಲ್ಲಿ ರೆಪೊ ದರವನ್ನು ಒಟ್ಟು 250 ಮೂಲಾಂಶಗಳಷ್ಟು (ಶೇ 2.50) ಹೆಚ್ಚಿಸಿತ್ತು. ಮುಂದಿನ ದಿನಗಳಲ್ಲಿ ಅಗತ್ಯ ಕಂಡುಬಂದರೆ ರೆಪೊ ದರವನ್ನು ಮತ್ತೆ ಹೆಚ್ಚಿಸಲಾಗುವುದು ಎಂದು ದಾಸ್ ಸ್ಪಷ್ಟಪಡಿಸಿದ್ದಾರೆ. ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ತೀರ್ಮಾನಕ್ಕೆ ಎಂಪಿಸಿಯ ಎಲ್ಲ ಸದಸ್ಯರು ಸಮ್ಮತಿಸಿದ್ದಾರೆ. ಹೊಂದಾಣಿಕೆಯ ಹಣಕಾಸು ನೀತಿಯನ್ನು ಹಿಂಪಡೆಯುವ ನಿಲುವನ್ನು ಎಂಪಿಸಿ ಬದಲಾಯಿಸಿಲ್ಲ.


ಶಕ್ತಿಕಾಂತ ದಾಸ್ – ಪಿಟಿಐ ಚಿತ್ರ

ವಿರಾಮ ನೀಡುವ ಮೊದಲು ಆರ್‌ಬಿಐ ರೆಪೊ ದರವನ್ನು ಶೇ 0.25ರಷ್ಟು ಹೆಚ್ಚಿಸಬಹುದು ಎಂದು ಹಣಕಾಸು ತಜ್ಞರು ನಿರೀಕ್ಷಿಸಿದ್ದರು. ಆರ್‌ಬಿಐ ಕೈಗೊಂಡಿರುವ ತೀರ್ಮಾನವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ವಾಗತಿಸಿದ್ದಾರೆ.

ಮುಖ್ಯಾಂಶಗಳು
- ರೆಪೊ ದರವನ್ನು ಶೇ 6.50ರಲ್ಲಿ ಕಾಯ್ದುಕೊಂಡ ಆರ್‌ಬಿಐ
- ಜಾಗತಿಕ ಬ್ಯಾಂಕಿಂಗ್ ಬಿಕ್ಕಟ್ಟಿನ ಸಂದರ್ಭದಲ್ಲಿ ಕೈಗೊಂಡ ತೀರ್ಮಾನ

ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇಕಡ 6.5ಕ್ಕೆ ತಲುಪಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಈ ಮೊದಲು ಬೆಳವಣಿಗೆ ದರದ ಅಂದಾಜು ಶೇ 6.4 ಆಗಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣವು ಶೇ 5.2 ಆಗಬಹುದು ಎಂದು ಕೂಡ ಆರ್‌ಬಿಐ ಅಂದಾಜಿಸಿದೆ.

‘2019ರ ಫೆಬ್ರುವರಿಯಲ್ಲಿ ನಾವು ರೆಪೊ ದರವನ್ನು ಇಳಿಕೆ ಮಾಡಲು ಆರಂಭಿಸಿದಾಗ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 2ರಷ್ಟು ಇತ್ತು, ರೆಪೊ ದರವು ಶೇ 6.50ರಷ್ಟು ಇತ್ತು. ಆದರೆ ಈಗ ರೆಪೊ ದರ ಮತ್ತೆ ಶೇ 6.50ಕ್ಕೆ ಬಂದಿದೆ, ಹಣದುಬ್ಬರ ಮಾತ್ರ ಶೇ 6.4ಕ್ಕೆ ತಲುಪಿದೆ’ ಎಂದು ದಾಸ್ ಹೇಳಿದ್ದಾರೆ.

‘ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವುದಕ್ಕೆ ಹಣಕಾಸು ಸ್ಥಿರತೆಗೆ ಸಂಬಂಧಿಸಿದ ವಿಚಾರಗಳು ಕಾರಣವಾಗಿರಬಹುದು. ಹಣದುಬ್ಬರ ಪ್ರಮಾಣವು ಏಪ್ರಿಲ್–ಜೂನ್ ಅವಧಿಯಲ್ಲಿ ತಗ್ಗದಿದ್ದರೆ ಹಾಗೂ ಹಣಕಾಸು ಸ್ಥಿರತೆ ಕಂಡುಬಂದರೆ ಆರ್‌ಬಿಐ ಮತ್ತೆ ರೆಪೊ ದರ ಹೆಚ್ಚಿಸಬಹುದು’ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

ರೆಪೊ ಯಥಾಸ್ಥಿತಿ: ಏನಿದರ ಪರಿಣಾಮ?

- ರೆಪೊ ದರದಲ್ಲಿ ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ ಎಂದು ಆರ್‌ಬಿಐನ ಹಣಕಾಸು ನೀತಿ ಸಮಿತಿ ಹೇಳಿದೆ. ಅಂದರೆ, ಗೃಹ ಸಾಲ, ವಾಹನ ಸಾಲ, ವೈಯಕ್ತಿಕ ಸಾಲಗಳ ಮೇಲಿನ ಬಡ್ಡಿ ದರದಲ್ಲಿ ಇನ್ನಷ್ಟು ಏರಿಕೆಯು ಈ ಹಂತದಲ್ಲಿ ಆಗಲಿಕ್ಕಿಲ್ಲ. ಸಾಲ ಪಡೆದವರು ಅಷ್ಟರಮಟ್ಟಿಗೆ ಸಮಾಧಾನಪಟ್ಟುಕೊಳ್ಳಬಹುದು, ಸ್ಥಿರತೆ ನಿರೀಕ್ಷಿಸಬಹುದು.
- ರೆಪೊ ದರ ಏರಿಕೆ ಶುರುವಾದ ನಂತರದಲ್ಲಿ ಹಲವು ಬ್ಯಾಂಕ್‌ಗಳು ವಿವಿಧ ಠೇವಣಿಗಳ ಮೇಲಿನ ಬಡ್ಡಿ ದರ ಏರಿಕೆ ಮಾಡಿವೆ. ಈಗ ಅವಧಿ ಠೇವಣಿಗಳಿಗೆ ಸಿಗುತ್ತಿರುವ ಬಡ್ಡಿ ದರವು ಬಹುಶಃ ಗರಿಷ್ಠ ಮಟ್ಟದ್ದಾಗಿರಬಹುದು. ಹೀಗಾಗಿ, ಈ ಸಂದರ್ಭವನ್ನು ಬಳಸಿಕೊಂಡು ಒಳ್ಳೆಯ ಬಡ್ಡಿ ಸಿಗುತ್ತಿರುವ ನಿಶ್ಚಿತ ಠೇವಣಿಗಳಲ್ಲಿ ಹಣ ತೊಡಗಿಸಲು ಮುಂದಾಗಬಹುದು.
- ಷೇರುಪೇಟೆಯಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡುವವರು ಕಡಿಮೆ ಸಾಲ ಇರುವ ಅಥವಾ ಸಾಲ ಇಲ್ಲದಿರುವ ಕಂಪನಿಗಳ ಷೇರುಗಳಲ್ಲಿ ಆದ್ಯತೆಯ ಮೇರೆಗೆ ಒಂದಿಷ್ಟು ಹಣ ತೊಡಗಿಸುವುದಿದೆ. ಸಾಲದ ಮೇಲಿನ ಬಡ್ಡಿ ದರ ಸದ್ಯಕ್ಕೆ ಏರಿಕೆ ಆಗದು ಎನ್ನುವುದು ಕಂಪನಿಗಳ ಲಾಭಾಂಶದ ಮೇಲೆ ಸಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ. ಅಂದರೆ, ಸಾಲದ ಬಡ್ಡಿ ಇನ್ನಷ್ಟು ಹೆಚ್ಚಾಗಿ, ಕಂಪನಿಗಳ ವರಮಾನದಲ್ಲಿ ಹೆಚ್ಚಿನ ಪಾಲು ಸಾಲದ ಬಡ್ಡಿ ಪಾವತಿಗೆ ವಿನಿಯೋಗವಾಗುವುದು, ಅದರಿಂದಾಗಿ ಕಂಪನಿಗಳ ಲಾಭಾಂಶ ಮತ್ತಷ್ಟು ಕಡಿಮೆ ಆಗುವ ಸನ್ನಿವೇಶ ಈ ಹಂತದಲ್ಲಿ ಇಲ್ಲ. ಕಂಪನಿಗಳ ಲಾಭಾಂಶಕ್ಕೆ ಸಾಲದ ಬಡ್ಡಿಯಿಂದ ಈಗ ಪೆಟ್ಟು ಬೀಳದು. ಈ ನಿರೀಕ್ಷೆಯಲ್ಲಿ, ಷೇರುಗಳಲ್ಲಿ ಹೆಚ್ಚಿನ ಹೂಡಿಕೆ ಆಗಬಹುದು. ಷೇರು ಮಾರುಕಟ್ಟೆಯಲ್ಲಿ ತೇಜಿ ವಹಿವಾಟು ನಡೆಯಬಹುದು. ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳಿಂದ ಹೆಚ್ಚು ಲಾಭಾಂಶ ಸಿಗುವ ಸಾಧ್ಯತೆ ಇರುತ್ತದೆ. ಇದೇ ವೇಳೆ, ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಲಾಭಾಂಶ ತುಸು ಪ್ರಮಾಣದಲ್ಲಿ ಕಡಿಮೆ ಆಗಬಹುದು.
- ಬಂಡವಾಳ ಮಾರುಕಟ್ಟೆಯ ಬದಲು, ಸಾಲದ ಮೂಲಕವೇ ಪ್ರಧಾನವಾಗಿ ಬಂಡವಾಳ ಸಂಗ್ರಹಿಸುವ ಎಂಎಸ್‌ಎಂಇ ವಲಯದ ಉದ್ದಿಮೆಗಳು, ಸಾಲದ ಮೇಲಿನ ಬಡ್ಡಿ ದರ ಹೆಚ್ಚಾಗಿಲ್ಲ ಎಂಬ ಸಮಾಧಾನ ಹೊಂದಬಹುದು.

ಮಾಹಿತಿ: ಹಣಕಾಸು ತಜ್ಞರಾದ ಕುಮಾರ್ ಪ್ರಸಾದ್, ಪ್ರಮೋದ ಶ್ರೀಕಾಂತ ದೈತೋಟ, ರಾಜೇಶ್ ಕುಮಾರ್ ಟಿ.ಆರ್.

ಯುಪಿಐ ಮೂಲಕ ಸಾಲದ ದುಡ್ಡು

ಮುಂಬೈ (ಪಿಟಿಐ/ರಾಯಿಟರ್ಸ್): ಏಕೀಕೃತ ಪಾವತಿ ವ್ಯವಸ್ಥೆಯ (ಯುಪಿಐ) ವ್ಯಾಪ್ತಿಯನ್ನು ಹಿಗ್ಗಿಸಿ, ಸಾಲದ ಖಾತೆಗಳಿಗೆ ಅದನ್ನು ಜೋಡಿಸಲು ಆರ್‌ಬಿಐ ಮುಂದಾಗಿದೆ. ಈ ವಿಚಾರವಾಗಿ ಶೀಘ್ರದಲ್ಲಿಯೇ ಮಾರ್ಗಸೂಚಿ ಹೊರಡಿಸಲಿದೆ.

ಮಂಜೂರಾದ ಸಾಲದ ಖಾತೆಗಳನ್ನು ಯುಪಿಐ ವ್ಯವಸ್ಥೆಗೆ ಜೋಡಿಸಿ, ಯುಪಿಐ ಮೂಲಕವೇ ಆ ಖಾತೆಯಲ್ಲಿನ ಹಣವನ್ನು ಅಗತ್ಯವಿರುವಲ್ಲಿ ಪಾವತಿಸಲು ಹಾಗೂ ಸಾಲದ ಖಾತೆಗೆ ಯುಪಿಐ ಮೂಲಕ ಹಣವನ್ನು ಮರಳಿಸುವ ಸೌಲಭ್ಯ ನೀಡಲು ಪ್ರಸ್ತಾವ ಮಾಡಲಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಗುರುವಾರ ತಿಳಿಸಿದ್ದಾರೆ.

ಈಗ ಯುಪಿಐಅನ್ನು ಉಳಿತಾಯ ಖಾತೆ ಹಾಗೂ ರುಪೇ ಕ್ರೆಡಿಟ್ ಕಾರ್ಡ್ ಜೊತೆ ಜೋಡಿಸಿ, ಪಾವತಿಗಳನ್ನು ಮಾಡಬಹುದು. ಉಳಿತಾಯ ಖಾತೆಗೆ ಯುಪಿಐ ಜೋಡಿಸಿ, ಅದರ ಮೂಲಕ ಮಾಡುವ ಪಾವತಿಗಳು ದೇಶದಲ್ಲಿ ಭಾರಿ ಜನಪ್ರಿಯವಾಗಿವೆ.

ಯುಪಿಐ ಹಾಗೂ ರುಪೇ ಕ್ರೆಡಿಟ್ ಕಾರ್ಡ್ ಜೋಡಿಸುವ ನಡೆಯು ಹೆಚ್ಚು ಜನಪ್ರಿಯ ಆಗಿಲ್ಲ. ಏಕೆಂದರೆ ಖಾಸಗಿ ವಲಯದ ಬಹುತೇಕ ಬ್ಯಾಂಕ್‌ಗಳು ವಿಸಾ ಅಥವಾ ಮಾಸ್ಟರ್‌ಕಾರ್ಡ್ ಕ್ರೆಡಿಟ್ ಕಾರ್ಡ್‌ಗಳನ್ನು ನೀಡುತ್ತಿವೆ ಎಂದು ಯೆಸ್ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಶಿವಾಜಿ ಟಿ. ಹೇಳಿದ್ದಾರೆ.

ಈಗಿನ ಪ್ರಸ್ತಾವವು ಜಾರಿಗೆ ಬಂದ ನಂತರದಲ್ಲಿ ಖಾಸಗಿ ವಲಯದ ಬ್ಯಾಂಕ್‌ಗಳು, ತಮ್ಮಲ್ಲಿನ ಖಾತೆಯಿಂದ ಯುಪಿಐ ಮೂಲಕ ವಹಿವಾಟು ನಡೆಸುತ್ತಿರುವ ಯಾವುದೇ ಗ್ರಾಹಕನಿಗೆ ಕ್ರೆಡಿಟ್ ಕಾರ್ಡ್ ಮಾದರಿಯ ಸೌಲಭ್ಯವನ್ನು ಒದಗಿಸಲು ಸಾಧ್ಯವಾಗಲಿದೆ ಎಂದು ಅವರು ಹೇಳಿದ್ದಾರೆ.

ಆರ್‌ಬಿಐ ಈಗ ಸಿದ್ಧಪಡಿಸಿರುವ ಪ್ರಸ್ತಾವನೆಯು ಯುಪಿಐ ವ್ಯಾಪ್ತಿಯನ್ನು ಹಿಗ್ಗಿಸಿ, ಹಣಕಾಸು ಸಂಸ್ಥೆಗಳಿಂದ ಸಾಲ ಸಿಗುವುದನ್ನು ಜಾಸ್ತಿ ಮಾಡುವ ಉದ್ದೇಶ ಹೊಂದಿದೆ ಎಂದು ಭಾರತೀಯ ಬ್ಯಾಂಕ್‌ಗಳ ಒಕ್ಕೂಟದ (ಐಬಿಎ) ಅಧ್ಯಕ್ಷ ಎ.ಕೆ. ಗೋಯಲ್ ಹೇಳಿದ್ದಾರೆ.

ಸರಿಸುಮಾರು 400 ಬ್ಯಾಂಕ್‌ಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು ಈಗ ಯುಪಿಐ ಸೇವೆಯನ್ನು ಗ್ರಾಹಕರಿಗೆ ಒದಗಿಸುತ್ತಿವೆ.

ಮೊದಲೇ ಮಂಜೂರಾದ ಸಾಲದ ಖಾತೆಗಳ ಜೊತೆ ಯುಪಿಐಅನ್ನು ಜೋಡಿಸುವುದು ಕ್ರೆಡಿಟ್ ಕಾರ್ಡ್ ಹಾಗೂ ಬೈ–ನೌ–ಪೇ–ಲೇಟರ್ (ಈಗ ಖರೀದಿಸಿ, ನಂತರ ಹಣ ಪಾವತಿಸಿ) ಉತ್ಪನ್ನಗಳ ಪಾಲಿಗೆ ಬಹುದೊಡ್ಡ ಸವಾಲಾಗಿ ನಿಲ್ಲಬಹುದು ಎಂದು ಹಿರಿಯ ಬ್ಯಾಂಕರ್ ಒಬ್ಬರು ಹೇಳಿದ್ದಾರೆ.

ಕರ್ಣಾಟಕ ಬ್ಯಾಂಕ್: ₹ 1.75 ಲಕ್ಷ ಕೋಟಿ ವಹಿವಾಟು ಗುರಿ

ಮಂಗಳೂರು: ‘2023–24ನೇ ಹಣಕಾಸು ವರ್ಷದಲ್ಲಿ ಬ್ಯಾಂಕ್‌ನ ಒಟ್ಟು ವಹಿವಾಟನ್ನು ₹ 1.75 ಲಕ್ಷ ಕೋಟಿಗೆ (ಶೇ 17.69ರಷ್ಟು ವೃದ್ಧಿ) ಹೆಚ್ಚಿಸುವ ಗುರಿ ಹೊಂದಲಾಗಿದೆ’ ಎಂದು ಕರ್ಣಾಟಕ ಬ್ಯಾಂಕ್‌ನ ಎಂ.ಡಿ ಹಾಗೂ ಸಿಇಒ ಮಹಾಬಲೇಶ್ವರ ಎಂ.ಎಸ್. ತಿಳಿಸಿದರು.

ಹೊಸ ಹಣಕಾಸು ವರ್ಷಾರಂಭದ ಹಿನ್ನೆಲೆಯಲ್ಲಿ ವೆಬೆಕ್ಸ್ ಮೂಲಕ ಬ್ಯಾಂಕ್‌ನ ಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘2023ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್‌ನ ಒಟ್ಟು ವಹಿವಾಟು ಹಿಂದಿನ ವರ್ಷಕ್ಕಿಂತ ಶೇ 7.63ರಷ್ಟು ಬೆಳವಣಿಗೆ ಹೊಂದಿ, ₹ 1,48,694 ಕೋಟಿಯಷ್ಟಾಗಿದೆ’ ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ
ಬಂಟ್ವಾಳ
ಕೋಕ 12,500-25,000
ಹೊಸತು 27,500-38,000
ಹಳತು 48,000-53,000
ಚನ್ನಗಿರಿ
ರಾಶಿ 44,579-45,600
ಶಿವಮೊಗ್ಗ
ಬೆಟ್ಟೆ 45,199-50,169
ಗೊರಬಲು 23,100-32,009
ರಾಶಿ 30,099-45,296
ಸರಕು 53,519-79,986
ಶಿರಸಿ
ಬೆಟ್ಟೆ 35,699-42,619
ಬಿಳಿಗೋಟು 22,509-31,599
ಚಾಲಿ 33,099-36,199
ಕೆಂಪುಗೋಟು 24,296-33,899
ರಾಶಿ 41,098-44,109
ತುಮಕೂರು
ರಾಶಿ 44,500-45,200
ಯಲ್ಲಾಪುರ
ಆಪಿ 52,395-52,395
ಬಿಳಿಗೋಟು 24,899-32,699
ಚಾಲಿ 33,679-36,019
ಕೋಕ 18,899-29,499
ಕೆಂಪುಗೋಟು 24,899-34,100
ರಾಶಿ 40,500-48,209
ತಟ್ಟಿಬೆಟ್ಟೆ 36,369-43,699

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)	
ಮುದ್ರೆಮನೆ	
ಎಪಿ	14,750
ಎಸಿ	7,700
ಆರ್‌ಪಿ	10,400
ಆರ್‌ಸಿ	5,365

ವಾರಸುದಾರರಿಲ್ಲದ ಹಣ: ಮಾಹಿತಿಗೆ ಪೋರ್ಟಲ್

ಮುಂಬೈ (ಪಿಟಿಐ/ರಾಯಿಟರ್ಸ್): ಬೇರೆ ಬೇರೆ ಬ್ಯಾಂಕ್‌ಗಳಲ್ಲಿ ವಾರಸುದಾರರು ಇಲ್ಲದಿರುವ ಠೇವಣಿಗಳ ಬಗ್ಗೆ ಮಾಹಿತಿ ನೀಡಲು ಕೇಂದ್ರೀಕೃತ ಪೋರ್ಟಲ್ ಅಭಿವೃದ್ಧಿಪಡಿಸಲಾಗುವುದು ಎಂದು ಆರ್‌ಬಿಐ ಹೇಳಿದೆ.

10 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಯಾವುದೇ ವಹಿವಾಟು ನಡೆಯದ, ವಾರಸುದಾರರು ಇಲ್ಲದ ಖಾತೆಗಳಿಂದ ಅಂದಾಜು ₹ 35 ಸಾವಿರ ಕೋಟಿಯನ್ನು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಆರ್‌ಬಿಐಗೆ ಈಚೆಗೆ ವರ್ಗಾಯಿಸಿವೆ.

‘ಠೇವಣಿ ಮಾಡಿರುವವರಿಗೆ ಅಥವಾ ಅವರ ವಾರಸುದಾರರಿಗೆ, ಕೇಳುವವರಿಲ್ಲದೆ ಉಳಿದಿರುವ ಹಣದ ಬಗ್ಗೆ ಮಾಹಿತಿ ಹೆಚ್ಚು ಸಿಗಬೇಕು ಎಂಬ ಉದ್ದೇಶದಿಂದ ವೆಬ್ ಪೋರ್ಟಲ್ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ’ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಕೇಳುವವರು ಇಲ್ಲದಂತೆ ಆಗಿರುವ ಠೇವಣಿಗಳ ವಿವರವನ್ನು ಬ್ಯಾಂಕ್‌ಗಳು ತಮ್ಮ ವೆಬ್‌ಸೈಟ್ ಮೂಲಕ ಪ್ರಕಟಿಸುತ್ತಿವೆ ಎಂದು ದಾಸ್ ತಿಳಿಸಿದ್ದಾರೆ.

ಸಾಲ ಕುರಿತ ಮಾಹಿತಿ ಸಂಗ್ರಹಿಸುವ ಕಂಪನಿಗಳ (ಸಿಐಸಿ) ಬಗ್ಗೆ ಬರುತ್ತಿರುವ ದೂರುಗಳನ್ನು ಇತ್ಯರ್ಥಪಡಿಸುವ ವ್ಯವಸ್ಥೆಯನ್ನು ಬಲಪಡಿಸಲು ತೀರ್ಮಾನಿಸಲಾಗಿದೆ ಎಂದು ದಾಸ್ ಹೇಳಿದ್ದಾರೆ. ಈ ಉದ್ದೇಶಕ್ಕಾಗಿ ಸಿಐಸಿಗಳನ್ನು ರಿಸರ್ವ್ ಬ್ಯಾಂಕ್‌ನ ಏಕೀಕೃತ ಒಂಬುಡ್ಸ್‌ಮನ್ ವ್ಯವಸ್ಥೆಯ (ಆರ್‌ಬಿ–ಐಒಎಸ್) ಅಡಿ ತರಲಾಗಿದೆ.

ವ್ಯಕ್ತಿಯ ಸಾಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಕಾಲದಲ್ಲಿ ಪರಿಷ್ಕರಿಸದೆ ಇದ್ದರೆ, ಸಾಲದ ಕುರಿತ ವರದಿಯಲ್ಲಿನ ಲೋಪಗಳನ್ನು ಸಕಾಲದಲ್ಲಿ ಸರಿಪಡಿಸದೆ ಇದ್ದರೆ ಪರಿಹಾರ ಒದಗಿಸಬೇಕು ಎಂಬ ನಿಯಮವನ್ನು ಪ್ರಸ್ತಾಪಿಸಲಾಗಿದೆ ಎಂದು ಅವರು ಹೇಳಿದ್ದಾರೆ. ಅಲ್ಲದೆ, ವ್ಯಕ್ತಿಯ ಸಾಲದ ವಹಿವಾಟುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಇತರರು ಪಡೆದುಕೊಂಡ ಸಂದರ್ಭದಲ್ಲಿ, ಅದು ಎಸ್‌ಎಂಎಸ್ ಅಥವಾ ಇ-ಮೇಲ್ ಮೂಲಕ ವ್ಯಕ್ತಿಗೆ ತಿಳಿಯುವಂತೆ ಆಗಬೇಕು ಎಂಬ ಪ್ರಸ್ತಾವನೆಯೂ ಇದೆ ಎಂದು ದಾಸ್ ತಿಳಿಸಿದ್ದಾರೆ. ಈ ವಿಚಾರವಾಗಿ ಆರ್‌ಬಿಐ ವಿಸ್ತೃತ ನಿಯಮಾವಳಿಗಳನ್ನು ಶೀಘ್ರದಲ್ಲಿಯೇ ಹೊರಡಿಸಲಿದೆ.

ಸಿಐಸಿಗಳು ಸಾಲ ಪಡೆದ ಕಂಪನಿಗಳು ಹಾಗೂ ವ್ಯಕ್ತಿಗಳ ಸಾಲದ ವಿವರವನ್ನು ಸಂಗ್ರಹಿಸುತ್ತವೆ. ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಬಾಕಿ ಪಾವತಿ ಕುರಿತ ಮಾಹಿತಿಯನ್ನು ಆಧರಿಸಿ ಅವು ವರದಿ ಸಿದ್ಧಪಡಿಸುತ್ತವೆ. ಈ ವರದಿಯಲ್ಲಿ ಕ್ರೆಡಿಟ್ ಸ್ಕೋರ್ ನಮೂದಿಸಿರಲಾಗುತ್ತದೆ. ಈ ಸ್ಕೋರ್‌ಅನ್ನು ಬ್ಯಾಂಕ್‌ಗಳು ಹಾಗೂ ಹಣಕಾಸು ಸಂಸ್ಥೆಗಳು ಸಾಲ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ಬಳಸಿಕೊಳ್ಳುತ್ತವೆ.

ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಎಂಟರಘಟ್ಟಕ್ಕೆ ಪ್ರವೇಶ

ನಿಶಿಮೊಟೊ ಮಣಿಸಿದ ಪ್ರಿಯಾಂಶು

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ಭಾರತದ ಯುವ ಆಟಗಾರ ಪ್ರಿಯಾಂಶು ರಾಜಾವತ್ ಅವರು ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಗ್ರಶ್ರೇಯಾಂಕದ ಆಟಗಾರ ಜಪಾನ್‌ನ ಕೆಟಾ ನಿಶಿಮೊಟೊ ಅವರಿಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪ್ರಿಯಾಂಶು 21–8, 21–16ರ ನೇರ ಗೇಮ್‌ಗಳಿಂದ ಗೆದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 58ನೇ ಸ್ಥಾನದಲ್ಲಿರುವ ಭಾರತದ ಆಟಗಾರ 12ನೇ ರ‍್ಯಾಂಕ್‌ನ ಆಟಗಾರನ ವಿರುದ್ಧದ ಪಂದ್ಯದಲ್ಲಿ ಚೇತೋಹಾರಿ ಪ್ರದರ್ಶನ ನೀಡಿದರು.

ನಿಶಿಮೊಟೊ ಕಳೆದ ವಾರ ನಡೆದಿದ್ದ ಮ್ಯಾಡ್ರಿಡ್ ಮಾಸ್ಟರ್ಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಪ್ರಿಯಾಂಶು ಅವರು ಆರಂಭದಿಂದೇ ಆಕ್ರಮಣಕಾರಿ ಆಟವಾಡಿ ಮೊದಲ ಗೇಮ್‌ನಲ್ಲಿ 10–0 ಮುನ್ನಡೆ ಪಡೆದರು. ಒತ್ತಡಕ್ಕೆ ಒಳಗಾದ ಜಪಾನ್‌ನ ಆಟಗಾರ ಮೊದಲ ಗೇಮ್‌ನಲ್ಲಿ ಎಂಟು ಪಾಯಿಂಟ್ಸ್ ಮಾತ್ರ ಗಳಿಸಿದರು.

ಎರಡನೇ ಗೇಮ್‌ನಲ್ಲಿ ನಿಶಿಮೊಟೊ 6–2ರಲ್ಲಿ ಮುನ್ನಡೆ ಪಡೆದು ಮರುಹೋರಾಟದ ಸೂಚನೆ ನೀಡಿದರು. ಆದರೆ ಪುಟಿದೆದ್ದು ನಿಂತ ಪ್ರಿಯಾಂಶು 10–10 ರಲ್ಲಿ ಸಮಬಲ ಸಾಧಿಸಿದರು. ಆ ಬಳಿಕ ಪ್ರಬಲ ಸ್ಮ್ಯಾಷ್ ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಪಾಯಿಂಟ್ಸ್ ಕಲೆಹಾಕಿ 16–11 ರಲ್ಲಿ ಮೇಲುಗೈ ಪಡೆದರು. ಅದೇ ಮುನ್ನಡೆಯನ್ನು ಕಾಪಾಡಿಕೊಂಡು ಗೇಮ್ ಹಾಗೂ ಪಂದ್ಯ ಗೆದ್ದುಕೊಂಡರು.


ಪ್ರಿಯಾಂಶು ರಾಜಾವತ್

ಮಿಥುನ್, ತಾನ್ಯಾಗೆ ನಿರಾಸೆ: ಕರ್ನಾಟಕದ ಮಿಥುನ್ ಮಂಜುನಾಥ್ ಮತ್ತು ತಾನ್ಯಾ ಹೇಮಂತ್ ಅವರಿಗೆ 16ರ ಘಟ್ಟದಲ್ಲಿ ನಿರಾಸೆ ಎದುರಾಯಿತು. ಚೀನಾ ತೈಪೆಯ ಚಿ ಯು ಜೆನ್ 21–15, 21–19 ರಲ್ಲಿ ಮಿಥುನ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಜಪಾನ್‌ನ ನತ್ಸುಕಿ ನಿದಯಿರಾ 21–8, 21–17 ರಲ್ಲಿ ತಾನ್ಯಾ ಅವರನ್ನು ಮಣಿಸಿ ಎಂಟರಘಟ್ಟ ಪ್ರವೇಶಿಸಿದರು. ಮೊದಲ ಗೇಮ್ ಸುಲಭವಾಗಿ ಸೋತ ತಾನ್ಯಾ, ಎರಡನೇ ಗೇಮ್‌ನಲ್ಲಿ ಎದುರಾಳಿಗೆ ಅಲ್ಪ ಪೈಪೋಟಿ ಒಡ್ಡಿದರು.

ಮಿಶ್ರ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸಾಯಿ ಪ್ರತೀಕ್–ತನೀಶಾ ಕ್ರಾಸ್ಟೊ ಜೋಡಿ ನಿರಾಶೆ ಅನುಭವಿಸಿತು. ಮಲೇಷ್ಯಾದ ಚೆನ್ ತಾಂಗ್ ಜಿ– ತೊ ಹಿ ವೀ 21–23, 21–17, 23–21 ರಲ್ಲಿ ಭಾರತದ ಜೋಡಿಯನ್ನು ಮಣಿಸಿತು. ಈ ಪಂದ್ಯ 1 ಗಂಟೆಗೂ ಹೆಚ್ಚು ಹೊತ್ತು ನಡೆಯಿತು. ಮೊದಲ ಗೇಮ್ ಗೆದ್ದ ಪ್ರತೀಕ್–ತನೀಶಾ ಆ ಬಳಿಕ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟರು.

ಮುಖ್ಯಾಂಶಗಳು

- 21–8, 21–16 ಗೇಮ್‌ಗಳ ಗೆಲುವು
- ಮಿಥುನ್, ತಾನ್ಯಾಗೆ 16ರ ಘಟ್ಟದಲ್ಲಿ ನಿರಾಸೆ
- ಸಾಯಿ ಪ್ರತೀಕ್– ತನೀಶಾ ಕ್ರಾಸ್ಟೊ ಜೋಡಿಗೆ ಸೋಲು

ಎನ್‌ಆರ್‌ಎಐಗೆ ಕಲಿಕೇಶ್ ಅಧ್ಯಕ್ಷ

ಬೆಂಗಳೂರು: ಕಲಿಕೇಶ್ ನಾರಾಯಣಸಿಂಗ್ ದೇವ್ ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಹಿರಿಯ ಉಪಾಧ್ಯಕ್ಷರಾಗಿದ್ದ ದೇವ್ ಅವರು ನಿಕಟಪೂರ್ವ ಅಧ್ಯಕ್ಷ ರಣಿಂದರ್ ಸಿಂಗ್ ಅವರು 'ದೀರ್ಘ ರಜೆ'ಗೆ ತೆರಳಿದ್ದರಿಂದ ಖಾಲಿಯಾಗಿರುವ ಸ್ಥಾನಕ್ಕೇರಿದ್ದಾರೆ.

ನೂತನ ರಾಷ್ಟ್ರೀಯ ಕ್ರೀಡಾ ನೀತಿಯ ಪ್ರಕಾರ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ (ಎನ್‌ಎಸ್‌ಎಫ್) ಪದಾಧಿಕಾರಿಗಳು 12 ವರ್ಷಗಳಿಗಿಂತಲೂ ಹೆಚ್ಚು ಅಧಿಕಾರ ನಡೆಸುವಂತಿಲ್ಲ.

ರಣೀಂದರ್ ಅವರು 2021ರಲ್ಲಿ ಮರುಆಯ್ಕೆ ಆಗಿದ್ದರು. ಆದರೆ 2010 ರಿಂದ 2022ರವರೆಗೆ ಅವರು ಕಾರ್ಯನಿರ್ವಹಿಸಿದ್ದರಿಂದ ಈ ವರ್ಷ ಅವರು ಸ್ಥಾನ ಬಿಡಬೇಕಿತ್ತು. ಆದ್ದರಿಂದ 'ಸುದೀರ್ಘ ರಜೆ' ತೆಗೆದುಕೊಂಡಿದ್ದಾರೆ.

ಅಪ್ಪಚೆಟ್ಟೋಳಂಡ ಕಪ್ ಹಾಕಿ ಟೂರ್ನಿ

ಸೆಮಿಫೈನಲ್‌ಗೆ ಪಳಂಗಂಡ ಲಗ್ಗೆ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಅಜಯ್ ಮತ್ತು ಪೊನ್ನಪ್ಪ ಗಳಿಸಿದ ಗೋಲುಗಳ ಬಲದಿಂದ ಪಳಂಗಂಡ ತಂಡದವರು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಅಪ್ಪಚೆಟ್ಟೋಳಂಡ ಕಪ್ ಹಾಕಿ ಟೂರ್ನಿಯಲ್ಲಿ ಗುರುವಾರ ಸೆಮಿಫೈನಲ್ ಪ್ರವೇಶಿಸಿದರು.

ಚೆರಿಯಪರಂಬುವಿನಲ್ಲಿ ಜನರಲ್ ತಿಮ್ಮಯ್ಯ ಹಾಕಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಪಳಂಗಂಡ ತಂಡವು 2-1ರಲ್ಲಿ ಅಮ್ಮಣಿಚಂಡ ತಂಡವನ್ನು ಮಣಿಸಿತು. ಅಮ್ಮಣಿಚಂಡ ಪರ ವಿಘ್ನೇಶ್ ಬೋಪಣ್ಣ ಒಂದು ಗೋಲು ಗಳಿಸಿದರು.

ನೆಲ್ಲಮಕ್ಕಡ ತಂಡವು 5-1ರಲ್ಲಿ ಕಂಬೀರಂಡ ತಂಡವನ್ನು ಮಣಿಸಿತು. ನೆಲ್ಲಮಕ್ಕಡ ಪರವಾಗಿ ಸೋಮಯ್ಯ 'ಹ್ಯಾಟ್ರಿಕ್' ಗೋಲು, ದೇವಯ್ಯ ಮತ್ತು ಮೊಣ್ಣಪ್ಪ ತಲಾ ಒಂದು ಗೋಲು ಗಳಿಸಿ ತಂಡವನ್ನು ನಾಲ್ಕರ ಘಟ್ಟಕ್ಕೆ ತಲುಪಿಸಿದರು. ಕಂಬೀರಂಡ ತಂಡದ ಮಯೂರ್ ಬೋಪಯ್ಯ ಒಂದು ಗೋಲು ಗಳಿಸಿದರು.

ಅವನೀಶ್ ಮಂದಪ್ಪ ಗಳಿಸಿದ 'ಹ್ಯಾಟ್ರಿಕ್' ಗೋಲುಗಳ ಬಲದಿಂದ ಕುಲ್ಲೇಟಿರ ತಂಡದವರು 3–1ರಲ್ಲಿ ಪುದಿಯೊಕ್ಕಡ ತಂಡದ ವಿರುದ್ಧ ಗೆದ್ದರು. ಕುಪ್ಪಂಡ (ಕೈಕೇರಿ) ತಂಡವು 3-2 ಅಂತರದಿಂದ ಚೆಕ್ಕೆರ ತಂಡವನ್ನು ಮಣಿಸಿತು. ಕುಪ್ಪಂಡ ಸೋಮಯ್ಯ 'ಹ್ಯಾಟ್ರಿಕ್' ಸಾಧನೆ ಮಾಡಿದರು.

ಮಳೆಯ ಕಾರಣದಿಂದ ಬುಧವಾರ ಮುಂದೂಡಲಾಗಿದ್ದ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕುಪ್ಪಂಡ (ಕೈಕೇರಿ) ತಂಡವು 6-2ರಲ್ಲಿ ಮುರುವಂಡ ತಂಡದ ವಿರುದ್ಧ ಜಯ ಸಾಧಿಸಿತು. ಕುಪ್ಪಂಡ ಸೋಮಯ್ಯ 4 ಗೋಲು ಗಳಿಸಿದರೆ, ನಾಚಪ್ಪ ಹಾಗೂ ಮಂದಣ್ಣ ತಲಾ ಒಂದು ಗೋಲು ಗಳಿಸಿದರು. ಮುರುವಂಡ ತಂಡದ ಅಣ್ಣಯ್ಯ ಎರಡು ಗೋಲು ಗಳಿಸಿದರು.

ಇಂದಿನ ಸೆಮಿಫೈನಲ್ ಪಂದ್ಯಗಳು: ನೆಲಮಕ್ಕಡ- ಕುಲ್ಲೇಟಿರ, ಕುಪ್ಪಂಡ (ಕೈಕೇರಿ)-ಪಳಂಗಂಡ.


ಕೊಡಗು ಜಿಲ್ಲೆಯ ನಾಪೋಕ್ಲುವಿನ ಚೆರಿಯಪರಂಬುವಿನಲ್ಲಿ ಗುರುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನೆಲ್ಲಮಕ್ಕಡ ಹಾಗೂ ಕಂಬೀರಂಡ ತಂಡದ ಸೆಣಸಾಟ


ಕರ್ನಾಟಕದ ಸೋನಿಯಾ (ಮಧ್ಯದಲ್ಲಿ) ಅವರು ಚೆಂಡಿಗಾಗಿ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಫುಟ್‌ಬಾಲ್: ಕರ್ನಾಟಕ ರನ್ನರ್ ಅಪ್

ಬೆಂಗಳೂರು: ಕರ್ನಾಟಕ ತಂಡದವರು 27ನೇ ಸೀನಿಯರ್ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ 'ಗುಂಪು 4' ರಲ್ಲಿ ರನ್ನರ್ ಅಪ್ ಆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡವನ್ನು 4–2 ಗೋಲುಗಳಿಂದ ಮಣಿಸಿದ ಮಣಿಪುರ ತಂಡ ಚಾಂಪಿಯನ್ ಆಯಿತು.

ಎರಡನೇ ಸ್ಥಾನ ಪಡೆದರೂ ಕರ್ನಾಟಕದ ಮಹಿಳೆಯರು ಚಾಂಪಿಯನ್‌ಷಿಪ್‌ನ ಎರಡನೇ ಹಾಗೂ ಅಂತಿಮ ಸುತ್ತಿಗೆ ಅರ್ಹತೆ ಪಡೆದುಕೊಂಡರು.

ಮಣಿಪುರ ತಂಡದ ಪರ ಹೆಗ್ರುಜಮ್ ದಯಾ ದೇವಿ (48 ಮತ್ತು 49ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಮೊಯಿರಂಗ್ದೆಮ್ ಮಂದಾಕಿನಿ ದೇವಿ (5ನೇ ನಿ.) ಹಾಗೂ ಎಸ್.ಲಿಂಡಾ ಕೋಮ್ (83ನೇ ನಿ.) ತಲಾ ಒಂದು ಗೋಲು ತಂದಿತ್ತರು.

ಅತಿಥೇಯ ತಂಡದ ಪರ ಕಾವ್ಯಾ ಫಕ್ಕೀರಸ್ವಾಮಿ (32ನೇ ನಿ.) ಮತ್ತು ಅರುಣಾ (44) ಗೋಲು ಗಳಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಗುಜರಾತ್ 2–0 ಗೋಲುಗಳಿಂದ ಅಸ್ಸಾಂ ತಂಡವನ್ನು ಮಣಿಸಿತು.

ಏಷ್ಯನ್ ಗೇಮ್ಸ್: ಹಂಪಿ ಸ್ಪರ್ಧೆ ಅನುಮಾನ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಚೆಸ್ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ ಗೆದ್ದಿರುವ ಭಾರತದ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಕೊನೇರು ಹಂಪಿ, ಈ ಬಾರಿಯ ಕೂಟದಲ್ಲಿ ಪಾಲ್ಗೊಳ್ಳುವುದು ಅನುಮಾನ.

ಏಷ್ಯನ್ ಕ್ರೀಡಾಕೂಟ ಚೀನಾದ ಹಾಂಗ್‌ಜೌನಲ್ಲಿ ಇದೇ ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿದೆ. ಚೀನಾದಲ್ಲಿ ಕೋವಿಡ್ ಆತಂಕ ಇರುವುದಿಂದ ಅವರು ಪಾಲ್ಗೊಳ್ಳುವ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ.

13 ವರ್ಷಗಳ ಬಳಿಕ ಏಷ್ಯನ್ ಕ್ರೀಡಾಕೂಟದಲ್ಲಿ ಚೆಸ್‌ಗೆ ಅವಕಾಶ ಲಭಿಸಿದೆ. 2010ರ ಗುವಾಂಗ್‌ಜೌ ಕೂಟದಲ್ಲಿ ಕೊನೆಯದಾಗಿ ಚೆಸ್‌ಗೆ ಸ್ಥಾನ ದೊರೆತಿತ್ತು.

ಏಷ್ಯನ್ ಕ್ರೀಡಾಕೂಟದಲ್ಲಿ ಪದಕ ಸಾಧ್ಯತೆಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಹಂಪಿ, 'ಈ ಬಾರಿಯ ಕ್ರೀಡಾಕೂಟ ಚೀನಾದಲ್ಲಿ ನಡೆಯಲಿರುವುದರಿಂದ ನಾನು ಪಾಲ್ಗೊಳ್ಳಲಿದ್ದೇನೆಯೇ ಎಂಬುದು ಖಾತರಿಯಿಲ್ಲ' ಎಂದಿದ್ದಾರೆ.

'ಕೋವಿಡ್ ಆತಂಕ ಇರುವುದೇ ಇದಕ್ಕೆ ಕಾರಣ. ಜೂನ್ ಅಥವಾ ಜುಲೈ ತಿಂಗಳಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವೆ' ಎಂದು ಅವರು ಹೇಳಿದ್ದಾರೆ.

ಮಹಿಳಾ ಕ್ರಿಕೆಟ್: ಶಿವಪ್ರಿಯಾ ಶತಕ

ಪ್ರಜಾವಾಣಿ ವಾರ್ತೆ

ಮೈಸೂರು: ಶಿವಪ್ರಿಯಾ ಪಾಂಡೆ ಗಳಿಸಿದ ಅಮೋಘ ಶತಕದ ಬಲದಿಂದ ಉತ್ತರ ಪ್ರದೇಶದ ಜೌನಪುರದ ವಿಬಿಎಸ್‌ಪಿಯು ವಿಶ್ವವಿದ್ಯಾಲಯವು ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ಮಹಿಳಾ ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ಶುಭಾರಂಭ ಮಾಡಿತು.

ನಗರದ ಮಹಾರಾಜ ಕಾಲೇಜಿನ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಜೌನಪುರ ತಂಡವು ಮಹಾರಾಷ್ಟ್ರದ ಕೊಲ್ಹಾಪುರ ಶಿವಾಜಿ ವಿಶ್ವವಿದ್ಯಾಲಯ ತಂಡವನ್ನು 114 ರನ್‌ಗಳಿಂದ ಮಣಿಸಿತು.

ಶಿವಪ್ರಿಯಾ ಹಾಗೂ ಸೋನಿಯಾ 153ಗಳ ಜೊತೆಯಾಟದ ನೆರವಿನಿಂದ ವಿಬಿಎಸ್‌ಪಿಯು ತಂಡವು ನಿಗದಿತ 25 ಓವರ್‌ಗಳಲ್ಲಿ 2 ವಿಕೆಟ್‌ಗೆ 210 ರನ್ ಕಲೆ ಹಾಕಿತು. ಶಿವಾಜಿ ವಿ.ವಿ ತಂಡದವರು 17.1 ಓವರ್‌ಗಳಲ್ಲಿ 96ಕ್ಕೆ ಆಲ್‌ಔಟ್ ಆದರು.

ಬಿಹಾರದ ಎಲ್.ಎನ್ ಮಿಥಿಲಾ ವಿಶ್ವವಿದ್ಯಾಲಯ ತಂಡವು ಜೈಪುರ ರಾಜಸ್ಥಾನ ವಿಶ್ವವಿದ್ಯಾಲಯದ ಎದುರು ಗೆದ್ದಿತು. ಮಿಥಿಲಾ ವಿ.ವಿ ತಂಡದ ಅಪೂರ್ವ 5 ವಿಕೆಟ್ ಪಡೆದರು.

ಲವ್ಲಿ ಪ್ರೊಫೆಷನಲ್ ಯೂನಿವರ್ಸಿಟಿ ತಂಡವು ಕೇರಳದ ಕ್ಯಾಲಿಕಟ್ ವಿಶ್ವವಿದ್ಯಾಲಯದ ಎದುರು, ಛತ್ತೀಸ್‌ಗಢದ ಹೇಮಚಂದ್ರ ಯಾದವ್ ವಿ.ವಿ ತಂಡವು ಭೋಪಾಲದ ಬರ್ಖಾತ್‌ಉಲ್ಲಾ ವಿ.ವಿ ಎದುರು, ಆಂಧ್ರ ವಿಶ್ವವಿದ್ಯಾಲಯ ತಂಡವು ಪಂಜಾಬ್ ವಿ.ವಿ ಎದುರು, ಪುಣೆಯ ಸಾವಿತ್ರಿಬಾಯಿ ಫುಲೆ ವಿ.ವಿ ತಂಡವು ರೇವಾದ ಅವದೇಶ್ ಪ್ರತಾಪ್ ಸಿಂಗ್ ವಿ.ವಿ ತಂಡದ ಎದುರು ಜಯ ಸಾಧಿಸಿದವು.

ಸೈಕ್ಲಿಂಗ್: ರಾಜ್ಯಕ್ಕೆ ಸಮಗ್ರ ಪ್ರಶಸ್ತಿ

ಮೈಸೂರು: ಹರಿಯಾಣದ ಪಂಚಕುಲದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡವು ಸಮಗ್ರ ಪ್ರಶಸ್ತಿ ಗೆದ್ದಿದೆ. ಮೈಸೂರು ಜಿಲ್ಲಾ ಸೈಕ್ಲಿಂಗ್ ಸಂಸ್ಥೆಯ ಸ್ಪರ್ಧಿಗಳು 5 ಚಿನ್ನ, 2 ಬೆಳ್ಳಿ ಹಾಗೂ ಒಂದು ಕಂಚಿನ ಪದಕ ಸಾಧನೆ ಮಾಡಿದ್ದಾರೆ.

ಫಿಫಾ ರ‍್ಯಾಂಕಿಂಗ್: 101ನೇ ಸ್ಥಾನಕ್ಕೇರಿದ ಭಾರತ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡ, ಫಿಫಾ ರ‍್ಯಾಂಕಿಂಗ್ ಪಟ್ಟಿಯಲ್ಲಿ 101ನೇ ಸ್ಥಾನ ಪಡೆದುಕೊಂಡಿದೆ. ಈ ಹಿಂದಿನ ಪಟ್ಟಿಯಲ್ಲಿ 106ನೇ ಸ್ಥಾನದಲ್ಲಿತ್ತು.

ಕಳೆದ ತಿಂಗಳು ಇಂಫಾಲ್‌ನಲ್ಲಿ ನಡೆದಿದ್ದ ಮೂರು ರಾಷ್ಟ್ರಗಳನ್ನೊಳಗೊಂಡ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ರ‍್ಯಾಂಕಿಂಗ್ ಪಟ್ಟಿಯಲ್ಲಿ ಐದು ಸ್ಥಾನಗಳಷ್ಟು ಮೇಲಕ್ಕೇರಲು ಕಾರಣ.

ಆ ಟೂರ್ನಿಯಲ್ಲಿ ಭಾರತ 1–0 ಮತ್ತು 2–0 ಗೋಲುಗಳಿಂದ ಕ್ರಮವಾಗಿ ಮ್ಯಾನ್ಮಾರ್ ಹಾಗೂ ಕಿರ್ಗಿಸ್ತಾನ ತಂಡಗಳನ್ನು ಮಣಿಸಿತ್ತು. ಇದರಿಂದ 8.57 ರೇಟಿಂಗ್ ಪಾಯಿಂಟ್ಸ್ ಹೆಚ್ಚಿಸಿಕೊಂಡಿದೆ.

ಫಿಫಾ ಈ ವರ್ಷ ಬಿಡುಗಡೆಗೊಳಿಸಿದ ಮೊದಲ ಪಟ್ಟಿ ಇದು. ಈ ಹಿಂದೆ 2022ರ ಡಿಸೆಂಬರ್‌ನಲ್ಲಿ ಪಟ್ಟಿ ಪ್ರಕಟಿಸಿತ್ತು. ಭಾರತವು ಇದೀಗ ನ್ಯೂಜಿಲೆಂಡ್‌ಗಿಂತ ಒಂದು ಸ್ಥಾನ ಕೆಳಗೆ ಹಾಗೂ ಕೆನ್ಯಾಗಿಂತ ಒಂದು ಸ್ಥಾನ ಮೇಲಿದೆ.

ಏಷ್ಯಾದ 46 ತಂಡಗಳಲ್ಲಿ ಭಾರತ, 19ನೇ ಸ್ಥಾನದಲ್ಲಿದೆ. ಫಿಫಾ ರ‍್ಯಾಂಕಿಂಗ್‌ನಲ್ಲಿ ಭಾರತ ತಂಡ ಪಡೆದ ಅತ್ಯುತ್ತಮ ಸ್ಥಾನ 94 ಆಗಿದ್ದು, 1996 ರಲ್ಲಿ ಆ ಸಾಧನೆ ಮಾಡಿತ್ತು. ಇತ್ತೀಚಿನ ವರ್ಷಗಳಲ್ಲಿ 100ರ ಒಳಗಿನ ಸ್ಥಾನ ಪಡೆಯಲು ಸಾಧ್ಯವಾಗಿಲ್ಲ.

ಅಗ್ರಸ್ಥಾನಕ್ಕೇರಿದ ಅರ್ಜೆಂಟೀನಾ: ವಿಶ್ವಚಾಂಪಿಯನ್ ಅರ್ಜೆಂಟೀನಾ ತಂಡ ಆರು ವರ್ಷಗಳ ಬಿಡುವಿನ ಬಳಿಕ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. ಯೂರೊ ಕಪ್ ಅರ್ಹತಾ ಪಂದ್ಯಗಳಲ್ಲಿ ಗೆದ್ದ ಕಾರಣ ಮೊದಲ ಸ್ಥಾನ ಗಳಿಸಿದೆ. ಫ್ರಾನ್ಸ್ ಎರಡನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿದ್ದ ಬ್ರೆಜಿಲ್ ಮೂರನೇ ಸ್ಥಾನಕ್ಕೆ ಕುಸಿತ ಕಂಡಿದ್ದು, ಬೆಲ್ಜಿಯಂ ನಾಲ್ಕನೇ ಸ್ಥಾನ ಉಳಿಸಿಕೊಂಡಿದೆ.

ಲೈಂಗಿಕ ಸಮಸ್ಯೆಗೆ ಪ್ರಭಾವಶಾಲಿ ಪರಿಹಾರ



18 ರಿಂದ 75 ವಯಸ್ಸಿನವರಿಗೆ

ಸ್ವಯಂ ಟ್ಯಾಬ್ಲೆಟ್ ಹಾಗೂ ಎಕ್ಸ್‌ಟೆಂಜರ್ ಆಯಿಲ್ ತಯಾರಿಸಿದೆ ಹಾಗೂ ಶೀಘ್ರಸ್ಖಲನಾ ಸ್ವಪ್ನ ದೋಷ ಇಂದ್ರೀಯ ದೋಷಗಳಿಗೆ ಸ್ಪೆಷಲ್ ಪರಿಹಾರವಾಗಿದೆ ಇಂದ್ರೀಯ ಗಾತ್ರ, ಹೆಚ್ಚಿಸಿಕೊಳ್ಳಲು ವಿಶೇಷ ಆಯುರ್ವೇದದ ಪ್ರತೀಕವಾಗಿದೆ ಮನೆಯಲ್ಲಿ ನೆಲೆಸಿ ತೆಗೆದುಕೊಳ್ಳಿ ಈಗ ಕರ್ನಾಟಕದಲ್ಲಿ ಲಭ್ಯವಿದೆ

74115 06650

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡುಬಿದಿರೆ
ಮಂಗಳೂರು – 574 227, ದಕ್ಷಿಣ ಕನ್ನಡ

ಸಾಂಸ್ಕೃತಿಕ ಯೋಜನೆಯಡಿ ಉಚಿತ ಶಿಕ್ಷಣ

ಪ್ರೌಢಶಾಲೆ, ಪದವಿಪೂರ್ವ (ವಾಣಿಜ್ಯ ಮತ್ತು ಕಲಾ), ಪದವಿ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಕೆಳಕಂಡ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪ್ರತಿಭಾ ಕಾರಂಜಿ, ವಿಶ್ವವಿದ್ಯಾನಿಲಯ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸಾಧನೆಗೈದು ದಾಖಲೆ ನಿರ್ಮಿಸಿರುವ ಹಾಗೂ ಜೂನಿಯರ್–ಸೀನಿಯರ್–ವಿದ್ವತ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಅವಕಾಶವನ್ನು ಕಲ್ಪಿಸಲಾಗಿದೆ.

ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ • ಪಕ್ಕವಾದ್ಯ • ದೇಶದ ವಿವಿಧ 8 ಪ್ರಕಾರಗಳ ಶಾಸ್ತ್ರೀಯ ನೃತ್ಯ • ಯಕ್ಷಗಾನ • ನಾಟಕ • ಜಾನಪದ ನೃತ್ಯ ಮತ್ತು ಸಂಗೀತ • ಚಿತ್ರಕಲೆ • ಯೋಗ • ಮಲ್ಲಕಂಬ

ಅರ್ಹ ಅಭ್ಯರ್ಥಿಗಳು ನಮ್ಮ ಸ್ವ-ವಿವರಗಳೊಂದಿಗೆ
ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.) ಮೂಡುಬಿದಿರೆ ದ.ಕ. – 574 227
ಈ ವಿಳಾಸಕ್ಕೆ ಏಪ್ರಿಲ್ 25, 2023 ರೊಳಗೆ ಅರ್ಜಿ ಸಲ್ಲಿಸುವುದು.

9480529236, 8971161797 samparka@alvas.org



